ವಿಶ್ವವಾಣಿ
ವಿಶ್ವಾಸವೇ ವಿಶ್ವ

2 ದಿನಗಳಲ್ಲಿ ಕೆಜಿ ಬೆಳ್ಳಿಗೆ ₹ 35000 ಬೆಲೆಯೇರಿಕೆ

ಚಿನ್ನ ಹಾಗೂ ಬೆಳ್ಳಿ ಬೆಲೆ ಭಾರೀ ಪ್ರಮಾಣದಲ್ಲಿ ಏರುತ್ತಿದೆ. ಭಾರತದಲ್ಲಿ 10 ಗ್ರಾಮ್ ಚಿನ್ನದ ಬೆಲೆ ಮಂಗಳವಾರ 159,820 ರೂಪಾಯಿಗೆ ಏರಿಕೆಯಾಗಿದೆ. ಒಂದು ಕೆಜಿ ಬೆಳ್ಳಿಯ ಬೆಲೆಯು ಕೇವಲ ಎರಡು ದಿನಗಳಲ್ಲಿ 35,000 ರುಪಾಯಿ ಏರಿದೆ. ಭಾನುವಾರ ಕೆಜಿಗೆ 3,35,000 ರು. ಇತ್ತು. ಸೋಮವಾರ ಬೆಲೆ 3.60 ಲಕ್ಷ ರು.ಗೇರಿತು. ಮಂಗಳವಾರ ಇನ್ನೂ 10000 ರು. ಹೆಚ್ಚಾಯಿತು. ಈ ಮೂಲಕ ಬೆಳ್ಳಿ ಎಲ್ಲಾ ದಾಖಲೆ ಮುರಿದಿದೆ. ಬೆಳ್ಳಿಯ ಬೆಲೆ ಏರಿಕೆ ಪ್ರಮಾಣದ ಮುಂದೆ ಬಂಗಾರ ಹಿಂದಿದೆ.

ಸೊಂಪಾದ ಪುಟಗಳು

ರಾಜ್ಯಪಾಲ ಹುದ್ದೆಯನ್ನು ರದ್ದುಗೊಳಿಸ ಬಾರದೇಕೆ?
ಜನಪಥ
ರಾಘವ ಶರ್ಮ ನಿಡ್ಲೆ 6

ಶಿಕ್ಷಣ ಮಕ್ಕಳಿಗಷ್ಟೇ ಅಲ್ಲ, ಸರಕಾರಕ್ಕೂ ಬೇಕಿದೆ !
ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ಪ್ರತಿದಿನ ಆಕಾಶದಲ್ಲಿ ಸೂರ್ಯ ಉದಯಿಸುವಂತೆ, ಪ್ರತಿಯೊಬ್ಬರ ಜೀವನದಲ್ಲೂ ಹೊಸ ಆಸೆ ಮತ್ತು ಅವಕಾಶಗಳ ಸೂರ್ಯ ಉದಯಿಸುತ್ತಾನೆ. ಪ್ರತಿದಿನ ಸೂರ್ಯೋದಯವಾಗುತ್ತಿದ್ದಂತೆ ನಮ್ಮ ಆಸೆ ಮತ್ತು ಅವಕಾಶಗಳನ್ನು ಬೆಳಗಿಸಿಕೊಳ್ಳಲು ಪ್ರಯತ್ನಿಸಬೇಕು.

ವಕ್ರತುಂಡೋಕ್ತಿ

ಫೋಟೊಕ್ಕೆ ಪೋಸ್ ಕೊಡುವ ಒಂದು ಸಮಸ್ಯೆ ಅಂದ್ರೆ, ಹೊಟ್ಟೆಯನ್ನು ಹಿಂದಕ್ಕೆ ಬಿಗಿಯಾಗಿ ಎಳೆದುಕೊಳ್ಳುವುದು.

ವಿನಯ್ ಕುಲಕರ್ಣಿ ಜಾಮೀನು ವಜಾ

ಬೆಂಗಳೂರು: ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿ ನ್ಯಾಯಾಂಗ ಬಂಧನದಲ್ಲಿರುವ ಮಾಜಿ ಸಚಿವ ವಿನಯ್ ಕುಲಕರ್ಣಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ. ಸುಪ್ರೀಂ ಕೋರ್ಟ್ ಜಾಮೀನು ನಿರಾಕರಿಸಿದ್ದ ಹಿನ್ನೆಲೆಯಲ್ಲಿ ಬಂಧನಕ್ಕೊಳಗಾಗಿದ್ದ ವಿನಯ್ ಕುಲಕರ್ಣಿ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಸುನೀಲ್ ದತ್ತ ಯಾದವ್ ಅವರು ಕೈಗೆತ್ತಿಕೊಂಡರು. ಅರ್ಜಿದಾರರಿಗೆ ಸುಪ್ರೀಂ ಕೋರ್ಟ್ ಜಾಮೀನು ನಿರಾಕರಿಸಿದೆ.

ವಿಟಮಿನ್ ಸೇವಿಸಿದ 53 ಮಕ್ಕಳು ಆಸ್ಪತ್ರೆಗೆ

ಭದ್ರಾವತಿ: ಮಕ್ಕಳಲ್ಲಿ ಏಕಾಏಕಿ ಹೊಟ್ಟೆ ನೋವು– ವಾಂತಿ ಕಾಣಿಸಿಕೊಂಡ ಪರಿಣಾಮ 53 ಮಕ್ಕಳು ಆಸ್ಪತ್ರೆಗೆ ದಾಖಲಾದ ಘಟನೆ ಭದ್ರಾವತಿ ತಾಲೂಕಿನ ಅರಳೀಹಳ್ಳಿ ಸರಕಾರಿ ಶಾಲೆಯಲ್ಲಿ ಮಂಗಳವಾರ ನಡೆದಿದೆ. ಮಧ್ಯಾಹ್ನ ಊಟದ ಬಳಿಕ ಮಕ್ಕಳಲ್ಲಿ ಹೊಟ್ಟೆ ನೋವು ಕಾಣಿಸಿಕೊಂಡಿದೆ. ಊಟದ ಬಳಿಕ ಮಕ್ಕಳಿಗೆ ಶಿಕ್ಷಕರು ವಿಟಮಿನ್ ಮತ್ತು ಐರನ್ ಟ್ಯಾಬ್ಲೆಟ್ ವಿತರಿಸಿದ್ದರು. ಇದನ್ನು ನುಂಗಿದ ಬಳಿಕ ಮಕ್ಕಳು ವಾಂತಿ ಮಾಡಿಕೊಂಡಿದ್ದಾರೆ.

ವಿಧಾನಸಭೆ ಅಧಿವೇಶನದ ನಡುವೆ ಪರಸ್ಪರ ಹೋರಾಟಕ್ಕಿಳಿದ ಕೈ-ಕಮಲ ಪಕ್ಷಗಳು

ರಾಮ್ ಜಿ ಬೇಡ, ನರೇಗಾ ಬೇಕು: ರಾಜ್ಯಪಾಲಗೆ ಸಿಎಂ ಸಿದ್ದು, ಡಿಸಿಎಂ ಡಿಕೆ ಮನವಿ

ಅಬಕಾರಿ ಹಗರಣ ತನಿಖೆ ಮಾಡಿ, ರಾಜ್ಯಪಾಲರಿಗೆ ಅವಮಾನ ಸಲ್ಲ: ಬಿಜೆಪಿ ಧರಣಿ

ಕಾಂಗ್ರೆಸ್ Vs ಬಿಜೆಪಿ ಪ್ರತಿಭಟನೆ

ವಿಶ್ವವಾಣಿ ಸುದ್ದಿಮನೆ, ಬೆಂಗಳೂರು

ಕೇಂದ್ರ ಸರಕಾರದ ವಿಬಿ ಜಿ ರಾಮ್‌ಜಿ ಕಾಯಿದೆ ವಿರುದ್ಧ ಹೋರಾಟ ಮುಂದುವರಿಸಿರುವ ಕಾಂಗ್ರೆಸ್ ನೇತೃತ್ವದ ಕರ್ನಾಟಕ ರಾಜ್ಯ ಸರಕಾರ, ರಾಮ್ ಜಿ ಕೈಬಿಟ್ಟು ನರೇಗಾ ಮರುಸ್ಥಾಪಿಸಬೇಕು ಎನ್ನುವ ಆಗ್ರಹವನ್ನು ರಾಜ್ಯಪಾಲರ ಮೂಲಕ ಕೇಂದ್ರ ಸರಕಾರಕ್ಕೆ ರವಾನಿಸಿದೆ.

ವಿಬಿ ಜಿ ರಾಮ್ ಜಿ ಕಾಯಿದೆ ವಿರೋಧಿಸಿ ಕಾಂಗ್ರೆಸ್ ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನೆಯ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಲೋಕಭವನ ಚಲೋ ನಡೆಸಿದ ನಾಯಕರು, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರನ್ನು ಭೇಟಿಯಾಗಿ, ಸರಕಾರದಿಂದ ಅಧಿಕೃತ ಮನವಿಯನ್ನು ಸಲ್ಲಿಸಿದರು. ಸುದೀರ್ಘ ಪತ್ರದಲ್ಲಿ, ನರೇಗಾ ಯೋಜನೆಯಿಂದ ಆಗುತ್ತಿದ್ದ ಲಾಭ ಹಾಗೂ ರಾಮ್ ಜಿ ಕಾಯಿದೆಯಲ್ಲಿರುವ ಲೋಪಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಇಂತಹ ಬೃಹತ್ ಯೋಜನೆಯನ್ನು ಬದಲಾಯಿಸುವ ವೇಳೆ, ರಾಜ್ಯ ಸರಕಾರಗಳೊಂದಿಗೆ ಚರ್ಚಿಸಿಲ್ಲ. ಆದ್ದರಿಂದ ಈ ಹಿಂದಿರುವ ಮನರೇಗಾ ಯೋಜನೆಯನ್ನು ಮರುಸ್ಥಾಪಿಸಬೇಕು ಎಂದು ಆಗ್ರಹಿಸಿದ್ದಾರೆ. ಇದಕ್ಕೂ ಮೊದಲು ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ನಾಯಕರು, ಕೇಂದ್ರ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಪ್ರತಿಭಟನೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸೇರಿದಂತೆ ಸಚಿವರು, ಶಾಸಕರು ಕೆಪಿಸಿಸಿ ವಿವಿಧ ಘಟಕಗಳ ಪದಾಧಿಕಾರಿಗಳು ಭಾಗ ವಹಿಸಿದ್ದರು. ಫ್ರೀಡಂ ಪಾರ್ಕ್‌ನಿಂದ ಲೋಕಭವನ ಚಲೋಗೆ ಮುಂದಾದ ಸಮಯದಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು. ಬಳಿಕ ಬಸ್‌ನಲ್ಲಿ ಸಿದ್ದರಾಮಯ್ಯ ನೇತೃತ್ವದಲ್ಲಿ ಪ್ರಮುಖ ನಾಯಕರು ಲೋಕಭವನಕ್ಕೆ ತೆರಳಿದರು. →10



ಫ್ರೀಡಮ್ ಪಾರ್ಕಲ್ಲಿ ರಾಮ್ ಜಿ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ ನಡೆಸಿತು. ಬಳಿಕ ಸಿಎಂ ಸಿದ್ದರಾಮಯ್ಯ, ಡಿಸಿಎಂ ಶಿವಕುಮಾರ್ ನೇತೃತ್ವದಲ್ಲಿ ಲೋಕಭವನಕ್ಕೆ ತೆರಳಿ ರಾಜ್ಯಪಾಲ ಗೆಹ್ಲೋಥ್‌ಗೆ ಮನವಿ ಸಲ್ಲಿಸಲಾಯಿತು.

ಏನೇನು ನಡೆಯಿತು?

- ವಿಬಿ ಜಿ ರಾಮ್ ಜಿ ಕಾಯಿದೆಗೆ ವಿರುದ್ಧ ಆಕ್ರೋಶ ಹೊರಹಾಕಿದ ಕಾಂಗ್ರೆಸ್
- ಲೋಕಭವನ ಚಲೋ, ರಾಜ್ಯಪಾಲ ಗೆಹ್ಲೋಥ್‌ಗೆ ಮನವಿ ಸಲ್ಲಿಸಿದ ಕೈ ಪಡೆ
- ಲೋಕಭವನಕ್ಕೆ ನುಗ್ಗಲು ಯತ್ನಿಸಿದ ಕೈ ಕಾರ್ಯಕರ್ತರ ಬಂಧನ, ಬಿಡುಗಡೆ
- ವಿಧಾನಸೌಧ ಆವರಣದಲ್ಲಿರುವ ಗಾಂಧಿಪ್ರತಿಮೆಯಡಿ ಬಿಜೆಪಿ ಪ್ರತಿಭಟನೆ
- ಅಬಕಾರಿ ಹಗರಣವನ್ನು ಹೈಕೋರ್ಟ್ ನ್ಯಾಯಮೂರ್ತಿಗಳಿಂದ ತನಿಖೆಗೆ ಆಗ್ರಹ

ಬಡವರ ಸಂವಿಧಾನಬದ್ಧ ಕೆಲಸದ ಹಕ್ಕನ್ನು ವಿಬಿ ಜಿ ರಾಮ್ ಜಿ ಕಸಿದುಕೊಂಡಿದೆ. ಕೇಂದ್ರ ಸರಕಾರದ ಜನ ವಿರೋಧಿ ನೀತಿಯನ್ನು ಕಾಂಗ್ರೆಸ್ ಪಕ್ಷ ವಿರೋಧಿಸುತ್ತದೆ. ವಿಬಿ ರಾಮ್ ಜಿ ರದ್ದುಪಡಿಸಿ ನರೇಗಾ ಪುನರ್‌ಸ್ಥಾಪನೆಯಾಗುವ ತನಕ ಹೋರಾಟ ಮುಂದುವರಿಸುತ್ತೇವೆ.
–ಸಿದ್ದರಾಮಯ್ಯ, ಮುಖ್ಯಮಂತ್ರಿ

ಮನರೇಗಾ ನಮ್ಮ ಹೃದಯಕ್ಕೆ ಹತ್ತಿರವಾಗಿರುವ ಕಾನೂನು. ರಾಜ್ಯದ ಸುಮಾರು 5700 ಪಂಚಾಯಿತಿಗಳಲ್ಲಿ ಪ್ರತಿ ವರ್ಷ ಈ ಯೋಜನೆಯಿಂದ 6 ಸಾವಿರ ಕೋಟಿ ರು. ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದವು. ವಿಶ್ವಬ್ಯಾಂಕ್ ಕೂಡ ಈ ಯೋಜನೆಯನ್ನು ಶ್ಲಾಘಿಸಿತ್ತು.
–ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ರಾಜ್ಯ ಸರಕಾರದ ವೈಫಲ್ಯಗಳನ್ನು ಬೇರೆಡೆ ತಿರುಗಿಸಲು ಕಾಂಗ್ರೆಸ್ ಜಿ ರಾಮ್ ಜಿ ಕಾಯಿದೆ ವಿರುದ್ಧ ಹೋರಾಟ ನಡೆಸುತ್ತಿದೆ. ಕೇಂದ್ರ ಸರಕಾರದ ಮೇಲೆ ಗೂಬೆ ಕೂರಿಸುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರಿಗೆ ಅಪಮಾನ ಮಾಡಲಾಗಿದೆ.
–ಆರ್. ಅಶೋಕ್, ಪ್ರತಿಪಕ್ಷ ನಾಯಕ

ರಾಜ್ಯಪಾಲರಿಗೆ ಜಂಟಿ ಅಧಿವೇಶನದ ಸಂದರ್ಭ ದಲ್ಲಿ ಅಪಮಾನ ಮಾಡಿ ಮಾಡಿದ್ದೇ ಸರಿ ಎಂದು ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಮಾನ ಮರ್ಯಾದೆ ಬಿಟ್ಟು ಲೋಕಭವನಕ್ಕೆ ಮುತ್ತಿಗೆ ಹಾಕಿದ್ದಾರೆ. ಯಾವ ಪುರುಷಾರ್ಥಕ್ಕಾಗಿ ಕಾಂಗ್ರೆಸ್ ನಾಯಕರ ಈ ಮುತ್ತಿಗೆ?
–ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ನಮಗೆ ತನಿಖೆ ಬೇಕು: ಪ್ರತಿಪಕ್ಷ

ವಿಧಾನಸೌಧದ ಗಾಂಧಿ ಪ್ರತಿಮೆಯೆದುರು ಬಿಜೆಪಿ–ಜೆಡಿಎಸ್ ಹೋರಾಟ.

6000 ಕೋಟಿ ರು. ಅಬಕಾರಿ ಹಗರಣ

ರಾಜ್ಯದಲ್ಲಿ ನಡೆದಿರುವ ಆರು ಸಾವಿರ ಕೋಟಿ ರು.ಗೂ ಅಧಿಕ ಮೊತ್ತದ ಅಬಕಾರಿ ಹಗರಣದ ತನಿಖೆಯನ್ನು ಹೈಕೋರ್ಟ್ ಹಾಲಿ ನ್ಯಾಯಾಧೀಶರು ಅಥವಾ ಸಿಬಿಐ ನಡೆಸಬೇಕು ಎಂದು ಆಗ್ರಹಿಸಿ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ವಿಧಾನಸೌಧದ ಮಹಾತ್ಮ ಗಾಂಧೀಜಿ ಪ್ರತಿಮೆ ಬಳಿ ಮಂಗಳವಾರ ಪ್ರತಿಭಟನೆ ನಡೆಸಿದರು. ಈ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ಸಿನ ಗೂಂಡಾಗಳು ಸದನದಲ್ಲಿ ಮಾನ್ಯ ರಾಜ್ಯಪಾಲರ ಜತೆ ಗೂಂಡಾ ವರ್ತನೆ ತೋರಿದ್ದನ್ನು ದೇಶದ ಜನರು ನೋಡಿದ್ದಾರೆ. ಅಬಕಾರಿ ಹಗರಣದಲ್ಲಿ ಸ್ವತಃ ಅಬಕಾರಿ ಸಚಿವರ ಹೆಸರು ಕೇಳಿಬರುತ್ತಿದೆ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಭಾಗವಹಿಸಿದ್ದರು.

ರಾಜ್ಯದ ಗ್ರಾಪಂಗಳಿಗೆ ಗಾಂಧಿ ಹೆಸರು: ಸಿಎಂ

ಬೆಂಗಳೂರು: ಕರ್ನಾಟಕದ ಎಲ್ಲ ಗ್ರಾಮ ಪಂಚಾಯಿತಿಗಳಿಗೆ ಮಹಾತ್ಮ ಗಾಂಧಿ ಹೆಸರನ್ನು ನಾಮಕರಣ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು. ಫ್ರೀಡಂ ಪಾರ್ಕ್‌ನಲ್ಲಿ ನಡೆದ ಪ್ರತಿಭಟನೆ ವೇಳೆ ಮಾತನಾಡಿದ ಅವರು, ಕರ್ನಾಟಕದ ಆರು ಸಾವಿರ ಗ್ರಾಮ ಪಂಚಾಯಿತಿಗಳಿಗೆ ಮಹಾತ್ಮ ಗಾಂಧಿ ಹೆಸರನ್ನು ನಾಮಕರಣ ಮಾಡುತ್ತೇವೆ. ಮುಂದಿನ ಬಜೆಟ್‌ನಲ್ಲಿಯೇ ಈ ಬಗ್ಗೆ ಅಧಿಕೃತ ಘೋಷಣೆ ಮಾಡಲಾಗುವುದು. ಗಾಂಧೀಜಿ ಅವರನ್ನು ಆರ್‌ಎಸ್‌ಎಸ್‌ನ ಗೋಡ್ಸೆ ಕೊಂದರು. ಈಗ ಆರ್‌ಎಸ್‌ಎಸ್ ಪ್ರೋತ್ಸಾಹದಿಂದಲೇ ಮನರೇಗಾದಿಂದ ಗಾಂಧೀಜಿ ಹೆಸರನ್ನು ಎರಡನೇ ಬಾರಿಗೆ ಹತ್ಯೆ ಮಾಡಿದ್ದಾರೆ ಎಂದು ಟೀಕಿಸಿದರು. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಮಹಾತ್ಮ ಗಾಂಧೀಜಿಯವರ ಶ್ರಮ ಸಂಸ್ಕೃತಿಯ ರೂಪದಂತಿರುವ ಮನರೇಗಾ ಯೋಜನೆ ರದ್ದುಪಡಿಸಿ, ವಿಬಿ ಜಿ ರಾಮ್ ಜಿ ಕಾಯಿದೆ ತರಲು ನಾವು ಬಿಡುವುದಿಲ್ಲ. ಗಾಂಧೀಜಿ ಹೆಸರನ್ನು ಪಂಚಾಯಿತಿಗಳಿಗೆ ನಾಮಕರಣ ಮಾಡುತ್ತೇವೆ. ಇದು ಕಾಂಗ್ರೆಸ್ ಪಕ್ಷದ ತೀರ್ಮಾನ.

ಈ ಸಂಬಂಧ ಕೆಪಿಸಿಸಿ ಉಪಾಧ್ಯಕ್ಷರಾದ ಉಗ್ರಪ್ಪ ಹಾಗೂ ಕೆಪಿಸಿಸಿ ಪದಾಧಿಕಾರಿಗಳು ಪತ್ರ ಬರೆದಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಯವರಿಗೆ ಮನವಿ ಮಾಡಲಾಗಿದೆ. ಆ ಮೂಲಕ ಮಹಾತ್ಮ ಗಾಂಧಿ ಅವರ ಹೆಸರನ್ನು ಶಾಶ್ವತವಾಗಿ ಉಳಿಸಿಕೊಳ್ಳುವ ಕೆಲಸ ಮಾಡಲಾಗುವುದು. ಹಳ್ಳಿಗೊಂದು ಶಾಲೆ, ಸಹಕಾರ ಸಂಘ, ಪಂಚಾಯ್ತಿ ಇರಬೇಕು ಎಂಬುದು ಗಾಂಧೀಜಿ ಅವರ ಸಂಕಲ್ಪ ಎಂದು ತಿಳಿಸಿದರು.

ರಾಜೀವ್ ಗೌಡಗೆ ನ್ಯಾಯಾಂಗ ಬಂಧನ

ಚಿಕ್ಕಬಳ್ಳಾಪುರ: ಶಿಡ್ಲಘಟ್ಟ ನಗರಸಭೆ ಪೌರಾಯುಕ್ತೆ ಜಿ.ಅಮೃತಾಗೆ ಬೆದರಿಕೆಯೊಡ್ಡಿ ಬಂಧನಕ್ಕೊಳಗಾಗಿರುವ ರಾಜೀವ್ ಗೌಡರನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಸೋಮವಾರ ಅವರನ್ನು ಬಂಧಿಸಲಾಗಿತ್ತು. ಮಂಗಳವಾರ ಚಿಕ್ಕಬಳ್ಳಾಪುರ ನಗರದ ಪೊಲೀಸ್ ಸರ್ಕಿಟ್ ಹೌಸ್‌ನಲ್ಲಿ ವಿಚಾರಣೆ ನಡೆಸಿದ ನಂತರ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಿದ್ದಾರೆ. ನಂತರ ಶಿಡ್ಲಘಟ್ಟ ಕೋರ್ಟಿಗೆ ಹಾಜರುಪಡಿಸಿದ್ದಾರೆ. ಅಲ್ಲಿ ನ್ಯಾಯಾಧೀಶರು ವಾದ ಪ್ರತಿವಾದ ಆಲಿಸಿ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕೇರಳದ ಮಲ್ಲಪ್ಪುರಂ ಜಿಲ್ಲೆಯ ವಾಜಿಕಡವು ಹೋಟೆಲ್ ಸಮೀಪ ಕಾರಿನಲ್ಲಿದ್ದಾಗ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಆರೋಪಿಯ ಮೊಬೈಲ್ ಕರೆ, ವಾಹನಗಳ ಸಂಚಾರ, ಇತರ ಚಟುವಟಿಕೆಯ ಚಲನವಲನಗಳ ಆಧಾರದ ಮೇಲೆ ಮಾಹಿತಿಯನ್ನು ಕಲೆ ಹಾಕಿ, ಕಾರ್ಯಾಚರಣೆ ಕೈಗೊಳ್ಳಲಾಯಿತು.

ಕರ್ನಾಟಕ ಸೇರಿ ದೇಶದ 12 ಪ್ರಮುಖ ರಾಜ್ಯಗಳಿಗೆ ಭಾರೀ ಲಾಭ

9425 ವಸ್ತುಗಳಿಗೆ ಶೂನ್ಯ ಸುಂಕ ಇಲ್ಲವೇ ಭಾರೀ ತೆರಿಗೆ ಇಳಿಕೆ

ಮುಕ್ತ ಒಪ್ಪಂದಕ್ಕೆ ಭಾರತ–ಯೂರೋಪ್ ಸಹಿ, ಅಮೆರಿಕಕ್ಕೆ ಉರಿ

ಯೂರೋಪ್–ಭಾರತ ಚಾರಿತ್ರಿಕ ಒಪ್ಪಂದ

ದೆಹಲಿ: ಎಲ್ಲ ಒಪ್ಪಂದಗಳ ತಾಯಿ ಎಂದೇ ಬಣ್ಣಿಸಲಾಗಿದ್ದ ಭಾರತ ಮತ್ತು ಐರೋಪ್ಯ ಒಕ್ಕೂಟಗಳ ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಮಂಗಳವಾರ ಸಹಿ ಹಾಕಲಾಗಿದೆ. ಭಾರತದ 77ನೇ ಗಣರಾಜ್ಯೋತ್ಸವಕ್ಕೆ ಅತಿಥಿಗಳಾಗಿ ಆಗಮಿಸಿರುವ ಐರೋಪ್ಯ ಆಯೋಗದ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೆಯೆನ್ ಮತ್ತು ಐರೋಪ್ಯ ಸಮಿತಿ ಅಧ್ಯಕ್ಷ ಆ್ಯಂಟೊನಿಯೋ ಕೋಸ್ಟಾ ಹಾಗೂ ಭಾರತದ ಪ್ರಧಾನಿ ಮೋದಿ ಒಪ್ಪಂದಕ್ಕೆ ಸಹಿ ಹಾಕಿದರು. ಈ ವರ್ಷಾಂತ್ಯದೊಳಗೆ ಎಲ್ಲ ಕಾನೂನು ಅಡೆತಡೆಗಳನ್ನು ದಾಟಿದ ನಂತರ ಇನ್ನೊಮ್ಮೆ ಒಪ್ಪಂದಕ್ಕೆ ಸಹಿ ಬೀಳಲಿದೆ. ಅಲ್ಲಿಂದ ಅಧಿಕೃತವಾಗಿ ಜಾರಿಯಾಗಲಿದೆ. ಮುಂದಿನ 7 ವರ್ಷಗಳಲ್ಲಿ ಈ ಒಪ್ಪಂದ ಜಾಗತಿಕ ಪರಿಣಾಮ ಗೊತ್ತಾಗಲಿದೆ. ಪ್ರಸ್ತುತ ಒಪ್ಪಂದದಿಂದ ಕರ್ನಾಟಕ ಸೇರಿ ಒಟ್ಟು ದೇಶದ 12 ರಾಜ್ಯಗಳಿಗೆ ಲಾಭವಾಗಲಿದೆ. ಒಟ್ಟು 9425 ವಸ್ತುಗಳಿಗೆ ಸುಂಕದಿಂದ ವಿನಾಯ್ತಿ ಸಿಗಲಿದೆ. ಪ್ರಸ್ತುತ ಭಾರತ ಯೂರೋಪ್‌ಗೆ 6.4 ಲಕ್ಷ ಕೋಟಿ ರು. ವಸ್ತುಗಳನ್ನು ರಫ್ತು ಮಾಡುತ್ತಿದೆ. →10

ಐರೋಪ್ಯ ಒಕ್ಕೂಟದಲ್ಲಿ ಇಂಗ್ಲೆಂಡ್ ಇಲ್ಲ

ವಿಶೇಷ 27 ದೇಶಗಳ ಐರೋಪ್ಯ ಒಕ್ಕೂಟದಲ್ಲಿ ಇಂಗ್ಲೆಂಡ್ ಇಲ್ಲ. 2020, ಜ.31ರಂದು ಇಂಗ್ಲೆಂಡ್ ತಮ್ಮ ದೇಶದ ಜನರ ಅಭಿಪ್ರಾಯಗಳನ್ನಾಧರಿಸಿ ಒಕ್ಕೂಟದಿಂದ ಹೊರಬಿದ್ದಿದೆ.

ಒಪ್ಪಂದದ ವೇಳೆ ಪ್ರಧಾನಿ ಮೋದಿ, ಐರೋಪ್ಯ ಒಕ್ಕೂಟದ ನಾಯಕರಾದ ಕೋಸ್ಟಾ, ಉರ್ಸುಲಾ

ಭಾರತಕ್ಕೇನು ಲಾಭ?

- ಭಾರತ ಶೇ.99 ಉತ್ಪನ್ನಗಳಿಗೆ ಯೂರೋಪ್ ಮಾರುಕಟ್ಟೆ ಮುಕ್ತ
- ಜವಳಿ, ಸಿದ್ಧ ಉಡುಪುಗಳು, ಚರ್ಮೋದ್ಯಮ, ಪಾದರಕ್ಷೆ, ಸಮುದ್ರೋತ್ಪನ್ನ, ರತ್ನ, ಆಭರಣ, ಕರಕುಶಲ ವಸ್ತು, ಎಂಜಿನಿಯರಿಂಗ್, ಆಟೋಮೊಬೈಲ್ ವಸ್ತುಗಳ ಮೇಲಿನ ತೆರಿಗೆ ಶೇ.10ರಿಂದ ಶೂನ್ಯಕ್ಕಿಳಿಯಲಿದೆ.
- ಎಂಜಿನಿಯರಿಂಗ್ ಹಾಗೂ ಅದರ ಸಲಕರಣೆ ಉದ್ಯಮಕ್ಕೆ 183 ಲಕ್ಷ ಕೋಟಿ ರು. ಮಾರುಕಟ್ಟೆಗೆ ನೇರಪ್ರವೇಶ
- ಯೂರೋಪ್‌ನ 7 ಲಕ್ಷ ಕೋಟಿ ರು. ಮಾರುಕಟ್ಟೆಯಲ್ಲಿ ಕಾಣಿಸಿಕೊಳ್ಳಲಿವೆ ಭಾರತದ ರತ್ನ ಮತ್ತು ಆಭರಣಗಳು
- 9.1 ಲಕ್ಷ ಕೋಟಿ ರು. ಮಾರುಕಟ್ಟೆಯಲ್ಲಿ ಭಾರತದ ಪಾದರಕ್ಷೆ ಉತ್ಪನ್ನಗಳ ಸ್ಪರ್ಧೆ
- 24 ಲಕ್ಷ ಕೋಟಿ ರು. ಮಾರುಕಟ್ಟೆಯಲ್ಲಿ ಕಂಗೊಳಿಸಲಿವೆ ಭಾರತೀಯ ವಸ್ತ್ರಗಳು
- ಕೆಲಸಗಾರರು, ಕುಶಲಕರ್ಮಿಗಳು, ಮಹಿಳೆಯರು, ಯುವಕರು, ಸಣ್ಣ, ಅತಿ ಸಣ್ಣ ಉದ್ಯಮಿಗಳಿಗೆ ಅನುಕೂಲಕರ.

ಯೂರೋಪ್‌ಗೇನು ಲಾಭ?

- ಭಾರತಕ್ಕೆ ರಫ್ತು ಮಾಡುವುದರಿಂದ ಈಗಾಗಲೇ ಯೂರೋಪಿನಲ್ಲಿ 8 ಲಕ್ಷ ಉದ್ಯೋಗಾವಕಾಶ, ಮುಂದೆ ದುಪ್ಪಟ್ಟು
- ಐರೋಪ್ಯ ರಾಷ್ಟ್ರಗಳಿಂದ ದೊಡ್ಡ ಪ್ರಮಾಣದಲ್ಲಿ ಭಾರತದ ಸೇವಾ ವಲಯಕ್ಕೆ (ಆಸ್ಪತ್ರೆ, ಹೋಟೆಲ್, ಶಿಕ್ಷಣ ಇತ್ಯಾದಿ) ಪ್ರವೇಶ. ಆ ದೇಶಗಳ ಉತ್ಪನ್ನಗಳಿಗೆ ವರ್ಷಕ್ಕೆ 43.5 ಸಾವಿರ ಕೋಟಿ ರು. ತೆರಿಗೆ ವಿನಾಯ್ತಿ
- ಪ್ರತಿ ವರ್ಷ ಯೂರೋಪಿನ 2.50 ಲಕ್ಷ ವಾಹನಗಳು ಭಾರತದ ಮಾರುಕಟ್ಟೆಗೆ. ಈಗಿನ ಶೇ.110 ತೆರಿಗೆ ಶೇ.10ಕ್ಕಿಳಿಕೆ
- ಯೂರೋಪಿನ ಯಂತ್ರಗಳು, ವಿದ್ಯುನ್ಮಾನ, ವೈದ್ಯಕೀಯ ಸಾಧನಗಳು ತೆರಿಗೆ ಮುಕ್ತ. ಮುತ್ತು, ಹರಳುಗಳು, ಲೋಹಗಳಿಗೆ ತೆರಿಗೆ ಕಡಿತ. ರಾಸಾಯನಿಕಗಳಿಗೆ ಮುಂದೆ ಶೂನ್ಯ ತೆರಿಗೆ
- ಯೂರೋಪ್ ಕೃಷಿಕರಿಗೆ ಲಾಭ. ಅಲ್ಲಿನ ವೈನ್ ತೆರಿಗೆ ಶೇ.150ರಿಂದ ಶೇ.20, ಇತರೆ ಮದ್ಯಕ್ಕೆ ಶೇ.40ಕ್ಕಿಳಿಕೆ. ಆದರೆ ಭಾರತ ಅಕ್ಕಿ, ಸಕ್ಕರೆ, ದನದ ಮಾಂಸದ ಮೇಲಿನ ತೆರಿಗೆಯಿಳಿಸಿಲ್ಲ.

ಫನ್‌ತರಂಗ
- ರಘುಪತಿ ಶೃಂಗೇರಿ -

ಡಿಸಿಎಂ ತಲೆಗೆ ಟವೆಲ್ ಕಟ್ಟಿದ ಸಿಎಂ

ಕೇಂದ್ರದ ತೆರಿಗೆ ನಿಯಮದ ವಿರುದ್ಧ ವಾಗ್ದಾಳಿ ನಡೆಸಿದ ಶಾಸಕ ಪ್ರದೀಪ್ ಈಶ್ವರ್

ಬಡವರ ಹೊಟ್ಟೆ ತುಂಬಿಸಿದ ಸಿದ್ದರಾಮಯ್ಯ ನನ್ನ ಪಾಲಿನ ಶ್ರೀರಾಮ: ಮೆಚ್ಚುಗೆ

ಬಿಗ್‌ಬಾಸ್ ಗೆದ್ದದ್ದು ಗಿಲ್ಲಿಯಲ್ಲ, ನಿರ್ಮಲಾ!

ವಿಶ್ವವಾಣಿ ಸುದ್ದಿಮನೆ, ವಿಧಾನಸಭೆ

ಎಂಜಿನಿಯರ್, ವೈದ್ಯರು, ಶಿಕ್ಷಕರಾಗಲು ಕೋರ್ಸುಗಳುಂಟಯ್ಯ, ಬುದ್ಧ, ಬಸವ, ಅಂಬೇಡ್ಕರ್, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಆಗಲು ಕೋರ್ಸ್‌ಗಳು ಇಲ್ಲಯ್ಯ. ಅವರಂತಾಗಲು ನಿಮ್ಮೊಳಗಿನ ಫೋರ್ಸ್ ಬೇಕಯ್ಯ ಎಂದು ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಸದನದೊಳಗೆ ಹೇಳಿದ ಡೈಲಾಗ್‌ಗೆ ಆಡಳಿತ ಪಕ್ಷದ ಸದಸ್ಯರಿಂದ ಭರ್ಜರಿ ಚಪ್ಪಾಳೆ ಗಿಟ್ಟಿಸಿದ ಪ್ರಸಂಗ ನಡೆಯಿತು. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಪ್ರಸ್ತಾವ ಅನುಮೋದಿಸಿ ಮಾತನಾಡಿದ ಪ್ರದೀಪ್ ಈಶ್ವರ್, ತಮ್ಮ ಈ ಭಾಷಣ ರಾಷ್ಟ್ರಗೀತೆ ಮತ್ತು ಕನ್ನಡಿಗರ ಆತ್ಮ ಗೌರವಕ್ಕೆ ಅಗೌರವ ತೋರಿದ ವ್ಯಕ್ತಿಗಳಿಗೆ ಅರ್ಪಣೆ ಎಂದರು. →10

ರಾಜ್ಯಪಾಲರ ನಡೆ ಆತಂಕಕಾರಿ



ಸದನದಲ್ಲಿ ಮಾತನಾಡಿದ ಶಾಸಕ ಪೊನ್ನಣ್ಣ, ರಾಜ್ಯಪಾಲರು ಭಾಷಣ ಪೂರ್ಣ ಓದದಿರುವುದು ಆತಂಕಕಾರಿ ನಡೆ. ವಿರೋಧ ಪಕ್ಷಗಳು ಅಧಿಕಾರ ದಲ್ಲಿರುವ ರಾಜ್ಯಗಳ ರಾಜ್ಯಪಾಲರು ಕೇಂದ್ರದವರು ಹೇಳಿದಂತೆ ನಡೆಯುತ್ತಿರುವ ಆತಂಕವಿದೆ ಎಂದರು.

400 ಕೋಟಿ ರು. ದರೋಡೆಯಲ್ಲಿ ಬೆಳಗಾವಿ ಪೊಲೀಸರು ಭಾಗಿ?

ವಿನಾಯಕ ಮಠಪತಿ, ಬೆಳಗಾವಿ

ಮಹಾರಾಷ್ಟ್ರ ಗಡಿಗೆ ಹೊಂದಿಕೊಂಡಿರುವ ಬೆಳಗಾವಿಯ ಚೋರ್ಲಾ ಘಾಟ್‌ನಲ್ಲಿ ನಡೆದಿದೆ ಎನ್ನಲಾದ 400 ಕೋಟಿ ರು. ಹಣ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಂದು ಸ್ಫೋಟಕ ಅಂಶ ಬೆಳಕಿಗೆ ಬಂದಿದೆ. ದರೋಡೆಯಲ್ಲಿ ಬೆಳಗಾವಿ ಪೊಲೀಸರ ಕೈವಾಡ ಇತ್ತಾ ಎಂಬ ಅನುಮಾನ ಹುಟ್ಟಿಕೊಂಡಿದೆ. ಸಂದೀಪ್ ಪಾಟೀಲ ಎಂಬ ವ್ಯಕ್ತಿಯ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳ ನಡುವಿನ ವಾಟ್ಸಪ್ ಸಂಭಾಷಣೆಯೇ ಆಡಿಯೋ ಬಹಿರಂಗವಾಗಿದ್ದು, ಸಂಶಯ ತೀವ್ರಗೊಂಡಿದೆ. →10

- ಮಹಾ ಪೊಲೀಸರಿಂದ ಇನ್ನಿಬ್ಬರ ಬಂಧನ, ಬಂಧಿತರ ಸಂಭಾಷಣೆ ಲೀಕ್
- ವಾಟ್ಸಪ್ ಆಡಿಯೋದಲ್ಲಿ ಬೆಳಗಾವಿ ಪೊಲೀಸ್ ಪಾತ್ರದ ಬಗ್ಗೆ ಬೊಟ್ಟು

ಸಮಾಚಾರ ಸಣ್ಣದಲ್ಲ

ಇಂದು ಶ್ರೀಜಿತ್ ಶಾಲೆ ವಾರ್ಷಿಕೋತ್ಸವ

ಬಾಗಲಕೋಟೆ: ಇಲ್ಲಿನ ನವನಗರದ ಸೆಕ್ಟರ್‌ಸಂಖ್ಯೆ 72ರಲ್ಲಿರುವ ಶ್ರೀಜಿತ್ ಅಂತಾರಾಷ್ಟ್ರೀಯ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಜ.28 ರಂದು ಹಮ್ಮಿಕೊಳ್ಳಲಾಗಿದೆ. ಶಾಲೆಯ ಆವರಣದಲ್ಲಿ ಸಂಜೆ 6ಕ್ಕೆ ನಡೆಯುವ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಸಂಗಪ್ಪ ಉದ್ಘಾಟಿಸಲಿದ್ದು, ಸಂಸ್ಥಾಪಕ ಅಧ್ಯಕ್ಷ ಹೊಳಬಸು ಶೆಟ್ಟರ ಅಧ್ಯಕ್ಷತೆ ವಹಿಸಲಿದ್ದು, ಮಾಜಿ ಸಚಿವ ಅಜಯಕುಮಾರ ಸರನಾಯಕ, ಬಸವೇಶ್ವರ ಬ್ಯಾಂಕ್ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಪಾಟೀಲ್ ಮೆಡಿಕೇರ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಡಾ.ಸುಭಾಷ ಪಾಟೀಲ, ಬಿಟಿಡಿಎ ಮುಖ್ಯ ಎಂಜಿನಿಯರ್ ಚಂದ್ರಹಾಸ ಬಂಡಿ, ಗಾಯತ್ರಿ ಬ್ಯಾಂಕಿನ ಅಧ್ಯಕ್ಷ ರಮೇಶ ಬದ್ರಿ, ಕಲಬುರ್ಗಿ ಯುವಸ ಮುಖಂಡರಾದ ಮಲ್ಲಿಕಾರ್ಜುನ ಮೇಟಿ ಹಾಗೂ ಉಮೇಶ ಮೇಟಿ ಭಾಗವಹಿಸಲಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಆಧ್ಯಾತ್ಮದಿಂದ ಪರಮಾನಂದ ಪಡೆಯಲು ಸಾಧ್ಯ

ಬಿವಿವಿ ಸಂಘದ ಪ್ರಕೃತಿ ಯೋಗವನ ಲೋಕಾರ್ಪಣೆ | ಸತ್ಯಸಾಯಿ ವಿಶ್ವವಿದ್ಯಾಲಯದ ಸಂಸ್ಥಾಪಕ ಸದ್ಗುರು ಶ್ರೀ ಮಧುಸೂದನಸಾಯಿ ಕರೆ

ಬಾಗಲಕೋಟೆಯಲ್ಲಿ ಬಿವಿವಿ ಸಂಘದ ಪ್ರಕೃತಿ ಯೋಗವನವನ್ನು ಸತ್ಯಸಾಯಿ ವಿಶ್ವವಿದ್ಯಾಲಯದ ಸಂಸ್ಥಾಪಕ ಸದ್ಗುರು ಶ್ರೀಮಧುಸೂದನಸಾಯಿ ಲೋಕಾರ್ಪಣೆಗೊಳಿಸಿದರು.

ಬಾಗಲಕೋಟೆ: ದೈಹಿಕ ಮತ್ತು ಮಾನಸಿಕವಾಗಿ ಕೆಲವರು ಗಟ್ಟಿಯಾಗಿದ್ದರೂ ಅವರಲ್ಲಿ ನವನದ ಅನುಭವವೇ ಇರುವುದಿಲ್ಲ. ಆನಂದ ಆಧ್ಯಾತ್ಮದಿಂದ ಮಾತ್ರವೇ ಸಿಗುವುದರಿಂದ ಆ ಕಡೆಗೆ ಸಮಾಜ ಮುಖಮಾಡಬೇಕು ಎಂದು ಚಿಕ್ಕಬಳ್ಳಾಪುರ ಮುದ್ದೇನಹಳ್ಳಿಯ ಒನ್ ವರ್ಡ್, ಒನ್ ಫ್ಯಾಮಿಲಿ ಮಿಷನ್ ಸತ್ಯಸಾಯಿ ವಿಶ್ವವಿದ್ಯಾಲಯದ ಸಂಸ್ಥಾಪಕ ಸದ್ಗುರು ಶ್ರೀ ಮಧುಸೂದನಸಾಯಿ ಹೇಳಿದರು.

ಇಲ್ಲಿನ ಬಿವಿವಿ ಸಂಘದ ಆಯುರ್ವೇದ, ಯೋಗ, ಪ್ರಕೃತಿ ಚಿಕಿತ್ಸಾಲಯ ಮತ್ತು ಕಾಲೇಜುಗಳನ್ನು ಒಳಗೊಂಡಿರುವ ಪ್ರಕೃತಿ ಯೋಗವನವನ್ನು ಲೋಕಾರ್ಪಣೆಗೊಳಿಸಿದರು.

ಕೆಂದು ಹೇಳಿದರು. ಬಿವಿವಿ ಸಂಘದ ಪ್ರಕೃತಿ ಯೋಗವನವು ಜನರ ದೈಹಿಕ, ಮಾನಸಿಕ ಆರೋಗ್ಯ ಕಾಪಾಡುವುದರ ಜತೆಗೆ ಆಧ್ಯಾತ್ಮಿಕತೆಯನ್ನೂ ಬೆರೆಸಲಿ. ದೇಹ ಸದೃಢವಾಗಿದ್ದು, ಮಾನಸಿಕ ಆನಂದವೇ ಇಲ್ಲವಾದರೆ ಅವ ರೋಗಿಯಾಗುತ್ತಾನೆ. ಅಂತರಾಳದಲ್ಲಿ ಸಂತೋಷ ಒಬ್ಬ ವ್ಯಕ್ತಿಯ ಆರೋಗ್ಯವನ್ನು ನಿರ್ಧರಿಸುತ್ತದೆ. ಅಂಥ ಆನಂದ ಸಿಗಬೇಕಾದರೆ ಆಧ್ಯಾತ್ಮದತ್ತ ಸಾಗಬೇಕು. ಜೀವನದಲ್ಲಿ ಆಧ್ಯಾತ್ಮಕತೆಯನ್ನು ಅಳವಡಿಸಿಕೊಳ್ಳುವುದರಿಂದ ಅಂತರಾಳದಲ್ಲಿ ನೈಜ ಆನಂದ ಗೋಚರಿಸುತ್ತದೆ ಎಂದು ಹೇಳಿದರು.

ಈಚೆಗೆ ಆಸ್ಪತ್ರೆಯೊಂದರಲ್ಲಿ ವೈದ್ಯರು ಎದೆನೋವು ಕಾಣಿಸಿಕೊಂಡ ವ್ಯಕ್ತಿಗೆ ಸ್ಟೆಂಟ್ ಅಳವಡಿಸುವಂತೆ ಸಲಹೆ ಮಾಡಿ, 2 ಲಕ್ಷ ರು. ಖರ್ಚಾಗುತ್ತದೆ ಎಂದು ಹೇಳಿದ್ದರು. ಅನುಮಾನ ಗೊಂಡ ರೋಗಿ ನಮ್ಮ ಮುದ್ದೇನಹಳ್ಳಿಯ ಆಸ್ಪತ್ರೆಗೆ ಬಂದಾಗ ಅವರಲ್ಲಿ ಯಾವುದೇ ಸಮಸ್ಯೆ ಇಲ್ಲ ಎಂಬುದು ತಿಳಿಯಿತು. ವೈದ್ಯೋ ನಾರಾಯಣ ಹರಿ ಎನ್ನುತ್ತೇವೆ ಕೆಲವರು ಹಣದ ಆಸೆಗೆ ಯಮನ ಸಹೋದರರಾಗುತ್ತಿರುವುದು ಬೇಸರದ ಸಂಗತಿ ಎಂದರು. ವೈದ್ಯಕೀಯ ಮತ್ತು ಶಿಕ್ಷಣ ಕ್ಷೇತ್ರ ವಾಣಿಜ್ಯೀಕರಣಗೊಂಡಿರುವುದರಿಂದ ಬಡವರು, ಅಸಹಾಯಕರ ಧ್ವನಿ ಅಡಗಿ ಹೋಗಿದಂತಾಗಿದೆ. ಆ ಕಾರಣಕ್ಕಾಗಿಯೇ ನಾವು ಶಿಕ್ಷಣ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಬದಲಾವಣೆಯ ಪಣತೊಟ್ಟಿದ್ದೇವೆ ಎಂದರು.

ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಮಾತನಾಡಿ, ದೇಶದ ಪ್ರತಿಷ್ಠಿತ ಸಂಸ್ಥೆಗಳಿಗೆ ಕಡಿಮೆ ಯಿಲ್ಲದಂತೆ ಬಿವಿವಿ ಸಂಘ ವಿಶಾಲ ಭಿನ್ನ ಚಿಂತನೆಯ ಕನಸ ನೇತೃತ್ವದಲ್ಲಿ ಬೆಳೆದಿದೆ.

ಶ್ರೀ ಮಧುಸೂದನಸಾಯಿ ಅವರು ಅಕ್ಷರ, ಅನ್ನದಾಸೋಹದ ಕೈಂಕರ್ಯದಲ್ಲಿ ತೊಡಗಿದ್ದಾರೆ. ಒಂದು ಬಾರಿ ತಿರುಪತಿಗೆ ಹೋಗುವುದನ್ನು ಬಿಟ್ಟಾದರೂ ಮುದ್ದೇನಹಳ್ಳಿಯ ಶಿಕ್ಷಣ, ಆರೋಗ್ಯ ಸಂಸ್ಥೆಗಳನ್ನು ನೋಡಿಬರಬೇಕು. ನಿಜಕ್ಕೂ ಪ್ರೇರಣೆ ನೀಡುವ ರೀತಿಯಲ್ಲಿವೆ ಎಂದರು.

ಶ್ರೀಸತ್ಯಸಾಯಿ ಸೇವಾ ಗುರುಕುಲದ ಮಾರ್ಗದರ್ಶಕ ಬಿ.ಎಂ.ನರಸಿಂಹಮೂರ್ತಿ ಮಾತನಾಡಿ, ಸದ್ಗುರು ಶ್ರೀಮಧುಸೂದನಸಾಯಿ ಅವರು ದೇಶ, ವಿದೇಶದಲ್ಲಿ 35ಕ್ಕೂ ಅಧಿಕ ಶಿಕ್ಷಣ ಸಂಸ್ಥೆ, 15ಕ್ಕೂ ಅಧಿಕ ಆಸ್ಪತ್ರೆಗಳನ್ನು ಕಟ್ಟಿದ್ದಾರೆ. ಮುದ್ದೇನ ಹಳ್ಳಿಯ ಆಸ್ಪತ್ರೆಯಲ್ಲಿ ನಿತ್ಯವೂ 2 ಸಾವಿರ ಜನ ತಪಾಸಣೆಗೆ ಆಗಮಿಸುತ್ತಾರೆ. ಅವರಿಂದ ನಯಾ ಪೈಸೆಯನ್ನೂ ಸಂಸ್ಥೆ ಪಡೆಯುವುದಿಲ್ಲ ಎಂದರು.

ಸಂಘದ ಶಾಲಾ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಮಹಾಂತೇಶ ಶೆಟ್ಟರ್,ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಆಯುರ್ವೇದ, ಯೋಗ, ಪ್ರಕೃತಿ ಕಾಲೇಜುಗಳ ಮಂಡಳಿ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಸಾಸನೂರ, ಸಂಘದ ಸದಸ್ಯರಿದ್ದರು.

ಆಸ್ಪತ್ರೆಯಲ್ಲಿ ಬಿಲ್ಲಿಂಗ್ ಕೌಂಟರ್ ಇಲ್ಲ

ಶ್ರೀಮಧುಸೂದನಸಾಯಿ ಅವರ ದೃಷ್ಟಿ ಸಂಸ್ಥೆ ಮೇಲೆ ಇರಲಿ ಎಂದು ಎಲ್ಲ ಕ್ಯಾಂಪಸ್‌ಗಳ ವೀಕ್ಷಣೆ ಮಾಡಿಸಲಾಗಿದೆ. ಮುದ್ದೇನಹಳ್ಳಿಯಲ್ಲಿನ ಅವರ ಆಸ್ಪತ್ರೆ ಅತ್ಯಂತ ಪ್ರೇರಣಾದಾಯಕ ಆಗಿದೆ. ಅವರ ಏಂದಿನ ಶ್ರೀಸತ್ಯಸಾಯಿಬಾಬಾ ಅವರು 1968 ಬಿವಿವಿ ಸಂಘದ ಮೈದಾನಕ್ಕೆ ಆಗಮಿಸಿದ್ದರು. ಈಗ ಮಧುಸೂದನಸಾಯಿ ಅವರು ಸಂಸ್ಥೆಗೆ ಭೇಟಿ ನೀಡುತ್ತಿರುವುದು ಹೆಮ್ಮೆಯ ಸಂಗತಿ. ಮುದ್ದೇನ ಹಳ್ಳಿಯಲ್ಲಿರುವ ಆಸ್ಪತ್ರೆಯಲ್ಲಿ ಬಿಲ್ಲಿಂಗ್ ಕೌಂಟರ್ ಇಲ್ಲ ಬಂದವರೆಲ್ಲರಿಗೂ ಉಚಿತ ಚಿಕಿತ್ಸೆ ನೀಡುತ್ತಿರುವುದು ನಿಜಕ್ಕೂ ಪ್ರೇರಣಾದಾಯಿ ಆಗಿದೆ ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಹೇಳಿದರು.

ಬಿವಿವಿ ಸಂಘದ ಆಸ್ಪತ್ರೆಗಳಲ್ಲಿ ಕನಿಷ್ಠ ವೆಚ್ಚದಲ್ಲೇ ಚಿಕಿತ್ಸೆ ಪಡೆಯುತ್ತಿರುವುದು ಸಹ ಖುಷಿಯ ಸಂಗತಿ. ಸಂಘ ಅತ್ಯುತ್ತಮ ಕೆಲಸಗಳನ್ನು ಮಾಡುತ್ತಿದೆ. ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಅವರ ಸಂಸ್ಥೆಯನ್ನು ದೊಡ್ಡಮಟ್ಟಕ್ಕೆ ಬೆಳೆಸುತ್ತಿರುವುದು ಹೆಮ್ಮೆಯ ವಿಷಯ.

– ಶ್ರೀಮಧುಸೂದನಸಾಯಿ, ಸತ್ಯಸಾಯಿ ವಿವಿ ಸಂಸ್ಥಾಪಕ ಸದ್ಗುರು

MAG FINSERV
Loans for Better Living

ಮ್ಯಾಗ್ ಫಿನ್‌ಸರ್ವ್ ಕಂಪನಿ ಲಿಮಿಟೆಡ್.

" ಮ್ಯಾಗ್ ಹೌಸ್ ", ಲಕ್ಷ್ಮಿ ನಗರ , ಫಲ್ಟನ್, ಲಲಿತ್ ಮೋಹನ್ ಬಜಾರ್ ಹಿಂದೆ .

ಹರಾಜು ಸೂಚನೆ

ನೋಂದಾಯಿತ ಹರಾಜು ಸೂಚನೆಗಳು ಮತ್ತು ಪುನರಾವರ್ತಿತ ಜ್ಞಾಪನೆಗಳ ಮೂಲಕ ತಿಳಿಸಿದ್ದರೂ ಸಹ, ಮ್ಯಾಗ್ ಫೈನಾನ್ಸ್ ಕಂಪನಿ ಲಿಮಿಟೆಡ್ ("ಮ್ಯಾಗ್") ತಮ್ಮ ಸಾಲಗಳನ್ನು ಕ್ರಮಬದ್ಧಗೊಳಿಸದ ಅಥವಾ ಬಾಕಿ ಪಾವತಿಸದ ಬಾಕಿ ಇರುವ ಚಿನ್ನದ ಆಭರಣಗಳ ಹರಾಜನ್ನು ನಡೆಸುತ್ತಿದೆ ಎಂದು ಸಂಬಂಧಪಟ್ಟ ಎಲ್ಲಾ ಸಾಲಗಾರರು ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ. ಈ ಕೆಳಗಿನ ಸಾಲ ಖಾತೆಗಳಲ್ಲಿ ಅಡವಿಟ್ಟ ಚಿನ್ನದ ಆಭರಣಗಳ ಸಾರ್ವಜನಿಕ ಹರಾಜನ್ನು 05.02.2026 ರಂದು ಮಧ್ಯಾಹ್ನ 2:00 ಗಂಟೆಗೆ "ಮ್ಯಾಗ್ ಹೌಸ್", ಲಲಿತ್ ಮೋಹನ್ ಬಜಾರ್, ಲಕ್ಷ್ಮಿ ನಗರ, ಫಲ್ಟನ್ – 415523 ನಲ್ಲಿ ನಡೆಸಲಾಗುತ್ತಿದೆ. ಬಿಡ್ದಾರರನ್ನು 05 ಫೆಬ್ರವರಿ 2026 ರಂದು ಬೆಳಿಗ್ಗೆ 09.00 ರಿಂದ ಮಧ್ಯಾಹ್ನ 12.00 ರವರೆಗೆ ಚಿನ್ನದ ಆಭರಣಗಳನ್ನು ಪರಿಶೀಲಿಸಲು ಮತ್ತು ಬಿಡ್ ಮಾಡಲು ನಿಮ್ಮನ್ನು ಆಹ್ವಾನಿಸಲಾಗಿದೆ. ಸ್ಥಳ ಅಥವಾ ದಿನಾಂಕದಲ್ಲಿನ ಯಾವುದೇ ಬದಲಾವಣೆಯನ್ನು (ಯಾವುದಾದರೂ ಇದ್ದರೆ) ಹರಾಜು ಕೇಂದ್ರದಲ್ಲಿ ಪ್ರದರ್ಶಿಸಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ಉಲ್ಲೇಖಿಸಲಾದ ದಿನಾಂಕದಂದು ಹರಾಜು ನಡೆಸಲು ಸಾಧ್ಯವಾಗದಿದ್ದರೆ ಅಥವಾ ಅದೇ ದಿನ ಹರಾಜು ಪೂರ್ಣಗೊಳ್ಳದಿದ್ದರೆ, 'ಮ್ಯಾಗ್' ಮುಂದಿನ ಯಾವುದೇ ದಿನಾಂಕದಂದು ಅದೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಹರಾಜನ್ನು ನಡೆಸುವ ಅಥವಾ ನಂತರ ಹರಾಜನ್ನು ನಡೆಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಗ್ರಾಹಕರ ಮರಣದ ಸಂದರ್ಭದಲ್ಲಿ, ಹರಾಜಿಗೆ ಸಂಬಂಧಿಸಿದ ಎಲ್ಲಾ ನಿಯಮಗಳು ಮತ್ತು ಷರತ್ತುಗಳು ನಾಮನಿರ್ದೇಶಿತ ವ್ಯಕ್ತಿ/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಅನ್ವಯಿಸುತ್ತವೆ.

ಬೆಳಗಾವಿ ಯೋಗೇಶ್ ಬಾಬನರಾವ ಪೋತದಾರ(00502618387601), ಸಂತೋಷ್ ರಾಮಾ ಸುತಾರ್(00502617899301), ಶೋಭಾ ರಾಜು ಪಾಟೀಲ್(00502611342703), ನಿಖತ್ ಪರ್ವೀನ್ ಸನದಿ(00502604679304), (00502618595201), (00502604032204) , ಶಿಲ್ಪಾ ಈಶ್ವರ್ ತಳ್ವಾರ(00502614349904), ಅಜಯ್ ಪುಂಡಲಿಕ್ ಚಿಕೋರ್ಡೆ(00502608365903), (00502606546303), ಜಯಶ್ರೀ ಹನಮಂತ್ ಲೋಹಾರ್(00502615085603), ಅಲೋಕ್ ರಮೇಶ್ ಬಡಗಾವಿ(00502618487001), (00502602645305), (00502614601203), (00502600781905), ಮೊಹಮ್ಮದ್ರಫೀಕ್ ಬಂದೇನವಾಜ್ ತಾರಕರ್(00502612211103), ಸಮೀರ್ ಮೊಹಮ್ಮದ್ ಬಬನ್ವಾಲೆ(00502618009001), (00502617720603), ಡಿಮೋಪಾಲ್ ದಾದು ಚೌಗಲೆ(00502618153901), (00502618626401) , (00502618682001), ಸಮ್ರೀನ್ ಹಾರುನರಶೀದ್ ಜಮಾದಾರ್(00502617836701), ರಶ್ಮಿ ಅಮಿತ್ ಕುಮಾರ್ ವೇರ್ಣೇಕರ್ (00502607435703), (00502617953401), ರಿಜ್ವಾನಾ ಸರ್ತಾಜ್ ತಹಶೀಲ್ದಾರ್(00502606087003), ಗಿರೀಶ್ ರವಿ ಮೊದಗೇಕರ (00502610646103), ಭಾಗ್ಯಶ್ರೀ ತಾಯಪ್ಪ ಗುಡುಳಕರ್(00502612224303), (00502610230604), (00502610231604), (00502610231504), (00502609135105), (00502610726203), ನಿರಂಜನ್ ಷಣ್ಮುಖ್ ತಳವಾರ(00502611776103) , (00502610800103), ಮನಿಷಾ ಅಶೋಕ್ ಗಂಗಾಧರ್(00502609058003), ಸಂಜಯ್ ನಿಂಗಪ್ಪ ಹೊನ್ನೈಕ್(00502606185604) , ದೀಪಾಲಿ ವಿನಾಯಕ ಕಲ್ಕುಂಬಕರ್(00502603534604), (00502612060903), (00502610900803), ಶಿವಾನಿ ಮಹೇಶ್ ಅಶ್ವೇಕರ್ (00502614522903), (00502618638301), (00502615047903), ಸವಿತಾ ಶಂಕರ್ ಚೋಟೆ(00502609325403), ಮೈನುದ್ದೀನ್ ಬಶೀರ್ ಅಹ್ಮದ್ ಖಾನಾಪುರಿ(00502606809703), (00502607572003), ಸುರೇಶ್ ಕುಮಣ್ಣ ಕಾಂಬಳೆ(00502618455501), ಅನಂತ್ ಅಪ್ಪಾಸಾಬ್ ಕಿತಾನೆ(00502617932901), ದಿಶಾಂಕ್ ಚಂದ್ರಕಾಂತ್ ಪಟೇಲ್(00502607759003), ಚೈತನ್ಯ ವಿಜಯ್ ಕಿರಾಜಿ (00502611602403), ಮಹಾದೇವ್ ಭೀಮರಾವ್ ಬಾಳೆಕುಂದ್ರಿ(00502608722103), ಸಲೀಂ ನಜೀರಹ್ಮದ್ ತಹಶೀಲ್ದಾರ (00502609218603), ಶೀತಲ್ ಸಂಜಯ್ ಪೋವಾರ್(00502617005901), ದೀಪಾ ಬಸವರಾಜ್ ಕಮ್ಮಾರ್(00502613855803) , (00502610359404), ಸುಪ್ರಿಯಾ ಕಾರ್ತಿಕ್ ವಿನೇಕರ್(00502613228503), ಕಾರ್ತಿಕ್ ನಾಗರಾಜ್ ವಿನೇಕರ್(00502610300603) , ಹರೀಶ್ ರವಿ ಮೊದಗೇಕರ(00502616613201), (00502616613401), (00502616844201), ಶಿಲ್ಪಾ ಗಜಾನನ್ ತಳವಾರ (00502618327503), ಈಶ್ವರ್ ಸುರೇಶ್ ತಳವಾರ(00502614653603), ಸಾಹೇಬಲಾಲ ಅಲ್ಲಾಬಕ್ಷ ಧಲಾಯತ್(00502614470404) , (00502614568903), ಭಿಕಾಜಿ ದಿಲೀಪ್ ಸುತಾರ್(00502614752403), ಪರಶರಾಮ ಮಾರುತಿ ನಾಕಾಡಿ(00502618244201), ವಿಶಾಲ್ ಸತೀಶ್ ಖಿಮ್ಕರಟ್ಟಿ(00502616906901), (00502616907201), ಭರಮೇಶ್ ಬಸಪ್ಪ ತಳವಾರ್(00502618727201), ವಿನಾಯಕ್ ಲಕ್ಷ್ಮಣ್ ಜಾಧವ್(00502618443401), ರವಿಕುಮಾರ್ ಚನ್ನಪ್ಪ ಕಲ್ಲಪ್ಪನವರ್(00502618560001), ಪ್ರಥಮೇಶ್ ಅಶೋಕ್ ಗಂಗಾಧರ (00502618643201), ಅಬ್ದುಲ್ಲ ಚಾಂದಸಾಬ್ ಶೇಖ್(00502618649903), **ಚಿಕ್ಕೋಡಿ** ಹಾಲಪ್ಪಬೀರಪ್ಪ ಬಿರನಾಳೆ(00492618677501) , (00492618873401), ಅರುಣ ಕಳಿಂಗೋಲ್(00492614972103), ಅನಿಲ್ ಸೂರ್ಯಕಾಂತ್ ಕಾಂಬಳೆ(00492613279403), ಭಾರತಿ ಅಭಯ್ ಕುಡಲೆ(00492606124506), (00492612296103), ಮಹೇಶ್ ಲಕ್ಷ್ಮಣ್ ಲಖೆ(00492613646804), ಸಂಗೀತಾ ಪದ್ಮಣ್ಣ ಜಾಧವ್ (00492618032801), ಅನ್ನಪೂರ್ಣ ಬಾಬಾಸಾಹೇಬ್ ಧಮನ್ನವರ್(00492613148303), (00492612877803), (00492618175601) , (00492618530001), ಪ್ರಕಾಶ್ ಶಿದ್ದಪ್ಪ ವಾಳಕೆ(00492618469001), ಗುಡುಸಾಬ್ ಮಹೆಮುಲಾಲ್ ಪಟೇಲ್(00492606125006) , ಭಜಂತ್ರಿ ಇಂದ್ರವ್ವ ಲಕ್ಷ್ಮಣ್(00492618888701), ಲಸಕರ್ ಬಾಲಪ್ಪ ತಮ್ಮಣ್ಣವರ್(00492609975904), ರವೀಂದ್ರ ಹರಿಹರ(00492607384104), (00492618877401), ರೇಖಾ ಲಸಕರ ತಮ್ಮಣ್ಣವರ್(00492606326406), (00492611154304), (00492616753003), ಅಶ್ವಿನಿ ಅಶೋಕ್ ಧಾಕೆ(00492612434103), ರಾಣಿ ಅರುಣ್ ಪವಾರ್(00492612623003), ಶಶಿಕಾಂತ್ ಶಂಕರ್ ಮಹಾದ್ವಾರ್(00492618553801), ರವೀಂದ್ರ ರಾಮಪ್ಪ ಕಡಲ್ಗಿ(00492611767604), ಅಜಿತ್ ಸದಾಶಿವ್ ದರಕುಮಲಿ(00492618394801) , ಪ್ರಮೋದ್ ಬೇಜು ಮಾಳಗೆ(00492610953704), (00492612274003), (00492612455203), ಕಲ್ಪನಾ ಸುಭಾಷ್ ಕಾಮಕರ್ (00492618287401), (00492605089305), ಮಹಾಂತೇಶ್ ವಿಲಾಸ್ ಪದವ(00492606371504), (00492607863604), ಪ್ರವೀಣ್ ಶ್ರೀಕಾಂತ್ ಕಾಂಬಳೆ(00492613889103), ರೀತಾ ರಾಜು ತಮ್ಮನವರ್(00492614554203), ಬಿಬಾ ಬೇಜು ಮಾಳಗೆ(00492618251801) , ಅನಿತಾ ಗಡದ್(00492618544201), ರಾಜೇಶಖರ್ ಭಾಸ್ಕರ್ ಭಂಡಾರ್ಕರ್(00492609660803), ಅಮರನಾಥ ಮಾರುತಿ ರಾವಲ್ (00492608707703), ರೇಷ್ಮಾ ಕಿರಣ್ ಕಾಂಬಳೆ(00492618034201), (00492618247001), ಕಲ್ಲಪ್ಪ ಶಂಕರ್ ಭಟ್ಟೆ(00492610925203) , ಲಕ್ಷ್ಮಣ್ ಯಶ್ವಂತ್ ಕೊರವಿ(00492618769401), ಪ್ರೇಮ ಪರಶುರಾಮ್ ಗಾಡೀವಡ್ಡರ(00492610682904), ಭೀಮಪ್ಪ ಮಾರುತಿ ಜಿಗನ್ (00492602926405), ಸ್ವಪನಿಲ್ ನಂದು ಚಾವ್ಹಾಣ್(00492617674602), (00492618798501), ಲಗಮವ್ವ ವಿಠಲ್ ಗುಡಗೆ (00492612702903), ಶಿವಾನಂದ ಲಕ್ಷ್ಮಣ್ ಸನದಿ(00492611366103), ರಾಜು ಶಂಕರ್ ಕೋರೆ(00492618364201), ಫರ್ಜಾನಾ ಮುಸ್ತಾಕ್ ನನದಿ(00492618797801), ಚಲುವಕ್ಕ ಲಕ್ಷ್ಮಣ್ ಗಡಕರಿ(00492618206401), ರೂಪಾ ರವಿ ಕಾಂಬಳೆ(00492612748404), ಮೀನಾಕ್ಷಿ ಅನ್ನಾಸಾಹೇಬ್ ಕಾಂಬಳೆ(00492611460403), (00492609499305), ಸ್ವಪ್ನಾ ರಾಜೇಂದ್ರ ದಾನಣ್ಣವರ್(00492618867501) , ಸಿದ್ದಪ್ಪ ಶಿವಪ್ಪ ದುಪಧಾಳ(00492603449606), ಸಂಜೀವಿನಿ ಬಸವರಾಜ್ ವಾಕಪೇಟ್(00492608569203), (00492614729403) , (00492612362303), ಪ್ರಿಯಾಂಕ ಅನಿಲ್ ಗಾಯಾಗೋಳ(00492618552701), (00492618816301), ಬೀರಪ್ಪ ಸಿದ್ದಪ್ಪ ಹರಕೆ (00492603564505), ಸತೀಶ್ ಸದಾಶಿವ್ ಪಾಟೀಲ್(00492614506103), ಸಂತೋಷ್ ಬಾಬುರಾವ್ ಯೋಗಿಕೊಳ್ಳಮಠ (00492614296403), (00492608920105), ಶ್ರೀದೇವಿ ದಾವಿದ ಮಾನೆ(00492603841306), ಶಾಂತಾ ರಾಮಪ್ಪ ಪಠಾಣ್ (00492604702003), ವಸಂತ ಕೃಷ್ಣಪ್ಪ ಯಡಗುಡೆ(00492605212604), ಸಾವಿತ್ರಿ ತಾತ್ಯಾಸಾಬ್ ಮಾಯನ್ನವರ(00492618475601) , ರೂಪಾ ಕಿರಣ್ ಕಾಂಬಳೆ(00492606775006), ಸುನೀಲ್ ಗಣಪತಿ ಶಿಂಧೆ(00492610639803), (00492618625801), (00492618676501), ಮಂಗಲ್ ಶಿವಾಜಿ ವಡ್ಡರ(00492619316601), ಲಕ್ಷ್ಮಿ ಕಿರಣ್ ಮುಂಡೇ(00492613081103), ವಿಲಾಸ್ ಗಂಗಾಧರ್ ಕಟ್ಟಿ(00492609425005), (00492610392003), ನಾಗವ್ವ ವಿನೋದ್ ತಮ್ಮಣ್ಣವರ್(00492608725806), (00492608583805), ಮಹೇಶ್ ಅಣ್ಣಪ್ಪ ಬ್ಯಾಳಿ(00492608975406), ಭಾಗೇಶ್ ಅಣ್ಣಪ್ಪ ಚಿಕಲೆ(00492618629101), ಕೆಂಪಣ್ಣ ರಾಮಗೌಡ ಬ್ಯಾಳಿ (00492618853501), ರಾಹುಲ್ ಅರುಣ್ ಶಿಂಧೆ(00492618411101), ವಿಕ್ರಮ್ ಶಶಿಕಾಂತ್ ತೇರದಾಳ(00492617932301), ಜ್ಯೋತಿ ಶಿಂಧೆ(00492610460203), ಆಕಾಶ್ ಸದಾಶಿವ್ ಮಾಳಗೆ(00492613661203), ಗುಲಾಬ್ ಗೌಸ್ ಪಠಾಣ್(00492613797203), ಸತ್ಯಪ್ಪ ಶಂಕರ್ ಸಂದಾಡಿ(00492612075403), (00492618806501), ಗಣಪತಿ ಮಾದಿಗ(00492614121903), ಆಕಾಶ್ ರಘುನಾಥ್ ಗಡೇಕರ್ (00492613044303), (00492615275504), ಪಾಂಡುರಂಗ ಶಿವಾನಂದ್ ಮೋಟನ್ನವರ್(00492612235503), (00492612239903) , ಶಿವಾಜಿ ಕೃಷ್ಣ ವಾಘಮರೆ(00492613635803), ಇಕ್ಬಾಲ್ ಗಣೇಶವಾಡಿ(00492614678903), ರಮೇಶ್ ಬೇಲಿಕಟ್ಟಿ(00492612858603) , ವಿಠಲ್ ಮಹಾದೇವ್ ಮಾದರ(00492618042301), ಸುಧಾಕರ್ ಮಲ್ಲಪ್ಪ ಮುಗಳಿ(00492613428103), ಸುನಿಲ್ ಶಂಕರ್ ಅವಂದಕರ್ (00492615237303), ಮಹಾಂತೇಶ್ ಮಾರುತಿ ಸನದಿ(00492613937203), ಶಾರದಾ ಲಖೆ(00492614102003), ಮಹಾದೇವಿ ಅಮಿತ್ ಮಾಳಗೆ(00492614346903), ಶಿವಾನಂದ ದುಂಡಯ್ಯ ಪೂಜಾರಿ(00492614513703), ವಿಜಯ್ ಮಾದರ ಗಣಪತಿ(00492614598203) , ಅಶೋಕ್ ಶೆಟ್ಟೆಪ್ಪ ಮಾದರ(00492617904301), ಚಿದಾನಂದ ಜಕಾತಿ ರಾಜು(00492614851003), ಅಮೀತ್ ಅಜೀತ್ ಮಾಳಗೆ (00492615210503), ಲಲಿತಾ ಭೀಮಣ್ಣ ಚೌಗಲೆ(00492617861701), ಆಸ್ಮಾ ಅಬ್ದುಲ್ಖಾದರ್ ಬೇಪಾರಿ(00492616074803), ಆಕಾಶ್ಮತಿ ಸಂಜಯ್ ಮಾಳಿ(00492618654101), ಕೆಂಪಣ್ಣ ಕಾಡಪ್ಪ ಗಿಜ್ಜಣ್ಣವರ್(00492618230201), (00492618683901), (00492617072103) , ಅಶ್ವಿನಿ ರವೀಂದ್ರ ಕೌಲಗೆ(00492617964101), (00492618531801), ಸುಜಾತಾ ಹಾರುಗೇರಿ(00492618010501), ಚಂದ್ರಕಾಂತ್ ಜೋತಿಬಾ ಮಾಳಿ(00492618152501), ಅಮೀನಸಾಬ್ ಅಮೀರಹಂಜಾ ಕುಡಚೆ(00492618168201), ರಾಜು ಬಸಗೌಡ ಪಾಟೀಲ್ (00492618228001), ಸದಾಶಿವ್ ಮಾರುತಿ ಮಾದರ(00492618251001), ಸುಧಾಕರ್ ಗಡಿಕರ್(00492618297301), ವಿಶಾಲ್ ಮಾರುತಿ ಗಂಜ್ಯಾಗೋಳ್(00492618308901), ರಾಜೇಂದ್ರ ದುಂಡಪ್ಪ ಸೋಲೋಣಿ(00492618387301), ಪರಶುರಾಮ್ ಮಾಯಪ್ಪ ದತ್ತವಾಡೆ (00492618584701), ಪ್ರಿಯಾಂಕ ರಾಮು ಭಜಂತ್ರಿ(00492618770101), ಕಿರಣ್ ವಡೇರ(00492618800401), ಸಂತೋಷ ಈರಪ್ಪ ಕೋಮಾರಿ(00492618838001), ಬಾಳವ್ವ ಮಲಪ್ಪ ವಾಳಕೆ(00492618904401), ಸಂತೋಷ್ ವಿಜಯ್ ಕಾಂಬಳೆ(00492618907301) , **ಗೋಕಾಕ್** ಸುಮಿತ್ರಾ ನಾಗನೂರ್(01672618692601), ಅನಿತಾ ಇರಪ್ಪ ಶಿವಯ್ಯಗೋಳ್(01672618131601), ವರ್ಷಾ ದತ್ತು ಕೋಳಿ (01672618573302), ಆಶಾ ಆಕಾಶ್ ಮಾನೆ(01672617816501), ಹೀನಾ ರಾಜೇಸಾಬ್ ಜಗದಾಳ(01672614010003), (01672614249503) , ಗೀತಾ ಮೇತ್ರಿ(01672618652701), (01672618113602), ಇಫ್ರಾ ಜಾವೇದ್ ಭೈರಕದರ್(01672613243003), ನಜ್ರೀನ್ ಸಮೀರ್‌ಖಾನ್ ಕಲಾದಗಿ(01672612228503), ಪೂಜಾ ಮಂಜುನಾಥ ಮಾಂಗ್(01672614832602), ಹುಸೇನಬಿ ಮಹ್ಮದ್‌ಸಾಬ್ ನದಾಫ್ (01672617779401), ಅಡಿವೆಪ್ಪ ಬಸಪ್ಪ ಕಪಶಿ(01672608309503), ಲಲಿತಾ ವಿಠಲ್ ವಾಕುಡೆ(01672617780901), ಆನಂದ್ ಮನೋಹರ್ ಬಾರಿಮನಿ(01672617891401), (01672618117101), (01672618162201), (01672618258701), (01672618339301), (01672618422601), (01672618464201), (01672618751501), (01672618757101), (01672618834001), (01672618885901), (01672618901501), (01672618902601), (01672618916401), ಶಾಂತವ್ವ ವಿಟ್ಟಲ್ ಜೋಡಟ್ಟಿ(01672608900105), (01672610225903), (01672615285902), (01672610866905), ಮುಬೀನಾ ಹಸನ್ ನನದಿ(01672610414403), ಲಗಮನಗೌಡ ಮಲಗೌಡ ಪಾಟೀಲ್(01672611945603) , (01672611885502), (01672613894003), ನಿತ್ಯಾನಂದ ಅಮ್ಮಿನಭಾವಿ(01672612221403), ಸಕ್ಕುಬಾಯಿ ಬೈರಪ್ಪ ಕರಡಿಗುಡ್ಡ (01672612458203), ಸಕ್ರೆವ್ವ ಯಲ್ಲಪ್ಪ ತಳವಾರ್(01672613728702), ಶಾಂತಾ ಶಂಕರಯ್ಯ ಶಹಾಪುರಮಠ(01672618768501) , ಮಹಬೂಬಸುಬಾನಿ ಇಮಾಮ್ಸಾಬ್ ಸನದಿ(01672618492201), ಲಕ್ಷ್ಮಣ ಲಕ್ಕಪ್ಪ ಡುಗನವರ(01672618630901), ಸತ್ಯವಾನ್ ಉತ್ತಮರಾವ್ ಸುತಾರ್(01672618008301), ವಿಠ್ಠಲ ರಾಮಪ್ಪ ತಳವಾರ್(01672617823801), (01672617684702), ಗುಲಜಾರ ಮೊಹಮ್ಮದಹನೀಫ್ ಸುದರ್ಜಿ(01672618057501), ಗಣೇಶ್ ವಿಠ್ಠಲ ಸಣ್ಣಕ್ಕಿ(01672618228301), ಮಕ್ತುಮಸಾಬ್ ರಂಜಾನಸಾಬ ನದಾಫ್(01672618347801), (01672618648701), ಅಂಬಿಕಾ ಶ್ರೀಮಂತ್ ಬುಲ್ಲಿ(01672618443301), ಮಹೇಂದ್ರ ಕಂಬಾರ್ (01672618533301), ಲಕ್ಷ್ಮಿ ಸನದಿ(01672618650601), **ನಿಪಾಣಿ** ಭೂಷಣ್ ರಾಜೇಂದ್ರ ಸಾಳ್ವೆ(00372618278701), ಸುನಿಲ್ ನಾಯಕ್ (00372616845501), (00372618004101), ವಿನೋದ್ ಶ್ರೀಪತಿ ಕಾಂಬಳೆ(00372618511001), ಸಂಜಯ್ ವಿನಾಯಕ್ ಚೌಗುಲೆ (00372618778501), ಮಾಳಿ ಸುರೇಖಾ ರಾಜೇಂದ್ರ(00372611828602), ಮೊಹಮ್ಮದಸಮೀರ್ ಗುಲಾಬ್ ಲಾಟಿ(00372614809702) , (00372611000202), ಸಚಿನ್ ಬಾಜಿರಾವ್ ಹಜಾರೆ(00372617872001), ಕುಮಾರ್ ಮುರಳೀಧರ್ ಚೌಗುಲೆ(00372609662802) , (00372612205202), (00372618553001), (00372618554601), (00372618632901), (00372611014302), (00372611760002), (00372614877702), ತಾಜುದ್ದೀನ್ ಇಕ್ಬಾಲ್ ಜರಿ(00372611837802), ಜಯದೇವ್ ಓಂಪ್ರಕಾಶ್ ವೈಷ್ಣವ್(00372617888501), ಚಿಂದಾಗೆ ಅಶ್ವಿನಿ ದೀಪಕ್(00372614044302), ಲಲಿತಾ ಗಜಾನನ್ ಕಾಂಬಳೆ(00372617971201), ಮಾಲತಿ ದಿಲೀಪ್ ಸೊಂಟಕ್ಕೆ(00372615533802) , (00372618340601), (00372618363901), ವಿಠಲ್ ಸುಧಾಕರ್ ಪೋತದಾರ(00372616871501), ಗೀತಾ ಅನಿಲ್ ಶಿಟೋಲ್ (00372612615202), (00372614180902), ವಿಲಾಸ್ ಫಕೀರ ಕಾಳೆ(00372608664102), ಭಿಕಾಜಿ ಲಕ್ಷ್ಮಣ್ ಭೋಸಲೆ(00372617799201) , (00372617959401), ಅಂಜನಾ ಶಂಕರ್ ವಾಳಕೆ(00372614337802), (00372613271602), ಸವಿತಾ ಸಂಜಯ್ ಕೊರ್ವಿ (00372612240502), (00372615272602), (00372611895602), ರವೀಂದ್ರ ಶಂಕರ್ ಭೋಯಿಟೆ(00372609057002), (00372613073202), (00372617896801), (00372618474901), ಶೈಖ್ ಮದೀನಾ ಅಸ್ಲಂ(00372618522401), ಗೋವಿಂದ ಚಂದ್ರಕಾಂತ್ ಚೌಗುಲೆ(00372612119002), ಅಪ್ಪಾಸೋ ಶಿವಪ್ಪ ಮೋಹಿತೆ(00372618020201), (00372618021301), ಉಮೇಶ್ ಮಹಾದೇವ್ ಪಾಟೀಲ್ (00372617951901), ಅದಾವ್ ಸುರೇಖಾ ಅಪ್ಪಾಸಾಹೇಬ್(00372612102002), ಶೋಭಾ ಮಹಾದೇವ್ ಜಾಧವ್(00372612429002), (00372613923502), ಚೌಗಲೆ ವೈಶಾಲಿ ರಾಜೇಂದ್ರ(00372614388502), (00372614388202), ಇಂಗವಲೆ ಅನಿತಾ ರಾಜರಾಮ್ (00372617609502), ನಾಗೇಶ್ ಶಂಕರರಾವ್ ಹೆಗಡೆ(00372618803001), ಶ್ರುತಿ ವಿನೋದ್ ಕಟ್ಟಿಮನಿ(00372618731601), ಲಕ್ಷ್ಮಿ ಸಹದೇವ್ ಮೇಸ್ತ್ರಿ(00372609071702), ರಂಜಿತ್ಸಿಂಹ ಅಪ್ಪಾಸಾಹೇಬ್ ಜಾಧವ್(00372614263102), ಪೂಜಾ ಸಚಿನ್ ಸುತಾರ್ (00372618197001), ಅಪ್ಸರಾ ಮಹಮದ್ ಜಮಾದರ್(00372618386101), ರುಕ್ಸಾನ ಕುತುಬುದಿನ್ ಜಮಾದಾರ(00372614991102) , ಸಂತೋಷ್ ಗಂಗಾರಾಮ ಕಾಂಬಳೆ(00372610154602), ಸವಿತಾ ದಿಲೀಪ್ ಶಿಂಪುಕಡೆ(00372618109601), ಸರಿತಾ ಕಪಿಲ್ ಉಬಾಲೆ (00372618615001), ಸೋನಾಲಿ ಜಿತೇಂದ್ರ ಕಾಂಬಳೆ(00372612198902), ಅಜಯ್ ದತ್ತಾತ್ರೇಯ ಸುತಾರ್(00372609109902) , ಫಿರೋಜ್ ಅಮೀನ್ ಕಲಾವಂತ್(00372618865401), ಸಾದಿಕ್ ಗುಲಾಬ್ ಮುಲ್ಲಾ(00372617453603), ಸಮೀರ್ ಸಲೀಂ ಏಕಸಾಂಬೆ (00372618231201), ಅನಿತಾ ಬಾಬುರಾವ್ ಪಾಟೀಲ್(00372618900101), ವಿನೋದ್ ವಸಂತ್ ಶಿಂದೇ(00372610076002), ರಾಣಿ ಅನ್ನಾ ಚೌಗುಲೆ(00372609669402), ಅಂಕುಶ್ ತಾತ್ಯಾಸಾಹೇಬ್ ಪಾಟೀಲ್(00372618050001), ಶಬಾನಾ ಫಿರೋಜ್ ಕಲಾವಂತ್ (00372618386901), ರೀಟಾ ಮಿಲ್ಯಾಂಡ್ ಬಿರಂಜೆ(00372610483202), ಸೋನಾಲಿ ಯೋಗೇಶ್ ಆವಾಲೆ(00372618111801), (00372618141101), (00372618555101), (00372618722201), (00372618864801), ಸಂಗ್ರಾಮ ಮಾರುತಿ ಶಿಟೋಲ್(00372611051502), (00372612162702), ಪೂಜಾ ಲಕ್ಷ್ಮಣ್ ಮಹಾಜನ್(00372617997601), ರಾಜಶೇಖರ್ ಅವಿನಾಶ್ ಪಾಟೀಲ್(00372612312402), ವಿನೋದ್ ವಿನಾಯಕ್ ಚೌಗಲೆ(00372618627501), ಪ್ರಶಾಂತ್ ವಿಲಾಸ್ ಶಿಂದೇ(00372612750402), ಗೋಪಿಚಂದ್ ರೇವ್‌ಚಂದ್ ಪೊಳ್(00372612774402), ಲತೀಫಾ ಗಣೇಶ್ ಕರಕಲಿ(00372613289602), ಮಾಯಾ ಯಲ್ಲಪ್ಪ ಕಾಂಬಳೆ(00372618823801), ಮಾರುತಿ ರಾಜರಾಮ್ ಕೊಂಡೇಕರ್(00372617891701), ಯುವರಾಜ್ ಕೃಷ್ಣನಾಥ್ ಮಾಳಿ(00372617783301), ಅರ್ಚನಾ ಅಮಿತ್ ಕಾಂಬ್ಳೆ (00372614126602), ರಾಹುಲ್ ರಾಜರಾಮ್ ಕಾಂಬ್ಳೆ(00372617782701), ಅಜಿತ್ ಸುರೇಶ್ ಮಾಳಿ(00372614110202), ಸಂತೋಷ್ ಅಪ್ಪಾಸಾಹೇಬ್ ಬೋರಗಲ್ಲೆ(00372618053501), ಯೋಗರಾಜ್ ಪ್ರೀತಮ್ ಸೂರ್ಯವಂಶಿ(00372615152302), ಮಾರುತಿ ನೇಮು ನಾಯಕ್(00372618229701), ವಿನಾಯಕ್ ವಿಶ್ವಾಸ್ ಕಾಂಬ್ಳೆ(00372616773201), ಶ್ರೇಯಾ ಪ್ರತೀಕ್ ಕಬ್ಬುರೆ(00372617395502), ಸಚಿನ್ ಅಪ್ಪ ಕುರಳೆ(00372617527204), (00372618479301), ನೀಲಂ ನಾಮದೇವ್ ಮೆಂಗಾಣೆ(00372617783901), ಮಹೇಶ್ ಪಾಂಡುರಂಗ ದಳವಿ(00372617802101), ಹಸೀನಾ ಬಾಬಾಸಾಬ್ ಕುಡಚಿ(00372618033701), (00372618034001), ಓಂಕಾರ ವಿಠಲ ಪೋತದಾರ (00372618044501), ಸೋನಲ್ ಆನಂದ ಕುಂಭಾರ(00372618188201), (00372618535601), ದೇವಗೌಡ ರಾಜಗೌಡ ಪಾಟೀಲ್ (00372618176201), ಸಂಜಯ್ ಮಲಗೊಂಡ ಪಾಟೀಲ್(00372618476201), ಕೈಲಾಸ್ ಮಾರುತಿ ಧಲೆ(00372618264301), ಸ್ವಪ್ನಿಲ್ ಯುಆರ್ಎಫ್ ಬಾಬಾಸಾಹೇಬ್ ಕಾಕಾಸಾಹೇಬ್ ಇಂಗಳೇ(00372618337801), ರಫೀಕ್ ಮಕ್ಬುಲ್ ಮುಜಾವರ್(00372618349301), ಶಶಿಕಾಂತ್ ಲಕ್ಷ್ಮಣ್ ಪೋಟಲೆ(00372618381101), ವಿಜಯ್ ಭೌಸೊ ಕಾಂಬ್ಳೆ(00372618519801), ರಾಹುಲ್ ಪಾಂಡುರಂಗ್ ಕಾಂಬ್ಳೆ (00372618521501), ಶಶಿಕಾಂತ್ ಅಣ್ಣಪ್ಪ ಸ್ಯಾಸ್ಟೆಲ್(00372618701101), ಸುನೀಲ್ ಬಡಕುಂದ್ರೆ(00372618807601), **ಸಂಕೇಶ್ವರ** ಶಾನೂರ್ ಸುಟ್ಟುಸಾಬ್ ಬಡಕರ್(01032618578001), (01032611728706), (01032613657405), ಬಸವರಾಜ್ ಸೋಮಶೇಖರ್ ಕಮನುರಿ (01032608034503), ಮಲ್ಲಿಕಾರ್ಜುನ್ ಪತ್ತಾರ(01032616963501), ಶೋಭಾ ಮಾರುತಿ ಕೊಟಬಾಗಿ(01032620909301), ಕಾಂಬಳೆ ಮಾಲಾದುಂಡಪ್ಪ(01032612791203), (01032613498303), (01032614856703), ಅಕ್ಷಯ್ ಮಾರುತಿ ದಾವಣೆ(01032617881201) , ಯೋಗೇಶ್ ಪಂಡಿತ್ ಧನಂಜಿ(01032611646803), ರಾಜಶೇಖರ್ ಸಿದ್ದವ್ವ ಟೋಳಕೆ(01032611831003), (01032611831303), ಸಂಜಯ್ ಶಂಕರ್ ಪೋತದಾರ್(01032612084703), (01032612084303), ದುಂಡಪ್ಪ ಬಸವಣ್ಣಿ ಘಸ್ತಿ(01032612122004), (01032612123504) , ಸತ್ಯಪ್ಪ ವಣ್ಣಪ್ಪ ಕಿಲ್ಲೇದಾರ್(01032618744401), (01032617527503), (01032618886301), ಶಂಕರ್ ದುಂಡಪ್ಪ ಮಗದುಮ್ (01032612946103), ಸೋಮನಾಥ ಬಸವರಾಜ್ ಮನವಾಡರ್(01032612912003), (01032612922103), ಮೊಹಮ್ಮದ್ಗೌಸ್ ಅಬ್ದುಲ್ ಸತ್ತಾರ್ ಕಾಮನಾ(01032613166204), ಚಂದ್ರಕಾಂತ್ ಯಮನೇಶ್ ಪೊವಾರ್(01032618631601), ಶಂಕರ್ ಲಕ್ಷ್ಮಣ್ ಕಾಂಬ್ಳೆ (01032618059901), ಮಹಾದೇವಿ ಸದಾಶಿವ ಚೌಗಲಾ(01032618486201), ಸುಮಿತ್ ರುದ್ರಗೊಂಡ ಪಾಟೀಲ್(01032618631201) , ಅಕ್ಷಯ್‌ಕುಮಾರ್ ಜಯವಂತ್ ಶೆಂಡೆ(01032618731901), ಅಕಿಲಾ ದಸ್ತಗೀರ್ ಪಟೇಲ್(01032618853301).

ಹರಾಜು, "ಇರುವಂತೆಯೇ" ಮತ್ತು "ಇರುವಂತೆಯೇ" ಮತ್ತು 'ಮ್ಯಾಗ್' ಆಧಾರದ ಮೇಲೆ ನಡೆಸಲಾಗುತ್ತದೆ . ಚಿನ್ನದ ಆಭರಣಗಳ ಗುಣಮಟ್ಟ, ಶುದ್ಧತೆ, ಕ್ಯಾರೆಟ್, ತೂಕ ಅಥವಾ ಮೌಲ್ಯಮಾಪನದ ಬಗ್ಗೆ ಯಾವುದೇ ಪ್ರಾತಿನಿಧ್ಯ ಅಥವಾ ಖಾತರಿಗಳನ್ನು ನೀಡುವುದಿಲ್ಲ. 'ಮ್ಯಾಗ್' ಹರಾಜುದಾರರು ತಮ್ಮ ಸ್ವಂತ ವಿವೇಚನೆಯಿಂದ, ಯಾವುದೇ ಪೂರ್ವ ಸೂಚನೆ ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆ ಯಾವುದೇ ಖಾತೆ ಮತ್ತು ಹರಾಜು ಪಟ್ಟಿಯಿಂದ ಯಾವುದೇ ಕ್ರಮವನ್ನು ಮುಂದೂಡಬಹುದು ಅಥವಾ ತೆಗೆದುಹಾಕಬಹುದು ಮತ್ತು ಯಾವುದೇ ಅಥವಾ ಎಲ್ಲಾ ಬಿಡ್‌ಗಳು ಅಥವಾ ಕೊಡುಗೆಗಳನ್ನು ಯಾವುದೇ ಕಾರಣವನ್ನು ನೀಡದೆ ತಿರಸ್ಕರಿಸಬಹುದು. ಸಾಲಗಾರರ ಅಡವಿಟ್ಟ ಆಭರಣಗಳ ವಿವರಗಳು ಮತ್ತು ಇತರ ವಿವರಗಳನ್ನು ಸಂಬಂಧಪಟ್ಟ ಶಾಖೆಯಲ್ಲಿ ಪ್ರದರ್ಶಿಸಲಾಗುತ್ತದೆ. ಈ ಸೂಚನೆ ಪ್ರಕಟವಾದ ನಂತರವೂ ಹರಾಜಿನ ದಿನಾಂಕದವರೆಗೆ ಡೀಫಾಲ್ಟ್ ಸಾಲಗಾರರು ಸಾಲದ ಮೊತ್ತದ ಯಾವುದೇ ಮರುಪಾವತಿಗೆ ಅರ್ಹರಾಗಿರುವುದಿಲ್ಲ. ಬಡ್ಡಿ ಮತ್ತು ಅನ್ವಯವಾಗುವ ಎಲ್ಲಾ ಶುಲ್ಕಗಳನ್ನು ಒಳಗೊಂಡಂತೆ ಪೂರ್ಣ ಮೊತ್ತವನ್ನು ಮರುಪಾವತಿಸಲು ಮತ್ತು ಅವರ ಸಾಲದ ಖಾತೆಯನ್ನು ಮುಚ್ಚಲು ಅಥವಾ ಕ್ರಮಬದ್ಧಗೊಳಿಸಲು ಒಂದು ಆಯ್ಕೆ ಇದೆ, ಇಲ್ಲದಿದ್ದರೆ, ಅಡವಿಟ್ಟ ಚಿನ್ನದ ಆಭರಣಗಳನ್ನು ಹರಾಜು ಮಾಡಲಾಗುತ್ತದೆ ಮತ್ತು ಉಳಿದ ಬಾಕಿಗಳನ್ನು (ಯಾವುದಾದರೂ ಇದ್ದರೆ) ಪೂರ್ಣ ಬಡ್ಡಿ ಮತ್ತು ವೆಚ್ಚಗಳೊಂದಿಗೆ ಮರುಪಡೆಯಲಾಗುತ್ತದೆ. ಹರಾಜು ಪ್ರಕ್ರಿಯೆಯ ನಂತರ ಈ ಮೊತ್ತವನ್ನು ಸರಿಹೊಂದಿಸಲಾಗುತ್ತದೆ. ಈ ಪ್ರಕಟಣೆಯ ದಿನಾಂಕದಂದು ಅಥವಾ ನಂತರ ಮುಚ್ಚಿದ ಅಥವಾ ಕ್ರಮಬದ್ಧಗೊಳಿಸಿದ ಸಾಲಗಾರರು ಪ್ರಮಾಣಿತ ಪ್ರಕಟಣೆ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಹೆಚ್ಚುವರಿ ಹರಾಜು ಮೊತ್ತವನ್ನು (ಯಾವುದಾದರೂ ಇದ್ದರೆ) ಸಕಾಲದಲ್ಲಿ ಮರುಪಾವತಿಸಲು ಸಾಧ್ಯವಾಗುವಂತೆ ಸಾಲಗಾರರು ತಮ್ಮ ಇತ್ತೀಚಿನ ಬ್ಯಾಂಕ್ ಖಾತೆ ವಿವರಗಳನ್ನು ಒದಗಿಸುವಂತೆ/ನವೀಕರಿಸುವಂತೆ ವಿನಂತಿಸಲಾಗಿದೆ. ವಿವರವಾದ ಮಾಹಿತಿ, ನಿಯಮಗಳು ಮತ್ತು ಷರತ್ತುಗಳಿಗಾಗಿ, ಮ್ಯಾಗ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಸಂಬಂಧಪಟ್ಟ ಶಾಖಾ ಕಚೇರಿಯನ್ನು ಸಂಪರ್ಕಿಸಿ .

ದಿನಾಂಕ : 24/01/2026 . ಸ್ಥಳ : ಫಾಲ್ಟನ್
ಅಧಿಕೃತ ಅಧಿಕಾರಿ : ಮ್ಯಾಗ್ ಫಿನ್‌ಸರ್ವ್ ಕಂಪನಿ ಲಿಮಿಟೆಡ್.

ಸಂವಿಧಾನ ಸಂರಕ್ಷಿಸುವ ಕಾರ್ಯವಾಗಲಿ

ಹುನಗುಂದ: ದೇಶದ ಪ್ರತಿಯೊಬ್ಬ ಪ್ರಜೆಗಳಿಗೆ ಸಮಾನತೆ, ಭ್ರಾತೃತ್ವ ಹಾಗೂ ಸಹೋದರತೆಯಿಂದ ಜೀವಿಸುವುದನ್ನು ನಮ್ಮ ಸಂವಿಧಾನ ನಮಗೆ ಕಲಿಸಿದೆ ಎಂದು ಶಾಸಕ ವಿಜಯಾನಂದ ಕಾಶಪ್ಪನವರ ಹೇಳಿದರು.

ಪಟ್ಟಣದ ಟಿಸಿಎಚ್ ಕಾಲೇಜ್ ಮೈದಾನದಲ್ಲಿ ತಾಲೂಕಾಡಳಿತದ ವತಿಯಿಂದ ಹಮ್ಮಿಕೊಳ್ಳಲಾಗಿದೆ 77ನೇ ಗಣರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂವಿಧಾನ ಶಿಲ್ಪಿ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಕೊಟ್ಟ ಪವಿತ್ರ ಸಂವಿಧಾನದಿಂದ ಕಳೆದ 77 ವರ್ಷಗಳಿಂದ ಯಾವುದೇ ಜಾತಿ, ಮತ, ಪಂಥ ಎಂಬ ಭೇದಭಾವವಿಲ್ಲದೆ ಸರ್ವರೂ ಸಾಮರಸ್ಯದ ಬದುಕನ್ನು ಕಲ್ಪಿಸಿದೆ ಎಂದರು.

ಸಂವಿಧಾನದ ಅಡಿಯಲ್ಲಿ ವಿವಿಧ ಕಾಯಿದೆಗಳು ರಚನೆಯಾಗಿವೆ. ಆ ಕಾಯಿದೆಗಳನ್ನು ಎಲ್ಲ ಇಲಾಖೆಗಳ ಅಧಿಕಾರಿಗಳು ಸೇರಿದಂತೆ ಸ್ವತಂತ್ರ ಭಾರತದ ಪ್ರಜೆಗಳೆಲ್ಲರೂ ಪಾಲನೆ ಮಾಡಿ ದೇಶದ ಅಭಿವೃದ್ಧಿಯತ್ತ ಕೊಂಡೊಯ್ಯುವ ಕರ್ತವ್ಯ ನಮ್ಮದಾಗಿದೆ.

– ಪ್ರದೀಪಕುಮಾರ ಹಿರೇಮಠ, ತಹಸೀಲ್ದಾರ

77ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಶಾಸಕ ವಿಜಯಾನಂದ ಕಾಶಪ್ಪನವರ ಉದ್ಘಾಟಿಸಿದರು.

ಈ ವೇಳೆ ಎಸ್‌ಎಸ್‌ಎಲ್ಸಿಯಲ್ಲಿ ತಾಲೂಕಿಗೆ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ಸಾಧಕ ವಿದ್ಯಾರ್ಥಿಗಳನ್ನು ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ತಾಲೂಕಾಡಳಿತದ ವತಿಯಿಂದ ಸನ್ಮಾನಿಸಲಾಯಿತು. ಗ್ರಾಮೀಣ ಕೈಗಾರಿಕೆ ಇಲಾಖೆಯಿಂದ ಹೊಲಿಗೆ ಯಂತ್ರ ಮತ್ತು ವಿವಿಧ ಕಸುಬುದಾರರಿಗೆ ಕಿಟಗಳನ್ನು ವಿತರಿಸಲಾಯಿತು. ನಂತರ ವಿವಿಧ ಶಾಲೆ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕರ್ತಗಳು ಜರುಗಿದವು. ಪಿಎಸ್‌ಐ ಸಿದ್ದಾರೂಢ ಆಲದಕಟ್ಟಿ ಅವರ ನೇತೃತ್ವದಲ್ಲಿ ಪೊಲೀಸ್ ಇಲಾಖೆ ಹಾಗೂ ಎನ್.ಸಿಸಿ ಹಾಗೂ ಸ್ಕೌಟ್‌ಗೈಡ್ಸ್ ವಿದ್ಯಾರ್ಥಿಗಳಿಂದ ಗೌರವ ಧ್ವಜವಂದನೆ ನೆರವೇರಿತು.

ವೇದಿಕೆಯಲ್ಲಿ ತಾಪಂ ಇಒ ಮುರಳಿಧರ ದೇಶಪಾಂಡೆ, ಡಿವೈಎಸ್ಪಿ ಸಂತೋಷ ಬನ್ನಟ್ಟಿ, ಮುಖಂಡರಾದ ಮಹಾಂತೇಶ ಅವಾರಿ, ಮುತ್ತಣ್ಣ ಕಲಗೋಡಿ, ಶೇಖರಪ್ಪ ಬಾದವಾಡಗಿ, ಶಿವಾನಂದ ಕಂಠಿ, ಸಿದ್ದಪ್ಪ ಹೊಸೂರ, ಎಸ್ಕೆ ಕೊನಸಾಗರ, ವಿಜಯಮಹಾಂತೇಶ ಗದ್ದನಕೇರಿ ಇದ್ದರು.

ಕ್ಷೇತ್ರ ಶಿಕ್ಷಣಾಧಿಕಾರಿ ಜಸ್ಮೀನ ಕಿಲ್ಲೇದಾರ ಸ್ವಾಗತಿಸಿ, ಶಿಕ್ಷಕ ಲಿಂಗರಾಜ ಗದ್ದನಕೇರಿ ನಿರೂಪಿಸಿದರು.

ಗ್ಯಾರಂಟಿಯಿಂದ ಬಡವರಿಗೆ ಶಕ್ತಿ ತುಂಬುವ ಕೆಲಸ

ಬಾದಾಮಿ: ಜ.26 ರಂದು ದೇಶದ ಜನತೆಯು ನಮ್ಮ ಗಣರಾಜ್ಯೋತ್ಸವ ದಿನವನ್ನು ಆಚರಿಸುವ ಒಂದು ಶ್ರೇಷ್ಠ ದಿನವನ್ನಾಗಿ ನಾವು ಆಚರಿಸುತ್ತೇವೆ. 1950ರ ಜ.26 ರಂದು ನಮ್ಮ ಸಂವಿಧಾನ ಅಧಿಕೃತವಾಗಿ ಜಾರಿಗೆ ಬಂತು. ಈ ಮೂಲಕ ಭಾರತ ಒಂದು ಸಾರ್ವ ಭೌಮ, ಪ್ರಜಾಸತ್ತಾತ್ಮಕ ಗಣತಂತ್ರ ವಾಯಿತು ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಅವರು ತಾಲೂಕಾಡಳಿತದ ವತಿಯಿಂದ ನಗರದ ಎಪಿಎಂಸಿ ಆವರಣ ದಲ್ಲಿ ಹಮ್ಮಿಕೊಂಡಿದ್ದ 77 ನೇ ಗಣರಾಜ್ಯೋತ್ಸವ ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪಂಚ ಗ್ಯಾರಂಟಿ ಯೋಜನೆಯಿಂದ ರಾಜ್ಯದಲ್ಲಿ ಬಡವರಿಗೆ ಶಕ್ತಿ ತುಂಬುವ ಕೆಲಸವನ್ನು ನಮ್ಮ ಸರಕಾರ ಮಾಡಿದೆ. ರಾಜ್ಯದಲ್ಲಿ ಬಡತನ ನಿರ್ಮೂಲನೆಗೆ ಪಂಚ ಗ್ಯಾರಂಟಿ ಯೋಜನೆಗಳು ಸಹಕಾರಿಯಾಗಿದೆ ಎಂದರು.

ಮನರೇಗಾ ಕಾಯಿದೆಯನ್ನು ಕೇಂದ್ರ ಸರಕಾರ ದಾರಿ ತಪ್ಪಿಸುವ ಕೆಲಸವನ್ನು ಮಾಡುತ್ತಿದೆ ಗ್ರಾಮ ಪಂಚಾಯತಿಯಲ್ಲಿ ಅಭಿವೃದ್ಧಿ ಕುಂಠಿತವಾಗಬಹುದೆಂದ ಭಯ ನಮ್ಮನ್ನು ಕಾಡುತ್ತಿದೆ ಎಂದರು. ಕೇಂದ್ರ ಸರಕಾರದ ನಿಯಂತ್ರಣದಲ್ಲಿ ಬಂದರೆ ಗ್ರಾಪಂ ಚುನಾಯಿತಿ ಸದಸ್ಯರ ಹಕ್ಕನ್ನು ಕಸಿದುಕೊಳ್ಳುವ ಆತಂಕ ಎದುರಾಗಿದೆ ಎಂದರು.

ತಹಸೀಲ್ದಾರ ಎಸ್.ಎಫ್.ಬೊಮ್ಮಣ್ಣವರ ಧ್ವಜಾರೋಹಣ ನೆರವೇ ರಿಸಿ ಮಾತನಾಡಿದರು. ಪೊಲೀಸ್, ಸ್ಕೌಟ್ ಮತ್ತು ಗೈಡ್ಸ್, ಮಾಜಿ ಸೈನಿಕರು, ಅಗ್ನಿ ಶಾಮಕದಳ , ಎನ್‌ಸಿಸಿ, ಹಾಗೂ ಶಾಲಾ ವಿದ್ಯಾರ್ಥಿ ಗಳು ಕವಾ ಯತು ನಂತರ ಶಾಲಾ ಮಕ್ಕಳಿಂದ ಜರುಗಿದ ಸಾಂಸ್ಕೃತಿಕ ನೃತ್ಯ ಎಲ್ಲರ ಗಮನ ಸೆಳೆದವು.

ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಿದರು. ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ ಹಿರೇಮಠ, ಸಿಪಿಐ ಕರಿಯಪ್ಪ ಬನ್ನೆ, ಪಿಎಸ್‌ಐ ಹನಮಂತ ನರಳೆ, ಬಿಇಒ ಕೇಶವ ಪೆಟ್ಲೂರ, ಕ್ಷೇತ್ರ ಸಮನ್ವಯಾಧಿಕಾರಿ ಎಂ.ಬಿ.ದೊಡ್ಡಪ್ಪನ್ನವರ, ದೈಹಿಕ ಪರಿವೀಕ್ಷಕ ಬಿ.ಎಚ್.ಹಳಗೇರಿ, ಬಿಸಿಎಂ ಅಧಿಕಾರಿ ಹೇಮಲತಾ ಸಿಂಧೆ, ಕೃಷಿ ಸಹಾಯಕ ನಿರ್ದೇಶಕ ಅಶೋಕ ತಿರಕನ್ನವರ, ವಿದ್ಯಾನಂದ ಜಾಧವ, ಅಶೋಕ ಕೋಟನಕರ, ಶೌಕತಲಿ ವಾಚಮೇಕರ, ಮಹಮದ ಯೂಸೂಫ ಪೀರಜಾದೆ, ಇಒ ಸತೀಶ ಮಾಕೊಂಡ, ಶ್ರೀಕಾಂತ ಸಬ್ಬನ್ನಿಸ, ಎಸ್.ಬಿ ಪೂಜಾರ ಹಾಗೂ ತಾಲೂಕಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.



ಬಾದಾಮಿಯಲ್ಲಿ ತಾಲೂಕಾಡಳಿತದಿಂದ ಹಮ್ಮಿಕೊಂಡಿದ್ದ ಗಣ ರಾಜ್ಯೋತ್ಸವದಲ್ಲಿ ಶಾಸಕ ಭೀಮಸೇನ ಚಿಮ್ಮನಕಟ್ಟಿ ಮಾತನಾಡಿದರು.

ನಮ್ಮ ಮತಕ್ಷೇತ್ರದಲ್ಲಿ ಕೆರೂರು ಏತ ನೀರಾವರಿ ಯೋಜನೆ ಹಾಗೂ ಬಾಳೆ ಕುಂದ್ರಿ, ಕಾಲುವೆ ಯೋಜನೆಯು ನಮ್ಮಲ್ಲಿನ ಅನ್ನದಾತರಿಗೆ ಬಹಳಷ್ಟು ಅನುಕೂಲವಾಗಿ ಇದಕ್ಕೆ ಕಾಂಗ್ರೆಸ್ ಪಕ್ಷದ ಶ್ರಮ ಅಪಾರವಾದದ್ದು, ಅದರಿಂದ ನಾಡಿನ ರೈತರ ಬದುಕು ಹಸನಾಗಿದೆ.

– ಭೀಮಸೇನ ಚಿಮ್ಮನಕಟ್ಟಿ, ಶಾಸಕ

ಸಂಭ್ರಮದ ಗಣರಾಜ್ಯೋತ್ಸವ

ಕೆರೂರ: 77ನೇ ಗಣರಾಜ್ಯೋತ್ಸವದ ಅಂಗವಾಗಿ ಅಧಿಕಾರಿಗಳು, ಸಂಘಟನೆಗಳ ಪದಾಧಿಕಾರಿಗಳು ಡಾ.ಬಿ.ಆರ್ ಅಂಬೇಡ್ಕರ ಭಾವಚಿತ್ರಕ್ಕೆ, ಪುಷ್ಪ ನಮನ ಸಲ್ಲಿಸಿದರು. ಪಪಂ ಕಚೇರಿ ಮತ್ತು ತರಕಾರಿ ಮಾರುಕಟ್ಟೆಯ ಸಾರ್ವಜನಿಕ ಧ್ವಜಾರೋಹಣವನ್ನು ಮುಖ್ಯಾಧಿಕಾರಿ ರಮೇಶ ಮಾಡಬಾಳ ನೆರವೇರಿಸಿದರು. ಉಪನೋಂ ದಣಿ ಅಧಿಕಾರಿ ಸಂಗಮೇಶ ಮುಂಡರಗಿ, ರಮೇಶ ಕಡ್ಲಿ ಮಟ್ಟಿ, ಮಾಂತೇಶ್ ಅಣ್ಣೆನವರ, ಐ.ಎಂ.ಹೂಸಮನಿ ಅಸ್ವತ್ ರಗನಗೌಡ್ರ ಪಪಂ ಮಾಜಿ ಅಧ್ಯಕ್ಷ ಸದಾನಂದ ಮದಿ, ಮಾಜಿ ಸದಸ್ಯರಾದ ಕುಮಾರ ಐಹೊಳ್ಳಿ, ಸಿದ್ದಣ್ಣ ಕ್ವಾಣ್ಣೂರ ಮಲ್ಲಪ್ಪ ಹಡಪದ ರಫೀಕ್ ಪಿರಖಾನ, ಸೈದು ಸಾಬ ಚೌಧರಿ ಸೇರಿದಂತೆ ಮೋದಿನಸಾಬ ದೊಡ್ಡಕಟ್ಟಿ, ಪಾರುಕ ಪೆಂಡಾರಿ,ಸುರೇಶ ಪೂಜಾರಿ ರಾಚಪ್ಪ ಶೆಟ್ಟರ, ಶ್ರೀಧರ ಕಾಂಬಳೆ,ನಾಗೇಶ ಛತ್ರಭಾನ ಅರುಣ ರಾಠೋಡ ಸಂತೋಷ ಗದ್ದನಕೇರಿ ಉಪಸ್ಥಿತರಿದ್ದರು. ನಾಡಕಚೇರಿಯಲ್ಲಿ ಉಪತಹಸೀಲ್ದಾರ್ ವಿರೇಶ ಬಡಿಗೇರ, ಧ್ವಜಾರೋಹಣ ನೆರವೇರಿಸಿದರು. ಕಂದಾಯ ನಿರೀಕ್ಷಕ ಆನಂದ ಬಾವಿಮಠ, ಗ್ರಾಮ ಲೆಕ್ಕಾಧಿಕಾರಿ ಇಕ್ಬಾಲ್ ಮುಲ್ಲಾ, ವಿ.ಬಿ.ಗ್ಯಾಟಿನ್, ವಿ.ಪಿ. ಬೆಟಸು ರಮಠ, ಪ್ರದೀಪ ತುಳಸಿಗೇರಿ, ಅಬ್ದುಲ್ ಡಾಲಾಯತ ಹಾಜರಿದ್ದರು. ಆರಕ್ಷಕ ಠಾಣೆಯಲ್ಲಿ ಪಿಎಸ್‌ಐ ಭೀಮಪ್ಪ ರಬಕವಿ, ಗಣರಾಜ್ಯೋತ್ಸವ ಧ್ವಜಾರೋಹಣ ನೆರವೇರಿಸಿದರು. ಎಎಸ್‌ಐ ಶಿವಾಜಿ ಲಮಾಣಿ, ಸಿಬ್ಬಂದಿ ಸಿದ್ದು ದಳವಾಯಿ, ಮಲ್ಲಪ್ಪ ಪೂಜಾರ, ರಮೇಶ ಸಮಾಗರ, ಎಸ್ .ಎಂ.ಬಗಲಿ, ಹಣಮಂತ ಯಡ ಬಡಗಿ, ಪ್ರವೀಣ ಘಾಟೆ ಹಾಜರಿದ್ದರು. ಹೆಸ್ಕಾಂ ಕಚೇರಿ ಯಲ್ಲಿ ಎಸ್‌ಒ ಹೆಸ್ಕಾಂ ಎಸ್.ಒ ಚಂದ್ರಶೇಖರ ಕಲಾಪುರ, ಧ್ವಜಾರೋಹಣ ನೆರವೇರಿಸಿದರು. ಲೋಕೋ ಪಯೋಗಿ ಇಲಾಖೆಯಲ್ಲಿ ಮಂಜುನಾಥ ಜಾಡರ ಧ್ವಜಾರೋಹಣ ನೆರವೇರಿಸಿದರು.

ಅಂಜುಮನ್–ಏ–ಇಸ್ಲಾಂ ಸಂಸ್ಥೆ, ಮುಧೋಳ, ಜಿ. ಬಾಗಲಕೋಟ.

Ref.No. AEIM/20/2025-26 ದಿ. 27/01/2026

ಟೆಂಡರ್ ಪ್ರಕಟಣೆ

ಅಂಜುಮನ್–ಏ–ಇಸ್ಲಾಂ ಸಂಸ್ಥೆ ಮುಧೋಳ, ಗೆ ಸಂಭಂಧಪಟ್ಟ ಅಂಜುಮನ್ ಮಳಿಗೆಯ 2ನೇ ಮಹಡಿಯಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರ ಪ್ರಾರಂಭಿಸುವ ಉದ್ದೇಶದಿಂದ ಮಳಿಗೆಯ 2ನೇ ಮಹಡಿಯಯಲ್ಲಿ 4 (ನಾಲ್ಕು) ಮಳಿಗೆಗಳ ಕಟ್ಟಡ ಕಾಮಗಾರಿ ಕೈಗೊಳ್ಳಲು ದ್ವಿತಿಯ ದರ್ಜೆ ಗುತ್ತಿಗೆದಾರರಿಂದ ಅಥವಾ ಅದಕ್ಕೂ ಮೇಲ್ಪಟ್ಟು ಗುತ್ತಿಗೆದಾರರಿಂದ ಟೆಂಡರ ಕರೆಯಲಾಗಿದೆ ವಿವರ ಈ ಕೆಳಗಿನಂತಿದೆ.

ಅ.ನಂ	ಕಾಮಗಾರಿ ಹೆಸರು	ಟೆಂಡರಗಿಟ್ಟ ಅಂದಾಜು ಮೊತ್ತ	ಮುಂಗಡ ಠೇವಣಿ ಇ.ಎಮ್.ಡಿ)	ಕಾಮಗಾರಿ ಅವಧಿ
1	ಅಂಜುಮನ್ ಮಳಿಗೆಯ 2ನೇ ಮಹಡಿಯಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರ ಪ್ರಾರಂಭಿಸುವ ಉದ್ದೇಶದಿಂದ ಮಳಿಗೆಯ 2ನೇ ಮಹಡಿಯಯಲ್ಲಿ 4 (ನಾಲ್ಕು) ಮಳಿಗೆಗಳ ಕಟ್ಟಡ ಕಾಮಗಾರಿ	18,53,000/–	40,000/–	3 ರಿಂದ 4 ತಿಂಗಳುಗಳು

ಸೂಚನೆ ಮತ್ತು ಕರಾರುಗಳು:

1. ಖಾಲಿ ಟೆಂಡರ್ ಫಾರ್ಮಗಳನ್ನು ನೀಡುವ ಪ್ರಾರಂಭ ದಿ.29/01/2026.
2. ಖಾಲಿ ಟೆಂಡರ್ ಫಾರ್ಮಗಳನ್ನು ಪಡೆಯಲು ಕೊನೆಯ ದಿ.02/02/2026 ಸಂ. 04:00.ಕ್ಕೆ
3. ಭರ್ತಿ ಮಾಡಿದ ಟೆಂಡರ್ ಫಾರ್ಮಗಳನ್ನು ಸಲ್ಲಿಸಲು ಕೊನೆಯ ದಿ.04/02/2026.
4. ಟೆಂಡರ್ ತೆರೆಯಲು ದಿ.05/02/2026 ಮುಂ. 10:30 ಘಂಟೆಗೆ.
5. ಇಎಂಡಿ ಮೊತ್ತವನ್ನು ಅಧ್ಯಕ್ಷರು ಅಂಜುಮನ್–ಏ–ಇಸ್ಲಾಂ ಸಂಸ್ಥೆ ಮುಧೋಳ ಇವರ ಹೆಸರಿನಲ್ಲಿ ಡಿಡಿ. ರೂಪದಲ್ಲಿ ಸಲ್ಲಿಸಬೇಕು, ಇಎಂಡಿ ಲಗತ್ತಿಸದ ಟೆಂಡರ್‌ನ್ನು ತಿರಸ್ಕರಿಸಲಾಗುವದು.
6. ಯಾವದೇ ಕಾರಣಕ್ಕೆ ಟೆಂಡರನ್ನು ಸ್ವೀಕರಿಸುವ/ನಿರಾಕರಿಸುವ ಹಕ್ಕನ್ನು ಸಂಸ್ಥೆಯವರು ಹೊಂದಿರುತ್ತಾರೆ.
7. ಟೆಂಡರ್ ಫಾರ್ಮ ಬೆಲೆ ರೂ. 5,000/– ಗಳನ್ನು ಕಛೇರಿಯಲ್ಲಿ ಸಂದಾಯ ಮಾಡಿ ಟೆಂಡರ್ ಫಾರ್ಮ ಪಡೆಯಬೇಕು.

ಸಹಿ/–
ಅಧ್ಯಕ್ಷರು/ಕಾರ್ಯದರ್ಶಿ
ಅಂಜುಮನ್–ಏ–ಇಸ್ಲಾಂ ಸಂಸ್ಥೆ, ಮುಧೋಳ

6ನೇ ತರಗತಿ ಪ್ರವೇಶಕ್ಕೆ ಅರ್ಜಿ

ಜಮಖಂಡಿ: ನಗರದ ಕುಂಚನೂರ ಆರ್.ಸಿ ಯಲ್ಲಿರುವ ಸರಕಾರಿ ಆದರ್ಶ ವಿದ್ಯಾಲಯ ಶಾಲೆಗೆ 2026–27ನೇ ಸಾಲಿಗೆ 6 ನೇ ತರಗತಿಯ 120 ವಿದ್ಯಾರ್ಥಿಗಳ ದಾಖಲಾತಿಗಾಗಿ ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಫೆ.25 ಕೊನೆಯ ದಿನ ವಾಗಿದೆ. ಅರ್ಜಿಯನ್ನು ಅಂತರ್ಜಾ ಲದಲ್ಲಿ ಸಲ್ಲಿಸ ಬೇಕು. 5ನೇ ತರಗತಿಯಲ್ಲಿ ಅಧ್ಯಯನ ಮಾಡು ತ್ತಿರವರು ಮಾತ್ರ ಅರ್ಜಿ ಸಲ್ಲಿಸಲು ಅವಕಾಶ ವಿದೆ. ಅರ್ಜಿ ಭರ್ತಿ ಮಾಡುವಾಗ ವಿದ್ಯಾರ್ಥಿಗಳು ತಮ್ಮ ಪೋಷಕರ ಚಾಲ್ತಿ ಮೊಬೈಲ್ ಸಂಖ್ಯೆ ಕಡ್ಡಾಯವಾಗಿ ನಮೂದಿಸಬೇಕು. ಆಯ್ಕೆಯಾದ ವಿದ್ಯಾ ರ್ಥಿಗಳಿಗೆ ನಮೂದಿಸಿದ ಮೊಬೈಲ್ ಸಂಖ್ಯೆ ಗೆ ಮೆಸೇಜ್ ಬರಲಿದೆ. ಮಾಹಿತಿಗಾಗಿ ಆದರ್ಶ ವಿದ್ಯಾಲಯ (ಆರ್.ಎಂ.ಎಸ್.ಎ) ಮುಖ್ಯ ಗುರುಗಳ ಮೊ.ನಂ 96202 37225 ಸಂಪರ್ಕಿಸಲು ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಬಸಣ್ಣವರ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಗಣರಾಜ್ಯೋತ್ಸವ ಭಕ್ತಿಭಾವದಿಂದ ಆಚರಣೆ

ಬೈಲಹೊಂಗಲ: ನಗರದಲ್ಲಿ 77ನೇ ಗಣರಾಜ್ಯೋತ್ಸವ ಹಿನ್ನೆಲೆಯಲ್ಲಿ ಸಂಭ್ರಮದ ವಾತಾವರಣ ನಿರ್ಮಾಣವಾಗಿದ್ದು, ಸರಕಾರಿ ಕಚೇರಿ, ಶಾಲಾ-ಕಾಲೇಜುಗಳು ಸೇರಿದಂತೆ ಹಲವು ಸಂಸ್ಥೆಗಳಲ್ಲಿ ತ್ರಿವರ್ಣ ಧ್ವಜ ಹಾರಾಡುತ್ತಿದೆ. ಬೆಳಗ್ಗೆಯಿಂದಲೇ ವಿವಿಧ ಸಂಸ್ಥೆಗಳಲ್ಲಿ ಧ್ವಜಾರೋಹಣ, ರಾಷ್ಟ್ರಗೀತೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಗಣರಾಜ್ಯೋತ್ಸವವನ್ನು ಭಕ್ತಿಭಾವದಿಂದ ಆಚರಿಸಲಾಯಿತು. ಆದರೆ ಇದೇ ಸಂದರ್ಭದಲ್ಲಿ ನಗರದ ಕೆಲವು ಖಾಸಗಿ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳು ಧ್ವಜಾರೋಹಣ ಕಾರ್ಯಕ್ರಮವನ್ನು ನಡೆಸದೆ ಗೈರುಹಾಜರಿಯಾದ ಘಟನೆ ಸಾರ್ವಜನಿಕರ ಗಮನ ಸೆಳೆದಿದೆ. ನಗರದ ಬ್ಯಾಂಕ್ ಆಫ್ ಬರೋಡಾ, ಐಸಿಐಸಿಐ ಬ್ಯಾಂಕ್, ಉಜ್ಜೀವನ್ ಬ್ಯಾಂಕ್, ಬ್ಯಾಂಕ್ ಆಫ್ ಇಂಡಿಯಾ ಮತ್ತು ಮಯೂರ ಹೋಟೆಲ್ ಮೇಲಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಗಳಲ್ಲಿ ಗಣರಾಜ್ಯೋತ್ಸವ ಅಂಗವಾಗಿ ಧ್ವಜಾರೋಹಣ ನಡೆಸಲಾಗಿಲ್ಲ ಎಂದು ಆರೋಪ ವ್ಯಕ್ತವಾಗಿದೆ. ಈ ಕುರಿತು ಮಾತನಾಡಿದ ಮಾಜಿ ಜಿಲ್ಲಾ ಕಸಾಪ ಅಧ್ಯಕ್ಷ ಮೋಹನ ಪಾಟೀಲ 'ರಾಷ್ಟ್ರೋತ್ಸವ ದಿನಗಳು ಕೇವಲ ರಜಾದಿನಗಳಲ್ಲ, ದೇಶದ ಗೌರವ ಮತ್ತು ಸಂವಿಧಾನದ ಮೌಲ್ಯಗಳನ್ನು ಸ್ಮರಿಸುವ ಸಂದರ್ಭಗಳು. ರಾಷ್ಟ್ರೀಕೃತ ಹಾಗೂ ಖಾಸಗಿ ಬ್ಯಾಂಕ್‌ಗಳಾದರೂ ಕನಿಷ್ಠ ಧ್ವಜಾರೋಹಣ ಕಾರ್ಯಕ್ರಮ ನಡೆಸುವ ಜವಾಬ್ದಾರಿ ಇದೆ. 'ಇದೊಂದು ಅಲಕ್ಷ್ಯ ಮತ್ತು ಸರಕಾರಿ ನಿಯಮ ಪಾಲನೆಗೆ ವಿರೋಧಿ ನಡೆ ಆಗಿದೆ. ತಾಲೂಕು ದಂಡಾಧಿಕಾರಿ ಅವರು ಸಂಬಂಧಿತ ಬ್ಯಾಂಕ್‌ಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ರೆಡ್‌ಕ್ರಾಸ್ ಸಂಸ್ಥೆಯ ಸೇವೆ ಶ್ಲಾಘನೀಯ

ಬೆಳಗಾವಿ: ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಶತಮಾನೋತ್ಸವದ ಅಂಗವಾಗಿ ಗಣೇಶಪುರ ರಸ್ತೆ, ಬೆಳಗಾವಿಯಲ್ಲಿ ನೂತನವಾಗಿ ನಿರ್ಮಿಸಲಾದ ರೆಡ್ ಕ್ರಾಸ ಭವನವನ್ನು ಸೋಮವಾರ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ, ಜಿಲ್ಲಾಧಿಕಾರಿ ಹಾಗೂ ಭಾರತೀಯ ರೆಡ್ ಕ್ರಾಸ ಸಂಸ್ಥೆ ಜಿಲ್ಲಾಧ್ಯಕ್ಷರಾದ ಮೊಹಮ್ಮದ ರೋಷನ್ ಅವರು, ಯಾವುದೇ ತರನಾದ ಭೇದಭಾವ ಮಾಡದೇ ಜನರಿಗಾಗಿ ನಿಸ್ವಾರ್ಥ ಸೇವೆಯನ್ನು ಸಲ್ಲಿಸುವ ಈ ಸಂಸ್ಥೆಯ ಸೇವೆ ಶ್ಲಾಘನೀಯ ವಾಗಿದೆ ಎಂದರು. ಜಿಲ್ಲಾ ಚೇರಮನ ರಾಜ್ಯ ಸಂಸ್ಥೆಯ ಅಧ್ಯಕ್ಷ ಬಸ್ರೂರು ಶೆಟ್ಟಿ, ಡಾ ವಿ.ಡಿ. ಡಾಂಗೆ, ಡಾ.ಸಂಜಯ ಸಿದ್ದನ್ನವರ ಮಾತನಾಡಿದರು. ಯಲ್ಲಮ್ಮ ಪ್ರಾಧಿಕಾರ ಕಾರ್ಯದರ್ಶಿ ಡಾ. ಸಿದ್ದು ಹುಲ್ಲೋಳ್ಳಿ,ಜಿಲ್ಲಾಧಿಕಾರಿಯವರನ್ನು ಸದಸ್ಯ ಎಸ್ .ಜಿ.ಸಿದ್ನಾಳ ಪರಿಚಯಿಸಿದರು.

ಲಂಚಕ್ಕೆ ಬೇಡಿಕೆಯಿಟ್ಟ ಸಿಬ್ಬಂದಿ ಲೋಕಾ ಬಲೆಗೆ

ರಾಯಬಾಗ: ಪಹಣಿ ಪತ್ರದಲ್ಲಿದ್ದ ನಿರ್ಬಂಧ ತೆರವಿಗೆ 80 ಸಾವಿರ ರು. ಲಂಚಕ್ಕೆ ರಾಯಬಾಗ ತಹಸೀಲ್ದಾರ ಕಚೇರಿ ಸಿಬ್ಬಂದಿ ಬೇಡಿಕೆ ಇಟ್ಟಿದ್ದ ಹಿನ್ನಲೆಯಲ್ಲಿ ಮಂಗಳವಾರ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದರು. ತಾಲೂಕಿನ ಸವಸುದ್ದಿ ಗ್ರಾಮದ ರೈತ ಶಿವಾನಂದ ದುಂಡಗಿ ಅವರ ಅಜ್ಜನಿಗೆ 1974 ರಲ್ಲಿ ಭೂ ನ್ಯಾಯಮಂಡಳಿ ಆದೇಶ ದಂತೆ ಮಂಜೂರಾದ ಜಮೀನನ್ನು ಕನಿಷ್ಠ 15 ವರ್ಷಗಳ ವರೆಗೆ ಪರಬಾರೆ ಮಾಡಬಾರದೆಂದು ನಿರ್ಬಂಧ ಹೇರಲಾಗಿತ್ತು. ನಿರ್ಬಂಧ ತೆರವು ಮಾಡುವ ಉದ್ದೇಶಕ್ಕೆ ರಾಯಬಾಗ ತಹಸೀಲ್ದಾರ ಕಚೇರಿ ಸಿಬ್ಬಂದಿ ಚಂದ್ರಮಪ್ಪ ಮೋರಟಗಿ 80 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದು ಹಣವನ್ನು ಪಡೆಯುವ ವೇಳೆ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಈ ದಾಳಿಯ ವೇಳೆ ಲೋಕಾಯುಕ್ತ ಇನ್‌ಸ್ಪೆಕ್ಟರ್‌ಗಳಾದ ಬಾಲಚಂದ್ರ, ಲಕ್ಕಮ್ಮ, ಗೋವಿಂದಗೌಡ ಹಾಗೂ ಸಿಬ್ಬಂದಿಗಳಾದ ರವಿ, ರಾಜು, ಸಂತೋಷ, ಗಿರೀಶ್, ಅಭಿಜಿತ್, ಬಸವರಾಜ ಉಪಸ್ಥಿತರಿದ್ದರು.

ಹಿರಿಯ ಪತ್ರಕರ್ತ ಎಂ.ಎನ್.ಪಾಟೀಲ ನಿಧನ



ಬೆಳಗಾವಿ: ಬೆಳಗಾವಿಯ ಹಿರಿಯಪತ್ರಕರ್ತ ಎಂ. ಎನ್. ಪಾಟೀಲ ಅವರು ಸೋಮವಾರ ರಾತ್ರಿ, ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರಿಗೆ 71 ವರ್ಷ ವಯಸ್ಸಾಗಿತ್ತು. ಪಾಟೀಲ ಅವರು ಯು. ಎನ್. ಐ. ಸುದ್ದಿ ಸಂಸ್ಥೆಯಲ್ಲಿ ವರದಿಗಾರರಾಗಿ, ನಂತರ ಡೆಕ್ಕನ್ ಹೆರಾಲ್ಡ್ ನಲ್ಲಿಯೂ ಸಲ್ಲಿಸಿದರು,ಈಗ ಬೆಳಗಾವಿಯ ಲೋಕ ದರ್ಶನ ದಿನಪತ್ರಿಕೆಯಲ್ಲಿಯೂ ಸೇವೆ ಸಲ್ಲಿಸುತಿದ್ದರು. ಅವರು ಪತ್ನಿ, ಇಬ್ಬರು ಮಕ್ಕಳು, ಅಪಾರ ಬಂಧುಬಳಗವನ್ನು ಅಗಲಿ ಹೋಗಿದ್ದಾರೆ. ಅವರ ಅಂತ್ಯಕ್ರಿಯೆ ಬೆಳಗಾವಿಯ ಸದಾಶಿವನಗರ ರುದ್ರ ಭೂಮಿಯಲ್ಲಿ ಇಂದು ಸಂಜೆ ನಾಲ್ಕು ಗಂಟೆಗೆ ಜರುಗಲಿದೆ. ಬೆಳಗಾವಿಯ ಪತ್ರಕರ್ತರು ಎಂ. ಎನ್. ಪಾಟೀಲ ಅವರ ನಿಧನಕ್ಕಾಗಿ ಶೋಕ ವ್ಯಕ್ತಪಡಿಸಿ ಅ ಮೃತರ ಆತ್ಮಕ್ಕೆ ಶಾಂತಿ ಕೋರಿದ್ದಾರೆ.

{ಲಕ್ಷ್ಮೀ ಹೆಬ್ಬಾಳಕರ್} ಸಚಿವೆ

ಉಡುಪಿ ಪರ್ಯಾಯ ವೇಳೆ ಜಿಲ್ಲಾಧಿಕಾರಿ ಭಗವಾಧ್ವಜ ಹಾರಿಸಿದ ವಿಚಾರ ಹೆಚ್ಚು ಕೆದಕಬೇಡಿ. ಉಡುಪಿಯ ಪರ್ಯಾಯ ಒಂದು ಶುದ್ಧ ಧಾರ್ಮಿಕ ಕಾರ್ಯಕ್ರಮ. ಸಂಸ್ಕೃತಿಗೆ, ಧಾರ್ಮಿಕತೆಗೆ ಉಡುಪಿ ಹೆಸರುವಾಸಿ. ಈ ವಿಚಾರ ನನಗೆ ಗೊತ್ತಿದೆ. ಧ್ವಜ ಹಾರಿಸಿದ ವಿಚಾರ ಅಲ್ಲಿಗೆ ಬಿಟ್ಟು ಬಿಡಿ.

ಸವದತ್ತಿಯ ಎಸ್.ಕೆ.ಹೈಸ್ಕೂಲಿನ ಆವರಣದಲ್ಲಿ ನಡೆದ 77ನೇ ಗಣರಾಜ್ಯೋತ್ಸವದಲ್ಲಿ ಶಾಸಕ ವಿಶ್ವಾಸ ವೈದ್ಯ ಹೇಳಿಕೆ

ಕ್ಷೇತ್ರದ ಅಭಿವೃದ್ಧಿಯೇ ನನ್ನ ಮೊದಲ ಗುರಿ

ಸವದತ್ತಿ: ಪಟ್ಟಣದಲ್ಲಿ ಅನೇಕ ಅಭಿವೃದ್ಧಿ ಕಾಮಗಾರಿಗಳು ಈಗಾಗಲೇ ನಡೆಯುತ್ತಿದ್ದು, ಕಾರ್ಯ ರೂಪಕ್ಕೆ ತರಬೇಕಾದ ಯೋಜನೆಗಳು ಇನ್ನೂ ಬಹಳಷ್ಟಿವೆ. ಕ್ಷೇತ್ರದ ಸಮಸ್ಯೆಗಳನ್ನು ಅರಿತಿದ್ದೇನೆ. ಅಭಿವೃದ್ಧಿ ಕೆಲಸಗಳ ಮೂಲಕ ಮತ್ತೆ ನಿಮ್ಮ ಮುಂದೆ ಬರುತ್ತೇನೆ. ಉಳಿದ ಅವಧಿಯಲ್ಲಿ ಇತಿಹಾಸ ನಿರ್ಮಿಸುವ ಕೆಲಸ ಮಾಡುತ್ತೇನೆ ಎಂದು ಶಾಸಕ ವಿಶ್ವಾಸ ವೈದ್ಯ ಭರವಸೆ ನೀಡಿದರು.

ಪಟ್ಟಣದ ಎಸ್.ಕೆ.ಹೈಸ್ಕೂಲಿನ ಆವರಣದಲ್ಲಿ ತಾಲೂಕಾಡಳಿತದಿಂದ ಆಯೋಜಿಸಿದ್ದ 77 ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿ ಧ್ವಜವಂದನೆ ಸ್ವೀಕರಿಸಿ ಮಾತನಾಡಿದ ಅವರು, ತಮ್ಮೆಲ್ಲರ ಆಶೀರ್ವಾದದಿಂದ ಶಾಸಕನಾದ ಕೆಲವೇ ದಿನಗಳಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ. ನಗರಕ್ಕೆ ಅತ್ಯವಶ್ಯವಿರುವ ಸುಮಾರು 124 ಕೋಟಿ ವೆಚ್ಚದ ಒಳಚರಂಡಿ ಯೋಜನೆ ಮೊದಲ ಹಂತವಾಗಿ 41 ಕೋಟಿ ಮಂಜೂರಾಗಿ ಈಗಾಗಲೇ ಕೆಲಸ ಪ್ರಾರಂಭವಾಗಿದೆ. ನಿರಂತರ ಕುಡಿಯುವ ನೀರಿನ ಯೋಜನೆ 24/7 ಪೂರೈಕೆಯಲ್ಲಿ ಯಶಸ್ವಿಯಾಗಿದ್ದೇವೆ. 2.5 ಕೋಟಿ ವೆಚ್ಚದಲ್ಲಿ ತಾಲೂಕಾ ಕ್ರೀಡಾಂಗಣ ಅಭಿವೃದ್ಧಿ, 2 ಕೋಟಿ ವೆಚ್ಚದಲ್ಲಿ ಸ್ಮಶಾನ ಅಭಿವೃದ್ಧಿ ಮಾಡಲಾಗಿದೆ. ಪ್ರಮುಖ ರಸ್ತೆಗಳಲ್ಲಿ ಅಲಂಕಾರಿಕ ದೀಪ ಅಳವಡಿಸಿ ನಗರವನ್ನು ಅಲಂಕೃತಗೊಳಿಸಲಾಗಿದೆ. ಯಲ್ಲಮ್ಮ ದೇವಸ್ಥಾನವನ್ನು ತಿರುಪತಿ ಮಾದರಿ ದೇವಸ್ಥಾನ ಮಾಡುವ ಒತ್ತಾಸೆಯಿಂದ ಅಭಿವೃದ್ಧಿ ಪ್ರಾಧಿಕಾರವನ್ನಾಗಿಸಿ 215 ಕೋಟಿ ಅನುದಾನ ಕೂಡ ಮಂಜೂರಾಗಿದೆ. 150 ವರ್ಷ ಇತಿಹಾಸ ಇರುವ ಪುರಸಭೆಯನ್ನು ನಗರಸಭೆಯನ್ನಾಗಿಸುವಲ್ಲಿ ಯಶಸ್ವಿಯಾಗಿದ್ದೇನೆ. ಶಿಥಿಲಾವಸ್ಥೆಯಲ್ಲಿರುವ ತಾಲೂಕಾಸ್ಪತ್ರೆಯನ್ನು ಸುಸಜ್ಜಿತ ಆಸ್ಪತ್ರೆಯಾಗಿಸಲು 41 ಕೋಟಿ ಮಂಜೂರಾಗಿದ್ದು ಕಾಮಗಾರಿ ಸದ್ಯದಲ್ಲೇ ಪ್ರಾರಂಭವಾಗಲಿದೆ. ಮುಂದಿನ ದಿನಗಳಲ್ಲಿ ನಗರಕ್ಕೆ ಆರ್‌ಟಿ ಒ ಕಚೇರಿ, ಸುಂದರೀಕರಣ ನಗರ, ಯರಗಟ್ಟಿಗೆ ಪೊಲೀಸ್ ಸ್ಟೇಷನ್ ಸೇರಿ ಕ್ಷೇತ್ರದ ಅನೇಕ ಯೋಜನೆಗಳಿವೆ. ಕ್ಷೇತ್ರದ ಅಭಿವೃದ್ಧಿಯೇ ನನ್ನ ಗುರಿ ಎಂದರು.

ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶಾಸಕ ವಿಶ್ವಾಸ ವೈದ್ಯ ಅವರು ಗೌರವ ವಂದನೆ ಸ್ವೀಕರಿಸಿದರು.

ತಹಸೀಲ್ದಾರ್ ಮಲ್ಲಿಕಾರ್ಜುನ ಹೆಗ್ಗಣ್ಣವರ ಮಾತನಾಡಿ, ಭಾರತದ ಸಂವಿಧಾನವು ಜಗತ್ತಿಗೆ ಮಾದರಿಯಾಗಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರವಾದ ಪ್ರಜಾಪ್ರಭುತ್ವ ವ್ಯವಸ್ಥೆ ನಮ್ಮ ದೇಶದಲ್ಲಿದೆ. ಸಂವಿಧಾನವು ತನ್ನದೇ ಆದ ಇತಿಹಾಸ, ಪರಂಪರೆಯನ್ನು ಹೊಂದಿದ್ದು ಯಾವುದೇ ಜಾತಿ, ಧರ್ಮವೆನ್ನದೆ ಎಲ್ಲರೂ ತಲೆಬಾಗುತ್ತೇವೆ. ವಿವಿಧ ದೇಶಗಳ ಮೌಲ್ಯಗಳನ್ನು ಅಳವಡಿಸಿಕೊಂಡು ಉತ್ತಮ ಮತ್ತು ಸುಭದ್ರ ಸಂವಿಧಾನ ರಚನೆ ಮಾಡಿದ ಡಾ. ಬಿ ಆರ್‌ಅಂಬೇಡ್ಕರ್‌ಅವರ ಕಾರ್ಯ ಸ್ಮರಣೀಯ ಎಂದರು.

> ಪ್ರಮುಖ ರಸ್ತೆಗಳಲ್ಲಿ ಅಲಂಕಾರಿಕ ದೀಪ ಅಳವಡಿಸಿ ನಗರವನ್ನು ಅಲಂಕೃತಗೊಳಿಸಲಾಗಿದೆ. ಯಲ್ಲಮ್ಮ ದೇವಸ್ಥಾನವನ್ನು ತಿರುಪತಿ ಮಾದರಿ ದೇವಸ್ಥಾನ ಮಾಡುವ ಒತ್ತಾಸೆಯಿಂದ ಅಭಿವೃದ್ಧಿ ಪ್ರಾಧಿಕಾರವನ್ನಾಗಿಸಿ 215 ಕೋಟಿ ಅನುದಾನ ಕೂಡ ಮಂಜೂರಾಗಿದೆ. 150 ವರ್ಷ ಇತಿಹಾಸ ಇರುವ ಪುರಸಭೆಯನ್ನು ನಗರಸಭೆಯನ್ನಾಗಿಸುವಲ್ಲಿ ಯಶಸ್ವಿಯಾಗಿದ್ದೇನೆ.
> -ವಿಶ್ವಾಸ ವೈದ್ಯ, ಶಾಸಕ

ಗಣರಾಜ್ಯೋತ್ಸವ ಸಮಾರಂಭ ಹಲವು ವಿಶೇಷತೆಗಳಿಂದ ಕೂಡಿತ್ತು. ರಾಷ್ಟ್ರಗೀತೆಯೊಂದಿಗೆ ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸಿ ಕಾರ್ಯಕ್ರಮ ಪ್ರಾರಂಭಿಸಲಾಯಿತು. ಶಾಲಾ ಮಕ್ಕಳು, ಎನ್ಸಿಸಿ, ಪೊಲೀಸ್ ಇಲಾಖೆ, ಸ್ಕೌಟ್ಸ್ ಮತ್ತು ಗೈಡ್ಸ ಮಕ್ಕಳಿಂದ ಜರುಗಿದ ಆಕರ್ಷಕ ಮೆರವಣಿಗೆಯಲ್ಲಿ ಶಾಸಕರು ಹಾಗೂ ಗಣ್ಯರು ಪಾಲ್ಗೊಂಡಿದ್ದರು. ಮೆರವಣಿಗೆಯು ಎಸ್‌ಎಲ್‌ಎಚ ಕ್ರಾಸ್, ಸಂಗೊಳ್ಳಿ ರಾಯಣ್ಣ ವೃತ್ತ, ಗಾಂಧಿ ಚೌಕ್, ಆನಿ ಅಗಸಿ, ಕಡಕೋಳ ಬ್ಯಾಂಕ್, ಲಿಂಗರಾಜ ಸರ್ಕಲ್ ಮಾರ್ಗವಾಗಿ ಎಸ್ ಕೆ ಹೈಸ್ಕೂಲ್ ಮೈದಾನ ತಲುಪಿತು. ನಗರದ ಹಲವು ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನೋಡುಗರ ಗಮನ ಸೆಳೆಯಿತು. ಕಾರ್ಯಕ್ರಮದಲ್ಲಿ ನಾನಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ ಪುರಸ್ಕಾರ, ಸನ್ಮಾನ ಮಾಡಲಾಯಿತು. ಎಸ್ ಎಸ್ ಎಲ್ ಸಿ ಯಲ್ಲಿ ಉತ್ತಮ ಅಂಕ ಗಳಿಸಿದ ಮೂವರು ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಕೊಡಮಾಡಿದ ರು. 50,000 ಮೊತ್ತವನ್ನು ಶಾಸಕ ವಿಶ್ವಾಸ ವೈದ್ಯ ವಿದ್ಯಾರ್ಥಿಗಳಿಗೆ ಹಸ್ತಾಂತರಿಸಿದರು.

ಈ ವೇಳೆ ತಾ ಪಂ ಇಒ ಆನಂದ ಬಡಕುಂದ್ರಿ, ಗ್ರೇಡ್ 2 ತಹಸೀಲ್ದಾರ್‌ಎಂ ಎನ್ ಮಠದ, ನಗರಸಭೆ ಪೌರಾಯುಕ್ತ ಸಂಗನಬಸಯ್ಯ ಗದಗಿಮಠ, ಎಪಿಎಮ್ ಸಿ ಅಧ್ಯಕ್ಷ ಚಂದ್ರು ಜಂಬ್ರಿ, ಸಿಪಿಐ ಸುರೇಶ ಬಂಡೆಗುಂಬಳ, ಅಶ್ಫಾಕ್ ವೈದ್ಯ, ಶಿರಸ್ತೇದಾರ ಶಶಿರಾಜ್ ವನಕೆ ಸೇರಿ ಇಲಾಖಾ ಅಧಿಕಾರಿಗಳು, ಪುರಸಭೆ, ಎಪಿಎಂಸಿ, ಟಿಪಿಸಿಎಂಎಸ್ ಸದಸ್ಯರು ಹಾಗೂ ಶಿಕ್ಷಕರು ಇದ್ದರು.

ಸರಕಾರಿ ಯೋಜನೆ ಸಮರ್ಪಕವಾಗಿ ಅನುಷ್ಠಾನಗೊಳಿಸಿ

ಚನ್ನಮ್ಮನ ಕಿತ್ತೂರು: 'ಸಾರ್ವಜನಿಕರ ಹಿತದೃಷ್ಟಿಯಿಂದ ಸರಕಾರದ ಯೋಜನೆಗಳ ಅನುಷ್ಠಾನಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುವುದರ ಜತೆಗೆ ಅಭಿವೃದ್ಧಿ ಕೆಲಸಗಳನ್ನು ಸಾಕಾರಗೊಳಿಸಲು ಅಧಿಕಾರಿಗಳು ಶ್ರಮಿಸಬೇಕಿದೆ' ಎಂದು ತಹಸೀಲ್ದಾರ್ ಕಲಗೌಡ ಪಾಟೀಲ ಹೇಳಿದರು.

ಇಲ್ಲಿಯ ಐತಿಹಾಸಿಕ ಗಡಾದ ಮರಡಿ ಮೇಲೆ 77 ನೇ ಗಣರಾಜ್ಯೋತ್ಸವ ಅಂಗವಾಗಿ ಸೋಮವಾರ ಆಯೋಜಿಸಿದ್ದ ಮುಖ್ಯ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿದ ಬಳಿಕ ಅವರು ಮಾತನಾಡಿದರು.

'ಎಲ್ಲರೂ ಸಹೋದರತ್ವ ಮತ್ತು ಸೌಹಾರ್ದ ಭಾವನೆಯಿಂದ ಬಾಳಬೇಕಿದೆ. ಸರ್ವಜನಾಂಗದ ಶಾಂತಿ ತೋಟವನ್ನಾಗಿ ಮಾಡಿ ರಾಣಿ ಚನ್ನಮ್ಮಾಜಿ ಆದರ್ಶವನ್ನು ಜಗತ್ತಿಗೆ ಸಾರಬೇಕಿದೆ' ಎಂದರು.

ರಾಷ್ಟ್ರೀಯ ಹೆದ್ದಾರಿ ಬಳಿ ಇರುವ ಚನ್ನಮ್ಮ ವರ್ತುಲದಲ್ಲಿಯೂ ತಹಸೀಲ್ದಾರ್ ಧ್ವಜಾರೋಹಣ ನೆರವೇರಿಸಿದರು. ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ ಮತ್ತು ಅಮಟೂರು ಬಾಳಪ್ಪ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಲಾಯಿತು.

ಗಡಾದ ಮರಡಿ ಮೇಲೆ 77 ನೇ ಗಣರಾಜ್ಯೋತ್ಸವ ಅಂಗವಾಗಿ ಆಯೋಜಿಸಿದ್ದ ಮುಖ್ಯ ಕಾರ್ಯಕ್ರಮದಲ್ಲಿ ಧ್ವಜಾರೋಹಣವನ್ನು ತಹಸೀಲ್ದಾರ್‌ಕಲಗೌಡ ಪಾಟೀಲ ಅವರು ನೆರವೇರಿಸಿದರು.

ಅನಂತರ ರಾಣಿ ಚನ್ನಮ್ಮ ಸ್ಮಾರಕ ಭವನದಲ್ಲಿ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಇದೇ ವೇಳೆ ಶಾಸಕ ಬಾಬಾಸಾಹೇಬ ಪಾಟೀಲ ಗೌರವಿಸಿದರು.

ಪಟ್ಟಣ ಪಂಚಾಯಿತಿ ಅಧ್ಯಕ್ಷ ಜೈಸಿದ್ದರಾಮ ಮಾರಿಹಾಳ, ಸ್ಥಾಯಿ ಸಮಿತಿ ಅಧ್ಯಕ್ಷ ಎಂ. ಎಫ್. ಜಕಾತಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಗಂಗಪ್ಪ ಹುರಕಡ್ಲಿ,ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ನಿಂಗಪ್ಪ ಮಸಳಿ, ಕ್ಷೇತ್ರ ಶಿಕ್ಷಣಾಧಿಕಾರಿ ಚನಬಸಪ್ಪ ತುಬಾಕದ, ಸಿಪಿಐ ಶಿವಾನಂದ ಗುಡಗನಟ್ಟಿ, ಲೋಕೋಪಯೋಗಿ ಇಲಾಖೆ ಎಇಇ ಸಂಜೀವ ಮಿರಜಕರ, ಎಸ್‌ಐ ಪ್ರವೀಣ ಗಂಗೋಳ, ಕ್ಯೂರೇಟರ್ ರಾಘವೇಂದ್ರ, ಪಟ್ಟಣ ಪಂಚಾಯಿತಿ ಸದಸ್ಯರು, ಮಾಜಿ ಸೈನಿಕರು, ರಾಜಕೀಯ ಪಕ್ಷದ ಗಣ್ಯರು, ಮಹಿಳಾ ಸಂಘದ ಸದಸ್ಯೆಯರು, ವಿವಿಧ ಶಾಲೆಗಳ ಶಿಕ್ಷಕರು, ವಿದ್ಯಾರ್ಥಿನಿಯರು, ನಾಗರಿಕರು ಪಾಲ್ಗೊಂಡಿದ್ದರು.

ಗೋಕಾಕ ನಗರದ ಡಾಲರ್ಸ್ ಕಾಲನಿ ಮತ್ತು ಭಾಗ್ಯ ನಗರದಲ್ಲಿ 11ಕೆ.ವ್ಹಿ ಭೂಗತ ವಿದ್ಯುತ್ ವಿತರಣಾ ಮಾರ್ಗ ಹಾಗೂ ಆದಿತ್ಯ ನಗರದಲ್ಲಿ ರಸ್ತೆ ದುರಸ್ಥಿ ಕಾಮಗಾರಿಗೆ ಶಾಸಕ ರಮೇಶ ಜಾರಕಿಹೊಳಿ ಅವರು ಸೋಮವಾರದಂದು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ತಹಸೀಲ್ದಾರ್ ಡಾ.ಮೋಹನ ಭಸ್ಮೆ, ನಗರಸಭೆ ಪೌರಾಯುಕ್ತ ರವಿ ರಂಗಸುಭೆ, ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರ ಎಸ್ ಪಿ ವರಾಳೆ, ನಗರಸಭೆ ಸದಸ್ಯರು, ಮುಖಂಡರು ಸೇರಿದಂತೆ ಅನೇಕರು ಇದ್ದರು.

ಶ್ರೀಲಕ್ಷ್ಮೀದೇವಿ ಜಾತ್ರಾ ಮಹೋತ್ಸವ ಸಂಪನ್ನ

ಹುಕ್ಕೇರಿ: ತಾಲೂಕಿನ ಎಲಿಮುನ್ನೋಳಿ ಗ್ರಾಮದ ಮೂರು ವರ್ಷಕ್ಕೊಮ್ಮೆ ಜರುಗಿದ ಶ್ರೀಲಕ್ಷ್ಮೀದೇವಿ ಜಾತ್ರಾ ಮಹೋತ್ಸವನ್ನು ವಿಜೃಂಭಣೆ ಜರುಗಿ ಸಂಪನ್ನಗೊಂಡಿತ್ತು.

ಸಾವಿರಾರು ಸಂಖ್ಯೆಯಲ್ಲಿ ನೇವೇರಿದ ಭಕ್ತರು ಭಂಡಾರದಿಂದ ಮಿಂದದೆಂದರು. ಸೋಮವಾರ ಸಂಜೆ ಶ್ರೀ ಲಕ್ಷ್ಮೀದೇವಿ ದೇವಸ್ಥಾನದಿಂದ ಪ್ರಮುಖ ಬೀದಿಗಳ ಮೂಲಕ ಹೊನ್ನಾಟ ಆಡಿಸಿ ಬಂಡಾರ ಹಾರಿಸಿ ಹರ್ಷವ್ಯಕ್ತಪಡಿಸಿದರು. ಶ್ರೀ ಲಕ್ಷ್ಮೀದೇವಿಯು ಪ್ರಮುಖ ಹಕ್ಕುದಾರರ ಮನೆಗಳಿಗೆ ತೆರಳಿ ಉಡಿ ತುಂಬಿ ನೈವ್ಯಧ್ಯ ಅರ್ಪಣೆ ಮಾಡಿದರು. ಶ್ರೀ ಲಕ್ಷ್ಮೀದೇವಿ ಜಾತ್ರೆಯಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.

ಮಹಿಳೆಯರು ಉಡಿ ತುಂಬುವ ಕಾರ್ಯಕ್ರಮಗಳು ಜರುಗಿದವು, ಜಾತ್ರಾ ಮಹೋತ್ಸವ ನಿಮಿತ್ಯ ಹಮ್ಮಿಕೊಂಡ ಕುದುರೆ ಗಾಡ್ಡಿ ಶರ್ತು,ಏರ್ಪಡಿಸಲಾಗಿತ್ತು. ವಿಜೇತರಿಗೆ ಜಾತ್ರಾ ಕಮೀಟಿಯವರು ಬಹುಮಾನ ವಿತರಣೆ ಮಾಡಿದರು. ಜಾತ್ರೆಯಲ್ಲಿ ಬೀದಿ ನಾಟಕಗಳ ಪ್ರದರ್ಶನಗೋಳಸಿ ಭಕ್ತರಿಗೆ ಮನರಂಜನೆ ಪಡಿಸಿದರು. ಜಾತ್ರೆಯಲ್ಲಿ ಮಹಿಳೆರ, ಮಕ್ಕಳ ಆಟಿಕೆ ಸಾಮಗ್ರಗಳಿಗಳ ಅಂಗಡಿಗಳು ಸೇರಿದವವು. ಮಕ್ಕಳು ವಿವಿಧ ಆಟಿಕೆ ಸಾಮಾಗ್ರಿಗಳನ್ನು ಖರೀದಿಸುವ ಮೂಲಕ ಸಂತೋಷ ವ್ಯಕ್ತಪಡಿಸಿದರು.

ಗ್ರಾಮ ಪಂಚಾಯತ ಅಧ್ಯಕ್ಷ ಮೀರಾಸಾಹೇಬ ಮುಲ್ತಾನಿ ಅವರ ನೇತ್ರತ್ವದಲ್ಲಿ ನೀರು, ವಿದ್ಯುತ್, ವಾಹನಗಳ ಪಾರ್ಕಿಂಗ್, ಸಾರ್ವಜನಿಕ ಶೌಚ್ಚಾಲಯ, ಮಿನಿಆರೋಗ್ಯ ಕೇಂದ್ರ ಸೇರಿದಂತೆ ಭಕ್ತರಿಗೆ ಬೇಕಾಗುವ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿದರು. ಜಾತ್ರೆಯಲ್ಲಿ ಅನಾಹುತಗಳ ನಡೆಯದಂತೆ ಪೋಲಿಸ್ ಅಧಿಕಾರಿಗಳು ಸೂಕ್ತ ಬಂಧುಬಸ್ತ ವ್ಯವಸ್ಥೆ ಮಾಡಿದರು. ಜಿಲ್ಲಾ ಉಸ್ತುವಾರಿ ಸಚೀವ ಸತೀಶ ಜಾರಕಿಹೊಳಿ, ಮಾಜಿ ಸಂಸದ ರಮೇಶ ಕತ್ತಿ, ಬಿಡಿಸಿಸಿ ಬ್ಯಾಂಕ ಅಧ್ಯಕ್ಷ ಹಾಗೂ ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ, ಶಾಸಕ ನಿಖಿಲ ಕತ್ತಿ, ಸೇರಿದಂತೆ ಗ್ರಾಮಪಂಚಾಯತಿ ಜನಪ್ರತಿನಿಧಿಗಳು ಜಾತ್ರಾಮಹೋಹತ್ಸವಕ್ಕೆ ಆಗಮಿಸಿ ಶ್ರೀ ಲಕ್ಷ್ಮೀದೇವಿ ಆರ್ಶಿವಾದ ಪಡೆದುಕೊಂಡರು.

ಫೆ.1ರಂದು ಬೈಲಹೊಂಗಲದಲ್ಲಿ ಒಕ್ಕುಂದ ಉತ್ಸವ

ಬೈಲಹೊಂಗಲ: ತಿರುಳ್ಗನ್ನಡನಾಡು ಒಕ್ಕುಂದ ಉತ್ಸವ ಸಮಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಳಗಾವಿ ಇವರ ಸಹಯೋಗದಲ್ಲಿ ಒಕ್ಕುಂದ ಉತ್ಸವ-2026 ಭಾನುವಾರ ಫೆ.1 ರಂದು ಜರುಗಲಿದೆ ಎಂದು ಪ್ರಾಚಾರ್ಯ ಡಾ.ಸಿ.ಬಿ.ಗಣಾಚಾರಿ ಹೇಳಿದರು.

ಅವರು ಮಂಗಳವಾರ ನಗರದ ಪ್ರವಾಸಿ ಮಂದಿರದಲ್ಲಿ ಒಕ್ಕುಂದ ಉತ್ಸವದ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡಿ, ಕ್ರಿ.ಶ.8ನೇ ಶತಮಾನದ ರಾಷ್ಟ್ರಕೂಟರ ಕಾಲದಲ್ಲಿ ಕಾವೇರಿ ನದಿಯಿಂದ ಗೋದಾವರಿ ನದಿವರೆಗೆ ವಿಸ್ತಾರಗೊಂಡಿದ್ದ ಕರ್ನಾಟಕದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಕಲೆಗಳು ಸಮೃದ್ಧಿಯಾಗಿದ್ದವು. ಇದೇ ಸಂದರ್ಭದಲ್ಲಿ ರಚಿತವಾದ ಕವಿರಾಜಮಾರ್ಗ ಕೃತಿಯಲ್ಲಿ, ಪಟ್ಟದಕಲ್ಲು, ಕೋಪನ (ಕೊಪ್ಪಳ), ಕೊಲಗೇರಿ (ಲಕ್ಷ್ಮೇಶ್ವರ) ಮತ್ತು ಬೈಲಹೊಂಗಲ ತಾಲೂಕಿನ ಒಕ್ಕುಂದ ಈ ನಾಲ್ಕು ಪ್ರದೇಶಗಳ ಮಧ್ಯೆ ವಾಸಿಸುತ್ತಿದ್ದವರು ''ಅಚ್ಚಕನ್ನಡ''ವನ್ನು ಮಾತನಾಡುತ್ತಿದ್ದರು ಎಂಬ ಉಲ್ಲೇಖವಿದೆ. ಐತಿಹಾಸಿಕ ಮಹತ್ವವನ್ನು ಹೊಂದಿದರೂ ಕಳೆದ ಆರು ವರ್ಷಗಳಿಂದ ಗ್ರಾಮಸ್ಥರ ಸಕ್ರೀಯ ಮುಂದಾಳುತ್ವದಲ್ಲಿ 'ಒಕ್ಕುಂದ ಉತ್ಸವ' ಆಯೋಜನೆಯಾಗುತ್ತಿದೆ.

ಬೈಲಹೊಂಗಲ ನಗರದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಒಕ್ಕುಂದ ಉತ್ಸವ-2026ರ ಆಮಂತ್ರಣ ಪತ್ರಿಕೆಯನ್ನು ಪ್ರಾಚಾರ್ಯ ಡಾ.ಸಿ.ಬಿ.ಗಣಾಚಾರಿ ಬಿಡುಗಡೆಗೊಳಿಸಿದರು.

ಫೆ.1 ರಂದು ಬೆಳಿಗ್ಗೆ 9 ಗಂಟೆಗೆ ರಾಚೋಟಿ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಕಲ್ಲಗುಡಿ(ತ್ರಿಕೂಟೇಶ್ವರ) ದೇವಸ್ಥಾನದಿಂದ ನೃಪತುಂಗ ಮುಖ್ಯ ವೇದಿಕೆ ವರೆಗೆ ಅಮೋಘವರ್ಷ ನೃಪತುಂಗ ಜ್ಯೋತಿ ಪ್ರದೀಪನ ಹಾಗೂ ಮೆರವಣಿಗೆಗೆ ಚಾಲನೆ ನೀಡಲಾಗವುದು. ಸಂಜೆ 6 ಗಂಟೆಗೆ ಒಕ್ಕುಂದ ಉತ್ಸವ ಕಾರ್ಯಕ್ರಮವನ್ನು ಶಾಸಕ ಮಹಾಂತೇಶ ಕೌಜಲಗಿ ಉದ್ಘಾಟಿಸುವರು, ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ ಜ್ಯೋತಿ ಬೆಳಗಿಸುವರು. ಗ್ರಾಪಂ. ಅಧ್ಯಕ್ಷೆ ನಿರ್ಮಲಾ ಕಲ್ಲಿ ಅಧ್ಯಕ್ಷತೆ ವಹಿಸುವರು.

ನಯಾನಗರದ ಅಭಿನವಸಿದ್ದಲಿಂಗ ಸ್ವಾಮಿಜಿ, ಒಕ್ಕುಂದ ರಾಚೋಟಿ ಮಹಾಸ್ವಾಮಿಜಿ ಸಾನಿಧ್ಯ ವಹಿಸುವರು. ಜಿಲ್ಲಾಧಿಕಾರಿ ಮೊಹಮ್ಮದ ರೋಷನ್, ಮಾಜಿ ಶಾಸಕರಾದ ಡಾ.ವಿಶ್ವನಾಥ ಪಾಟೀಲ, ಜಗದೀಶ ಮೆಟಗುಡ್ಡ, ಡಿವೈಎಸ್ ಪಿ ಡಾ.ವೀರಯ್ಯ ಹಿರೇಮಠ, ಕನ್ನಡ ಮತ್ತು ಸಂಸ್ಕೃತಿ ಇಲಖೆ ಉಪನಿರ್ದೇಶಕಿ ವಿದ್ಯಾವತಿ ಭಜಂತ್ರಿ,ಉಪವಿಭಾಗಾದಿಕಾರಿ ಪ್ರವೀಣ ಜೈನ, ತಹಸೀಲ್ದಾರ ಎಚ್ ಎನ್ ಶಿರಹಟ್ಟಿ, ತಾಪಂ ಇಒ ಸಂಜೀವ ಜುನ್ನೂರ, ಕಸಾಪ ತಾಲೂಕು ಅಧ್ಯಕ್ಷ ಎನ್ ಆರ್‌ಠಕ್ಕಾಯಿ, ಪಿಡಿಒ ಬಸನಗೌಡ ಪಾಟೀಲ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಹಿರಿಯ ಸಾಹಿತಿ ವೈ ಎಂ ಯಾಕೊಳ್ಳಿ ಉಪನ್ಯಾಸ ನೀಡಲಿದ್ದಾರೆ ಎಂದರು. ಕಲಾವಿದ ಸಿ ಕೆ ಮೆಕ್ಕೆದ ಮಾತನಾಡಿದರು. ಈ ವೇಳೆ ಮಹಾಂತೇಶ ತುರಮರಿ, ರಾಮನಗೌಡ ಪಾಟೀಲ, ಅಶೋಕ ಭದ್ರಶೆಟ್ಟಿ, ಗಜದಂಡ ಸುತಗಟ್ಟಿ, ಸಂಗಣ್ಣ ಭದ್ರಶೆಟ್ಟಿ, ಸುರೇಶ ಗಣಾಚಾರಿ, ಮಡಿವಾಳಪ್ಪ ತಡಸಲ, ಸಿದ್ದನಗೌಡ ಪಾಟೀಲ, ಈರನಗೌಡ ಶೀಲವಂತರ, ಈರಣ್ಣ ಹೊಸೂರ ಇದ್ದರು.

ಡಾ.ಪ್ರಭಾಕರ ಕೋರೆಗೆ ಈರಣ್ಣ ಕಡಾಡಿ ಸನ್ಮಾನ

ಮೂಡಲಗಿ: 2026ನೇ ಸಾಲಿನ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದ ಕೆಎಲ್‌ಇ ಸಂಸ್ಥೆಯ ನಿಕಟಪೂರ್ವ ಕಾರ್ಯಾಧ್ಯಕ್ಷರು ಹಾಗೂ ರಾಜ್ಯಸಭೆಯ ಮಾಜಿ ಸದಸ್ಯರಾದ ಡಾ. ಪ್ರಭಾಕರ ಕೋರೆ ಅವರನ್ನು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಭೇಟಿಯಾಗಿ ಸನ್ಮಾನಿಸಿ ಶುಭ ಕೋರಿದರು . ಕೆಎಲ್‌ಇ ಸಂಸ್ಥೆಯ ಕಾರ್ಯಧ್ಯಕ್ಷರಾಗಿ ಡಾ. ಪ್ರಭಾಕರ್‌ಕೋರೆ ಅವರು 4 ದಶಕಗಳಿಗೂ ಹೆಚ್ಚು ಕಾಲ 38 ಸಂಸ್ಥೆಗಳನ್ನು 300 ಕ್ಕೂ ಅಧಿಕ ಅಂಗ ಸಂಸ್ಥೆಗಳಿಗೆ ವಿಸ್ತರಿಸಿದ್ದಾರೆ. ಶಿಕ್ಷಣ, ವೈದ್ಯಕೀಯ ಹಾಗೂ ಸಮಾಜಮುಖಿ ಕ್ಷೇತ್ರಗಳಲ್ಲಿ ಅವರು ನೀಡಿದ ಅಮೂಲ್ಯ ಸೇವೆಗೆ 2026ನೇ ಸಾಲಿನ ಪದ್ಮಶ್ರೀ ಪ್ರಶಸ್ತಿ ಘೋಷಣೆಯಾಗಿರುವುದು ಇದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ ಎಂದರು.

ಬೆಳಗಾವಿ ವಿಧಾನಸಭಾ ಅಧಿವೇಶನ ನಡೆಯಲು ಕಾರಣೀಭೂತರು, ವೀರಶೈವ ಲಿಂಗಾಯತ ಸಮಾಜದ ಚಟುವಟಿಕೆಗಳ ಆಶ್ರಯದಾತರು, ಕನ್ನಡ ಪರ ಚಟುವಟಿಕೆಗಳಿಗೆ ಪ್ರೋತ್ಸಾಹದಾಯಕರು, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಕ್ಕೆ ಇನ್ನೂ ಹೆಚ್ಚಿನ ಸೇವೆ ನೀಡಲು ದೇವರು ಅವರಿಗೆ ಹೆಚ್ಚಿನ ಆಯುಷ್ಯ ಆರೋಗ್ಯ ನೀಡಲಿ ಎಂದು ಶುಭ ಹಾರೈಸಿದರು.

ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದ ಡಾ. ಪ್ರಭಾಕರ ಕೋರೆಗೆ ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಅವರು ಸನ್ಮಾನಿಸಿದರು.

ಗಣತಂತ್ರ ವ್ಯವಸ್ಥೆಯಲ್ಲಿ ಎಲ್ಲವೂ ಸಮಾನ

ಕಾಗವಾಡ: ತಾಲೂಕಾಡಳಿತದ ವತಿಯಿಂದ ಪಟ್ಟಣದ ಮಲ್ಲಿಕಾರ್ಜುನ ಮಹಾವಿದ್ಯಾಲಯ ಮೈದಾನದಲ್ಲಿ 77ನೇ ಗಣರಾಜ್ಯೋತ್ಸದ ನಿಮಿತ್ಯ ಡಾ. ಬಾಬಾಸಹಾಹೇಬ ಅಂಬೇಡ್ಕರ್‌ಹಾಗೂ ಮಹಾತ್ಮಾ ಗಾಂಧಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ನಂತರ ಸಾರ್ವಜನಿಕ ಧ್ವಜಾರೋಹಣವನ್ನು ತಾಲೂಕಾ ದಂಡಾಧಿಕಾರಿ ರವೀಂದ್ರ ಹಾದಿಮನಿ ನೆರವೇರಿಸಿ, ಅದ್ದೂರಿಯಾಗಿ ಆಚರಿಸಲಾಯಿತು. ಈ ವೇಳೆ ರವೀಂದ್ರ ಹಾದಿಮನಿ ಮಾತನಾಡಿ, ಡಾ. ಬಾಬಾಸಾಹೇಬ ಅಂಬೇಡ್ಕರ್‌ಅವರು ಸಂವಿಧಾನದ ಮೂಲಕ ಪ್ರತಿಯೊಬ್ಬ ವ್ಯಕ್ತಿಗೆ ತಮ್ಮ ಮೂಲಭೂತ ಹಕ್ಕು ಮತ್ತು ಕರ್ತವ್ಯವನ್ನು ತಿಳಿಸಿ, ಸಾಮಾನ್ಯನ್ನು ಅಸಮಾನ್ಯನಾಗಲು ದಾರಿ ತೋರಿಸಿದ್ದಾರೆ. ಅವರ ಪರಿಶ್ರಮ ಫಲವಾಗಿ ಭಾರತ ದೇಶ ಇಂದು ವಿಶ್ವದಲ್ಲಿಯೇ ಅತ್ಯಂತ ಶ್ರೇಷ್ಠ ಗಣತಂತ್ರ ದೇಶ ಎಂಬ ಹೆಗ್ಗಳಿಕೆಯನ್ನು ಪಡೆದುಕೊಂಡಿದೆ. ಆ ಗಣತಂತ್ರ ವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗುವ ಜವಾಬ್ದಾರಿ ಪ್ರತಿಯೊಬ್ಬ ಭಾರತೀಯ ಪ್ರಜೆಯದ್ದಾಗಿದೆ ಎಂದು ಹೇಳಿದರು.

ಆರೋಗ್ಯ ಶಿಬಿರ ಬಡವರ ಪಾಲಿಗೆ ವರದಾನ

ಅಥಣಿ ತಾಲೂಕಿನ ಸಪ್ತಸಾಗರ ಗ್ರಾಮದಲ್ಲಿ ಗ್ರೋಮೋರ ಮಾದರಿ ಗ್ರಾಮ ಕಾರ್ಯಕ್ರಮದಡಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಜರುಗಿತು.

ಅಥಣಿ: ಇಂದಿನ ಒತ್ತಡದ ಬದುಕಿನಲ್ಲಿ ಅನೇಕ ಆರೋಗ್ಯ ಸಮಸ್ಯೆಗಳು ಜನರನ್ನು ಬಾಧಿಸುತ್ತಿವೆ. ವೈದ್ಯಕೀಯ ವೆಚ್ಚಗಳು ದುಬಾರಿಯಾಗಿರುವ ಇಂದಿನ ದಿನಗಳಲ್ಲಿ ವಿವಿಧ ಸಂಸ್ಥೆಗಳು ನಡೆಸುವ ಉಚಿತ ಆರೋಗ್ಯ ತಪಾಸಣಾ ಶಿಬಿರಗಳು ಬಡ ಜನರ ಪಾಲಿಗೆ ವರದಾನವಾಗಿವೆ ಎಂದು ರೈತ ಮುಖಂಡ ಸಂಜಯ ನಾಡಗೌಡ ಹೇಳಿದರು.

ಅವರು ತಾಲೂಕಿನ ಸಪ್ತಸಾಗರ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ, ಹಾಗೂ ಕೋರ ಮಂಡಲ ಇಂಟರ್‌ನ್ಯಾಷನಲ್ ಲಿ. ಕಂಪನಿಯ ವತಿಯಿಂದ ಗ್ರೋಮೋರ ಮಾದರಿ ಗ್ರಾಮ ಕಾರ್ಯಕ್ರಮದಡಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಈ ಉಚಿತ ಆರೋಗ್ಯ ಶಿಬಿರದಲ್ಲಿ ಗ್ರಾಮದ ಚಿಕ್ಕ ಮಕ್ಕಳು, ವಯೋವೃದ್ಧರು, ಗರ್ಭಿಣಿ ಮಹಿಳೆಯರು ಭಾಗವಹಿಸಿ ಇದರ ಉಪಯೋಗ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಶೋಭಾ ಬುರ್ಲಾ ಸಾರ್ವಜನಿಕರಿಗೆ ಆರೋಗ್ಯ ಸಲಹೆಗಳನ್ನು ನೀಡಿದರು.

ಈ ಸಂದರ್ಭದಲ್ಲಿ ನದಿ ಇಂಗಳಗಾವ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು, ಕೋರಮಂಡಲ ಇಂಟರ್‌ನ್ಯಾಷನಲ್ ಲಿಮಿಟೆಡ್ ಕಂಪನಿ ಅಧಿಕಾರಿ ರಂಜಿತ್ ಕುಮಾರ, ಹಿರಿಯ ಬೇಸಾಯ ತಜ್ಞ ಪ್ರಶಾಂತ ತುಕ್ಕಪನವರ, ಗ್ರಾಮ ಪಂಚಾಯಿತಿ ಅಧ್ಯಕ್ಷ ಬಸು ಹನಗಂಡಿ, ಡಾ. ಎಸ್.ಡಿ. ಮಾನೆ, ಡಾ. ಜಿ. ಎಸ್. ಮದ್ದೂರು, ಡಾ. ಶ್ರೀದೇವಿ ಪೂಜೇರಿ, ಡಾ.ಅರುಣಾ ಅಸ್ಕಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕಾರು ಚಾಲಕನ ಮೇಲೆ ಹಲ್ಲೆ ಖಂಡಿಸಿ ಪ್ರತಿಭಟನೆ

ಬೆಳಗಾವಿ: ಜಿಲ್ಲೆಯ ಸವದತ್ತಿಯ ಜೋಗುಳ ಬಾವಿ ದೇವಸ್ಥಾನದ ಬಳಿ ಕಾರ್‌ಚಾಲಕನ ಮೇಲೆ ಪೊಲೀಸರು ಹಲ್ಲೆ ಮಾಡಿದ್ದಾರೆ ಮಾಡಿರುವ ವಿಡಿಯೋ ವೈರಲ್ ಆಗಿತ್ತು. ಈ ಘಟನೆಯನ್ನು ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಮಂಗಳವಾರ ಕರ್ನಾಟಕ ಚಾಲಕರ ಒಕ್ಕೂಟದ ಬೆಳಗಾವಿ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸಲಾಯಿತು. ಸವದತ್ತಿಯ ಜೋಗುಳ ಬಾವಿ ದೇವಸ್ಥಾನದ ಬಳಿ, ಶಿವಾನಂದ ಅರ್ಜುನ ಕಾಂಬಳೆ ಎಂಬ ಕಾರ್‌ಚಾಲಕನ ಮೇಲೆ ಸವದತ್ತಿ ತಾಲೂಕಿನ ಸಬ್ ಇನ್‌ಸ್ಪೆಕ್ಟರ್‌ಹಾಗೂ ಸಿಬ್ಬಂದಿ ಸೇರಿ ಹಲ್ಲೆ ಮಾಡಿದ್ದಾರೆ.

ನೋ ಪಾರ್ಕಿಂಗ್ ನಲ್ಲಿ ವಾಹನ ನಿಲುಗಡೆ ಮಾಡಿದ್ದಾನೆ ಎಂದು ಆತನ ಮೇಲೆ ಹಲ್ಲೆ ಮಾಡಿದ್ದಾರೆ. ಆದರೆ ಅಲ್ಲಿ ಯಾವ ನೋ ಪಾರ್ಕಿಂಗ್ ಫಲಕ ಇರಲಿಲ್ಲ ಇದನ್ನು ಕೇಳಿದ ಚಾಲಕನ ಬಟ್ಟೆ ಹಿಡಿದು ಎಳೆದಾಡಿ ತೀವ್ರ ಹಲ್ಲೆ ಮಾಡಿದ್ದಾರೆ ಎಂದು ಆಕ್ರೋಶ ಹೊಹಾಕಿದರು.

ಜಿಲ್ಲೆಯ ಸವದತ್ತಿಯ ಜೋಗುಳ ಬಾವಿ ದೇವಸ್ಥಾನದ ಬಳಿ ಕಾರ್‌ಚಾಲಕನ ಮೇಲೆ ಪೊಲೀಸರು ಹಲ್ಲೆ ಮಾಡಿದ್ದಾರೆ ಮಾಡಿರುವ ವಿಡಿಯೋ ವೈರಲ್ ಆಗಿತ್ತು. ಈ ಘಟನೆಯನ್ನು ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

> ಚಾಲಕರ ಮೇಲೆ ಹಲ್ಲೆ ನಡೆಸಿದ್ದು ಅಮಾನವೀಯ. ಹಲ್ಲೆ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ವೈರಲ್ ಆಗಿದ್ದು, ಸಾರ್ವಜನಿಕ ವಲಯದಲ್ಲಿ ವಿರೋಧ ವ್ಯಕ್ತವಾಗಿದೆ. ಮುಂದೆ ಈ ರೀತಿಯ ಘಟನೆ ಮರುಕಳಿಸಿದರೆ ಉಗ್ರ ಪ್ರತಿಭಟನೆ ನಡೆಸಲಾಗುತ್ತದೆ.
> -ಅಜ್ಜು ಹೂಗಾರ, ಕರ್ನಾಟಕ ಚಾಲಕರ ಒಕ್ಕೂಟ ಜಿಲ್ಲಾ ಕಾರ್ಯಾಧ್ಯಕ್ಷ

ಸಮಾಚಾರ ಸಣ್ಣದಲ್ಲ

ಯುವಕನ ಕೊಲೆ: 4 ಆರೋಪಿಗಳ ಸೆರೆ

ಕಲಬುರಗಿ: ನಗರದ ಸ್ಟೇಷನ್ ಬಜಾರ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಯುವಕನ ಭೀಕರ ಕೊಲೆ ಪ್ರಕರಣವನ್ನು ಭೇದಿಸುವಲ್ಲಿ ಯಶಸ್ವಿಯಾಗಿರುವ ಪೊಲೀಸರು, ಕೃತ್ಯ ನಡೆದ ಕೇವಲ 24 ಗಂಟೆಗಳಲ್ಲಿ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತ ಆರೋಪಿಗಳನ್ನು ಆನಂದ ಜಲಕ್ ಸಿಂಧೆ (34), ಆಶಿತೋಷ್ ಜಲಕ್ ಸಿಂಧೆ (30), ಇಮ್ರಾನ್ ಮೆಹಬೂಬ್ ಶೇಖ್ (28) ಮತ್ತು ಸೊಹೇಬ್ ಅನ್ವರ್ ಖುರೇಷಿ ಎಂದು ಗುರುತಿಸಲಾಗಿದೆ. ಸದ್ಯ ಇವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಸಯ್ಯದ್ ಮೆಹಬೂಬ್ ಎಂಬಾತನನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ, ನಂತರ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕ್ರೂರವಾಗಿ ಹತ್ಯೆ ಮಾಡಿದ್ದರು. ಪ್ರಕರಣ ನಡೆದ 24 ಗಂಟೆಯಲ್ಲಿ ಆರೋಪಿಗಳನ್ನು ಪತ್ತೆ ಮಾಡಿರುವ ಪೊಲೀಸರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

ಪರಪುರುಷನ ಜತೆ ಪತ್ನಿ ಪರಾರಿ: ಪತಿ ಆತ್ಮಹತ್ಯೆ

ದಾವಣಗೆರೆ: ಮದುವೆಯಾದ ಎರಡೇ ತಿಂಗಳಿಗೆ ಮತ್ತೊಬ್ಬನ ಜತೆ ಪತ್ನಿ ಪರಾರಿಯಾಗಿದ್ದಕ್ಕೆ ಪತಿ ಹರೀಶ್ (32) ಮನನೊಂದು ನೇಣಿಗೆ ಶರಣಾದ ಘಟನೆ

ದಾವಣಗೆರೆ ತಾಲೂಕಿನ ಗುಮ್ಮನೂರು ಗ್ರಾಮದಲ್ಲಿ ನಡೆದಿದೆ. ಮುಂದೆ ನಿಂತು ಮದುವೆ ಮಾಡಿಸಿದ್ದ ಮಹಿಳೆಯ ಸೋದರ ಮಾವ ರುದ್ರೇಶ್ ಸಹ ಆತ್ಮಹತ್ಯೆಗೆ ಶರಣಾಗಿದ್ದಾರೆ. ಆತ್ಮಹತ್ಯೆಗೂ ಮುನ್ನ ಹರೀಶ್ ಡೆತ್‌ನೋಟ್ ಬರೆದಿಟ್ಟಿದ್ದಾನೆ. ಡೆತ್‌ನೋಟ್‌ನಲ್ಲಿ ತನ್ನ ಹೆಂಡತಿ ಬೇರೊಬ್ಬನ ಜತೆ ಪರಾರಿಯಾಗಿರುವುದನ್ನು ಉಲ್ಲೇಖಿಸಿ ದ್ದಾನೆ. ಅಲ್ಲದೇ ತನ್ನ ಸಾವಿಗೆ ಹೆಂಡತಿ, ಅತ್ತೆ, ಮಾವ ಹಾಗೂ ಹೆಂಡತಿಯನ್ನು ಕರೆದುಕೊಂಡು ಹೋದ ಯುವಕನೇ ಕಾರಣ ಎಂದು ಆರೋಪಿಸಿದ್ದಾನೆ. ಪತ್ನಿ ಹರೀಶ್ ಮೇಲೆ ಇಲ್ಲಸಲ್ಲದ ಆರೋಪ ಮಾಡಿದ್ದಳು. ಅಲ್ಲದೇ ಪ್ರಾಣ ಬೆದರಿಕೆ ಹಾಕಿದ್ದಳು. ಇದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ತನ್ನ ಅಂತ್ಯ ಸಂಸ್ಕಾರವನ್ನು ಬಸವ ಧರ್ಮದ ಪ್ರಕಾರ ನೆರವೇರಿಸುವಂತೆ ಡೆತ್‌ನೋಟ್‌ನಲ್ಲಿ ಬರೆದಿಟ್ಟಿದ್ದಾನೆ. ಈ ಸಂಬಂಧ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಮಾನ ನಿಲ್ದಾಣ ಆವರಣದಲ್ಲಿ ಚಿರತೆ ಸೆರೆ

ಹುಬ್ಬಳ್ಳಿ: ತಿಂಗಳಿಗೂ ಅಧಿಕ ಕಾಲ ಮಹಾನಗರದ ಜನತೆಯಲ್ಲಿ ಆತಂಕ ಸೃಷ್ಟಿಸಿದ್ದ ಚಿರತೆ ಕೊನೆಗೂ ಹುಬ್ಬಳ್ಳಿ ವಿಮಾನ ನಿಲ್ದಾಣದ ಆವರಣದಲ್ಲಿ ಇಡಲಾಗಿದ್ದ ಬೋನಿಗೆ ಬಿದ್ದಿದೆ. ಇದರಿಂದ ಆತಂಕದಲ್ಲಿ ಕಾಲ ಕಳೆಯುತ್ತಿದ್ದ ಈ ಭಾಗದ ಜನರು ನಿರಾಳರಾಗಿದ್ದಾರೆ. ಡಿ.17 ರಿಂದ ನಗರದ ವಿಮಾನ ನಿಲ್ದಾಣ, ಕಾರವಾರ ರಸ್ತೆ, ಸುತಗಟ್ಟಿ, ಗಾಮನಗಟ್ಟಿ, ಸತ್ತೂರು ಸೇರಿದಂತೆ ಅನೇಕ ಕಡೆಗಳಲ್ಲಿ 4-5 ಬಾರಿ ಈ ಚಿರತೆ ಕಾಣಿಸಿಕೊಂಡು, ಜನರಲ್ಲಿ ಆತಂಕಕ್ಕೆ ಕಾರಣವಾಗಿತು. ತುಮಕೂರು ಮಾದರಿಯ ಬೋನನ್ನು ಮೊದಲಿದ್ದ ಸ್ಥಳದಿಂದ ಬೇರೆ ಕಡೆ ಸ್ಥಳಾಂತರ ಮಾಡಿ, ಅದರಲ್ಲಿ ಪ್ರಾಣಿಯೊಂದನ್ನು ಹಾಕಿ ಚಿರತೆಗಾಗಿ ಕಾದು ಕುಳಿತಿದ್ದರು. ಸೋಮವಾರ ರಾತ್ರಿ ಆ ಪ್ರಾಣಿಯನ್ನು ತಿನ್ನಲು ಬಂದ ಚಿರತೆ ತುಮಕೂರು ಮಾದರಿ (ಕ್ರೇಸ್) ಬೋನ್‌ಗೆ ಬಿದ್ದಿದೆ.

ವಿರಾಮ
ಪ್ರತಿ ಭಾನುವಾರ

ಅಬಕಾರಿ ಅಕ್ರಮ ತನಿಖೆಗೆ ಬಿಜೆಪಿ, ಜೆಡಿಎಸ್ ಒತ್ತಾಯ

ವಿಧಾನಸೌಧದ ಗಾಂಧಿ ಪ್ರತಿಮೆ ಎದುರು ಪ್ರತಿಭಟನೆ | ರಾಜ್ಯ ಸರಕಾರದ ವಿರುದ್ಧ ಬಿಜೆಪಿ ಆಕ್ರೋಶ

ಬೆಂಗಳೂರು: ಆರು ಸಾವಿರ ಕೋಟಿಗೂ ಅಧಿಕ ಮೊತ್ತದಲ್ಲಿ ನಡೆದಿರುವ ಅಬಕಾರಿ ಹಗರಣದ ತನಿಖೆಯನ್ನು ಹೈಕೋರ್ಟ್ ಹಾಲಿ ನ್ಯಾಯಾಧೀಶರು ಅಥವಾ ಸಿಬಿಐ ನಡೆಸಬೇಕು ಎಂದು ಆಗ್ರಹಿಸಿ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ವಿಧಾನಸೌಧದ ಮಹಾತ್ಮ ಗಾಂಧೀಜಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು.

ಈ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿ ಮತ್ತು ಜೆಡಿಎಸ್ ಒಗ್ಗೂಡಿ, ದುಷ್ಟ ಭ್ರಷ್ಟ ಕಾಂಗ್ರೆಸ್ ಸರಕಾರದ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದೇವೆ. ಕಾಂಗ್ರೆಸಿನ ಗೂಂಡಾಗಳು ಸದನದಲ್ಲಿ ಮಾನ್ಯ ರಾಜ್ಯಪಾಲರ ಜತೆ ಗೂಂಡಾ ವರ್ತನೆ ತೋರಿದ್ದನ್ನು ದೇಶದ ಜನರು ನೋಡಿದ್ದಾರೆ. ಅಬಕಾರಿ ಹಗರಣದಲ್ಲಿ ಸ್ವತಃ ಅಬಕಾರಿ ಸಚಿವರ ಹೆಸರು ಕೇಳಿಬರುತ್ತಿದೆ. ಅಬಕಾರಿ ಸಚಿವರ ಕುಟುಂಬದ ಸದಸ್ಯರ ಹೆಸರು ಕೇಳಿಬರುತ್ತಿದೆ. ಅದರ ನಡುವೆಯೂ ಮುಖ್ಯಮಂತ್ರಿಗಳು ಸದನದಲ್ಲಿ ಚರ್ಚೆ ಮಾಡಲು ಬಿಡುತ್ತಿಲ್ಲ ಎಂದು ಆರೋಪಿಸಿದರು.

ರಾಜ್ಯ ಸರಕಾರ ಕರ್ನಾಟಕವನ್ನು ಕುಡುಕರ ರಾಜ್ಯ ಮಾಡಲು ಮುಂದಾಗಿದೆ. ಗ್ರಾಮೀಣ ಭಾಗದ ದಿನಸಿ ಅಂಗಡಿಯಲ್ಲಿ ಸಹ ಮದ್ಯ ಮಾರಾಟ ಮಾಡಲಾಗುತ್ತಿದೆ. ಸಿದ್ದರಾಮಯ್ಯನವರು ತಮ್ಮ ಬೊಕ್ಕಸಕ್ಕೆ ಹಣ ತುಂಬಿಸಿಕೊಳ್ಳಲು ಹಾಗೂ ಗ್ಯಾರಂಟಿಗಳಿಗಾಗಿ ಹಣ ತುಂಬಿಸಿಕೊಳ್ಳಲು ಕಳೆದ ಎರಡೂವರೆ ವರ್ಷಗಳಲ್ಲಿ ಶೇ.35 ರಷ್ಟು ಗುರಿ ಹೆಚ್ಚಿಸಿದ್ದಾರೆ. ಅಬಕಾರಿ ಇಲಾಖೆ ಅಧಿಕಾರಿಗಳು ಆ ಸ್ಥಾನಕ್ಕೆ ಬರಲು ಕೋಟಿ ಕೋಟಿ ಲಂಚ ಇರದೇ ಸಾಧ್ಯವಿಲ್ಲವಾಗಿದೆ ಎಂದು ಆರೋಪಿಸಿದರು.

ಜನರು ಇದಕ್ಕೆ ಶಾಪ ಹಾಕುತ್ತಿದ್ದಾರೆ. ಜನರ ಕಲ್ಯಾಣದ ಕುರಿತು ಚಿಂತನೆ ಮಾಡಬೇಕಾದ ಮುಖ್ಯಮಂತ್ರಿಗಳು ಇವತ್ತು ಗ್ಯಾರಂಟಿ, ಗ್ಯಾರಂಟಿ ಎಂದು ಹೇಳಿಕೊಂಡು ಗ್ರಾಮೀಣ ಭಾಗದ ಬಡ ಕುಟುಂಬದ ಜೀವನವನ್ನು ಹಾಳು ಮಾಡಲು ಮುಂದಾದುದು ದುರ್ದೈವ ಎಂದು ಟೀಕಿಸಿದರು. ನಾವು ಅನೇಕ ವಿಷಯಗಳನ್ನು ಇಟ್ಟುಕೊಂಡು ಪ್ರತಿಭಟನೆ ಮಾಡುತ್ತಿದ್ದೇವೆ. ಅಬಕಾರಿ ಸಚಿವರ ರಾಜೀನಾಮೆ ಪಡೆಯಬೇಕು. ಅದರ ಕುರಿತು ಸೂಕ್ತವಾದ ತನಿಖೆ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಮತ್ತು ವಿಧಾನಪರಿಷತ್ ಸದಸ್ಯ ಎಸ್. ಎಲ್. ಭೋಜೆಗೌಡ, ಬಿಜೆಪಿ-ಜೆಡಿಎಸ್‌ನ ಶಾಸಕರು, ವಿಧಾನಪರಿಷತ್ ಸದಸ್ಯರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಅಬಕಾರಿ ಇಲಾಖೆಯಲ್ಲಿ ಅಕ್ರಮ ನಡೆದಿದೆ ಎಂದು ಬಿಜೆಪಿ ಹಾಗೂ ಜೆಡಿಎಸ್ ನಾಯಕರು ವಿಧಾನಸೌಧದ ಗಾಂಧಿ ಪ್ರತಿಮೆ ಎದುರು ಪ್ರತಿಭಟನೆ ನಡೆಸಿ, ಸಿಬಿಐ ತನಿಖೆಗೆ ಆಗ್ರಹಿಸಿದರು. ಈ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಿ.ಟಿ.ರವಿ. ಎಚ್.ಡಿ.ರೇವಣ್ಣ, ಎನ್.ರವಿಕುಮಾರ್, ಟಿ.ಎ.ಶರವಣ ಸೇರಿ ಹಲವರಿದ್ದರು.

ಯಾವ ಪುರುಷಾರ್ಥಕ್ಕಾಗಿ ಮುತ್ತಿಗೆ: ಬಿ.ವೈ. ವಿಜಯೇಂದ್ರ

ರಾಜ್ಯಪಾಲರಿಗೆ ಜಂಟಿ ಅಧಿವೇಶನದ ಸಂದರ್ಭದಲ್ಲಿ ಅಪಮಾನ ಮಾಡಿರುವುದು, ದುರ್ವರ್ತನೆ ತೋರಿದ್ದು, ಅಲ್ಲದೇ ಅವರು ಮಾಡಿದ್ದೇ ಸರಿ ಎಂದು ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಮಾನ ಮರ್ಯಾದೆ ಬಿಟ್ಟು ಪಾದಯಾತ್ರೆ ಮಾಡಿ ಮುತ್ತಿಗೆ ಲೋಕ ಭವನಕ್ಕೆ ಮುತ್ತಿಗೆ ಹಾಕಿದ್ದಾರೆ. ಯಾವ ಪುರುಷಾರ್ಥಕ್ಕಾಗಿ ಮುತ್ತಿಗೆ. ರಾಜ್ಯಪಾಲರಿಗೆ ನೀವು ಕೊಡುವ ಗೌರವ ಇದೇನಾ? ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕಾಂಗ್ರೆಸ್ ನಾಯಕರನ್ನು ಪ್ರಶ್ನಿಸಿದರು.

ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಗೂಂಡಾ ಸರಕಾರ

ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಕಮಿಷನ್, ಭ್ರಷ್ಟಾಚಾರ, ಲೂಟಿ, ಗೂಂಡಾವರ್ತನೆ ತೋರಿದ ಸರಕಾರವು ಇವತ್ತು ರಾಜ್ಯವನ್ನಾಳುತ್ತಿದೆ. ಕೆಲವು ಸ್ನೇಹಿತರು ಕಾಂಗ್ರೆಸಿನಲ್ಲಿದ್ದು, ಅವರಿಗೂ ಈ ಸರಕಾರದ ವರ್ತನೆ ಬೇಸರ ತರಿಸಿದೆ. ಫೋನ್ ಮಾಡಿದರೆ, ಬಿಡಬೇಡ್ರಿ ಈ ನನ್ಮಕ್ಕಳನ್ನು ಎನ್ನುತ್ತಾರೆ ಎಂದರು.ಈ ಸರಕಾರ ಮಾಡುವ ತಪ್ಪುಗಳನ್ನು ಜನರ ಗಮನಕ್ಕೆ ತರಲೇಬೇಕಾಗಿದೆ. ಅಬಕಾರಿ ಸಚಿವರು 4 ಸಾವಿರ ಕೋಟಿ ಲೂಟಿ ಮಾಡಿದ್ದಾರೆಂದು ನಾವು ಹೇಳಿದ್ದೇವೆ. ನಾವು ಹೇಳಿದ್ದು ತಪ್ಪಾಗಿ ಹೋಯ್ತು. ಅದು 6 ಸಾವಿರ ಕೋಟಿ ಎಂದು ಅಬಕಾರಿ ಗುತ್ತಿಗೆದಾರರ ಸಂಘದ ಅಧ್ಯಕ್ಷರೇ ನೇರಾನೇರವಾಗಿ ಹೇಳಿದ್ದಾರೆ. ಈಗಾಗಲೇ ಹೋರಾಟ ಪ್ರಾರಂಭವಾಗಿದೆ. ಸಚಿವ ತಿಮ್ಮಾಪುರ ಅವರನ್ನು ಕ್ಷಮಿಸುವ ಪ್ರಶ್ನೆ ನಮ್ಮ ಮುಂದಿಲ್ಲ. ಅವರು ರಾಜೀನಾಮೆ ಕೊಡದೇ ನಾವ್ಯಾರೂ ಸದನ ಬಿಟ್ಟು ಹೋಗುವುದಿಲ್ಲ ಎಂದರು.

ಪ್ರತಿಪಕ್ಷದವರಿಗೆ ವಿವೇಕವಿಲ್ಲ: ಸಿಎಂ

ವಿಧಾನಸಭೆ: ಮನರೇಗಾ ಯೋಜನೆ ಹೆಸರಿನಿಂದ ಮಹಾತ್ಮ ಗಾಂಧೀಜಿ ಹೆಸರು ತೆಗೆದ ಬಿಜೆಪಿಯವರಿಗೆ ಗಾಂಧೀಜಿ ಪ್ರತಿಮೆ ಬಳಿ ಕುಳಿತು ಪ್ರತಿಭಟನೆ ನಡೆಸಲು ಯಾವ ನೈತಿಕತೆ, ಪ್ರಾಮಾಣಿಕತೆ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನೆ ಮಾಡಿದ್ದಾರೆ.

- ನಮ್ಮ ಸರಕಾರಕ್ಕೆ ವಿವೇಕವೂ ಇದೆ, ವಿವೇಚನೆಯೂ ಇದೆ
- ಪೂರ್ಣ ಭಾಷಣ ಮಾಡದ ರಾಜ್ಯಪಾಲರ ನಡೆ ಬಗ್ಗೆ ಅಸಮಾಧಾನ

ಪ್ರತಿಪಕ್ಷದವರಿಗೆ ವಿವೇಕವೂ ಇಲ್ಲ ವಿವೇಚನೆಯೂ ಇಲ್ಲ. ನಮ್ಮ ಸರಕಾರಕ್ಕೆ ವಿವೇಕವೂ ಇದೆ, ವಿವೇಚನೆಯೂ ಇದೆ ಎಂದು ಹೇಳಿದರು.

ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯ ಮಂಡಿಸಲು ಪ್ರಸ್ತಾವನೆ ಮಂಡಿಸಿ ಮಾತನಾಡಿದ ಕಾಂಗ್ರೆಸ್‌ನ ಎ.ಎಸ್. ಪೊನ್ನಣ್ಣ ಅವರು, ಪೂರ್ಣ ಭಾಷಣ ಮಾಡದ ರಾಜ್ಯಪಾಲರ ನಡೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿಯ ಎಸ್. ಸುರೇಶ್ ಕುಮಾರ್, ರಾಜ್ಯಪಾಲರು ಭಾಷಣ ಮಾಡಿಲ್ಲ ಎನ್ನುವುದಾದರೆ ವಂದನಾ ನಿರ್ಣಯ ಯಾಕೆ ಮಂಡಿಸುತ್ತೀರಿ? ಸರಕಾರಕ್ಕೆ ವಿವೇಕ ಹಾಗೂ ರಾಜ್ಯಪಾಲರಿಗೆ ವಿವೇಚನೆ ಇರಬೇಕು ಎಂದು ಹೇಳಿದರು.

ಈ ವೇಳೆ ಮಧ್ಯಪ್ರವೇಶಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ನಮಗೆ ವಿವೇಕವೂ ಇದೆ ವಿವೇಚನೆಯೂ ಇದೆ. ವಿರೋಧಪಕ್ಷಕ್ಕೆ ಮೊದಲು ಇದು ಇರಬೇಕು. ಸಂವಿಧಾನದಲ್ಲಿ ಏನು ಇದೆ ಎಂಬುದನ್ನು ಪೊನ್ನಣ್ಣ ಹೇಳುತ್ತಿದ್ದಾರೆ. ರಾಜ್ಯಪಾಲರ ಬಗ್ಗೆ ಮಾತನಾಡಲೇಬಾರದೇ? ನಿಮ್ಮ ಆಕ್ಷೇಪವಿದ್ದರೆ ನೀವು ಮಾತನಾಡುವಾಗ ಹೇಳಿ ಎಂದರು.

ಮನರೇಗಾ ಯೋಜನೆ ರದ್ದುಪಡಿಸಿ ಉದ್ಯೋಗ ಖಾತ್ರಿ ಯೋಜನೆಯಿಂದ ಮಹಾತ್ಮಗಾಂಧೀಜಿ ಹೆಸರು ತೆಗೆದಿದ್ದೀರಿ. ಇದೀಗ ಮಹಾತ್ಮಗಾಂಧೀಜಿ ಪ್ರತಿಮೆ ಮುಂದೆ ಕುಳಿತುಕೊಳ್ಳಲು ಪ್ರತಿಭಟನೆ ನಡೆಸಿದ್ದೀರಿ. ಗಾಂಧೀಜಿ ಪ್ರತಿಮೆ ಮುಂದೆ ಕುಳಿತುಕೊಳ್ಳಲು ಯಾವ ನೈತಿಕತೆ, ಪ್ರಾಮಾಣಿಕತೆ ನಿಮಗಿದೆ.

-ಸಿದ್ದರಾಮಯ್ಯ ಮುಖ್ಯಮಂತ್ರಿ

ಹೊಳೆಹೊನ್ನೂರಿನಲ್ಲಿ ಹುಚ್ಚುನಾಯಿ ಹಾವಳಿ

11 ಮಂದಿಗೆ ಕಡಿತ | ಅಧಿಕಾರಿಗಳ ವಿರುದ್ಧ ಜನರು ಆಕ್ರೋಶ

ಶಿವಮೊಗ್ಗ: ಹೊಳೆಹೊನ್ನೂರಲ್ಲಿ ಒಂದೇ ದಿನ 11 ಮಂದಿಗೆ ಹುಚ್ಚು ನಾಯಿ ಕಡಿದಿದೆ. ಎಲ್ಲರಿಗೂ ಪಟ್ಟಣದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಬೀದಿ ನಾಯಿಗಳನ್ನು ನಿಯಂತ್ರಿಸದ ಅಧಿಕಾರಿಗಳ ವಿರುದ್ಧ ಸಾರ್ವಜನಿಕರು

ಆಕ್ರೋಶ ಹೊರ ಹಾಕಿದ್ದಾರೆ.

ಪಟ್ಟಣದ ವ್ಯಾಪ್ತಿಯಲ್ಲಿ ಹಲವು ದಿನಗಳಿಂದ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದೆ. ನಗರದ ಬಹುತೇಕ ವಾರ್ಡ್‌ಗಳಲ್ಲಿ ಒಟ್ಟಾರೆಯಾಗಿ ನೂರಾರು ಬೀದಿನಾಯಿಗಳಿವೆ. ಇದರಿಂದ ಹಲವು ದಿನಗಳಿಂದ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿದೆ.

ಈ ಕುರಿತಂತೆ ಮಾತನಾಡಿದ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಆರ್.ಉಮೇಶ್, ಪಟ್ಟಣ ಪಂಚಾಯಿತಿಯಲ್ಲಿ ಜನಪ್ರತಿನಿಧಿಗಳಿಲ್ಲದೆ ಬರೀ ಅಧಿಕಾರಿಗಳ ಆಡಳಿತವಿದೆ. ಅಧಿಕಾರಿಗಳು ಜನರ ಸಮಸ್ಯೆ ಆಲಿಸದೆ ಅವರ ಕೆಲಸವನ್ನಷ್ಟೇ ಮಾಡುತ್ತಿದ್ದಾರೆ ಎಂದು ದೂರಿದರು. ಕುಡಿಯುವ ನೀರು, ಬೀದಿ ನಾಯಿಗಳ ಉಪಟಳ ಸೇರಿದಂತೆ ಇನ್ನು ಹತ್ತು ಹಲವಾರು ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಆದರೆ, ಅದಕ್ಕೆ ಸ್ಪಂದಿಸದೆ ಬಂದ ಪುಟ್ಟ ಹೋದಪುಟ್ಟ ಅಂದುಕೊಂಡು ಅಧಿಕಾರಿಗಳು ಕೆಲಸ ಮಾಡಿ ಮನೆಗೆ ಹೋಗುತ್ತಾರೆ. ಇವರೆಲ್ಲ ನಮ್ಮ ಪಟ್ಟಣ ಪಂಚಾಯತ್ ಬಿಟ್ಟು ಹೋಗಲಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹುಬ್ಬಳ್ಳಿ: 15ಕ್ಕೂ ಹೆಚ್ಚು ಮಂದಿಗೆ ದಾಳಿ

ಹುಬ್ಬಳ್ಳಿ: ಹುಚ್ಚು ನಾಯಿಯೊಂದು ದಾಳಿ ಮಾಡಿ 15ಕ್ಕೂ ಹೆಚ್ಚು ಜನರನ್ನು ಕಚ್ಚಿ ಗಾಯಗೊಳಿಸಿರುವ ಘಟನೆ ಕಲಘಟಗಿ ತಾಲೂಕಿನ ಮಿಶ್ರಿಕೋಟಿ ಗ್ರಾಮದಲ್ಲಿ ನಡೆದಿದೆ. ಘಟನೆ ಬೆನ್ನಲ್ಲೇ ಆಕ್ರೋಶಭರಿತ ಜನರು ಆ ಹುಚ್ಚು ನಾಯಿಯನ್ನು ಹೊಡೆದು ಕೊಂದುಹಾಕಿದ್ದಾರೆ.

ಭಾನುವಾರ ರಾತ್ರಿ ಕಾಣಿಸಿಕೊಂಡ ಹುಚ್ಚು ನಾಯಿ, ಪಾದಚಾರಿಗಳು, ಮನೆ ಅಂಗಳದಲ್ಲಿ ಆಡುತ್ತಿದ್ದ ಮಕ್ಕಳು, ಮಹಿಳೆಯರು, ವೃದ್ಧರು ಸೇರಿದಂತೆ 15ಕ್ಕೂ ಹೆಚ್ಚು ಜನರ ಮೇಲೆ ಎರಗಿದೆ. ಮನಬಂದಂತೆ ಕಚ್ಚಿದೆ. ಒಂದೇ ರಾತ್ರಿ ನಾಯಿಯ ಉಪಟಳ ವಿಪರೀತವಾಗಿದೆ. ಹೀಗೆ ದಾಳಿ ಮಾಡುತ್ತಿದ್ದ ನಾಯಿಯನ್ನು ಭಾನುವಾರ ರಾತ್ರಿ ಹೆದರಿಸಿ ಸಾರ್ವಜನಿಕರೇ ಓಡಿಸಿದ್ದಾರೆ. ಇದು ಸ್ಥಳೀಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಬೆಂಕಿಗೆ 10 ಲಕ್ಷ ರು. ಮೌಲ್ಯದ ಪೈಪ್‌ಗಳು ಭಸ್ಮ

ಯಾದಗಿರಿ: ಆಕಸ್ಮಿಕವಾಗಿ ಹೊತ್ತಿಕೊಂಡ ಬೆಂಕಿಗೆ 10 ಲಕ್ಷ ರು. ಅಧಿಕ ಮೌಲ್ಯದ ಪೈಪ್‌ಗಳು ಸುಟ್ಟು ಭಸ್ಮವಾಗಿರುವ ಘಟನೆ ಯಾದಗಿರಿಯ ವೀರಭದ್ರೇಶ್ವರ ಕಾಲೋನಿಯಲ್ಲಿ ನಡೆದಿದೆ. ಸದಾಶಿವರಡ್ಡಿ ರೊಟ್ನಡಗಿ ಅವರಿಗೆ ಸೇರಿದ ಶರಣಬಸವೇಶ್ವರ ಟ್ರೇಡಿಂಗ್ ಶಾಪ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಏಕಾಏಕಿ ಹೊತ್ತಿಕೊಂಡ ಬೆಂಕಿಗೆ ಪೈಪ್‌ಗಳು ಸುಟ್ಟು ಕರಕಲಾಗಿವೆ. ಸುಮಾರು 10 ಲಕ್ಷ ರೂ.ಗೂ ಅಧಿಕ ವೆಚ್ಚದ ಪೈಪ್‌ಗಳು ಭಸ್ಮವಾಗಿದೆ. ಸ್ಥಳಕ್ಕೆ ಅಗ್ನಿಶಾಮಕ ಸಿಬ್ಬಂದಿ ದೌಡಾಯಿಸಿ, ಹರಸಾಹಸಪಟ್ಟು ಬೆಂಕಿ ನಂದಿಸಿದ್ದಾರೆ.

ಅಧಿಕಾರಿಗೆ ಧಮ್ಕಿ: ಆರೋಪಿಗೆ 14 ದಿನ ನ್ಯಾಯಾಂಗ ಬಂಧನ

ಚಿಕ್ಕಬಳ್ಳಾಪುರ: ಶಿಡ್ಲಘಟ್ಟ ನಗರಸಭೆ ಪೌರಾಯುಕ್ತೆ ಜಿ.ಅಮೃತಾಗೆ ಬೆದರಿಕೆಯನ್ನೊಡ್ಡಿ ಬಂಧನಕ್ಕೊಳಗಾಗಿರುವ ಆರೋಪಿ ರಾಜೀವ್ ಗೌಡಗೆ 14 ದಿನ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಸೋಮವಾರ ಕೇರಳದಿಂದ ಅವರನ್ನು ಬಂಧಿಸಿ ಚಿಕ್ಕಬಳ್ಳಾಪುರಕ್ಕೆ ಕರೆತರಲಾಗಿತ್ತು. ಜಿಲ್ಲಾ ಆಸ್ಪತ್ರೆಯಲ್ಲಿ

- ಸೋಮವಾರ ಕೇರಳದಿಂದ ಅವರನ್ನು ಬಂಧಿಸಿ ಚಿಕ್ಕಬಳ್ಳಾಪುರಕ್ಕೆ ಕರೆತರಲಾಗಿತ್ತು
- ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಿದ ನಂತರ ಶಿಡ್ಲಘಟ್ಟ ಕೋರ್ಟಿಗೆ ಹಾಜರು

ವೈದ್ಯಕೀಯ ಪರೀಕ್ಷೆ ನಡೆಸಿದ ನಂತರ ಶಿಡ್ಲಘಟ್ಟ ಕೋರ್ಟಿಗೆ ಹಾಜರುಪಡಿಸಿದ್ದರು. ಅಲ್ಲಿ ನ್ಯಾಯಾಧೀಶರು ವಾದ ಪ್ರತಿವಾದ ಆಲಿಸಿ 14 ದಿನ ಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕೇರಳದ ಮಲ್ಲಪ್ಪುರಂ ಜಿಲ್ಲೆಯ ವಾಜಿಕಡವು ಹೋಟೆಲ್ ಸಮೀಪ ಕಾರಿನಲ್ಲಿದ್ದಾಗ ಪೊಲೀಸರು ವಶಕ್ಕೆ ಪಡೆದು ಕೊಂಡಿದ್ದಾರೆ. ಆರೋಪಿಯ ಮೊಬೈಲ್ ಕರೆ, ವಾಹನಗಳ ಸಂಚಾರ, ಇತರ ಚಟುವಟಿಕೆಯ ಚಲನವಲನಗಳ ಆಧಾರದ ಮೇಲೆ ಮಾಹಿತಿಯನ್ನು ಕಲೆ ಹಾಕಿ, ಕಾರ್ಯಾಚರಣೆ ಕೈಗೊಳ್ಳಲಾಯಿತು. ಶಿಡ್ಲಘಟ್ಟ ನಗರಸಭೆ ಪೌರಾಯುಕ್ತೆ ಜಿ.ಅಮೃತಾಗೆ ಬೆದರಿಕೆಯನ್ನೊಡ್ಡಿದಕ್ಕೆ ಸಂಬಂಧಿಸಿದಂತೆ ಕಳೆದ ಜ,14 ರಂದು ಇಲ್ಲಿನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಇದರ ನಡುವೆ ಆರೋಪಿಯು ಅಜ್ಞಾತ ಸ್ಥಳದಿಂದಲೇ ನಿರೀಕ್ಷಣಾ ಜಾಮೀನು ಹಾಗೂ ಎಫ್‌ಐಆರ್ ರದ್ದತಿಗೆ ಕೋರಿ ವಕೀಲರ ಮೂಲಕ ಅರ್ಜಿಯನ್ನು ಸಲ್ಲಿಸಿದ್ದರು.

ನೆರವು ನೀಡಿದ್ದ ಮೈಕಲ್ ಜೋಸೆಫ್‌ಗೆ ಜಾಮೀನು

ಪೌರಾಯುಕ್ತರಿಗೆ ಧಮ್ಕಿ ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿಯಾದ ರಾಜೀವ್ ಗೌಡ ಅವರ ಜಾಮೀನು ಅರ್ಜಿ ವಜಾಗೊಳಿಸಿದ ಚಿಂತಾಮಣಿ ನ್ಯಾಯಾಲಯ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಆರೋಪಿ

ನಾಪತ್ತೆಗೆ ಸಹಕರಿಸಿದ್ದ ಆರೋಪದಡಿ ಬಂಧನಕ್ಕೆ ಒಳಗಾಗಿದ್ದ ಕೇರಳದ ಮೈಕಲ್ ಜೋಸೆಫ್ ರೇಗೋಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಬಂಧನದಲ್ಲಿದ್ದ ಇಬ್ಬರು ಆರೋಪಿಗಳನ್ನು ಶಿಡ್ಲಘಟ್ಟ ನ್ಯಾಯಾಲಯಕ್ಕೆ ಭದ್ರತಾ ಕ್ರಮಗಳೊಂದಿಗೆ ಹಾಜರುಪಡಿಸಲಾಯಿತು. ತನಿಖೆಗೆ ಪೊಲೀಸ್ ಕಸ್ಟಡಿ ಅಗತ್ಯವಿದೆ ಎಂದು ಪೊಲೀಸರು ವಾದ ಮಂಡಿಸಿದರೂ, ದಾಖಲೆಗಳು ಹಾಗೂ ಪ್ರಕರಣದ ಪರಿಸ್ಥಿತಿಯನ್ನು ಪರಿಶೀಲಿಸಿದ ನ್ಯಾಯಾಧೀಶರು ಆ ಅರ್ಜಿಯನ್ನು ತಿರಸ್ಕರಿಸಿ, ರಾಜೀವ್ ಗೌಡ ಅವರನ್ನು ಜೆಸಿ ಕಸ್ಟಡಿಗೆ ಕಳುಹಿಸುವಂತೆ ಆದೇಶಿಸಿದರು. ಮೈಕಲ್ ಜೋಸೆಫ್ ರೇಗೋ ಪರ ವಕೀಲರು ಮಂಡಿಸಿದ ವಾದಗಳನ್ನು ಪರಿಗಣಿಸಿ ಜಾಮೀನು ನೀಡಲಾಯಿತು.

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.-2/ಟೆಂಡರ/2025-26/6224 ದಿನಾಂಕ:23/01/2026

ಇ-ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025-26 ನೇ ಸಾಲಿನ ಲೆಕ್ಕ ಶಿರ್ಷಿಕೆ 8443-ಠೇವಣಿ ವಂತಿಕೆ ಅಡಿ 1 ಕಾಮಗಾರಿ ಇದ್ದು, ಗುತ್ತಿಗೆಗೆ ಇಟ್ಟ ಮೊತ್ತ ರೂ. 67.74 ಲಕ್ಷ ಇರುವ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ.
ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1) ಆಕ್ಷೇಪಣೆ - ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 11-02-2026 (ಸಾಯಂಕಾಲ 5.30 ಗಂಟೆಯವರೆಗೆ)
2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 13-02-2026 (ಸಾಯಂಕಾಲ 5.00 ಗಂಟೆಯವರೆಗೆ)
3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 16-02-2026 (ಸಾಯಂಕಾಲ 4.30 ಗಂಟೆಗೆ)
4) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
5) ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.
ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-1703/KSMCA/2025-26

ಪೋಸ್ಟರ್ ಅಂಟಿಸಿ ಫೋಟೊ ತೆಗೆದಿದ್ದ ಆರೋಪ: ಸದನದಲ್ಲಿ ಗದ್ದಲ

ಸುರೇಶ್‌ಕುಮಾರ್ ನಿವಾಸಕ್ಕೆ ಪೋಸ್ಟರ್ ಅಂಟಿಸಿದವರ ವಿರುದ್ಧ ಕಠಿಣ ಕ್ರಮ: ಗೃಹ ಸಚಿವ ಪರಮೇಶ್ವರ

ವಿಧಾನಸಭೆ: ಸದನದೊಳಗೆ ನಡೆದಿರುವ ವಿಷಯ ಹಾಗೂ ಕಡತದಿಂದ ತಗೆದಿರುವ ವಿಷಯವನ್ನು ಮುಂದಿಟ್ಟುಕೊಂಡು ಶಾಸಕ ಸುರೇಶ್ ಕುಮಾರ್ ವಿರುದ್ಧ ದೂರು ಹಾಗೂ ಮನೆಗೆ ಪೋಸ್ಟರ್ ಅಂಟಿಸಿರುವ ನಡೆಗೆ ಪಕ್ಷಾತೀತವಾಗಿ ಸದನದಲ್ಲಿ ಆಕ್ಷೇಪ ವ್ಯಕ್ತವಾಯಿತು.

ಶುಕ್ರವಾರದಂದು ಸುರೇಶ್ ಕುಮಾರ್ ಅವರು ಸಚಿವ ಬೈರತಿ ಸುರೇಶ್ ಅವರನ್ನು ಉದ್ದೇಶಿಸಿ ಗಾದೆಯೊಂದನ್ನು ಹೇಳಿದ್ದರು. ಇದಕ್ಕೆ ತೀವ್ರ ಆಕ್ಷೇಪವ್ಯಕ್ತವಾದ ಬಳಿಕ ಕಡತದಿಂದ ತಗೆಯುವಂತೆ ಸುರೇಶ್ ಕುಮಾರ್ ಮನವಿ ಮಾಡಿದ್ದರು. ಇಷ್ಟಾದ ಬಳಿಕವೂ, ಸುರೇಶ ಕುಮಾರ್ ಹೇಳಿಕೆ ವಿರೋಧಿ ಕಾಂಗ್ರೆಸ್ ಕಾರ್ಯಕರ್ತರು ಪೋಸ್ಟರ್ ಅಂಟಿಸಿರುವುದು ಹಾಗೂ ದೂರು ನೀಡಿರುವುದನ್ನು ಸುರೇಶ್ ಕುಮಾರ್ ಸದನದ ಗಮನಕ್ಕೆ ತಂದು ಹಕ್ಕುಚ್ಯುತಿಗೆ ಮನವಿ ಮಾಡಿದರು.

ಈ ವೇಳೆ ಮಾತನಾಡಿದ ಅವರು, ನಾನು ವಿಧಾನಸಭೆಯಲ್ಲಿ ಏಳು ತಿಂಗಳಿಗೆ ಹುಟ್ಟಿರುವ ಸಂಬಂಧ ಮಾತನಾಡಿದ್ದೆ. ಅದನ್ನು ವಿರೋಧಿಸಿ ಮನೆ ಗೋಡೆಗೆ ಪೋಸ್ಟರ್ ಹಾಕಿದ್ದಾರೆ. ಕೆಲವು ಕಾರ್ಯಕರ್ತರು ಬಂದು ಪೋಸ್ಟರ್ ಹಾಕಿದ್ದಾರೆ. ಇದರಿಂದ ನನ್ನ ಕುಟುಂಬಕ್ಕೆ ಆತಂಕವಾಗಿದೆ. ಈ ಪೋಸ್ಟರ್ ಅಭಿಯಾನ ನಿಲ್ಲಿಸಿ. ಇಲ್ಲಿ ಯಾರಿಗೆ ರಕ್ಷಣೆ ಇದೆ?. ಅಂದು ವಿಧಾನಸಭೆಯಲ್ಲಿ ಮಾತನಾಡಿದ್ದು ತೆಗೆದು ಹಾಕಲಾಗಿದೆ. ಅದರೂ ಈ ರೀತಿ ಮಾಡಿದ್ದು ಸರಿಯಲ್ಲ. ಗಾದೆ ಮಾತನ್ನು ಹೇಳಿರೋದನ್ನು ಹೊರಗೆ ತಂದು ಗಲಾಟೆ ಮಾಡಿದ್ದಾರೆ ಎಂದು ಆರೋಪಿಸಿದರು.

ಈ ವೇಳೆ ಮಧ್ಯಪ್ರವೇಶಿಸಿದ ಪ್ರತಿಪಕ್ಷ ನಾಯಕ ಆರ್. ಅಶೋಕ್, ಸುರೇಶ್ ಕುಮಾರ್ ಮಾತು ವಾಪಸ್

ಪಡೆದಿದ್ದಾರೆ. ಕಡತದಿಂದಲೂ ಅದನ್ನು ತೆಗೆದು ಹಾಕಿದ್ದಾರೆ. ಮನೆ ಹತ್ತಿರ ಹೋಗಿ ಈ ರೀತಿ ಮಾಡಿದರೆ ಹೇಗೆ?. ಪೊಲೀಸ್ ಠಾಣೆಯಲ್ಲಿ ದೂರು ಹೇಗೆ ಕೊಟ್ಟರು? ಈಗ ನಿಮ್ಮ ಸರಕಾರ ಇದೆ. ಮುಂದೆ ನಮ್ಮ ಸರಕಾರ ಬರುತ್ತದೆ. ಗೃಹ ಸಚಿವ ಪರಮೇಶ್ವರ ಅವರು ಈ ಘಟನೆಯ ವಿರುದ್ಧ ಖಡಕ್ ಕ್ರಮವಹಿಸಬೇಕು. ಆಡಳಿತ, ಪ್ರತಿಪಕ್ಷ ಯಾರು, ಯಾರ ಮನೆಗೆ ಅಂಟಿಸಿದರೂ ಕ್ರಮ ಆಗಬೇಕು. ಈ ಬಗ್ಗೆ ನಿಮ್ಮಿಂದ ಖಡಕ್ ಆಗಿ ಉತ್ತರ ಬೇಕು ಎಂದು ಆಗ್ರಹಿಸಿದರು.

ಪೋಸ್ಟರ್ ಅಂಟಿಸಿದವರ ವಿರುದ್ಧ ಕ್ರಮ: ಈ ವೇಳೆ ಮಾತನಾಡಿದ ಡಾ.ಜಿ.ಪರಮೇಶ್ವರ, ನಾನು ಖಡಕ್ ಆಗಿಯೇ ಉತ್ತರ ಕೊಡುತ್ತಿದ್ದೇನೆ. ಇನ್ನು ಮುಂದೆ ಆ ರೀತಿ ಆಗದಂತೆ ನೋಡಿಕೊಳ್ಳುವೆ. ಯಾರು ಪೋಸ್ಟರ್ ಅಂಟಿಸಿದರೂ ಎಂಬ ಬಗ್ಗೆ ಖುದ್ದಾಗಿ ನಾನೇ ವಿಚಾರಿಸುತ್ತೇನೆ. ಠಾಣೆಯಲ್ಲಿ ದೂರು ಕೊಡುವ ಹಕ್ಕಿದೆ, ಕೊಟ್ಟಿದ್ದಾರೆ. ಅದರ ಬಗ್ಗೆಯೂ ನಾನು ನೋಡುತ್ತೇನೆ. ಸುರೇಶ್ ಕುಮಾರ್ ಅವರಿಗೆ, ಅವರ ಮನೆಗೆ ಭದ್ರತೆ ಕೊಡೋದು ನನ್ನ ಜವಾಬ್ದಾರಿ. ಆ ರೀತಿ ಮಾಡಿದರೆ ಒಳ್ಳೆ ಸಂಪ್ರದಾಯ ಆಗಲ್ಲ. ಇದನ್ನು ನಾನು ಖಂಡಿಸುತ್ತೇನೆ. ಏನು ಕ್ರಮ ತೆಗೆದುಕೊಳ್ಳಬೇಕೋ, ತೆಗೆದುಕೊಳ್ತೇನೆ ಎಂದು ಭರವಸೆ ನೀಡಿದರು.

ಹಕ್ಕು ಬಾಧ್ಯತಾ ಸಮಿತಿ ಪರಿಶೀಲನೆಗೆ ಪ್ರಕರಣ

ವಿಧಾನಸಭೆಯಲ್ಲಿ ಆಡಿದ ಮಾತುಗಳನ್ನೇ ಮುಂದಿಟ್ಟುಕೊಂಡು ಬಿಜೆಪಿಯ ಎಸ್.ಸುರೇಶ್ ಕುಮಾರ್ ಮನೆಯ ಗೋಡೆಗಳಿಗೆ ಕೀಳುಮಟ್ಟದ ಪೋಸ್ಟರ್‌ಗಳನ್ನು ಅಂಟಿಸಿ, ತೇಜೋವಧೆ ಮಾಡಿರುವ ಪ್ರಕರಣವನ್ನು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹಕ್ಕು ಬಾಧ್ಯತಾ ಸಮಿತಿ ಪರಿಶೀಲನೆಗೆ ವಹಿಸುವುದಾಗಿ ಹೇಳಿದ್ದಾರೆ. ಮಧ್ಯಪ್ರವೇಶ ಮಾಡಿದ ಸ್ಪೀಕರ್ ಯು.ಟಿ.ಖಾದರ್, ಸದನದಲ್ಲಿ ಚರ್ಚೆ ಮಾಡ್ತೇವೆ, ಕಿತ್ತಾಡುತ್ತೇವೆ ಬಳಿಕ ಒಂದಾಗುತ್ತೇವೆ. ಎಲ್ಲಾ ಪಕ್ಷದವರೂ ಒಂದೇ ಕುಟುಂಬ ಇದ್ದಂತೆ. ಆದರೆ ಸದನದಲ್ಲಿ ಆದ ಚರ್ಚೆ ಬಗ್ಗೆ ಈ ರೀತಿ ಪೋಸ್ಟರ್ ಅಂಟಿಸುವುದು ಸರಿಯಲ್ಲ. ಇದನ್ನು ಹಕ್ಕುಚ್ಯುತಿ ಸಮಿತಿಗೆ ಪರಿಶೀಲನೆಗೆ ನೀಡುತ್ತೇನೆ ಎಂದು ಹೇಳಿದರು.

ಸದನ ಎನ್ನುವುದು ಒಂದು ಕುಟುಂಬವಿದ್ದಂತೆ. ನಾವು ಇಲ್ಲಿ ಚರ್ಚೆ ಮಾಡುತ್ತೇವೆ, ಕಿತ್ತಾಡುತ್ತೇವೆ. ಬಳಿಕ ಒಂದಾಗಿ ಕಾಫಿ ಕುಡಿಯುತ್ತೇವೆ. ಅಸಂಸದೀಯ ಪದಗಳ ಹೊರತಾಗಿ ಯಾವುದೇ ರೀತಿಯಲ್ಲಿ ಮಾತನಾಡಲು ಸದನದ ಸದಸ್ಯರಿಗೆ ಅವಕಾಶವಿದೆ. ಆದರೆ ಇಲ್ಲಿ ನಡೆಯುವ ವಿಷಯವನ್ನು ಇಟ್ಟುಕೊಂಡು ಹೊರಗಡೆ ಪೋಸ್ಟರ್ ಅಂಟಿಸೋದು ಸರಿಯಲ್ಲ. ಸುರೇಶ್‌ಕುಮಾರ್ ಬೇಕೆಂದರೆ, ಈ ಪ್ರಕರಣವನ್ನು ಹಕ್ಕು ಬಾಧ್ಯತಾ ಸಮಿತಿಗೆ ವಹಿಸಲಾಗುವುದು.

- ಯು.ಟಿ. ಖಾದರ್ ವಿಧಾನಸಭಾಧ್ಯಕ್ಷ

ನಾನು ಬಳಸಿದ್ದು ಅಸಂವಿಧಾನಿಕ ಪದವಲ್ಲ. ಆದರೂ ಕಡತದಿಂದ ತೆಗೆಯಲು ಹೇಳಿದ್ದೇನೆ. ಒಂದು ವೇಳೆ ಗಾದೆಗಳನ್ನು ಹೇಳುವುದೋ ತಪ್ಪು ಎನ್ನುವುದಾದರೆ ಡಿಪಿಎಆರ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಒಂದು ಪಟ್ಟಿಯನ್ನು ನೀಡಲಿ. ಆ ಪಟ್ಟಿಯನ್ನು ಇಟ್ಟುಕೊಂಡೇ ಮಾತನಾಡುತ್ತೇವೆ.

- ಸುರೇಶ್ ಕುಮಾರ್ ಶಾಸಕ

ದಿನ ವಿಶೇಷ

28 ಜನವರಿ 2026 ಬುಧವಾರ

» ಸೂರ್ಯೋದಯ	: 06-47
» ಸೂರ್ಯಾಸ್ತ	: 06-19
» ತಿಥಿ	: ದಶಮಿ
» ನಕ್ಷತ್ರ	: ಕೃತ್ತಿಕಾ
» ಸಂವತ್ಸರ	: ವಿಶ್ವಾವಸು
» ಆಯನ	: ಉತ್ತರಾಯಣ
» ಋತು	: ಶಿಶಿರ
» ಮಾಸ	: ಮಾಘ
» ಪಕ್ಷ	: ಶುಕ್ಲಪಕ್ಷ

ಸಮಾಚಾರ ಸಣ್ಣದಲ್ಲ

ನೇಕಾರ ಸಮ್ಮಾನ್ ನೆರವಿನ ಪ್ರಮಾಣ ಹೆಚ್ಚಳ

ವಿಧಾನ ಪರಿಷತ್: ನೇಕಾರ ಸಮ್ಮಾನ್ ಯೋಜನೆಯ ನೆರವಿನ ಪ್ರಮಾಣ ಹೆಚ್ಚಳ ಮಾಡಬೇಕು ಎಂಬ ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ಜವಳಿ ಸಚಿವ ಶಿವಾನಂದ ಪಾಟೀಲ ಹೇಳಿದರು. ವಿಧಾನಪರಿಷತ್ತಿನಲ್ಲಿ ಮಂಗಳವಾರ ಪ್ರಶ್ನೋತ್ತರ ವೇಳೆಯಲ್ಲಿ ಎಂ.ನಾಗರಾಜು ಅವರ ಪ್ರ ಶ್ನೆಗೆ ಉತ್ತರಿಸಿದ ಸಚಿವರು, ನೆರೆಯ ತಮಿಳುನಾಡು ಮತ್ತು ಮಹಾರಾಷ್ಟ್ರ ಸರಕಾರ ನೀಡುತ್ತಿರುವ ಯೋಜನೆಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕ ರಾಜ್ಯದ ಯೋಜನೆಗಳು ಮಾದರಿಯಾಗಿವೆ. ನೇಕಾರರಿಗೆ 2008-13ರ ಅವಧಿಯಲ್ಲಿ 145 ಕೋಟಿ ರು. 2013-18ರ ಅವಧಿಯಲ್ಲಿ 691 ಕೋಟಿ ರು. ಸಬ್ಸಿಡಿ ನೀಡಲಾಗಿತ್ತು. ಈ ಅವಧಿಯಲ್ಲಿ 824 ಕೋಟಿ ರು. ನೆರವು ನೀಡಲಾಗಿದೆ. ಜವಳಿ ಕ್ಷೇತ್ರದ ಉದ್ದಿಮೆದಾರರು, ನೇಕಾರರು ಹಾಗೂ ನೇಕಾರರ ಸಾಂದ್ರತೆ ಹೆಚ್ಚಾಗಿರುವ ಪ್ರದೇಶಗಳ ಜನಪ್ರತಿನಿಧಿಗಳ ಅಭಿಪ್ರಾಯ ಸಂಗ್ರಹ ಮಾಡಿ 2025-30ರ ಅವಧಿಗೆ ನೂತನ ಜವಳಿ ನೀತಿ ಕರಡು ರೂಪಿಸಲಾಗಿದ್ದು, ಶೀಘ್ರದಲ್ಲಿ ಅನುಷ್ಠಾನಗೊಳಿಸಲಾಗುವುದು ಎಂದು ಹೇಳಿದರು.

ಒಳಚರಂಡಿ ಕಾಮಗಾರಿ ಶೀಘ್ರದಲ್ಲೇ ಪೂರ್ಣ

ವಿಧಾನ ಪರಿಷತ್: ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿ ಕರ್ನಾಟಕ ನಗರಾಭಿವೃದ್ಧಿ ಮತ್ತು ಒಳಚರಂಡಿ ಮಂಡಳಿ ಅಡಿಯಲ್ಲಿ ಕೈಗೊಂಡಿರುವ ಒಳಚರಂಡಿ ಯೋಜನೆಯ ಕಾಮಗಾರಿಯನ್ನು ಶೀಘ್ರದಲ್ಲೇ ಪೂರ್ಣಗೊಳಿಸಲಾಗುವುದು ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಭೈರತಿ ಸುರೇಶ್ ಭರವಸೆ ನೀಡಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ರಮೇಶ್ ಬಾಬು ಅವರು, ಪ್ರಸ್ತಾಪಿಸಿದ ಪ್ರಶ್ನೆಗೆ ಸಚಿವರು ಉತ್ತರಿಸಿ, ಚಿಕ್ಕನಾಯಕನಹಳ್ಳಿ ಪುರಸಭೆ ವ್ಯಾಪ್ತಿಯ ಒಳಚರಂಡಿ ಕಾಮಗಾರಿ ಸಂಬಂಧ 2022 ರಿಂದ ಇಲ್ಲಿಯವರೆಗೆ ಮಂಡಳಿಯ ಎಇಇ, ಇಇ ಮತ್ತು ಮುಖ್ಯ ಎಂಜಿನಿಯರ್ ಸ್ಥಳ ವೀಕ್ಷಣೆ ಮಾಡಿದ್ದು, ಇದೇ ವರ್ಷ ಜೂನ್ ವೇಳೆಗೆ ಪೂರ್ಣಗೊಳಿಸಲಾಗುವುದು. ಜತೆಗೆ ಈ ಕುರಿತು ಸಭೆ ನಡೆಸಲಾಗುವುದು ಎಂದರು. ಸದಸ್ಯ ಸಿ.ಎನ್.ಮಂಜೇಗೌಡ ಅವರ ಪ್ರಶ್ನೆಗೆ ಪೌರಾಡಳಿತ ಸಚಿವ ರಹೀಂ ಖಾನ್ ಉತ್ತರಿಸಿ, ಮೈಸೂರು ವ್ಯಾಪ್ತಿಯಲ್ಲಿ ನಗರೋತ್ಥಾನ ಯೋಜನೆಯ 4ನೇ ಹಂತದ ಅಡಿಯಲ್ಲಿ ವಿವಿಧ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಹಂತದಲ್ಲಿ ಇದೆ. ಜತೆಗೆ ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಮಿತಿ ನಿಗದಿ ಮಾಡಲಾಗುವುದು ಎಂದರು.

ಅಕ್ರಮ ಮದ್ಯ ತಡೆಯಲು ಸೂಚನೆ

ವಿಧಾನಸಭೆ: ಅಕ್ರಮ ಮದ್ಯ ಮಾರಾಟ ತಡೆಗಟ್ಟಲು ಕ್ರಮವಹಿಸಲಾಗುವುದು ಎಂದು ಗೃಹ ಸಚಿವ ಡಾ.ಜಿ ಪರಮೇಶ್ವರ ಸ್ಪಷ್ಟಪಡಿಸಿದರು. ಪ್ರಶ್ನೋತ್ತರ ಅವಧಿಯಲ್ಲಿ ಐಹೊಳೆ ದುರ್ಯೋಧನ ಮಹಾಲಿಂಗಪ್ಪ ಇವರ ಪ್ರಶ್ನೆಗೆ

ಉತ್ತರಿಸಿದ ಅವರು, ಅಕ್ರಮವಾಗಿ ಮದ್ಯ ಮಾರಾಟ ಮಾಡುವುದನ್ನು ತಡೆಗಟ್ಟಲು ಇಲಾಖಾಧಿಕಾರಿಗಳು ವಲಯ ವ್ಯಾಪ್ತಿಯ ರೂಟ್‌ಗಳಲ್ಲಿ ನಿರಂತರ ಗಸ್ತು ನಡೆಸಿ, ಸಾರ್ವಜನಿಕರಿಂದ ವಿಶೇಷವಾಗಿ ಮಹಿಳೆ/ಮಹಿಳಾ ಸಂಘಗಳಿಂದ ದೂರು ಸ್ವೀಕೃತವಾದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಸ್ಥಳಗಳ ಮೇಲೆ ದಾಳಿ ನಡೆಸಿ, ಅಕ್ರಮಗಳು ಕಂಡುಬಂದಲ್ಲಿ ಅಬಕಾರಿ ಕಾಯ್ದೆ ಮತ್ತು ನಿಯಮಗಳನುಸಾರ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ ಎಂದು ತಿಳಿಸಿದರು. ರಾಯಭಾಗ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅಕ್ರಮ ಮದ್ಯ ಮಾರಾಟ ಮಾಡಿದವರ ವಿರುದ್ಧ ಕಳೆದ ಎರಡು ವರ್ಷಗಳಲ್ಲಿ 357 ದಾಳಿಗಳನ್ನು ನಡೆಸಿ, 18 ಜಾಮೀನು ರಹಿತ ಪ್ರಕರಣಗಳನ್ನು ಹಾಗೂ ಜಾಮೀನು ಸಹಿತ ದಂಡ ವಿಧಿಸಬಹುದಾದದ 295 ಪ್ರಕರಣಗಳನ್ನು ಕರ್ನಾಟಕ ಅಬಕಾರಿ ಕಾಯಿದೆ ಅನ್ವಯ ದಾಖಲಿಸಲಾಗಿರುತ್ತದೆ. ಇದೇ ಅವಧಿಯಲ್ಲಿ 322 ಆರೋಪಿತರನ್ನು ದಸ್ತಗಿರಿಗೊಳಪಡಿಸಿ, ಒಟ್ಟು 370 ಲೀಟರ್ ಮದ್ಯ ಮತ್ತು 07 ವಾಹನಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ ಎಂದರು.

ವಿರಾಮ
ಪ್ರತಿ ಭಾನುವಾರ

ವಿಶ್ವವಾಣಿ ಕ್ಲಬ್ ಹೌಸ್
28.01.2026
ಸಂಜೆ: 06.55 ರಿಂದ 08.05 ರವರೆಗೆ

ಬುಧವಾರದ ಅತಿಥಿ
ಶ್ರೀ ಸಚಿನ್ ನಾಯಕ್
ವಿಷಯ
ವೋಲ್ಗಾ ಗಂಗಾ ಕೃತಿ ಪರಿಚಯ
vishwavani.news

ಸದನಕ್ಕೆ ಸಚಿವರು ಗೈರಾಗಿದ್ದರಿಂದ 2 ಗಂಟೆ ತಡವಾಗಿ ಕಲಾಪ ಆರಂಭ | ಪ್ರತಿಪಕ್ಷ, ಸ್ಪೀಕರ್ ಕಿಡಿ

ಸದನಕ್ಕೆ ಸಚಿವರ ಗೈರು: ಬಿಜೆಪಿ ಧರಣಿ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ನರೇಗಾ ಮರುಸ್ಥಾಪನೆಗೆ ಆಗ್ರಹಿಸಿ ಕಾಂಗ್ರೆಸ್ ಕರೆ ನೀಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಲು ಬಹುತೇಕ ಸಚಿವರು ತೆರಳಿದ್ದರಿಂದ, ಮಂಗಳವಾರದ ವಿಧಾನಮಂಡಲ ಕಲಾಪ ಎರಡು ಗಂಟೆ ತಡವಾಗಿ ಆರಂಭವಾಯಿತು. ಇದಕ್ಕೆ ಬಿಜೆಪಿ ನಾಯಕರು ಕಿಡಿಕಾರಿ, ಧರಣಿ ನಡೆಸಿದ ಘಟನೆ ನಡೆಯಿತು.

ವಿಧಾನಸಭೆ ಕಲಾಪ ಎರಡು ಗಂಟೆ ತಡವಾಗಿ ಆರಂಭಗೊಂಡಾಗ ಪ್ರಶ್ನೋತ್ತರ ಕಲಾಪದ ವೇಳೆ ಸಚಿವರು ಹಾಜರಿಲ್ಲದ ಬಗ್ಗೆ ಬಿಜೆಪಿ ವಿಧಾನಸಭೆಯಲ್ಲಿ ತೀವ್ರ ಆಕ್ಷೇಪ ವ್ಯಕ್ತಪಡಿಸಿತು. ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಪ್ರಶ್ನೋತ್ತರ ಕಲಾಪ ಆರಂಭಿಸಿ ಪ್ರಶ್ನೆ ಕೇಳಬೇಕಾದ ಶಾಸಕರು ಹೆಸರನ್ನು ಹೇಳಲಾರಂಭಿಸಿದರು. ಆಗ ಸಂಬಂಧಿತ ಸಚಿವರು ಇಲ್ಲದಿರುವುದನ್ನು ಗಮನಿಸಿದ ಪ್ರತಿಪಕ್ಷ ಪಕ್ಷದ ನಾಯಕ ಅಶೋಕ್, ಸಚಿವರೇ ಇಲ್ಲ ಎಂದರೆ ಹೇಗೆ?, ಜವಾಬ್ದಾರಿ ಬೇಡವೇ? ಇಂದು ಸದನದಲ್ಲಿ ಹಾಜರಿರಬೇಕಾದ ಹೆಸರುಗಳನ್ನು ವಾಚಿಸಿ, ಬರದೇ ಇರುವವರಿಗೆ ಛೀಮಾರಿ ಹಾಕಿ ಎಂದರು.

ಆಗ ಸಭಾಧ್ಯಕ್ಷರು ಇಂದು ಏಕೆ ಸದನ ಆರಂಭವಾಗಿದೆ?, ಹಾಜರಾತಿ ಏಕೆ ಕಡಿಮೆ ಇದೆ ಎಂಬುದು ನಿಮಗೆ ಗೊತ್ತಿದೆ. ಅದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ ಎನ್ನುತ್ತಿದ್ದಂತೆ, ಅಶೋಕ್ ಅವರು ನೀವು ಕಾಂಗ್ರೆಸ್ ಪಕ್ಷದರಲ್ಲ. ಇಂದು ಸದನದಲ್ಲಿ ಹಾಜರಿರಬೇಕಾದವರ ಪಟ್ಟಿಯನ್ನು ವಾಚಿಸಿ ಎಂದು ಒತ್ತಾಯಿಸಿ ದರು. ಆಗ ಸಭಾಧ್ಯಕ್ಷರು ಪ್ರಶ್ನೋತ್ತರ ಅವಧಿಯಲ್ಲಿ ಮುಖ್ಯ ಮಂತ್ರಿ, ಉಪಮುಖ್ಯಮಂತ್ರಿ ಪರವಾಗಿ ಸಚಿವರು ಉತ್ತರ ಕೊಡುತ್ತಾರೆ. ಸದನದ ಕಾರ್ಯಕಲಾಪಗಳ ಸಮಿತಿ ಸಭೆಯಲ್ಲಿ ಸಚಿವರು ಬೆಳಗ್ಗೆ ಮತ್ತು ಮಧ್ಯಾಹ್ನ ಕಡ್ಡಾಯವಾಗಿ ಹಾಜರಿರುವ ಬಗ್ಗೆ ಹೇಳಲಾಗಿದೆ. ಅದರಂತೆ ಬರುತ್ತಾರೆ ಎಂದರು.

ಧರಣಿ ಹಿಂಪಡೆದ ಬಿಜೆಪಿ

ಅಬಕಾರಿ ಸಚಿವರ ರಾಜೀನಾಮೆಗೆ ಆಗ್ರಹಿಸಿ ಕಳೆದ ಶುಕ್ರವಾರ ಆರಂಭಿಸಿದ್ದ ಧರಣಿಯನ್ನು ಪ್ರತಿಪಕ್ಷಗಳಾದ ಬಿಜೆಪಿ-ಜೆಡಿಎಸ್ ಮಂಗಳವಾರ ವಿಧಾನಸಭೆಯಲ್ಲಿ ಹಿಂಪಡೆದವು. ನಿಗದಿತ ಸಮಯಕ್ಕಿಂತ ಸುಮಾರು 2 ಗಂಟೆ ತಡವಾಗಿ ಸದನ ಆರಂಭವಾದಾಗ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಪದ್ಮಪ್ರಶಸ್ತಿಗೆ ಭಾಜನರಾದವರಿಗೆ ಅಭಿನಂದನೆ ಸಲ್ಲಿಸಲು ಮುಂದಾದರು. ಅಷ್ಟರಲ್ಲಾಗಲೇ ಸಭಾಧ್ಯಕ್ಷರ ಪೀಠದ ಮುಂದಿನ ಬಾವಿಗಿಳಿದು ಪ್ರತಿಪಕ್ಷಗಳ ಶಾಸಕರು ಧರಣಿ ಆರಂಭಿಸಿದ್ದರು. ಧರಣಿಯನ್ನು ವಾಪಸ್ ಪಡೆದು ಪ್ರಶ್ನೋತ್ತರ ಕಲಾಪ ಆರಂಭಿಸಲು ಸಹಕಾರ ಕೊಡಿ ಎಂದು ಸಭಾಧ್ಯಕ್ಷರು ಕೋರಿದರು. ಆದರೆ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ಅಬಕಾರಿ ಇಲಾಖೆಯಲ್ಲಿ ಲಂಚ ಕೇಳಿದ ಆರೋಪದ ಬಗ್ಗೆ ಚರ್ಚೆ ನಡೆಸಲು ನಿಲುವಳಿ ಸೂಚನೆ ನೋಟಿಸ್ ಕೊಡಲಾಗಿತ್ತು. ಶುಕ್ರವಾರದಿಂದಲೂ ನಾವು ಸಚಿವರ ರಾಜೀನಾಮೆಗೆ ಆಗ್ರಹಿಸುತ್ತಿದ್ದೇವೆ. ಅಬಕಾರಿ ಇಲಾಖೆಯಲ್ಲಿನ ಭ್ರಷ್ಟಾಚಾರದ ಆರೋಪದ ಬಗ್ಗೆ ಹಾದಿಬೀದಿಯಲ್ಲಿ ಜನರು ಮಾತನಾಡುವಂತಾಗಿದೆ. ಲಂಚಕ್ಕೆ ಬೇಡಿಕೆ ಇಡಲಾಗಿದೆ ಎನ್ನಲಾದ ಸಂಭಾಷಣೆಯು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಹೀಗಾಗಿ ನಾವು ಜನರ ದನಿಯಾಗಿ ಅಬಕಾರಿ ಸಚಿವರ ರಾಜೀನಾಮೆಗೆ ಆಗ್ರಹಿಸುತ್ತಿದ್ದೇವೆ ಎಂದರು. ಬಳಿಕ ಈ ಬಗ್ಗೆ ಚರ್ಚಿಸಲು ಅವಕಾಶ ನೀಡುವುದಾಗಿ ಭರವಸೆ ನೀಡಿದ ಬಳಿಕ ಧರಣಿ ಹಿಂಪಡೆದರು.

ಕಂದಾಯ ಸಚಿವ ಕೃಷ್ಣ ಭೈರೇಗೌಡ, ಸದನದಲ್ಲಿ ಹಾಜರಿದ್ದರು. ಜಮೀರ್ ಅಹ್ಮದ್ ಖಾನ್, ಈಶ್ವರ್ ಖಂಡ್ರೆ, ಸುಧಾಕರ್ ಸೇರಿದಂತೆ ಇನ್ನೂ ಕೆಲವು ಸಚಿವರು ಸದನದಲ್ಲಿ ಹಾಜರಿರಲಿಲ್ಲ. ಆಗ ಬಿಜೆಪಿ ಶಾಸಕ ಸುನಿಲ್‌ಕುಮಾರ್, ಇದು ಇಲ್ಲಗಳ ಸರಕಾರ. ಮಂತ್ರಿಗಳೂ ಇಲ್ಲ, ಅನುದಾನವೂ ಇಲ್ಲ ಎಂದು ಛೇಡಿಸಿದರು.

ವಿಮೆ ವ್ಯಾಪ್ತಿಗೆ ತೆಂಗು ಬೆಳೆ ತರಲು ಕೇಂದ್ರಕ್ಕೆ ಪ್ರಸ್ತಾವನೆ

ವಿಧಾನ ಪರಿಷತ್: ತೆಂಗು ಬೆಳೆ ವಿಮಾ ಯೋಜನೆ ವ್ಯಾಪ್ತಿಗೆ ತರಲು ಕೇಂದ್ರ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು ಎಂದು ಕೃಷಿ ಸಚಿವ ಚೆಲುವರಾಯಸ್ವಾಮಿ ಅವರು ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಚಿದಾನಂದ ಗೌಡ ಅವರ ಪ್ರಶ್ನೆಗೆ ಗಣಿ ಮತ್ತು ಭೂವಿಜ್ಞಾನ ಸಚಿವರ ಪರವಾಗಿ ಉತ್ತರ ನೀಡಿದ ಕೃಷಿ ಸಚಿವರು ಸದ್ಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಸಭೆ ನಡೆಸಿ ಕೇಂದ್ರ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು. ನುಸಿ ಪೀಡೆ, ಕೆಂಪು ಮೂತಿ ಹುಳ,ಅಣಬೆ ರೋಗದ ಬಾಧೆಯಿಂದ ತೆಂಗಿನ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದು, ಅವರ ನೆರವಿಗೆ ಸರಕಾರ ಧಾವಿಸಬೇಕು. ತುಮಕೂರು, ಹಾಸನ, ಮಂಡ್ಯ ಭಾಗದಲ್ಲಿ ಅತಿ ಹೆಚ್ಚು ತೆಂಗು ಬೆಳೆಯುತ್ತಿದ್ದು ಬಹುತೇಕ ಬೆಳೆಗಾರರು ನಷ್ಟ ಅನುಭವಿಸುತ್ತಿದ್ದಾರೆ ಎಂದು ಸದನದ ಗಮನಕ್ಕೆ ಸದಸ್ಯ ಚಿದಾನಂದ ಗೌಡ ಅವರು ತಂದರು.

ಸದಸ್ಯರ ಕಳಕಳಿಗೆ ಉತ್ತರ ನೀಡಿದ ಸಚಿವರು ಕೊಬರಿಗೆ ಉತ್ತಮ ಬೆಲೆ ಇರುವುದರಿಂದ ತೆಂಗು ಬೆಳೆಗಾರರ ಸ್ಥಿತಿ ಸುಧಾರಿಸಿದ್ದು, ಆದರೂ ದೀರ್ಘ ಕಾಲದ ತೊಂದರೆ ನಿವಾರಿಸಲು ಕೇಂದ್ರಕ್ಕೆ ಪ್ರಸ್ತಾಪವನ್ನು ಸಲ್ಲಿಸಲಾಗುವುದು. ತೋಟಗಾರಿಕೆ ಬೆಳೆಗಳ ಸಮಗ್ರ ರೋಗ ಕೀಟಗಳ ಹಾಗೂ ಪೋಷಕಾಂಶಗಳ ನಿರ್ವಹಣೆಗಾಗಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ 5 ಸಾವಿರ ಗಳಲ್ಲಿ ಪ್ರತಿ ಹೆಕ್ಟೇರ್‌ಗೆ ತಗಲುವ ವೆಚ್ಚದ ಶೇ.30ರಂತೆ ಪ್ರತಿ ಹೆಕ್ಟೇರಿಗೆ 1500 ರು. ದರದಲ್ಲಿ 2ಹೆಕ್ಟೇರ್ ರವರೆಗೆ 3ಸಾವಿರ ಸಹಾಯಧನ ನೀಡಲಾಗುತ್ತಿದೆ ಎಂದರು.

> ಕಾಸರಗೋಡು, ತೋಟಗಾರಿಕೆ ವಿಶ್ವ ವಿದ್ಯಾನಿಲಯ ತಜ್ಞರು, ಸಿಡಿಬಿ ಅಧಿಕಾರಿಗಳು ಹಾಗೂ ಇಲಾಖಾ ಅಧಿಕಾರಿಗಳಿಂದ ತೆಂಗು ಬೆಳೆಯಲ್ಲಿ ಕಂಡು ಬರುವ ರೋಗ ಕೀಟಗಳಿಗೆ ಹಾನಿಗೊಳಗಾದ ತುಮಕೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ರೈತರಿಗೆ 85 ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು 12500 ರೈತರಿಗೆ ಅರಿವು ಮೂಡಿಸಿದ್ದಾರೆ.
> -ಚೆಲುವರಾಯಸ್ವಾಮಿ, ಕೃಷಿ ಸಚಿವ

ರಾಜ್ಯಪಾಲರದ್ದು ಆತಂಕಕಾರಿ ನಡೆ: ಪೊನ್ನಣ್ಣ

ವಿಧಾನಸಭೆ: ರಾಜ್ಯಪಾಲರು ಭಾಷಣ ಪೂರ್ಣ ಓದದೆ ಕೆಲ ಸಾಲಿನಲ್ಲೇ ಮುಗಿಸಿರುವುದು ಆತಂಕಕಾರಿ ನಡೆ. ವಿರೋಧಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳ ರಾಜ್ಯಪಾಲರು ಕೇಂದ್ರದವರು ಹೇಳಿದಂತೆ ನಡೆಯುತ್ತಿರುವ ಆತಂಕವಿದೆ. ರಾಜ್ಯಪಾಲರು ಜೈ ಸಂವಿಧಾನ ಕೂಡ ಹೇಳಿಲ್ಲ ಎಂದು ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯ ಪ್ರಸ್ತಾಪಿಸಿ ಮಾತನಾಡಿದ ಅವರು, ರಾಜ್ಯಪಾಲರು ಸಾಂವಿಧಾನಿಕ ಜವಾಬ್ದಾರಿ ನಿಭಾಯಿಸಿಲ್ಲ. ಜೈ ಸಂವಿಧಾನ್ ಕೂಡ ಹೇಳಿಲ್ಲ. ಭಾಷಣದಲ್ಲಿ ಉಲ್ಲೇಖಿಸಿದ್ದ ರಾಜ್ಯ ಸರಕಾರದ ಸಾಧನೆ, ಮುಂದಿನ ಹಾದಿ ಬಗ್ಗೆ ಓದಿಲ್ಲ.

ಅವರಿಗೆ ಯಾಕೆ ಅಷ್ಟು ಆತಂಕ? ಯಾಕೆ ಅಷ್ಟು ಭಯ? ಎಂದು ಪ್ರಶ್ನಿಸಿದರು.

ಅಲ್ಲದೆ, ಕೇಂದ್ರದ ತೆರಿಗೆ ಅನ್ಯಾಯ ಹಾಗೂ ರಾಜ್ಯ ಸರಕಾರದ ಗ್ಯಾರಂಟಿ ಸಾಧನೆ, ಅಭಿವೃದ್ಧಿ ಕುರಿತು ರಾಜ್ಯಪಾಲರು ಮಾತನಾಡಿಲ್ಲ ಎಂದ ಪೊನ್ನಣ್ಣ, ರಾಜ್ಯದ ಸಾಧನೆಗಳ ಬಗ್ಗೆ ಬಿಚ್ಚಿಟ್ಟರು.

ವಂದನಾ ನಿರ್ಣಯ ಪ್ರಸ್ತಾಪಿಸಿ ಮಾತನಾಡಿದ ಅವರು, ರಾಜ್ಯಪಾಲರು ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡದೆ ಕೆಲ ಸಾಲಿನಲ್ಲೇ ಮುಗಿಸಿ ಹೊರ ನಡೆದಿದ್ದಾರೆ. ಪಶ್ಚಿಮ ಬಂಗಾಳ, ತೆಲಂಗಾಣ, ಕೇರಳ, ತಮಿಳುನಾಡು, ಕರ್ನಾಟಕದಲ್ಲಿ ರಾಜ್ಯಪಾಲರ ಕರ್ತವ್ಯದ ರೀತಿ ಬಹಳ ಆತಂಕಕಾರಿ ಆಗಿದೆ. ರಾಷ್ಟ್ರಪತಿಗಳು ನೇಮಿಸಿದರೂ ಅದೊಂದು ಸಾಂವಿಧಾನಿಕ ಹುದ್ದೆ. ಸಂವಿಧಾನದ ಅಡಿಯಲ್ಲೇ ನಡೆಯಬೇಕು. ಆದರೆ ಇವರು ಕೇಂದ್ರದವರು ಹೇಳಿದಂತೆ ನಡೆಯುತ್ತಿದ್ದಾರೆ ಎಂಬ ಆತಂಕವಿದೆ. ಯಾರೂ ಸಂವಿಧಾನಕ್ಕಿಂತ ದೊಡ್ಡವರಿಲ್ಲ. ಯಾರೂ ಸಂವಿಧಾನದ ಜವಾಬ್ದಾರಿಗಳನ್ನು ಅಲ್ಲಗೆಳೆಯಬಾರದು. ರಾಜ್ಯಪಾಲರ ಹುದ್ದೆ ಸಾಂವಿಧಾನಿಕ ಹುದ್ದೆಯೇ ಹೊರತು ಅವರಿಗೆ ವಿವೇಚನಾಧಿ ಕಾರ ಇಲ್ಲ ಎಂದು ಸುಪ್ರೀಂಕೋರ್ಟ್ ಆದೇಶಗಳನ್ನು ಉಲ್ಲೇಖಿಸಿದರು.

ಕೇಂದ್ರದಿಂದ ಅನ್ಯಾಯ: ಕೇಂದ್ರದಿಂದ ರಾಜ್ಯಕ್ಕೆ ತೀವ್ರ ಅನ್ಯಾಯ ಆಗುತ್ತಿದೆ. ರಾಜ್ಯದಿಂದ ಕೇಂದ್ರಕ್ಕೆ 4.5 ಲಕ್ಷ ಕೋಟಿ ರು. ತೆರಿಗೆ ಸಂಗ್ರಹವಾಗುತ್ತದೆ. ಆದರೆ, ನಮಗೆ ಶೇ.13.75 ರಷ್ಟು ಅಂದರೆ 60,000 ಕೋಟಿರು. ಮಾತ್ರ ನೀಡುತ್ತಾರೆ. 15ನೇ ಹಣಕಾಸು ಆಯೋಗದಲ್ಲಿ ಅನ್ಯಾಯ ಆಗಿದೆ. 1.25 ಲಕ್ಷ ಕೋಟಿ ರು. ಗಳಷ್ಟು ಸಂಪನ್ಮೂಲ ರಾಜ್ಯಕ್ಕೆ ಸಿಗದೆ ಅನ್ಯಾಯವಾಗಿದೆ. ಭದ್ರಾ ಮೇಲ್ದಂಡೆ ಯೋಜನೆಗೆ ಘೋಷಿಸಿದ್ದ 5,300 ಕೋಟಿ ರು., ಬೆಂಗಳೂರಿನ ಕೆರೆ, ಪಿಆರ್‌ಆರ್‌ಗೆ ಘೋಷಿಸಿದ್ದ 5,000 ಕೋಟಿ ರು., ಹೀಗೆ ಸಾಲು-ಸಾಲು ಅನ್ಯಾಯ ಆಗಿದೆ. ಇದನ್ನೆಲ್ಲಾ ರಾಜ್ಯಪಾಲರು ಹೇಳಬೇಕಾಗಿತ್ತು ಎಂದು ಎ.ಎಸ್.ಪೊನ್ನಣ್ಣ ಆಗ್ರಹಿಸಿದರು.

ಮನರೇಗಾ ರದ್ದತಿ ಕಾನೂನು ಬಾಹಿರ: ರಾಜ್ಯದಲ್ಲಿ ಮನರೇಗಾ ಯೋಜನೆಯಿಂದ ಕಳೆದ 20 ವರ್ಷಗಳಲ್ಲಿ 76.89 ಲಕ್ಷ ಕಾಮಗಾರಿ ನಡೆಸಿದೆ. 61.03 ಸಾವಿರ ಕೋಟಿ ರು. ವೆಚ್ಚದಲ್ಲಿ 182.5 ಕೋಟಿ ಮಾನವ ದಿನಗಳಷ್ಟು ಉದ್ಯೋಗ ಸೃಷ್ಟಿ ಮಾಡಿದೆ. ಹೊಸ ವಿಬಿ ಗ್ರಾಮ್ ಜಿ ಕಾಯಿದೆ ಮೂಲಕ ಉದ್ಯೋಗ ಖಾತ್ರಿ ಕಿತ್ತುಕೊಳ್ಳಲಾಗಿದೆ. ಇನ್ನು ರಾಜ್ಯಕ್ಕೆ ಆರ್ಥಿಕ ಹೊರೆ ಬೀಳುವ ಯಾವುದೇ ಯೋಜನೆ ರಾಜ್ಯದೊಂದಿಗೆ ಚರ್ಚಿಸದೆ ಮಾಡಬಾರದು ಎಂದು ಸುಪ್ರೀಂಕೋರ್ಟ್ ಹೇಳಿದೆ. ಹೀಗಿದ್ದರೂ ರಾಜ್ಯದ ಶೇ.40 ರಷ್ಟು ಪಾಲು ಹೊಂದಿರುವ ಯೋಜನೆಯನ್ನು ಯಾವುದೇ ಚರ್ಚೆ ಇಲ್ಲದೆ ಬದಲಿಸಿದ್ದಾರೆ. ಇದರಿಂದ ರಾಜ್ಯಕ್ಕೆ ಪ್ರತಿ ವರ್ಷ 3,500 ಕೋಟಿ ರು. ಹೊರೆ ಆಗಲಿದೆ ಎಂದು ಪೊನ್ನಣ್ಣ ಹೇಳಿದರು. ಅಲ್ಲದೆ, ಗೃಹ ಜ್ಯೋತಿ, ಗೃಹಲಕ್ಷ್ಮೀ, ಅನ್ನಭಾಗ್ಯ, ಶಕ್ತಿ ಮತ್ತು ಯುವನಿಧಿ ಎಂಬ ಐದು ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೆ ತರಲಾಗಿದೆ. ಇವುಗಳಿಗೆ ಇದುವರೆಗೆ 1,16,706 ಕೋಟಿ ರು.ಗಳನ್ನು ವಿನಿಯೋಗಿಸಲಾಗಿದೆ ಎಂದು ಗ್ಯಾರಂಟಿ ಸಾಧನೆ ಬಿಚ್ಚಿಟ್ಟರು.

ಆಕ್ಷೇಪದಿಂದಾಗಿ ವಾಗ್ವಾದ

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಮಂಡಿಸಿ ಮಾತನಾಡಿದ ಎ. ಎಸ್. ಪೊನ್ನಣ್ಣ ರಾಜ್ಯಪಾಲರ ನಡೆ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಆಡಳಿತ ಹಾಗೂ ಪ್ರತಿಪಕ್ಷಗಳ ಸದಸ್ಯರ ನಡುವೆ ತೀವ್ರ ವಾಗ್ವಾದ ನಡೆಯಿತು. ಮಧ್ಯಪ್ರವೇಶಿಸಿದ ಸುರೇಶ್ ಕುಮಾರ್, ಉಭಯ ಸದನಗಳ ಸದಸ್ಯರ ಉದ್ದೇಶಿಸಿ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕಾಗಿ ಕೃತಜ್ಞತಾಪೂರ್ವಕವಾದ ವಂದನೆ ಸಮರ್ಪಿಸಲು ಅಪ್ಪಣೆ ಕೋರಿ ಎಂದು ಪೊನ್ನಣ್ಣ ಮಾತನಾಡುತ್ತಿದ್ದಾರೆ. ರಾಜ್ಯಪಾಲರು ಭಾಷಣ ದಯಪಾಲಿಸಿದ ಮೇಲೆ ಅದನ್ನು ರಾಜ್ಯಪಾಲರನ್ನು ವಿರೋಧಿಸುವುದ್ದೇಕೆ ಎಂದರು.

ಅಬಕಾರಿ ಸಚಿವ ತಿಮ್ಮಾಪುರ ರಾಜೀನಾಮೆಗೆ ಬಿಜೆಪಿ ಆಗ್ರಹ

ನ್ಯಾಯಾಧೀಶರಿಂದ ತನಿಖೆ ನಡೆಯಲಿ

ವಿಶ್ವವಾಣಿ ಸುದ್ದಿಮನೆ ವಿಧಾನ ಪರಿಷತ್

ಅಬಕಾರಿ ಇಲಾಖೆಯಲ್ಲಿನ ಅಕ್ರಮದ ನೈತಿಕ ಹೊಣೆ ಹೊತ್ತು ಸಚಿವ ತಿಮ್ಮಾಪುರ ರಾಜೀನಾಮೆ ಕೊಡಬೇಕು. ಹಾಲಿ ನ್ಯಾಯಾಧೀಶ ನೇತೃತ್ವದಲ್ಲಿ ಅಬಕಾರಿ ಇಲಾಖೆ ಭ್ರಷ್ಟಾಚಾರದ ಬಗ್ಗೆ ತನಿಖೆ ಆಗಬೇಕು ಅಂತ ಬಿಜೆಪಿ ಆಗ್ರಹಿಸಿದೆ.

ವಿಧಾನ ಪರಿಷತ್ ಕಲಾಪದಲ್ಲಿ ನಿಯಮ 330ರ ಅಡಿ ಬಿಜೆಪಿ ವಿಷಯ ಪ್ರಸ್ತಾಪ ಮಾಡಿತು. ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಅಬಕಾರಿ ಇಲಾಖೆಯಲ್ಲಿ ಅಕ್ರಮ ನಡೆಯುತ್ತಿದೆ. ಕೋಟಿ ಕೋಟಿಗಳಲ್ಲಿ ಅಕ್ರಮ ನಡೆಯುತ್ತಿದೆ. ಎಲ್ಲಾ ಮಾಧ್ಯಮಗಳಲ್ಲಿ ಚರ್ಚೆಯಾಗುತ್ತಿದೆ. ಅಸೋಸಿಯೇಷನ್ ಅವರು ಹಣ ಕೊಟ್ಟು ಕುಪಿತರಾಗಿ ಬೀದಿ ಬೀದಿಗಳಲ್ಲಿ ಮಾತಾಡುತ್ತಿದ್ದಾರೆ. ಅಧಿಕಾರಿಗಳು ಹಣ ಸಂಗ್ರಹ ಮಾಡುವಾಗ ಲೋಕಾಯುಕ್ತ ದಾಳಿಯಲ್ಲಿ ಸಿಕ್ಕಿಬಿದ್ದಿದ್ದಾರೆ. ಒಂದೂವರೆ ಕೋಟಿಗೆ ಪರವಾನಗಿ ಕೊಡುವಾಗ ಮೂರು ಅಧಿಕಾರಿಗಳು ಸಿಕ್ಕಿಬಿದ್ದರು. ಸರಕಾರದ ಭ್ರಷ್ಟಾಚಾರಕ್ಕೆ ಇದು ಸಾಕ್ಷಿ ಎಂದು ಕಿಡಿಕಾರಿದರು.

ಈಗಾಗಲೇ ಅಕ್ರಮದ ಬಗ್ಗೆ ಲೋಕಾಯುಕ್ತದಲ್ಲಿ ದೂರು ದಾಖಲಾಗಿದೆ. ಸಚಿವರು ನನ್ನ ಮಗನನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಅಂತ ಹೇಳುತ್ತಾರೆ. ಹಾಗಾದರೆ ಮಂತ್ರಿಗಳು ಮಗನ ಕೈಗೆ ಹಣ ಕೊಡಿ ಎಂದು ಹೇಳಿದ್ದರಾ? ಲಕ್ಷ್ಮೀನಾರಾಯಣ ಎಂಬುವವರು ಲೋಕಾಯುಕ್ತಗೆ ದೂರು ಕೊಟ್ಟರು. ಗುರುಸ್ವಾಮಿ ಎಂಬ ಅಸೋಸಿಯೇಷನ್ ಅಧ್ಯಕ್ಷ ಮೇಲಿಂದ ಕೆಳಗಿನವರೆಗೂ ಲಂಚ ಕೊಡಬೇಕು ಎಂದು ಮಾತಾಡಿದ್ದಾರೆ. ಅಬಕಾರಿ ಡಿಸಿ, ಎಸ್ಪಿ ಬಲೆಗೆ ಬಿದ್ದಿದ್ದಾರೆ. ಲಿಕ್ಕರ್ ಲೈಸೆನ್ಸ್ ಕೊಡುತ್ತಿಲ್ಲ ಎಂದು ಸರಕಾರ ಹೇಳಿದರು. 2 ಸಾವಿರ ಲೈಸೆನ್ಸ್ ಅಕ್ರಮವಾಗಿ ಕೊಡಲಾಗಿದೆ. 50 ಲಕ್ಷದಿಂದ ಕೋಟಿವರೆಗೂ ಲಂಚ ಕೊಡಬೇಕು ಎಂದು ಅಧ್ಯಕ್ಷರು ಹೇಳಿದ್ದಾರೆ. ತಿಂಗಳ 10ರಂದು ಹಣ ಕೊಡದೇ ಹೋದರೆ ಕಿರುಕುಳ ಶುರು ಮಾಡುತ್ತಾರೆ ಎಂದು ಆರೋಪಿಸಿದರು.

ಸಚಿವರು ರಾಜೀನಾಮೆ ಕೊಡುವ ತನಕ ಹೋರಾಟ

ಬಿಜೆಪಿ ಸದಸ್ಯ ರವಿಕುಮಾರ್ ಮಾತನಾಡಿ, ಮಂತ್ರಿಗಳ ಆಶ್ರಯ ಇಲ್ಲದೆ ಇದು ನಡೆಯಲು ಸಾಧ್ಯನಾ? ಮಂತ್ರಿಯ ಬೆಂಬಲ, ಸರಕಾರದ ಬೆಂಬಲ ಇಲ್ಲದೆ ಇಷ್ಟು ಅಕ್ರಮ ಆಗುವುದಿಲ್ಲ. ಆಡಿಯೋ ರೆಕಾರ್ಡಿಂಗ್ ಇದೆ. ಮಾಧ್ಯಮಗಳಲ್ಲಿ ಬಂದಿದೆ. ಹಿಂದೆ ಈಶ್ವರಪ್ಪ ಮೇಲೆ ಆರೋಪ ಬಂದಾಗ ರಾಜೀನಾಮೆ ಕೊಟ್ಟರು. ಸಿದ್ದರಾಮಯ್ಯ ಅವರು ಅವತ್ತು ಮೊದಲು ರಾಜೀನಾಮೆ ಕೊಡಿ ಅಂದರು. ಅಧಿಕಾರಿಗಳು ವರ್ಗಾವಣೆ ಆಗಲು ಲಂಚ ಕೊಡಬೇಕು. ಬಹಿರಂಗವಾಗಿಯೇ ಭ್ರಷ್ಟಾಚಾರ ನಡೆಯುತ್ತಿದೆ. ಈ ಮಂತ್ರಿ ಬದಲಾವಣೆ ಮಾಡಿ ಎಂದು ಅಸೋಸಿಯೇಷನ್ ಅವರು ಸಿಎಂಗೆ ಮನವಿ ಮಾಡಿದ್ದಾರೆ. ಅಬಕಾರಿ ಅಕ್ರಮದ ಬಗ್ಗೆ ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ಆಗಬೇಕು. ನೈತಿಕ ಹೊಣೆ ಹೊತ್ತು ತಿಮ್ಮಾಪುರ್ ರಾಜೀನಾಮೆ ಕೊಡಬೇಕು. ಸಿಎಂ ಅವರು ಇದಕ್ಕೆ ಉತ್ತರ ಕೊಡಬೇಕು. ಸಚಿವರು ರಾಜೀನಾಮೆ ಕೊಡುವ ತನಕ ನಾವು ಹೋರಾಟ ಬಿಡುವುದಿಲ್ಲ ಎಂದು ಎಚ್ಚರಿಕೆ ಕೊಟ್ಟರು.

ಕಾಂಗ್ರೆಸ್ ಮುಖಂಡ ರಾಜೀವ್ ಗೌಡನನ್ನು ಸರಕಾರ ರಕ್ಷಣೆ ಮಾಡಲ್ಲ

ಅಧಿಕಾರಿಗೆ ಧಮ್ಕಿ: ಕಾನೂನಿನಂತೆ ಕ್ರಮ

ವಿಶ್ವವಾಣಿ ಸುದ್ದಿಮನೆ ವಿಧಾನ ಪರಿಷತ್

ಶಿಡ್ಲಘಟ್ಟದಲ್ಲಿ ಪೌರಾಯುಕ್ತೆಗೆ ಧಮ್ಕಿ ಹಾಕಿದ ಪ್ರಕರಣದಲ್ಲಿ ಕಾಂಗ್ರೆಸ್ ಮುಖಂಡ ರಾಜೀವ್ ಗೌಡನನ್ನು ಸರಕಾರ ರಕ್ಷಣೆ ಮಾಡಲ್ಲ. ಕಾನೂನು ಪ್ರಕಾರ ಶಿಕ್ಷೆ ಆಗುತ್ತದೆ ಎಂದು ಸಚಿವ ಭೈರತಿ ಸುರೇಶ್ ತಿಳಿಸಿದರು.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಸದಸ್ಯೆ ಭಾರತಿ ಶೆಟ್ಟಿ ಪ್ರಶ್ನೆ ಕೇಳಿದರು. ಪೌರಾಡಳಿತ ಇಲಾಖೆಯಲ್ಲಿ ಬ್ಯಾನರ್ ಹಾಕಲು ನಿಯಮ ಇದೆ. ಅನುಮತಿ ಪಡೆದು ಹಾಕಬಹುದು ಅಂತಿದೆ. ಶಿಡ್ಲಘಟ್ಟದಲ್ಲಿ ರಾಜೀವ್ ಗೌಡ ಎಂಬುವವರು ಮಹಿಳಾ ಅಧಿಕಾರಿಯನ್ನು ನಿಂದಿಸಿದ್ದಾರೆ. ಫೋನ್‌ನಲ್ಲಿ ಕೆಟ್ಟದಾಗಿ ಮಾತಾಡಿದ್ದಾರೆ. ಆ ಅಧಿಕಾರಿ ಕಣ್ಣೀರು ಹಾಕಿದ್ದಾರೆ. ಮಹಿಳಾ ಅಧಿಕಾರಿ ವೈಯಕ್ತಿಕ ಕೇಸ್ ಹಾಕಿದ್ದಾರೆ. ಇದಕ್ಕೆ ರಾಜೀವ್ ಗೌಡ ಧಮ್ಕಿ ಹಾಕಿದ್ದಾರೆ. ಪೌರಾಡಳಿತ ಇಲಾಖೆಯಿಂದ ರಾಜೀವ್ ಗೌಡ ಮೇಲೆ ಕೇಸ್ ಹಾಕಬೇಕು. ರಾಜೀವ್ ಗೌಡ ಹಿಡಿಯಲು 3 ತಂಡ ಪೊಲೀಸರ ನೇಮಕ ಅಂತೆ. ಇಲಾಖೆಯಿಂದ ಕೇಸ್ ಹಾಕಿದರೆ ಸ್ಟ್ರಾಂಗ್ ಆಗುತ್ತಿತ್ತು. ಸೋಮವಾರ (ಜ.26) ರಾತ್ರಿ ಬಂಧನ ಆಗಿದೆ. ಮಹಿಳೆಯರಿಗೆ ಸಾರ್ವಜನಿಕ ಕ್ಷೇತ್ರದಲ್ಲಿ ರಕ್ಷಣೆ ಇಲ್ಲ. ಮಹಿಳಾ ಅಧಿಕಾರಿಗೆ ರಕ್ಷಣೆ ಇಲ್ಲ. ಸರಿಯಾಗಿ ಪೊಲೀಸರು ಸರಿಯಾಗಿ ಪ್ರಕರಣ ದಾಖಲಿಸಿಲ್ಲ. ಸರಕಾರದ ಮುಖ್ಯ ಕಾರ್ಯದರ್ಶಿಗಳು ಮಹಿಳೆ ಆದರೂ ನ್ಯಾಯ ಸಿಗುತ್ತಿಲ್ಲ ಈ ಬಗ್ಗೆ ಕ್ರಮ ಆಗಬೇಕು ಎಂದರು.

ಇದಕ್ಕೆ ಸಚಿವ ಭೈರತಿ ಸುರೇಶ್ ಉತ್ತರ ನೀಡಿ, ಈ ಘಟನೆ ಆದ ಕೂಡಲೇ ಎಸ್ಪಿಗೆ ಸೂಚನೆ ಕೊಡಲಾಗಿದೆ. ಆಕೆಯೇ ದೂರು ಕೊಟ್ಟಿದ್ದಾರೆ. ಅದರ ಆಧಾರದಲ್ಲಿ ಕ್ರಮ ಆಗಿದೆ. ರಾಜೀವ್ ಗೌಡನನ್ನು ಬಂಧನ ಮಾಡಲಾಗಿದೆ. ಮಹಿಳಾ ಅಧಿಕಾರಿ ಸಹೋದರಿ ಸಮಾನ. ಎಸ್ಪಿ 3 ತಂಡ ಮಾಡಿ, ಹೊರರಾಜ್ಯದಲ್ಲಿ ಬಂಧಿಸಿದ್ದಾರೆ. ಕಾನೂನು ಅಡಿ ಎಲ್ಲಾ ಸೆಕ್ಷನ್ ಹಾಕಲಾಗಿದೆ. ಈಗ ಆತನ ಬಂಧನ ಮಾಡಲಾಗಿದೆ. ಪಕ್ಷಾತೀತವಾಗಿ ಶಿಕ್ಷೆ ಕೊಡುತ್ತೇವೆ. ಯಾರನ್ನು ಸರಕಾರ ರಕ್ಷಣೆ ಮಾಡಲ್ಲ ಕಾನೂನು ಕ್ರಮ ಆಗುತ್ತದೆ ಎಂದು ಹೇಳಿದರು.

> ಪ್ರಕರಣ ನ್ಯಾಯಾಲಯದಲ್ಲಿದೆ. ತಪ್ಪು ಸರಿಯನ್ನು ನ್ಯಾಯಾಲಯ ನಿರ್ಧಾರ ಮಾಡಲಿದೆ. ಸಚಿವರನ್ನು ಭೇಟಿ ಮಾಡಿದ್ದೇನೆ, ಅವರು ಧೈರ್ಯವಾಗಿರಿ ಎಂದು ಹೇಳಿದ್ದಾರೆ. ಪ್ರಕರಣದಲ್ಲಿ ಆರೋಪಿಯನ್ನು ಬಂಧಿಸಿದ ಪೊಲೀಸರಿಗೆ ಅಭಿನಂದನೆ ಸಲ್ಲಿಸುತ್ತೇನೆ.
> -ಅಮೃತಾಗೌಡ, ಪೌರಾಯುಕ್ತೆ, ಶಿಡ್ಲಘಟ್ಟ

ಸಚಿವರಿಗೆ ವಿವರಣೆ ನೀಡಿದ ಅಮೃತಾಗೌಡ

ಇನ್ನು ಇದೇ ವಿಷಯಕ್ಕೆ ಸಂಬಂಧಿಸಿದಂತೆ ಪೌರಾಯುಕ್ತೆ ಅಮೃತಾ ಗೌಡ ಅವರು, ಪೌರಾಡಳಿತ ಸಚಿವ ರಹೀಂಖಾನ್ ಅವರನ್ನು ಭೇಟಿ ಮಾಡಿ ಘಟನೆ ಕುರಿತು ಮಾಹಿತಿ ನೀಡಿದ್ದಾರೆ. ವಿಕಾಸಸೌಧದಲ್ಲಿರುವ ಸಚಿವರ ಕಚೇರಿಗೆ ಅಮೃತಗೌಡ ಅವರು ಭೇಟಿ ಮಾಡಿದ್ದಾರೆ. ಅತ್ತ ರಾಜೀವ್ ಗೌಡರನ್ನು ಪೊಲೀಸರು ಬಂಧಿಸಿದ ಬೆನ್ನಲ್ಲೆ ಪೌರಾಯುಕ್ತೆ ಸಚಿವರೊಂದಿಗೆ 20 ನಿಮಿಷಗಳ ಕಾಲ ಮಾತುಕತೆ ನಡೆಸಿದ್ದಾರೆ. ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅಮೃತಾಗೌಡ ಅವರಿಗೆ ಅವಾಚ್ಯ ಶಬ್ದಗಳನ್ನು ಬಳಸಿ, ಧಮ್ಕಿ ಹಾಕಿದ್ದರು. ತದನಂತರವೂ ಬೆದರಿಕೆಯ ಕರೆಗಳು ಬರುತ್ತಿದ್ದವು ಎಂದು ಹೇಳಲಾಗಿದೆ. ಹೀಗಾಗಿ ಸಚಿವರನ್ನು ಭೇಟಿ ಮಾಡಿದ್ದಾರೆ.

ಹಿಪ್ಪರಗಿ ಬ್ಯಾರೇಜ್‌ನಿಂದ ನೀರು ಪಡೆಯಲು ಕ್ರಮ

ವಿಧಾನಸಭೆ: ಹಿಪ್ಪರಗಿ ಬ್ಯಾರೇಜ್‌ಗೆ ಅಗತ್ಯವಿರುವಷ್ಟು ನೀರು ಪಡೆಯಲು ಕ್ರಮವಹಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಭರವಸೆ ನೀಡಿದರು.

ಪ್ರಶ್ನೋತ್ತರ ಕಲಾಪದಲ್ಲಿ ಸಿದ್ದು ಸವದಿ ಪ್ರಶ್ನೆಗೆ ಉತ್ತರಿಸಿದ ಅವರು, ಹಿಪ್ಪರಗಿ ಬ್ಯಾರೇಜ್‌ನಲ್ಲಿ ಲಭ್ಯವಾಗುವ ನೀರಿನ ಸಂಗ್ರಹಣೆಯ ಪ್ರಮಾಣದಲ್ಲಿ ಸಮರ್ಪಕ ಹಾಗೂ ನಿಯಂತ್ರಿತ ಬಳಕೆ ಸಾಧಿಸಿ, ನೀರು ಪೋಲಾಗುವುದನ್ನು ತಡೆಗಟ್ಟಲು ಕ್ರಮ ವಹಿಸಿ ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೆ ಹಾಗೂ ರೈತರ ಬೆಳೆ ಸಂರಕ್ಷಿಸಲು ನೀರನ್ನು ಪೂರೈಸಲಾಗುವುದು. ಹಿಪ್ಪರಗಿ ಬ್ಯಾರೇಜಿನಲ್ಲಿ ಪ್ರಸ್ತುತ ಒಳ ಹರಿವಯ ಸುಮಾರು 450 ಕ್ಯುಸೆಕ್‌ನಷ್ಟಿದ್ದು, ಇದರಿಂದ ಸಹ ಬ್ಯಾರೇಜಿನಲ್ಲಿ ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಮಾಣದ ನೀರಿನ ಸಂಗ್ರಹಣೆ ಸಾಧ್ಯವಾಗಲಿದೆ ಎಂದರು.

ಮುಂಬರುವ ಬೇಸಿಗೆಯಲ್ಲಿ ಕುಡಿಯುವ ನೀರಿನ ಕೊರತೆ ಉಂಟಾದಲ್ಲಿ ಮಹಾರಾಷ್ಟ್ರದ ಕೊಯ್ನಾ ಜಲಾಶಯದಿಂದ ಕೃಷ್ಣ ನದಿ ಪಾತ್ರದಲ್ಲಿ ಹಿಪ್ಪರಗಿ ಬ್ಯಾರೇಜ್‌ಗೆ ಅವಶ್ಯವಿರುವ ನೀರನ್ನು ಪಡೆಯಲು ಸಹ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

> ದೇವದುರ್ಗ ಶಾಸಕಿ ಕರೆಮ್ಮ ಅವರಿಗೆ ರಕ್ಷಣೆ ಕೊಡುವುದು ಸರಕಾರದ ಕರ್ತವ್ಯವಾಗಿದೆ. ಆ ನಿಟ್ಟಿನಲ್ಲಿ ಸರಕಾರ ಕಾನೂನಾತ್ಮಕ ಕೆಲಸ ಮಾಡುತ್ತಿದೆ. ಇದು ಸಾಮಾನ್ಯ ವಿಷಯವಲ್ಲ ಕೇವಲ ದೇವದುರ್ಗ ಶಾಸಕರಿಗೆ ಮಾತ್ರವಲ್ಲದೇ ಎಲ್ಲಾ ಶಾಸಕರಿಗೆ ರಕ್ಷಣೆ ಕೊಡುವುದು ಸರಕಾರದ ಜವಬ್ದಾರಿಯಾಗಿರುತ್ತದೆ. ಈ ಬಗ್ಗೆ ವಿಶೇಷವಾಗಿ ಚರ್ಚಿಸಿ ಯಾವುದೇ ಮುಲಾಜಿಲ್ಲದೇ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ವಹಿಸಲಾಗುವುದು.
> - ಡಾ.ಜಿ.ಪರಮೇಶ್ವರ, ಗೃಹ ಸಚಿವ

ಎರಡು ವರ್ಷದಲ್ಲಿ ಕೆಐಎಗೆ ಮೆಟ್ರೋ

ವಿಧಾನಸಭೆ: ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ಮೆಟ್ರೋ ರೈಲು ಸಂಚಾರ 2027ರ ಅಂತ್ಯಕ್ಕೆ ಆರಂಭವಾಗಲಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಧೀರಜ್ ಮುನಿರಾಜು ಪ್ರಶ್ನೆಗೆ ಉತ್ತರಿಸಿದ ಅವರು, ದೊಡ್ಡಬಳ್ಳಾಪುರ ನಗರಕ್ಕೆ ಮೆಟ್ರೋ ಯೋಜನೆ ವಿಸ್ತರಿಸುವ ಪ್ರಸ್ತಾವನೆಯಿಲ್ಲ. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮೆಟ್ರೋ ರೈಲು ಒದಗಿಸುವ ಕಾಮಗಾರಿಗಳು ಪ್ರಗತಿಯಲ್ಲಿವೆ. ಅಲ್ಲಿಂದ ದೊಡ್ಡಬಳ್ಳಾಪುರದಲ್ಲಿ ಮೆಟ್ರೋ ವಿಸ್ತರಿಸಬೇಕು ಎಂಬ ಪ್ರಸ್ತಾವನೆ ಸದ್ಯಕ್ಕೆ ಇಲ್ಲ. ಆದರೆ ಭವಿಷ್ಯದ ಮೆಟ್ರೋ ರೈಲು ಒದಗಿಸುವ ಸಲುವಾಗಿ ಯಲಹಂಕ, ರಾಜನಕುಂಟೆ, ದೊಡ್ಡಬಳ್ಳಾಪುರ ಸೇರಿದಂತೆ ಸುಮಾರು 26 ಕಿ.ಮೀ.ಗಳ ಮೆಟ್ರೋ ಕಾರಿಡಾರ್‌ಗಳನ್ನು ತಾತ್ಕಾಲಿಕ ಮಾಸ್ಟರ್ ಪ್ಲಾನ್‌ನಲ್ಲಿ ಗುರುತಿಸಲಾಗಿದೆ. ಸಮಗ್ರ ಚಲನಶೀಲತೆ ಯೋಜನೆಯಲ್ಲೂ ದೊಡ್ಡಬಳ್ಳಾಪುರಕ್ಕೆ ಮೆಟ್ರೋ ಸಂಪರ್ಕಿಸುವ ಪ್ರಸ್ತಾವ ಇರುವುದರಿಂದ ಸಮಗ್ರ ಚಲನಶೀಲತೆ ಯೋಜನೆಯ ಪರಿಷ್ಕರಣೆಯಲ್ಲಿ ದೊಡ್ಡಬಳ್ಳಾಪುರದಲ್ಲಿ ಮೆಟ್ರೋ ಒದಗಿಸುವ ವಿಚಾರವನ್ನು ಪರಿಗಣಿಸುವಂತೆ ತಜ್ಞರನ್ನು ಕೋರಲಾಗುವುದು. ಬೆಂಗಳೂರು ಮೆಟ್ರೋ ಯೋಜನೆಯ ಹಂತ 2ಎ ನಲ್ಲಿ ಸಿಲ್ಕ್‌ಬೋರ್ಡ್‌ನಿಂದ ಕೆ.ಆರ್.ಪುರ ಹಾಗೂ ಹಂತ 2ಬಿ ಕೆ.ಆರ್‌ಪುರದಿಂದ ಹೆಬ್ಬಾಳ, ಯಲಹಂಕ, ವಿಮಾನ ನಿಲ್ದಾಣದವರೆಗೆ ಮೆಟ್ರೋ ಕಾಮಗಾರಿಗಳು ನಡೆದಿದ್ದು 2027ರ ಅಂತ್ಯಕ್ಕೆ ಪೂರ್ಣಗೊಳ್ಳಲಿವೆ ಎಂದು ಅವರು ಹೇಳಿದರು.

ಅರ್ಕಾವತಿ ಭೂಸಂತ್ರಸ್ತರಿಗೆ ಪರಿಹಾರಕ್ಕೆ ಶೀಘ್ರ ಸಭೆ

ವಿಧಾನಸಭೆ: ಅರ್ಕಾವತಿ ಬಡಾವಣೆ ಭೂಸಂತ್ರಸ್ತರಿಗೆ ಪರಿಹಾರ ಒದಗಿಸಲು ಶೀಘ್ರದಲ್ಲೇ ಸಭೆ ಕರೆದು ಚರ್ಚೆ ಮಾಡಲಾಗುವುದು ಎಂದು ಡಿಸಿಎಂ

ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರು. ಬಿಜೆಪಿ ಶಾಸಕ ಮುನಿರಾಜು ಅವರು ಅರ್ಕಾವತಿ ಬಡಾವಣೆ ನಿರ್ಮಾಣವಾಗಿ 20 ವರ್ಷವಾಗಿದ್ದರೂ ನಿವೇಶನ ಸ್ವಾಧೀನ, ರೈತರಿಗೆ ಪರಿಹಾರ ನೀಡದಿರುವ ಬಗ್ಗೆ ಕೇಳಿದಾಗ, ಅರ್ಕಾವತಿ ಬಡಾವಣೆ ಎಸ್.ಎಂ ಕೃಷ್ಣ ಅವರ ಕಾಲದಲ್ಲೇ ಆರಂಭವಾಯಿತು. ಈ ಮಧ್ಯೆ ನಿವೇಶನಕ್ಕೆ ಅನೇಕರು ಅರ್ಜಿ ಹಾಕಿಕೊಂಡು, ಅವರಿಗೆ ನಿವೇಶನ ಮಂಜೂರಾಯಿತು. ಭೂಸಂತ್ರಸ್ತರಿಗೆ ಅದೇ ಜಾಗದಲ್ಲಿ ಪರಿಹಾರವಾಗಿ ಜಾಗ ನೀಡಲು ಸಾಧ್ಯವಾಗಲಿಲ್ಲ. ಹೀಗಾಗಿ ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿ, ಮುಂದೆ ಯಾವ ರೀತಿ ಮಾಡಬೇಕು ಎಂದು ನಿರ್ಧರಿಸಲು ಕೇಶವ ನಾರಾಯಣ ಸಮಿತಿ ನೇಮಿಸಿದೆ. ಈ ಸಮಿತಿ ಪರಿಶೀಲನೆ ಮಾಡುತ್ತಿದೆ. ಭೂಸಂತ್ರಸ್ತ ರೈತರಿಗೆ ಪರಿಹಾರವಾಗಿ ಭೂಮಿ ನೀಡಬೇಕು ಎಂಬುದಕ್ಕೆ ನಾನು ಬದ್ಧವಾಗಿದ್ದೇನೆ. ಈ ವಿಚಾರವಾಗಿ ಸಧ್ಯದಲ್ಲೇ ಸಭೆ ಕರೆಯಲಿದ್ದು, ಸಮಿತಿಯವರನ್ನು ಕರೆದು ಆದಷ್ಟು ಬೇಗ ತೀರ್ಮಾನ ಮಾಡುವಂತೆ ಮನವಿ ಮಾಡಲಾಗುವುದು. ಈ ವಿಚಾರವಾಗಿ ಮುಂದಿನ ದಿನಗಳಲ್ಲಿ ಸ್ಪಷ್ಟ ಉತ್ತರ ನೀಡಲಾಗುವುದು ಎಂದು ಭರವಸೆ ನೀಡಿದರು.

ಫಾಸ್ಟ್‌ಟ್ಯಾಗ್ ಸೌಲಭ್ಯ ಕಲ್ಪಿಸಲು ಸಹಕಾರ: ಕಾಂಗ್ರೆಸ್ ಶಾಸಕರಾದ ಸುಬ್ಬಾರೆಡ್ಡಿ ಅವರು ರಾಜ್ಯದ ಟೋಲ್‌ಗಳಲ್ಲಿ ಜನರಿಗೆ ಕಿರಿಕಿರಿ ಮಾಡುತ್ತಿರುವ ಬಗ್ಗೆ ವಿಷಯ ಪ್ರಸ್ತಾಪಿಸಿದ್ದರೆ, ಮೈಸೂರು ಬೆಂಗಳೂರು ರಸ್ತೆಯ ಟೋಲ್ ಬಳಿ ಈ ರೀತಿ ಕಿರಿಕಿರಿ ಮಾಡಿದವರಿಗೆ ದಂಡ ವಿಧಿಸಲಾಗಿದೆ. ಹುನಗುಂದದಲ್ಲೂ ನೋಟಿಸ್ ನೀಡಿ 10 ಲಕ್ಷ ದಂಡ ವಿಧಿಸಲಾಗಿದೆ. ಇದಕ್ಕೆ ನಾವು ಶಾಶ್ವತ ಪರಿಹಾರ ಕಂಡುಕೊಳ್ಳಬೇಕು. ಇನ್ನು ಸ್ಪೀಕರ್ ಕಡೆಯಿಂದ ಶಾಸಕರು, ಎಂಎಲ್ಸಿಗಳು ಹಾಗೂ ಸಂಸದರಿಗೆ ಪಾಸ್ ಹಾಗೂ ಫಾಸ್ಟ್ಯಾಗ್ ಒದಗಿಸುವ ವ್ಯವಸ್ಥೆ ಆಗಬೇಕು. ಸರಕಾರದಿಂದ ಏನು ಸಹಕಾರ ನೀಡಬೇಕೋ ನಾವು ನೀಡುತ್ತೇವೆ. ನಾವು ಶಾಸಕರನ್ನು ರಕ್ಷಣೆ ಮಾಡಬೇಕು ಎಂದು ತಿಳಿಸಿದರು.

ವಿಶ್ವವಾಣಿ

ಸಂಪಾದಕೀಯ

ಮಳೆ ನಿಂತುಹೋದ ಮೇಲೆ...

ಸಮಾಜದ ವಿವಿಧ ಕ್ಷೇತ್ರಗಳ ಸಾಧಕರಿಗೆ ಆಳುಗ ವಲಯದಿಂದ ನೀಡಲ್ಪಡುವ ಪ್ರಶಸ್ತಿಗಳು ವಿವಾದಕ್ಕೆ ಈಡಾಗುವುದು ಸಂಪ್ರದಾಯ ಎಂಬಂತೆ ಆಗಿಬಿಟ್ಟಿದೆ. ಕೇಂದ್ರ ಸರಕಾರವು ಈ ಬಾರಿ ಸಾಧಕರಿಗೆ ನೀಡಿರುವ 'ಪದ್ಮ' ಪುರಸ್ಕಾರಗಳೂ ಇದಕ್ಕೆ ಹೊರತಾಗಿಲ್ಲ. ಕಾಂಗ್ರೆಸ್ ಪಕ್ಷದಿಂದ ಹೊಮ್ಮಿರುವ 'ಮುಂಬರುವ ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಈ ಪ್ರಶಸ್ತಿಗಳನ್ನು ನೀಡಲಾಗಿದೆ; ರಾಷ್ಟ್ರೀಯ ಗೌರವಗಳನ್ನು ಚುನಾವಣಾ ಸಾಧನವನ್ನಾಗಿ ಬಿಜೆಪಿ ಬಳಸಿಕೊಳ್ಳುತ್ತಿದೆ' ಎಂಬ ಟೀಕೆ ಇದಕ್ಕೆ ಪುಷ್ಟಿ ನೀಡುತ್ತದೆ. ಈ ವಿದ್ಯಮಾನಕ್ಕೆ 'ರಾಜಕೀಯದ ಲೇಪ' ಮೆತ್ತುವ ಅಗತ್ಯವೇನೂ ಇಲ್ಲ ಎನಿಸುತ್ತದೆ. ಏಕೆಂದರೆ, ಕಾಂಗ್ರೆಸ್ ಆರೋಪಿಸಿರುವಂತೆ ಒಂದೊಮ್ಮೆ ಇದು 'ಚುನಾವಣಾ ಉದ್ದೇಶವಿಟ್ಟುಕೊಂಡ' ಪ್ರಶಸ್ತಿ ಘೋಷಣೆ ಆಗಿದ್ದರೂ, ಈ ತರಹದ ಕಸರತ್ತುಗಳು ಹಿಂದೆ ನಡೆದೇ ಇಲ್ಲ ಮತ್ತು ಮುಂದೆಯೂ ನಡೆಯುವುದಿಲ್ಲ ಎಂದೇನಲ್ಲ. ಹಾಗೆ ನೋಡಿದರೆ, ಕೇಂದ್ರ/ ರಾಜ್ಯ ಸರಕಾರಗಳ ವತಿಯಿಂದ ಹೀಗೆ ನೀಡಲ್ಪಡುವ ಪ್ರಶಸ್ತಿಗಳ ಕುರಿತು ವ್ಯಾಖ್ಯಾನಿಸದಿರುವುದೇ ಸೂಕ್ತ. ಇಂಥ ಕಸರತ್ತುಗಳ ಹಿಂದೆ ಏನೇ ಲೆಕ್ಕಾಚಾರ ಅಡಗಿರಲಿ ಮತ್ತು ಅಪಾತ್ರರು ಅಂಥ ಗೌರವಕ್ಕೆ ಪಾತ್ರರಾಗಿರಲಿ ಅದನ್ನೇ ಗಮನದಲ್ಲಿಟ್ಟುಕೊಂಡು ಟೀಕಿಸುವುದರಿಂದ, ನಿಜಕ್ಕೂ ಪ್ರಶಸ್ತಿಗೆ ಅರ್ಹರಾಗಿದ್ದು ಅದನ್ನು ಸ್ವೀಕರಿಸಿದವರಿಗೆ ಕಸಿವಿಸಿ ಆಗುವ ಸಾಧ್ಯತೆ ಇರುತ್ತದೆ. ಹಾಗೆಂದ ಮಾತ್ರಕ್ಕೆ, ಅತಿರೇಕದ ಅನ್ಯಾಯವಾಗಿದ್ದರೆ ನೋಡಿಕೊಂಡು ಸುಮ್ಮನಿರಬೇಕು ಎಂದೇನಲ್ಲ; ಆದರೆ 'ಮಳೆ ನಿಂತು ಹೋದ ಮೇಲೆ, ಮರದಡಿಯಿಂದ ಹೀಗೆ ಹನಿ ಉದುರುವುದು ಬೇಡ' ಎಂಬುದಷ್ಟೇ ಇಲ್ಲಿನ ಆಶಯ.

ಸೊಂಪಾದಕೀಯ

ಸ್ಟಾರ್ಟ್ ಆ್ಯಂಡ್ ಎಂಡ್

ಯಾವಾಗ ಕೆಫೆ ಕಾಫಿ ಡೇ ಶುರು ಆಯ್ತೋ ಆಗಿನಿಂದ ಎಲ್ಲರಿಗೂ ಗಂಟೆಗಟ್ಟಲೇ ಕೂತು ಮಾತಾಡೋಕೆ ಅಂತ ಸ್ಪೇಸ್ ಸಿಕ್ಕಂತಾಯ್ತು. ಮಾಮೂಲಿ ಕೆಫೆಗಳಲ್ಲಿ ಕಾಫಿ ಕುಡಿದು 5 ನಿಮಿಷ ಹರಟೆ ಹೊಡೆದು ಎದ್ದು ಬರುತ್ತಿದ್ದವರಿಗೆ ಕೆಫೆ ಕಾಫಿ ಡೇ ವರದಾನವಾಗಿತ್ತು. ಅಲ್ಲಿ ಕೇವಲ ಒಂದು ಕಾಫಿ ಆರ್ಡರ್ ಮಾಡಿ ಗಂಟೆಗಟ್ಟಲೇ ಕೂತು ಮಾತಾಡುವವರ ಸಂಖ್ಯೆ ಹೆಚ್ಚಾಗಿತ್ತು. ಇದೇ ದಾರಿಯಲ್ಲೇ ಇನ್ನೂ ಅನೇಕ ಕೆಫೆಗಳು ಇದಕ್ಕೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದ್ದವು. ಹಾಗಾಗಿ ಇದು ಅನೇಕರಿಗೆ ಕಾರ್ಯಸ್ಥಳವಾಗಿಯೂ ಪರಿವರ್ತನೆ ಆಗಿ, ಅಲ್ಲೇ ಝುಂಡಾ ಊರಿ ಕಾಫಿ ಕುಡಿದು ಗಂಟೆಗಟ್ಟಲೇ ಆಫೀಸ್ ಕೆಲಸ, ಪರ್ಸನಲ್ ಕೆಲಸ ಮಾಡೋದು ಕಾಮನ್ ಆಗಿತ್ತು. ಯಾಕಂದ್ರೆ ಇಲ್ಲಿ ಇಂಟರ್‌ನೆಟ್‌ಗಾಗಿ 'ವೈ-ಫೈ' ಕೂಡಾ ಸಿಗುತ್ತಿತ್ತು. ಈ ಸಂಪ್ರದಾಯ ಹಲವಾರು ವರ್ಷಗಳವರೆಗೆ ನಡೆದುಕೊಂಡು ಬಂತು ಮತ್ತು ಈಗಲೂ ಚಾಲ್ತಿಯಲ್ಲಿದೆ. ಆದರೆ ಈಗ ಇದು ಮಿತಿಮೀರುವ ಲಕ್ಷಣ ಕಂಡುಬರುತ್ತಿದೆ. ಭಾರತೀಯರೇ ಹಾಗೆ, ಪುಗಸಟ್ಟೆ ಸಿಗುತ್ತೆ ಅಂದ್ರೆ ಎಲ್ಲ ಬೇಕು ಅಂತಾರೆ. ಈ ಕಾರಣಕ್ಕೆ ಕೆಫೆಗೆ ಬಂದು ಕೂತು ಎದ್ದೇ ಹೋಗದವರ ಸಂತತಿ ಜಾಸ್ತಿ ಆಗಿತ್ತು. ಇನ್ನು ಬೆಂಗಳೂರು ಐಟಿ ಸಿಟಿ. ಇಲ್ಲಿ ಸ್ಟಾರ್ಟ್-ಅಪ್ ಮಾಡಿದ ಅನೇಕರು ಇದ್ದಾರೆ. ಅವರೆಲ್ಲ ಕೆಫೆಗೆ ಬಂದು ಕೂತು ತಮ್ಮ ಸ್ಟಾರ್ಟ್ ಅಪ್‌ನ ಕೆಲಸ ಸ್ಟಾರ್ಟ್ ಮಾಡಿ ದರೆ ಅದು ಎಂಡ್ ಆಗುತ್ತಲೇ ಇರಲಿಲ್ಲ. ಹಾಗಾಗಿ ಇದು ಕೆಫೆ ಮಾಲೀಕರಿಗೆ ತಲೆನೋವಾಗಿದೆ. ಅದನ್ನು ಸರಿದಾರಿಗೆ ತರಲು ಬೆಂಗಳೂರಿನ ಕೆಫೆ ಮಾಲೀಕರೊಬ್ಬರು ಐಡಿಯಾ ಮಾಡಿದ್ದಾರೆ. ಅದೇನೆಂದರೆ- 'ನೀವು ಕಾಫಿ ತಗೊಂಡು ಕೆಲಸ/ಅಥವಾ ಮೀಟಿಂಗ್ ಮಾಡಲು ಕೂತರೆ ನಿಮಗೆ ಒಂದು ಗಂಟೆ ಮಾತ್ರ ಅವಕಾಶ. ಒಂದು ಗಂಟೆ ನಂತರ ನೀವು ಕಳೆಯುವ ಪ್ರತಿ ಗಂಟೆಗೂ 1 ಸಾವಿರ ರುಪಾಯಿ ಚಾರ್ಜ್ ಆಗುತ್ತದೆ' ಎಂಬುದು. ಈ ಹೊಸ ರೂಲ್‌ನಿಂದಾದರೂ ಕೆಫೆಗಳಲ್ಲಿ ಜನ ಕಾಫಿ ಮಾತ್ರ ಕುಡಿಯುತ್ತಾರೆ ಅನ್ನೋ ನಂಬಿಕೆ ಮಾಲೀಕರದ್ದು.

ಸಂಪಾದಕರ ಸದ್ಯಶೋಧನೆ

ಎಡೆಲ್ಮನ್ ಟ್ರಸ್ಟ್ ಬ್ಯಾರೋಮೀಟರ್

ಮೊನ್ನೆ ಕೇರಳ ಸಾಹಿತ್ಯ ಸಂಭ್ರಮದಲ್ಲಿ (ಲಿಟ್ ಫೆಸ್ಟ್) ಭಾಗವಹಿಸಲು ವಿಕಿಪೀಡಿಯಾ ಸಂಸ್ಥಾಪಕ ಜಿಮ್ಮಿ ವೇಲ್ಸ್ ಆಗಮಿಸಿದ್ದರು. ಅವರೊಂದಿಗೆ ಪತ್ರಕರ್ತರು ಮಾತಾಡುತ್ತಾ, 'ಜಗತ್ತಿನಾದ್ಯಂತ ಜನರಲ್ಲಿ ನಂಬಿಕೆ ಎಂಬ ಗುಣ ಕ್ಷೀಣಿಸುತ್ತಿದೆಯಾ?' ಎಂದು ಕೇಳಿದರು. ಅದಕ್ಕೆ ಜಿಮ್ಮಿ ವೇಲ್ಸ್, 'ನಾನು ಯಾವತ್ತೂ ಎಡೆಲ್ಮನ್ ಟ್ರಸ್ಟ್ ಬ್ಯಾರೋಮೀಟರ್ (Edelman Trust Barometer) ಸಮೀಕ್ಷೆಯನ್ನು ಗಂಭೀರವಾಗಿ ಪರಿಗಣಿಸುತ್ತೇನೆ. ಜಗತ್ತಿನ ಅನೇಕ ದೇಶಗಳಲ್ಲಿ ಕಳೆದ ಇಪ್ಪತ್ತಾರು ವರ್ಷಗಳಿಂದ ಈ ಸಮೀಕ್ಷೆ ನಡೆಯುತ್ತಿದೆ. ಆ ಪ್ರಕಾರ ಜಗತ್ತಿನೆಲ್ಲೆಡೆ ನಂಬಿಕೆ ಕ್ಷೀಣಿಸುತ್ತಿದೆ' ಎಂದು ಹೇಳಿದರು. ಹಾಗಾದರೆ ಎಡೆಲ್ಮನ್ ಟ್ರಸ್ಟ್ ಬ್ಯಾರೋಮೀಟರ್ ಸಮೀಕ್ಷೆ ಅಂದ್ರೆ ಏನು? ಈ ಸಮೀಕ್ಷೆಗೆ ಯಾಕೆ ಅಷ್ಟು ಮಹತ್ವ? ಇದು ಜಾಗತಿಕ ಮಟ್ಟದಲ್ಲಿ ಸರಕಾರಗಳು, ವ್ಯವಹಾರ ಸಂಸ್ಥೆಗಳು, ಮಾಧ್ಯಮಗಳು ಮತ್ತು ಎನ್‌ಜಿಒಗಳ (NGO) ಮೇಲಿರುವ ಸಾರ್ವಜನಿಕ ನಂಬಿಕೆಯನ್ನು ಅಳೆಯುವ ಒಂದು ವಾರ್ಷಿಕ ಸಮೀಕ್ಷೆಯಾಗಿದೆ. ವಿಶ್ವದ ಪ್ರಸಿದ್ಧ ಸಾರ್ವಜನಿಕ ಸಂಪರ್ಕ (PR) ಸಂಸ್ಥೆಯಾದ 'ಎಡೆಲ್ಮನ್' ಇದನ್ನು ಪ್ರತಿ ವರ್ಷ ನಡೆಸುತ್ತದೆ. ಈ ಸಮೀಕ್ಷೆಯು ಕೇವಲ ಅಂಕಿ-ಅಂಶಗಳಲ್ಲ, ಬದಲಿಗೆ ಜಗತ್ತು ಹೇಗೆ ಬದಲಾಗುತ್ತಿದೆ ಮತ್ತು ಜನರ ಆಲೋಚನಾಲಹರಿ ಹೇಗಿದೆ ಎಂಬುದನ್ನು ತೋರಿಸುವ ದಿಕ್ಸೂಚಿಯಾಗಿದೆ. 2000ನೇ ಇಸವಿಯಲ್ಲಿ ಪ್ರಾರಂಭವಾದ ಈ ಸಮೀಕ್ಷೆಯು ಇಂದು 25 ವರ್ಷಗಳನ್ನು ಪೂರೈಸಿದೆ. ಪ್ರತಿ ವರ್ಷ ದಾವೋಸ್‌ನಲ್ಲಿ ನಡೆಯುವ ವಿಶ್ವ ಆರ್ಥಿಕ ವೇದಿಕೆ (World Economic Forum) ಸಭೆಯ ಸಂದರ್ಭದಲ್ಲಿ ಈ ವರದಿಯನ್ನು ಬಿಡುಗಡೆ ಮಾಡಲಾಗುತ್ತದೆ. ಸುಮಾರು 28ಕ್ಕೂ ಹೆಚ್ಚು ದೇಶಗಳಲ್ಲಿ, 32,000ಕ್ಕೂ ಹೆಚ್ಚು ಜನರನ್ನು ಸಂದರ್ಶಿಸಿ ಈ ವರದಿಯನ್ನು ಸಿದ್ಧಪಡಿಸಲಾಗುತ್ತದೆ. ಇದು ಪ್ರಮುಖವಾಗಿ ನಾಲ್ಕು ಸಂಸ್ಥೆಗಳ ಮೇಲೆ ಕೇಂದ್ರೀಕರಿಸುತ್ತದೆ- 1) ಸರಕಾರ 2) ವ್ಯವಹಾರ ಸಂಸ್ಥೆಗಳು 3) ಮಾಧ್ಯಮ 4) ಸರಕಾರೇತರ ಸಂಸ್ಥೆಗಳು (NGOs). ಎಡೆಲ್ಮನ್ ಸಂಸ್ಥೆಯು ನಂಬಿಕೆಯನ್ನು ಅಳೆಯಲು ಎರಡು ಪ್ರಮುಖ ಅಂಶಗಳನ್ನು ಬಳಸುತ್ತದೆ- ಸಾಮರ್ಥ್ಯ (Competence): ಒಂದು ಸಂಸ್ಥೆಯು ತಾನು ನೀಡಿದ ಭರವಸೆಯನ್ನು ಈಡೇರಿಸುವ ಶಕ್ತಿ ಹೊಂದಿದೆಯೇ? ಹಾಗೂ ನೈತಿಕತೆ (Ethics): ಆ ಸಂಸ್ಥೆಯು ಸರಿಯಾದ ಹಾದಿಯಲ್ಲಿ ನಡೆಯುತ್ತಿದೆಯೇ? ಅದು ಸಮಾಜಕ್ಕೆ ಒಳ್ಳೆಯದನ್ನು ಮಾಡುತ್ತಿದೆಯೇ? ಸಮೀಕ್ಷೆಯ ಪ್ರಕಾರ, ಸಾಮಾನ್ಯವಾಗಿ ವ್ಯವಹಾರ ಸಂಸ್ಥೆಗಳು 'ಸಾಮರ್ಥ್ಯ'ದಲ್ಲಿ ಮುಂದಿದ್ದರೆ, ಎನ್‌ಜಿಒಗಳು 'ನೈತಿಕತೆ'ಯಲ್ಲಿ ಮುಂದಿರುತ್ತವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಜನರ ನಂಬಿಕೆಯು ಸಂಸ್ಥೆಗಳಿಗಿಂತ ಹೆಚ್ಚಾಗಿ ವ್ಯಕ್ತಿಗಳ ಮೇಲೆ (ಉದಾಹರಣೆಗೆ, ವಿಜ್ಞಾನಿಗಳು, ತಾಂತ್ರಿಕ ತಜ್ಞರು) ಕೇಂದ್ರೀಕೃತವಾಗುತ್ತಿದೆ. ಇತ್ತೀಚಿನ ವರ್ಷಗಳ ವರದಿಗಳು ಕೆಲವು ಆತಂಕಕಾರಿ ಮತ್ತು ಕುತೂಹಲಕಾರಿ ವಿಷಯಗಳನ್ನು ಎತ್ತಿ ತೋರಿಸಿವೆ. ಮೊದಲನೆಯದು, ನಾವೀನ್ಯದ ಮೇಲಿನ ಭಯ (Innovation at Risk). ಹೊಸ ತಂತ್ರಜ್ಞಾನಗಳು (AI, ಗ್ರೀನ್ ಎನರ್ಜಿ ಇತ್ಯಾದಿ) ವೇಗವಾಗಿ ಬೆಳೆಯುತ್ತಿವೆ. ಆದರೆ ಜನರು ಈ ಬದಲಾವಣೆಗಳನ್ನು ಸಂಶಯದಿಂದ ನೋಡುತ್ತಿದ್ದಾರೆ. ತಂತ್ರಜ್ಞಾನವು ಸಮಾಜದ ಒಳಿತಿಗಿಂತ ಹೆಚ್ಚಾಗಿ ಉದ್ಯೋಗ ನಷ್ಟ ಅಥವಾ ತಪ್ಪು ಮಾಹಿತಿಗೆ ಕಾರಣವಾಗಬಹುದು ಎಂಬ ಭಯ ಹೆಚ್ಚುತ್ತಿದೆ. ಎರಡನೆಯದು, ಧ್ರುವೀಕರಣ (Polarization). ಸಮಾಜವು ಎರಡು ಭಾಗಗಳಾಗಿ ವಿಭಜನೆಯಾಗುತ್ತಿದೆ. ಒಂದು ಗುಂಪಿನವರು ಇನ್ನೊಂದು ಗುಂಪಿನವರನ್ನು ನಂಬಲು ಸಿದ್ಧರಿಲ್ಲ. ಇದು ಪ್ರಜಾಪ್ರಭುತ್ವಕ್ಕೆ ದೊಡ್ಡ ಸವಾಲಾಗಿದೆ ಎಂದು ವರದಿ ಹೇಳುತ್ತದೆ. ಮೂರನೆಯದು, ನಂಬಿಕೆಯ ಅಂತರ (The Trust Gap). ಶ್ರೀಮಂತರು ಮತ್ತು ಬಡವರ ನಡುವಿನ ನಂಬಿಕೆಯ ಅಂತರ ಹೆಚ್ಚುತ್ತಿದೆ. ಆರ್ಥಿಕವಾಗಿ ಸದೃಢರಾದವರು ಸಂಸ್ಥೆಗಳ ಮೇಲೆ ಹೆಚ್ಚಿನ ನಂಬಿಕೆ ಹೊಂದಿದ್ದರೆ, ಸಾಮಾನ್ಯ ಜನರು ವ್ಯವಸ್ಥೆಯ ಮೇಲೆ ಭರವಸೆ ಕಳೆದುಕೊಳ್ಳುತ್ತಿದ್ದಾರೆ. ಎಡೆಲ್ಮನ್ ಟ್ರಸ್ಟ್ ಬ್ಯಾರೋಮೀಟರ್‌ನಲ್ಲಿ ಭಾರತವು ಯಾವಾಗಲೂ ಅಗ್ರಸ್ಥಾನಗಳಲ್ಲಿರುತ್ತದೆ. ಭಾರತೀಯರು ತಮ್ಮ ಸರಕಾರ, ವ್ಯವಹಾರ ಸಂಸ್ಥೆಗಳು ಮತ್ತು ಮಾಧ್ಯಮಗಳ ಮೇಲೆ ವಿಶ್ವದ ಇತರ ದೇಶಗಳಿಗೆ ಹೋಲಿಸಿದರೆ ಹೆಚ್ಚಿನ ನಂಬಿಕೆ ಹೊಂದಿದ್ದಾರೆ. ಚೀನಾ ಮತ್ತು ಇಂಡೋನೇಷ್ಯಾಗಳ ಜತೆಗೆ ಭಾರತವು 'ಟ್ರಸ್ಟ್ ಇಂಡೆಕ್ಸ್'ನಲ್ಲಿ ಮೊದಲ ಮೂರು ಸ್ಥಾನಗಳಲ್ಲಿ ಕಾಣಿಸಿಕೊಳ್ಳುತ್ತದೆ. ವಿಶೇಷವಾಗಿ, ಭಾರತೀಯರು ತಮ್ಮ ಉದ್ಯೋಗದಾತರ ಮೇಲೆ ಅತಿ ಹೆಚ್ಚು ನಂಬಿಕೆ ಇಡುತ್ತಾರೆ ಎಂಬುದು ಗಮನಾರ್ಹ ಅಂಶ. ಸಮೀಕ್ಷೆಯು ಪ್ರತಿ ಸಂಸ್ಥೆಗೆ ಕೆಲವು ಸಂದೇಶಗಳನ್ನು ನೀಡುತ್ತದೆ. ಕೇವಲ ಲಾಭ ಗಳಿಸುವುದು ಮಾತ್ರವಲ್ಲದೆ, ಸಾಮಾಜಿಕ ಸಮಸ್ಯೆಗಳಿಗೂ ಸ್ಪಂದಿಸಬೇಕು, ಉದ್ಯೋಗಿಗಳಿಗೆ ನೈತಿಕ ಬೆಂಬಲ ನೀಡಬೇಕು ಎಂದು ವ್ಯವಹಾರ ಸಂಸ್ಥೆಗಳಿಗೆ ಸೂಚಿಸುತ್ತದೆ. ಸಾರ್ವಜನಿಕರಲ್ಲಿ ಸುರಕ್ಷತೆಯ ಭಾವನೆ ಮೂಡಿಸಬೇಕು ಮತ್ತು ತಪ್ಪು ಮಾಹಿತಿಯನ್ನು ನಿಯಂತ್ರಿಸಬೇಕು ಎಂದು ಸರಕಾರಗಳಿಗೆ ಹೇಳುತ್ತದೆ.

ರಾಜ್ಯಪಾಲ ಹುದ್ದೆಯನ್ನು ಶಾಶ್ವತವಾಗಿ ರದ್ದುಗೊಳಿಸಬಾರದೇಕೆ?

ಜನಪಥ

ರಾಘವ ಶರ್ಮ ನಿಡ್ಲೆ
vveditoped@gmail.com

ಕರ್ನಾಟಕದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ರಾಜ್ಯ ಸರಕಾರ ಸಿದ್ಧಪಡಿಸಿದ್ದ ಭಾಷಣವನ್ನು ಓದದೆ ಸದನದಿಂದ ಹೊರ ನಡೆದ ಘಟನೆ ಆಡಳಿತಾರೂಢ ಕಾಂಗ್ರೆಸ್ ಮತ್ತು ವಿಪಕ್ಷಗಳ ಮಧ್ಯೆ ರಾಜಕೀಯ ಕೆಸರೆರಚಾಟಕ್ಕೆ ಕಾರಣವಾಗಿರುವ ಮಧ್ಯೆ ರಾಜ್ಯಪಾಲ ಹುದ್ದೆಯ ಪ್ರಸ್ತುತತೆ, ಕಾರ್ಯವೈಖರಿ, ಸಾಂವಿಧಾನಿಕ ಪಾತ್ರಗಳ ಕುರಿತಾದ ಚರ್ಚೆಗಳು ಮತ್ತೆ ಗರಿಗೆದರಿವೆ.

ರಾಜ್ಯಪಾಲರು ಸಾಮಾನ್ಯವಾಗಿ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳ ನಡುವಿನ ಕೊಂಡಿಯಾಗಿ ಕೆಲಸ ಮಾಡುತ್ತಾರೆ ಮತ್ತು ರಾಜ್ಯದ ಸಾಂವಿಧಾನಿಕ ಮುಖ್ಯಸ್ಥರೂ ಆಗಿರುತ್ತಾರೆ. ಕೇಂದ್ರ ಸರಕಾರದ ಶಿಫಾರಸುಗಳ ಆಧಾರದಲ್ಲಿ ರಾಷ್ಟ್ರಪತಿಯಿಂದ ನೇಮಕಗೊಳ್ಳುವ ಸಾಂವಿಧಾನಿಕ ಹುದ್ದೆಯ ರಾಜ್ಯಪಾಲರು, ಅನೇಕ ಸಂದರ್ಭಗಳಲ್ಲಿ ಒಂದು ಪಕ್ಷದ ಪರವಾಗಿ ಕಾರ್ಯನಿರ್ವಹಿಸುವುದಕ್ಕೆ ದೇಶ ಅನೇಕ ಬಾರಿ ಸಾಕ್ಷಿಯಾಗಿದೆ. ಕೇಂದ್ರದಲ್ಲಿರುವ ಪಕ್ಷಗಳು ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ವಿಪಕ್ಷಗಳ ಸರಕಾರಕ್ಕೆ ತೊಂದರೆ ಕೊಡಲೆಂದೇ ರಾಜ್ಯಪಾಲರನ್ನು ಕಳುಹಿಸಿಕೊಡುತ್ತವೇನೋ ಎಂಬಷ್ಟರಮಟ್ಟಿಗೆ ರಾಜ್ಯಪಾಲ ಹುದ್ದೆಗಳು ದುರುಪಯೋಗಗೊಂಡಿವೆ. ರಾಜ್ಯಪಾಲರ ದುರ್ಬಳಕೆ ನಿರ್ವಹಣೆಯ ವಿಷಯದಲ್ಲಿ ಕಾಂಗ್ರೆಸ್, ಬಿಜೆಪಿ ಪಕ್ಷಗಳದ್ದು ಸಮಾನ ಪಾಲು.

ರಾಜ್ಯದಲ್ಲಿ ಸೃಷ್ಟಿಯಾಗಿರುವ ಸಂಘರ್ಷಕ್ಕೆ ಮುನ್ನ ಕೇರಳದಲ್ಲೂ ಸರಕಾರ ಮತ್ತು ರಾಜ್ಯಪಾಲ ಆರ್.ವಿ. ಅರ್ಲೇಕರ್ ನಡುವೆ ತಿಕ್ಕಾಟ ನಡೆಯಿತು. ರಾಜ್ಯ ಸಚಿವ ಸಂಪುಟ ಅನುಮೋದಿತ ಬಜೆಟ್ ಕುರಿತ ತಮ್ಮ ಭಾಷಣದಲ್ಲಿ ಕೇಂದ್ರ ಸರಕಾರದ ಹಣಕಾಸು ನೀತಿಗಳನ್ನು ಟೀಕಿಸುವ ಕೆಲ ಪ್ಯಾರಾಗಳನ್ನು ಅವರು ಸದನದಲ್ಲಿ ಓದಲಿಲ್ಲ. ಬದಲಿಗೆ, ತಮ್ಮ ಕಚೇರಿ ಸಿದ್ಧಪಡಿಸಿದ ಕೆಲ ಸಾಲುಗಳನ್ನು ಭಾಷಣದ ಪ್ರತಿಗೆ ಸೇರಿಸಿಕೊಂಡರು. ತಮಿಳುನಾಡಿನಲ್ಲೂ ಇಂಥದ್ದೇ ಮಾದರಿ ಘಟನೆ ನಡೆಯಿತು. ಅಲ್ಲಿನ ರಾಜ್ಯಪಾಲ ಆರ್.ಎನ್. ರವಿ ಅವರು ರಾಷ್ಟ್ರಗೀತೆ ನಂತರ ವಿಧಾನಸಭೆಯಿಂದ ಹೊರನಡೆದ ನಾಟಕೀಯ ಘಟನೆ ನಡೆಯಿತು. ಚುನಾಯಿತ ಸರಕಾರ ಸಿದ್ಧಪಡಿಸಿದ ಭಾಷಣ ಓದಲು ಅವರೂ ಒಪ್ಪಲಿಲ್ಲ. ಕೇಂದ್ರ ಸರಕಾರದ ಆಡಳಿತ ನೀತಿಗಳನ್ನು ಟೀಕಿಸುವ ರಾಜ್ಯ ಸರಕಾರಗಳ ಭಾಷಣಗಳನ್ನು ಸದನದಲ್ಲಿ ಓದಿ, ಆ ಮೂಲಕ ಕೇಂದ್ರ ಸರಕಾರಕ್ಕೆ ಮುಜುಗರ ಉಂಟುಮಾಡುವ ಉದ್ದೇಶ ಈ ಮೂರೂ ರಾಜ್ಯಪಾಲರಿಗೆ ಇರಲಿಲ್ಲ ಎಂಬುದು ಈ ಘಟನೆಗಳಿಂದ ಸ್ಪಷ್ಟವಾಗುತ್ತದೆ. ಆದರೆ, ಮಂತ್ರಿಮಂಡಲ ಸಿದ್ಧಪಡಿಸಿದ ಭಾಷಣವನ್ನು ತಿರಸ್ಕರಿಸಿ ನಡೆಯುವ ಅಧಿಕಾರ ರಾಜ್ಯಪಾಲರಿಗೆ ಇದೆಯೇ ಎನ್ನುವುದು ಪ್ರಶ್ನೆ. ಯಾವಾಗ ರಾಜ್ಯಪಾಲರು ರಾಜ್ಯ ಸರಕಾರದ ಆಶಯಕ್ಕೆ ಅನುಗುಣವಾಗಿ ನಡೆದುಕೊಳ್ಳುವುದಿಲ್ಲವೋ, ಆಗ ಸರಕಾರ-ರಾಜ್ಯಪಾಲರ ಸಂಘರ್ಷವು ಕಾನೂನು ಹೋರಾಟಕ್ಕೆ ನಾಂದಿ ಹಾಡುತ್ತದೆ. ರಾಜ್ಯಪಾಲರ ಕ್ರಮಗಳ ಹಿಂದೆ ಕೇಂದ್ರ ಸರಕಾರದ ಪ್ರಭಾವವಿರುವುದು ಹೇಗೆ ಪ್ರಶ್ನಾರ್ಹವೋ, ಅದೇ ರೀತಿ, ರಾಜ್ಯ ಸರಕಾರಗಳು ಕೇಂದ್ರ ಸರಕಾರವನ್ನು ಗುರಿಮಾಡಲು ರಾಜ್ಯಪಾಲರನ್ನು ಬಳಸಿಕೊಳ್ಳುವುದೂ ಪ್ರಶ್ನಾರ್ಹವೇ. ಒಟ್ಟಿನಲ್ಲಿ, ಸಾಂವಿಧಾನಿಕ ಮುಖ್ಯಸ್ಥರಾದ ರಾಜ್ಯಪಾಲರು ರಾಜ್ಯಗಳಲ್ಲಿ ಅನಿಶ್ಚಿತ, ಗೊಂದಲಮಯ ವಾತಾವರಣ ಸೃಷ್ಟಿಸಲೇ ಹೆಚ್ಚು ಬಳಕೆಯಾಗುತ್ತಾರೆ ಎನ್ನುವುದು ವಿಪರ್ಯಾಸ.

ಹಾಗೆ ನೋಡಿದರೆ, ಮಂತ್ರಿಮಂಡಲ ಅನುಮೋದಿಸಿದ ಸರಕಾರದ ಭಾಷಣಗಳನ್ನು ರಾಜ್ಯಪಾಲರು ಓದುವ ಪರಂಪರೆ ಇಂದು ನಿನ್ನೆಯದೇನಲ್ಲ. ಇದು ಬ್ರಿಟಿಷರು ಆಳವಡಿಸಿಕೊಂಡಿದ್ದ ಕ್ರಮ. ಅದೇ ಪರಂಪರೆ ಹಾಗೂ ದೀರ್ಘ ಕಾಲದ ಸಂಸದೀಯ ಕ್ರಮವನ್ನು ಈಗಲೂ ಅನುಸರಿಸಿಕೊಂಡು ಬರಲಾಗುತ್ತಿದೆ. ಅಧಿವೇಶನ ಭಾಷಣದಲ್ಲಿ ರಾಜ್ಯಪಾಲರು ತಮ್ಮ ಸ್ವಂತ ಕಾರ್ಯಸೂಚಿಯನ್ನು ಮಂಡಿಸಿದ ಉದಾಹರಣೆಯಿಲ್ಲ. ಸಂವಿಧಾನದ 176ನೇ ವಿಧಿಯ ಅಡಿಯಲ್ಲಿ ನೋಡಿದರೆ- ರಾಜ್ಯಪಾಲರ ಭಾಷಣವು ಸರಕಾರದ ನೀತಿಗಳನ್ನು ಪ್ರತಿನಿಧಿಸುತ್ತದೆ. ರಾಜ್ಯ ಕ್ಯಾಬಿನೆಟ್‌ನಿಂದ ಅಂಗೀಕರಿಸಲ್ಪಟ್ಟ ಪಠ್ಯಕ್ಕೆ ಮಾತ್ರ ಸಾಂವಿಧಾನಿಕ ಸಿಂಧುತ್ವವಿರುತ್ತದೆ ಎಂದು ಕಾನೂನು ಪಂಡಿತರು ವಾದಿಸುತ್ತಾರೆ. ಬ್ರಿಟಿಷ್ ವ್ಯವಸ್ಥೆ ಇಂಥದ್ದೇ ಮಾದರಿಯಲ್ಲಿ ನಡೆದುಕೊಂಡು ಬಂದಿದ್ದು, ಅಲ್ಲಿನ ರಾಣಿ ಅಥವಾ ರಾಜರು ಸರಕಾರಗಳ ಮಂತ್ರಿಗಳು ಬರೆದ ಭಾಷಣವನ್ನು ಸಂಸತ್ತಿನಲ್ಲಿ ಯಥಾವತ್ತಾಗಿ ಓದುತ್ತಾರೆ. ಆದರೆ, ಇಂದಿನ ಬದಲಾದ ಕಾಲಘಟ್ಟದಲ್ಲಿ ಇದರ ಅವಶ್ಯಕತೆ ಎಷ್ಟರಮಟ್ಟಿಗೆ ಪ್ರಸ್ತುತ ಎನ್ನುವುದು ಕೇಂದ್ರ ಸರಕಾರವು ಗಂಭೀರವಾಗಿ ಆಲೋಚಿಸಬೇಕಾದ ವಿಚಾರ.

ರಾಜ್ಯಪಾಲರು ಮಂತ್ರಿಮಂಡಲದ ನೆರವು ಹಾಗೂ ಸಲಹೆಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸಬೇಕು ಎನ್ನುವುದನ್ನು ಸಂವಿಧಾನದ 163ರ ವಿಧಿಯಲ್ಲಿ ಉಲ್ಲೇಖಿಸಲಾಗಿದೆ. 2016ರಲ್ಲಿ ಅರುಣಾಚಲ ಪ್ರದೇಶ ಸರಕಾರಕ್ಕೆ ಸಂಬಂಧಿಸಿದ 'ನಬಮ್ ರೆಬಿಯಾ ವರ್ಸಸ್ ಡೆಪ್ಯುಟಿ ಸ್ಪೀಕರ್ ಪ್ರಕರಣ'ದಲ್ಲಿ ಸುಪ್ರೀಂಕೋರ್ಟ್‌ನ ಐವರು ಸದಸ್ಯರ ಸಾಂವಿಧಾನಿಕ ಪೀಠ ನೀಡಿದ್ದ ತೀರ್ಪಿನಲ್ಲೂ ಈ ವಿಷಯವನ್ನು ಪ್ರಸ್ತಾಪಿಸಲಾಗಿದೆ. ರಾಜ್ಯಪಾಲರ ಶಾಸಕಾಂಗ ಕಾರ್ಯಗಳು ಮಂತ್ರಿಮಂಡಲದ ಸಾಮಾನ್ಯ ಸಲಹೆಗೆ ಅನುಗುಣವಾಗಿ ಇರಬೇಕಾಗುತ್ತದೆ ಎಂದು ಪುನರುಚ್ಚರಿಸಿದ್ದ ಸುಪ್ರೀಂ ಕೋರ್ಟ್, ಮಂತ್ರಿಮಂಡಲದ ನೆರವು ಮತ್ತು ಸಲಹೆಯ ಮೇರೆಗೆ 175(1) ಅಥವಾ 176ನೇ ವಿಧಿಯ ಅಡಿಯಲ್ಲಿ ಸದನವನ್ನು ಉದ್ದೇಶಿಸಿ ರಾಜ್ಯಪಾಲರು ಮಾತನಾಡುವುದು ಅವರ ಕಾರ್ಯಕಾರಿ ಜವಾಬ್ದಾರಿ ಎಂದು ತಿಳಿಸಿತ್ತು. ಅಂದರೆ, ಶಾಸಕಾಂಗದ ಕಾರ್ಯಸೂಚಿಯನ್ನು ರೂಪಿಸಲು ರಾಜ್ಯಪಾಲರಿಗೆ ಮುಕ್ತ ಅಧಿಕಾರವಿಲ್ಲ ಎಂದು ಭಾವಿಸಬಹುದು. ಆದರೆ, ರಾಜ್ಯ ಸರಕಾರವು ಕೇಂದ್ರ ಸರಕಾರವನ್ನು ಗುರಿಮಾಡಲು ರಾಜ್ಯಪಾಲರನ್ನು ಬಳಸಬಹುದೇ ಎಂಬ ಪ್ರಶ್ನೆಯೂ ಇಲ್ಲಿ ಉದ್ಭವಿಸುತ್ತದೆ.

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರಂತೂ ರಾಜ್ಯ ಸರಕಾರಗಳನ್ನು ವಜಾಗೊಳಿಸಲು ರಾಜಭವನ ಕಚೇರಿಗಳನ್ನೇ ಬಹುದೊಡ್ಡ ಅಸ್ತ್ರಗಳನ್ನಾಗಿ ಬಳಸಿಕೊಂಡಿದ್ದರು. 1970ರ ದಶಕದಲ್ಲಿ ಕಾಂಗ್ರೆಸ್ 16 ರಾಜ್ಯಗಳ ಪೈಕಿ ಎಂಟು ರಾಜ್ಯಗಳಲ್ಲಿ ದುರ್ಬಲಗೊಂಡು ತನ್ನ ನಿಯಂತ್ರಣ ಕಳೆದುಕೊಂಡಿದ್ದಾಗ ಕಾಂಗ್ರೆಸ್ಸೇತರ ಸರಕಾರಗಳನ್ನು ಅಸ್ಥಿರಗೊಳಿಸಲು ರಾಜಭವನಗಳೇ ಬ್ರಹ್ಮಾಸ್ತ್ರಗಳಾಗಿದ್ದವು. 1971ರ ಲೋಕಸಭೆ ಚುನಾವಣೆಯಲ್ಲಿ ಗೆದ್ದ ಮೇಲಂತೂ ಇಂದಿರಾ ಗಾಂಧಿಯವರು ಈ ವಿಷಯದಲ್ಲಿ ಮತ್ತಷ್ಟು ಆಕ್ರಮಣಶೀಲತೆ ಪ್ರದರ್ಶಿಸಿ, ಸಾಂವಿಧಾನಿಕ ಸಂಸ್ಥೆಗಳ ಮೂಲ ಆಶಯಗಳನ್ನೇ ಗಾಳಿಗೆ ತೂರಿದ್ದರು. 1994ರಲ್ಲಿ ಸುಪ್ರೀಂಕೋರ್ಟ್ ಎಸ್.ಆರ್. ಬೊಮ್ಮಾಯಿ ಪ್ರಕರಣದಲ್ಲಿ ನೀಡಿದ ತೀರ್ಪಿನ ನಂತರ ರಾಜ್ಯಪಾಲರ 'ರಾಜಕೀಯ' ವರ್ತನೆಗಳಿಗೆ ತಕ್ಕಮಟ್ಟಿಗೆ ಕಡಿವಾಣ ಬಿದ್ದರೂ, ಬೇರೆ ಬೇರೆ ರೀತಿಯಲ್ಲಿ ರಾಜ್ಯ ಸರಕಾರಗಳಿಗೆ ತೊಂದರೆ ಕೊಡುವ ಕೆಲಸವನ್ನು ರಾಜ್ಯಪಾಲ ಕಚೇರಿಗಳು ಮಾಡುತ್ತಲೇ ಬಂದಿವೆ. ಕೆಲವೊಂದು ಸಂದರ್ಭಗಳಲ್ಲಿ ಕೇಂದ್ರ ಸರಕಾರ ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಕೇಂದ್ರದ ವಿಧೇಯ ಶಿಷ್ಯನಂತೆ ರಾಜ್ಯಪಾಲರು ವರ್ತಿಸಿದ್ದುಂಟು.

ಕರ್ನಾಟಕದ ರಾಜ್ಯಪಾಲರಾಗಿದ್ದ ಮಾಜಿ ಕೇಂದ್ರ ಸಚಿವ ಹಂಸರಾಜ್ ಭಾರದ್ವಾಜರ 'ರಾಜಕೀಯ ಸಕ್ರಿಯತೆ' ಆ ಹುದ್ದೆಗೇ ಅಪಕೀರ್ತಿ ತಂದಿತ್ತು. 'ರಾಜ್ಯದಲ್ಲಿ ಸಿಎಂ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರಕಾರಕ್ಕೆ ಬಹುಮತವಿಲ್ಲ, ಹೀಗಾಗಿ ಕರ್ನಾಟಕದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಬೇಕು' ಎಂದು 2011ರಲ್ಲಿ ಕೇಂದ್ರ ಗೃಹ ಸಚಿವಾಲಯಕ್ಕೆ ಅವರು ಸಲ್ಲಿಸಿದ್ದ ಶಿಫಾರಸು ರಾಜಕೀಯ ವಲಯದಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿತ್ತು. ಆದರೆ, ಅಂದಿನ ಪ್ರಧಾನಿ ಡಾ. ಮನಮೋಹನ್ ಸಿಂಗ್ ನೇತೃತ್ವದ ರಾಜಕೀಯ ವ್ಯವಹಾರಗಳ ಕ್ಯಾಬಿನೆಟ್ ಸಮಿತಿ 'ಈ ಶಿಫಾರಸನ್ನು ಒಪ್ಪಲು ಸಾಧ್ಯವಿಲ್ಲ' ಎಂಬ ಸಮಚಿತ್ತದ ನಿರ್ಧಾರ ಕೈಗೊಂಡಿದ್ದರಿಂದ ರಾಜ್ಯಪಾಲರಿಗೆ ಅತೀವ ಮುಖಭಂಗ ಉಂಟಾಗಿತ್ತು. ಹಾಗಂತ, ಭಾರದ್ವಾಜರು ಬಿಜೆಪಿ ಸರಕಾರಕ್ಕೆ ಉಪಟಳ ನೀಡುವುದನ್ನೇನೂ ಕಡಿಮೆ ಮಾಡಿರಲಿಲ್ಲ!

1997ರಲ್ಲಿ, ಉತ್ತರ ಪ್ರದೇಶದ ಕಲ್ಯಾಣ್ ಸಿಂಗ್ ಸರಕಾರವನ್ನು ರಾಜ್ಯಪಾಲ ರಮೇಶ್ ಭಂಡಾರಿ ವಜಾಗೊಳಿಸಿದ್ದ ಏಕಪಕ್ಷೀಯ ಕ್ರಮವನ್ನು ಅಂದಿನ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರೇ ಟೀಕಿಸಿದ್ದರು. 2004ರಲ್ಲಿ ಯುಪಿಎ ಸರಕಾರ ಅಧಿಕಾರ ವಹಿಸಿಕೊಂಡ ನಂತರ ಹಿಂದಿನ ಎನ್‌ಡಿಎ ಸರಕಾರ ನೇಮಿಸಿದ್ದ ರಾಜ್ಯಪಾಲರು ರಾಜೀನಾಮೆ ಸಲ್ಲಿಸಬೇಕು ಎಂದು ಸೂಚನೆ ನೀಡಿತ್ತು. ಏಕೆಂದರೆ ತನ್ನ ಕಾರ್ಯಸೂಚಿಯಂತೆ ಕೆಲಸ ಮಾಡಬೇಕಾದ ರಾಜ್ಯಪಾಲರು ರಾಜ್ಯಗಳಲ್ಲಿ ಇರಬೇಕು ಎನ್ನುವುದನ್ನೇ ಅದು ಬಯಸಿತ್ತು.

2018ರಲ್ಲಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ 105 ಸೀಟುಗಳ ಮೂಲಕ ಅತ್ಯಧಿಕ ಸೀಟುಗಳನ್ನು ಗೆದ್ದ ಪಕ್ಷವಾಗಿತ್ತಾದರೂ ಕಾಂಗ್ರೆಸ್-ಜೆಡಿಎಸ್ ಪಕ್ಷಗಳು ಮೈತ್ರಿ ಮಾಡಿಕೊಂಡು ಸರಕಾರ ರಚನೆ ಮಾಡುವುದಾಗಿ ರಾಜ್ಯಪಾಲ ವಜುಭಾಯ್ ವಾಲಾ ಅವರಲ್ಲಿ ತಿಳಿಸಿದ್ದವು. ಆದರೆ, ವಜುಭಾಯ್ ವಾಲಾ ಯಡಿಯೂರಪ್ಪನವರಿಗೆ ಸರಕಾರ ರಚಿಸುವ ಅವಕಾಶ ನೀಡುವ ಪಕ್ಷಪಾತಿ ತೀರ್ಮಾನ ತೆಗೆದುಕೊಂಡಿದ್ದರು. ನಂತರ ಇದನ್ನು ಸುಪ್ರೀಂಕೋರ್ಟ್ ರದ್ದುಗೊಳಿಸಿ, ರಾಜ್ಯಪಾಲರ ಕ್ರಮದ ವಿರುದ್ಧ ಕೆಂಡಕಾರಿತ್ತು. ಮಹಾರಾಷ್ಟ್ರ ರಾಜ್ಯಪಾಲರಾಗಿದ್ದ ಭಗತ್ ಸಿಂಗ್ ಕೋಶಿಯಾರಿ ಕೂಡ ಮಹಾರಾಷ್ಟ್ರದಲ್ಲಿ ಮಹಾವಿಕಾಸ್ ಅಘಾಡಿ ಸರಕಾರವನ್ನು ವಜಾಗೊಳಿಸಿದ ವಿಷಯದಲ್ಲಿ ಏಕಪಕ್ಷೀಯವಾಗಿ ನಡೆದುಕೊಂಡಿದ್ದರು ಮತ್ತು ಸುಪ್ರೀಂಕೋರ್ಟ್ ಕೂಡ ರಾಜ್ಯಪಾಲರ ಈ ನಡೆಯನ್ನು ಕಾನೂನುಬಾಹಿರ ಎಂದು ತೀರ್ಪು ನೀಡಿತ್ತು. 2 ದಿನಗಳ ಹಿಂದೆ ಇದೇ ಭಗತ್ ಸಿಂಗ್ ಕೋಶಿಯಾರಿ ಅವರಿಗೆ ಕೇಂದ್ರ ಸರಕಾರ ಪದ್ಮಭೂಷಣ ಪ್ರಶಸ್ತಿಯನ್ನೂ ಪ್ರಕಟಿಸಿತು!

ರಾಜಕಾರಣಿ ಅಥವಾ ಜನಪ್ರತಿನಿಧಿಯಾಗಿದ್ದ ವ್ಯಕ್ತಿಯನ್ನು ರಾಜ್ಯಪಾಲ ಹುದ್ದೆಗೆ ಪರಿಗಣಿಸಬಾರದು ಎಂಬ ನಿಯಮವೇನಿಲ್ಲ. ಆದರೆ ಪಕ್ಷ ರಾಜಕಾರಣದಿಂದ ದೂರವುಳಿದ, ಕಾನೂನು-ಸಂವಿಧಾನದ ಆಶಯಗಳಿಗೆ ತಕ್ಕಂತೆ ಕಾರ್ಯನಿರ್ವಹಿಸಬಲ್ಲ, ನಿಷ್ಪಕ್ಷಪಾತ ಧೋರಣೆಯ ವ್ಯಕ್ತಿ ಮಾತ್ರ ಇಂಥ ಸಾಂವಿಧಾನಿಕ ಹುದ್ದೆಗಳಿಗೆ ನ್ಯಾಯ ನೀಡಬಲ್ಲ. ಆದರೆ ಅಂಥವರನ್ನು ಆಯ್ಕೆ ಮಾಡುವ ಆಸಕ್ತಿ ಸರಕಾರಗಳಿಗೆ ಇದೆಯೇ? ಆಯ್ಕೆ ಮಾಡಿದರೂ ಅವರು ಸಮಚಿತ್ತದಿಂದ, ನ್ಯಾಯೋಚಿತವಾಗಿ ಕಾರ್ಯನಿರ್ವಹಿಸುತ್ತಿದ್ದಾರಾ? ದಿಲ್ಲಿಯಲ್ಲಿ ಆಮ್ ಆದ್ಮಿ ಪಕ್ಷದ ಸರಕಾರವಿದ್ದಾಗಲಂತೂ ಲೆಫ್ಟಿನಂಟ್ ಗವರ್ನರ್ ಮತ್ತು ಸರಕಾರದ ಮಧ್ಯೆ ನಿತ್ಯವೂ ನಡೆಯುತ್ತಿದ್ದ ಸಂಘರ್ಷ ನೋಡಿ ಜನರೇ ರೋಸಿಹೋಗಿದ್ದರು. ಮೂಲತಃ ರಾಜಕಾರಣಿ ಅಲ್ಲದಿದ್ದರೂ, ಐಪಿಎಸ್ ಹಿನ್ನೆಲೆಯ ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರು ಅಲ್ಲಿನ ರಾಜ್ಯ ಸರಕಾರದ 10 ವಿಧೇಯಕಗಳಿಗೆ ಅನುಮೋದನೆ ನೀಡಲು ವಿನಾಕಾರಣ ವಿಳಂಬ ಮಾಡಿದ್ದರು. ನಂತರ ಸುಪ್ರೀಂಕೋರ್ಟ್ ಮಧ್ಯಪ್ರವೇಶ ಮಾಡಿ, ಸಮಯದ ಗಡುವು ನೀಡಬೇಕೆಂದು ರಾಜ್ಯಪಾಲರಿಗೆ ನಿಗದಿ ಮಾಡಿತ್ತು.

ಹೀಗಾಗಿ, ನಿವೃತ್ತ ಅಧಿಕಾರಿಗಳ, ಹಿರಿಯ ಪಕ್ಷನಿಷ್ಠ ರಾಜಕಾರಣಿಗಳ ಗಂಜಿಕೇಂದ್ರಗಳಂತಿರುವ ಲೋಕಭವನ ('ರಾಜಭವನ'ವು ಬ್ರಿಟಿಷ್ ಕಾಲದ ಹೆಸರು ಎಂದು ಈಗ 'ಲೋಕಭವನ' ಎಂದು ಬದಲಿಸಲಾಗಿದೆ) ಮತ್ತು ಕೇಂದ್ರ ಸರಕಾರಗಳ ಕೈಗೊಂಬೆಗಳಂತೆ ಕೆಲಸ ಮಾಡುವ ರಾಜ್ಯಪಾಲ ಹುದ್ದೆಗಳ ಪ್ರಸ್ತುತತೆ ಹಾಗೂ ಅಗತ್ಯತೆಯ ಬಗ್ಗೆ ಗಂಭೀರ ಚರ್ಚೆ ಆಗಬೇಕಿದೆ. ಬ್ರಿಟಿಷ್ ಕಾಲದ ಕಾನೂನು, ಹೆಸರುಗಳನ್ನು ಅಳಿಸಿ, ವಿವಿಧ ಕ್ಷೇತ್ರಗಳ 'ಭಾರತೀಕರಣ'ಗೊಳ್ಳುತ್ತಿರುವ ಈ ಸನ್ನಿವೇಶದಲ್ಲಿ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರ, ರಾಜ್ಯಪಾಲ ಹುದ್ದೆಗಳನ್ನೇ ರದ್ದುಗೊಳಿಸಬಾರದೇಕೆ? ರಾಜ್ಯಗಳಲ್ಲಿ ರಾಜ್ಯಪಾಲರು ನಿರ್ವಹಿಸಬೇಕಿರುವ ಸಾಂವಿಧಾನಿಕ ಜವಾಬ್ದಾರಿಗಳನ್ನು ರಾಷ್ಟ್ರಪತಿ ಕಚೇರಿಯೇ ನಿಭಾಯಿಸಬಾರದೇಕೆ? ಎಲ್ಲಾ ರಾಜ್ಯಗಳನ್ನು ಏಕಕಾಲದಲ್ಲಿ ನಿರ್ವಹಿಸುವುದು ರಾಷ್ಟ್ರಪತಿ ಕಚೇರಿಗೆ ಹೊರೆಯೆನಿಸುವುದಾದರೆ, ಕಚೇರಿ ಮೂಲಕವೇ ತಟಸ್ಥ ಧೋರಣೆಯ ತಜ್ಞರನ್ನೊಳಗೊಂಡ ಸಮಿತಿಯೊಂದನ್ನು ನೇಮಿಸಿ ರಾಷ್ಟ್ರಪತಿ ಭವನದ ಮೇಲುಸ್ತುವಾರಿಯಲ್ಲಿ ಕಾರ್ಯನಿರ್ವಹಿಸುವಂತೆ ಮಾಡಬಹುದಲ್ಲವೇ? ಅಥವಾ ಇನ್ಯಾವುದೋ ಸೂಕ್ತ ಕಾರ್ಯವಿಧಾನವನ್ನು ಕೇಂದ್ರ ಸರಕಾರವೇ ಕಂಡುಕೊಳ್ಳಬಹುದಲ್ಲವೇ? ಸೆರೆಮೋನಿಯಲ್ ಪೋಸ್ಟ್‌ಗಳಂತಿರುವ ರಾಜ್ಯಪಾಲ ಹುದ್ದೆಯಿಂದ ರಾಜ್ಯಗಳಿಗೆ ನಿಜಕ್ಕೂ ಅನುಕೂಲ/ಲಾಭ/ಒಳ್ಳೆಯದಾಗುತ್ತಿದೆಯೇ ಎಂಬುದನ್ನು ಪರಾಮರ್ಶಿಸಬೇಕಿದೆ.

ರಾಜ್ಯಪಾಲರ ಮಾಸಿಕ ವೇತನ ರು. 3.5 ಲಕ್ಷ (ವಾರ್ಷಿಕವಾಗಿ ರು. 42 ಲಕ್ಷ). ಜತೆಗೆ ಅಧಿಕೃತ ಬಂಗಲೆ (ಲೋಕಭವನ) ಹಾಗೂ ಅದರ ನಿರ್ವಹಣೆ, ಗೃಹ ಸಿಬ್ಬಂದಿ ವೇತನ-ಭತ್ಯೆಗಳು, ವಾಹನಗಳ ನಿರ್ವಹಣೆ, ವೈದ್ಯಕೀಯ-ಪ್ರಯಾಣ ಸೌಲಭ್ಯ, ಭದ್ರತೆಗಳಿಗಾಗಿ ಪ್ರತ್ಯೇಕ ಹಣ ಮೀಸಲಿಡಬೇಕು. ರಾಜ್ಯಪಾಲರ ಕಾರಣದಿಂದಾಗಿ ಸದನ ಸಂಘರ್ಷ, ಸಭಾತ್ಯಾಗ ಉಂಟಾದಲ್ಲಿ ಇಡೀ ದಿನಕ್ಕಾಗಿ ಮೀಸಲಿಟ್ಟ ಹಣವೂ ಪೋಲು. ರಾಜ್ಯಪಾಲ ಎನ್ನುವುದು ಗೌರವಾನ್ವಿತ, ಘನತೆಯುಕ್ತ ಹುದ್ದೆಯಾಗಿದ್ದರೂ, ಅವುಗಳನ್ನು ನಿಭಾಯಿಸಿದ ರೀತಿ ಹುದ್ದೆಯ ಗೌರವ-ಘನತೆ ಎರಡನ್ನೂ ಹಾಳುಮಾಡಿದೆ. ಬೊಕ್ಕಸಕ್ಕೆ ಅನುಕೂಲವಾಗುವುದಕ್ಕಿಂತ ಆರ್ಥಿಕವಾಗಿ 'ಹೊರೆ'ಯೇ ಎನಿಸುವ ಹಾಗೂ ಈ ಕಾಲಘಟ್ಟದ ಆಡಳಿತ ವ್ಯವಸ್ಥೆಗೆ ಹೊಂದಿಕೆಯಾಗದ ಹುದ್ದೆಯನ್ನು ಆಡಳಿತ ಸುಧಾರಣೆಯ ಹೆಸರಲ್ಲಿ ಶಾಶ್ವತವಾಗಿ ಕೊನೆಗೊಳಿಸುವುದೇ ಸೂಕ್ತವಲ್ಲವೇ? ಭವಿಷ್ಯದ ತಲೆಮಾರಿಗೆ ಹಿತವೆನಿಸುವ, ಸುಧಾರಿತ ಆಡಳಿತ ವ್ಯವಸ್ಥೆ ಮತ್ತು 2047ರ ವಿಕಸಿತ ಭಾರತದ ದೃಷ್ಟಿಯಿಂದ ಕೇಂದ್ರ ಸರಕಾರ ಇಂಥದೊಂದು ಕ್ರಾಂತಿಕಾರಿ ಹೆಜ್ಜೆ ಇಡುವುದೇ?

(ಲೇಖಕರು ಹಿರಿಯ ಪತ್ರಕರ್ತರು)

ಆರ್.ಗಣೇಶ್: ಭೂಷಣಕೆ ಭೂಷಣ ಪದ್ಮಭೂಷಣ!

ವಿಸ್ತರಿತ ವಿಷಯ ವ್ಯಾಖ್ಯಾನ, ತಿಳಿಯಾದ ಹಾಸ್ಯಪ್ರಜ್ಞೆ, ಅದ್ಭುತ ಸಮಯಪ್ರಜ್ಞೆ, ನೂತನ ಅಂಗಗಳ ಆವಿಷ್ಕಾರ ಮತ್ತು ಸೇರ್ಪಡೆ, ಬಹುಶಾಸ್ತ್ರ ವ್ಯವಹಾರ ಪರಾಮರ್ಶೆ ಮುಂತಾದವು ಗಣೇಶರ ಅವಧಾನಗಳಲ್ಲಿ ಹಾಸುಹೊಕ್ಕಾಗಿರುವ ವಿಶೇಷ ಸಂಗತಿಗಳು. ಅವಧಾನದಲ್ಲಿ ಕಷ್ಟಸಾಧ್ಯ ಎಂದೇ ಭಾವಿಸಲಾಗಿದ್ದ ಚಿತ್ರಕವಿತ್ವವನ್ನು ಅಳವಡಿಸಿಕೊಂಡು ಸೈ ಎನಿಸಿಕೊಂಡಿರುವ ಅಪರೂಪದ ಸಾಧಕ ಇವರು.

ಮುಕುಟಮಣಿ

ರವೀ ಸಜಂಗದ್ದೆ
vveditoped@gmail.com

ಕನ್ನಡ ಸಾಹಿತ್ಯ-ಸಾಂಸ್ಕೃತಿಕ ಕ್ಷೇತ್ರದ ಹೆಮ್ಮೆಯ ಕುಡಿ ಶತಾವಧಾನಿ ಆರ್. ಗಣೇಶರು ಇನ್ನು ಮುಂದೆ 'ಪದ್ಮಭೂಷಣ' ಶತಾವಧಾನಿ ಆರ್.ಗಣೇಶ್! ಶ್ರೀಯುತರಿಗೆ ಈ ಪ್ರಶಸ್ತಿ ಸಂದಿರುವುದು, ಆ ಪ್ರಶಸ್ತಿಯ ಗೌರವಾದರವನ್ನೇ ನೂರ್ಮಡಿ ಹೆಚ್ಚಿಸಿದೆ ಎಂದರೆ ಅತಿಶಯೋಕ್ತಿ ಆಗಲಾರದು. ಇದು ಗಣೇಶರ ದಿವ್ಯ ಸ್ಮರಣಶಕ್ತಿ, ಕನ್ನಡ-ಇಂಗ್ಲಿಷ್-ಸಂಸ್ಕೃತ ಹೀಗೆ ವಿವಿಧ ಭಾಷೆಗಳಲ್ಲಿನ ಪಾಂಡಿತ್ಯ, ವೈವಿಧ್ಯಮಯ ವಿಚಾರಗಳ ಕುರಿತಾದ ಪ್ರಬುದ್ಧ ಜ್ಞಾನ, ಅಪರೂಪದ 'ಅವಧಾನ ಕಲೆ' ಮುಂತಾದವಕ್ಕೆ ಸಂದ ನಿಜವಾದ ಆದರ. ಗಣೇಶರ ಈ ಮಹಾನ್ ಸಾಧನೆಗೆ ಅಂತಃಕರಣಪೂರ್ವಕವಾದ ಅಕ್ಷರನಮನವಿದು.

ಮನಸ್ಸಿನ ಏಕಾಗ್ರತೆಯೇ ಅವಧಾನ. ಸ್ಮರಣೆ, ಸ್ಫೂರ್ತಿ, ಬುದ್ಧಿ ಮತ್ತು ಆಶುಕವಿತ್ವದ ಶಕ್ತಿಗಳಿಂದ ನಡೆಸುವ ವಿದ್ವತ್ಪೂರ್ಣ ಕಲೆಯೇ ಅವಧಾನ ಕಲೆ. ಪೃಚ್ಛಕ ಪಂಡಿತರು ಒಡ್ಡುವ ವಿವಿಧ ಸಮಸ್ಯೆಗಳಿಗೆ ಯಥೋಚಿತವಾಗಿ, ಆಶುವಾಗಿ, ಛಂದೋಬದ್ಧ ಪದ್ಯಗಳ ರೂಪದಲ್ಲಿ ಪರಿಹಾರ ನೀಡುವುದು ಈ ಕಲೆಯ ವಿಶೇಷ. 'ಧಾರಣ' ಮತ್ತು 'ಪೂರಣ' ಇವು ಅವಧಾನದ ಮೂಲಧಾತುಗಳು. ಸಮಸ್ಯೆಗಳನ್ನು ನಾಲ್ಕು ಸುತ್ತುಗಳಲ್ಲಿ ಸ್ವಾರಸ್ಯಕರವಾಗಿ ಪರಿಹರಿಸುವುದು 'ಪೂರಣ'ವಾದರೆ, ಸಮಸ್ಯೆ ಮತ್ತು ಹಿಂದಿನ ಸುತ್ತುಗಳಲ್ಲಿ ನೀಡಿರುವ ಪರಿಹಾರ ಪಾದಗಳನ್ನು ನೆನಪಿನಲ್ಲಿಟ್ಟು ಮುಂದುವರಿಸುವುದು 'ಧಾರಣ'. ಇವೆಲ್ಲವುಗಳ ಮಧ್ಯೆ, ಅಪ್ರಸ್ತುತ ಪೃಚ್ಛಕರು ಅವಧಾನಿಗಳ ಆಲೋಚನೆಗಳನ್ನು ಭಂಗಪಡಿಸಲು ನಾನಾ ರೀತಿಯಲ್ಲಿ ಪ್ರಶ್ನಿಸುತ್ತಾ ಚೇಷ್ಟೆ ಮಾಡುತ್ತಿದ್ದರೂ ಶಾಂತಚಿತ್ತರಾಗಿದ್ದುಕೊಂಡು ಎಲ್ಲರಿಗೂ ಉತ್ತರಿಸುವುದೇ ಈ ಅವಧಾನ ಕಲೆಯ ವೈಶಿಷ್ಟ್ಯ. ಅವಧಾನಗಳಲ್ಲಿ ಅನೇಕ ವಿಧಗಳಿದ್ದರೂ, 'ಅಷ್ಟಾವಧಾನ' ಮತ್ತು 'ಶತಾವಧಾನ'ಗಳು ಖ್ಯಾತಿ ಪಡೆದಿವೆ. ಅಷ್ಟಾವಧಾನದಲ್ಲಿ 8 ಸಮಸ್ಯೆಗಳನ್ನೂ, ಶತಾವಧಾನದಲ್ಲಿ 100 ಸಮಸ್ಯೆಗಳನ್ನೂ ಪರಿಹರಿಸುವ ಚಾಕಚಕ್ಯತೆಯನ್ನು ಹೊಂದಿರಬೇಕು; ಕೊನೆಯಲ್ಲಿ ಪೃಚ್ಛಕರ ಪ್ರಶ್ನೆಗಳಿಗೆ ಪರಿಹಾರಗಳು ಒದಗಿದಾಗ ಅವಧಾನವು ಪೂರ್ಣವಾಗುತ್ತದೆ.

''ಶಾಸ್ತ್ರ ಮತ್ತು ಕಾವ್ಯ, ವಾಗ್ದೇವಿಯ ಎರಡು ಮಾರ್ಗಗಳು. ಶಾಸ್ತ್ರವು ಬೌದ್ಧಿಕ ಸಾಮರ್ಥ್ಯದಿಂದಲೂ, ಕಾವ್ಯಪ್ರಕಾರವು ಪ್ರತಿಭಾ ವಿಲಾಸದಿಂದಲೂ ಒಲಿಯುತ್ತದೆ'' ಎನ್ನುತ್ತದೆ ಸಂಸ್ಕೃತದ ಶ್ಲೋಕವೊಂದು. ಈ ಎರಡೂ ಮಾರ್ಗಗಳನ್ನು ಒಲಿಸಿಕೊಂಡ ಕೆಲವೇ ಸಾಧಕರಲ್ಲಿ ಆರ್.ಗಣೇಶ್ ಅಗ್ರಗಣ್ಯರು. ನಮ್ಮ ನಾಡಿನಿಂದ ಮತ್ತು ಜನಮಾನಸದಿಂದ ಮರೆಯಾಗುತ್ತಿದ್ದ ಅವಧಾನ ಕಲೆಗೆ ಮತ್ತೆ ಜೀವ-ಭಾವವನ್ನು ತುಂಬಿ, ಆ ಕಲೆಯನ್ನು ಜನಾನುರಾಗಿಯಾಗಿಸಿದ ಕೀರ್ತಿ ಗಣೇಶರದ್ದು. ವ್ಯಕ್ತಿಯೊಬ್ಬರು ಉನ್ನತಸ್ತರದ ಸೃಜನಶೀಲ ಕವಿಯಾಗಿರಬಹುದು ಅಥವಾ ವಾಗ್ಮಿಯಾಗಿರಬಹುದು ಅಥವಾ ಲೇಖಕರಾಗಿರಬಹುದು- ಅಚ್ಚರಿಯೆಂದರೆ ಗಣೇಶರು ಈ ಮೂರೂ ಮಾರ್ಗಗಳಲ್ಲಿ ಸರ್ವೋತ್ತಮರು!

ಪ್ರತಿಭೆ, ವಿದ್ವತ್ತು, ಪರಿಶ್ರಮ, ಬೋಧನೆ ಮತ್ತು ರಂಜನೆಯ ಒಟ್ಟಂದದ ಈ ಕಲೆಯನ್ನು ಪುನರುಜ್ಜೀವನಗೊಳಿಸಿ, ಪೋಷಿಸಿ, ಬೆಳೆಸಿ, ಆ ಮೂಲಕ ಅವಧಾನಕ್ಕೆ ಪೂರ್ಣತೆ ಮತ್ತು ಸಾತತ್ಯವನ್ನು ನೀಡಿದ ಹೆಗ್ಗಳಿಕೆ ಗಣೇಶ್ ಅವರದ್ದು. ಹತ್ತನೆಯ ವಯಸ್ಸಿನಿಂದಲೇ ಸಾಹಿತ್ಯಾಸಕ್ತಿಯನ್ನು ಮೈಗೂಡಿಸಿಕೊಂಡು, ಹದಿನಾರನೆಯ ವಯಸ್ಸಿನಲ್ಲಿ ಛಂದೋಬದ್ಧವಾಗಿ ಕವಿತೆ ಮತ್ತು ಆಶುಕವನಗಳನ್ನು ರಚಿಸತೊಡಗಿದ ಗಣೇಶರು, 19ನೇ ವಯಸ್ಸಿನಲ್ಲಿ ಸಂಸ್ಕೃತ ಭಾಷೆಯ ಅಷ್ಟಾವಧಾನ ಪುಸ್ತಕವನ್ನು ಆಕಸ್ಮಿಕವಾಗಿ ನೋಡಿ, ತಾವೂ ಅದನ್ನು ಸಿದ್ಧಿಸಿಕೊಳ್ಳುವ ಕುರಿತು ಆಲೋಚಿಸಿ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರು. 1981ರ ನವೆಂಬರ್ 9ರಿಂದ ಗೆಳೆಯರ ಬಳಗದಲ್ಲಿ ಪ್ರಾರಂಭಿಸಿದ ಅಷ್ಟಾವಧಾನವನ್ನು ಅವರು ಇಂದಿಗೂ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಈ ಕಲೆಯಲ್ಲಿ ಹಂತಹಂತವಾಗಿ ಮತ್ತಷ್ಟು ಪರಿಣತಿ ಸಾಧಿಸಿ, ಅಷ್ಟಾವಧಾನದಿಂದ ಶತಾವಧಾನದವರೆಗೆ ಹೆಮ್ಮರವಾಗಿ ಬೆಳೆದುನಿಂತ ಕೀರ್ತಿ ಗಣೇಶರದ್ದು.



ವಿಸ್ತರಿತ ವಿಷಯ ವ್ಯಾಖ್ಯಾನ, ತಿಳಿಯಾದ ಹಾಸ್ಯಪ್ರಜ್ಞೆ, ಅದ್ಭುತ ಸಮಯಪ್ರಜ್ಞೆ, ನೂತನ ಅಂಗಗಳ ಆವಿಷ್ಕಾರ ಮತ್ತು ಸೇರ್ಪಡೆ, ಬಹುಶಾಸ್ತ್ರ ವ್ಯವಹಾರ ಪರಾಮರ್ಶೆ ಮುಂತಾದವು ಗಣೇಶರ ಅವಧಾನಗಳಲ್ಲಿ ಹಾಸುಹೊಕ್ಕಾಗಿರುವ ವಿಶೇಷ ಸಂಗತಿಗಳು. ಅವಧಾನದಲ್ಲಿ ಕಷ್ಟಸಾಧ್ಯ ಎಂದೇ ಭಾವಿಸಲಾಗಿದ್ದ ಚಿತ್ರಕವಿತ್ವವನ್ನು ಅಳವಡಿಸಿಕೊಂಡು ಸೈ ಎನಿಸಿಕೊಂಡಿರುವ ಅಪರೂಪದ ಸಾಧಕ ಇವರು. 'ಬುದ್ಧಿಮಾರ್ಗದಿಂದ ಪ್ರಜ್ಞೆ ಹರಿದಾಗ ಶಾಸ್ತ್ರ, ಹೃದಯದಿಂದ ಹರಿದಾಗ ಕಾವ್ಯ, ಎರಡಕ್ಕೂ ಒಂದೇ ಮೂಲ' ಎನ್ನುವ ಇವರ ಸೊಗಸಾದ ವಿವರಣೆ ಕೇಳುಗರನ್ನು ರೋಮಾಂಚನಗೊಳಿಸುತ್ತದೆ.

ಗಣೇಶರ ಮೇಲೆ ಪ್ರಭಾವ ಬೀರಿದವರು ಅವರ ತಂದೆ ಶಂಕರ ನಾರಾಯಣ ಅಯ್ಯರ್ ಮತ್ತು ತಾಯಿ ಅಲಮೇಲಮ್ಮನವರು. ರಾಮಾಯಣ, ಮಹಾಭಾರತಗಳನ್ನು ಓದುತ್ತಾ ಅವುಗಳಲ್ಲಿನ ಶ್ರೇಷ್ಠ ವಿಚಾರಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಬೆಳೆದ ಗಣೇಶರು, ಸಂಸ್ಕೃತಿಗೆ ಸಂವೇದನೆ, ಸ್ಪಂದನ ಇದ್ದಾಗ ಎಲ್ಲವೂ ಚೆಂದ ಮತ್ತು ಸುಲಲಿತ ಎಂದು ಬಲವಾಗಿ ನಂಬಿ, ಆಚರಣೆಯಲ್ಲಿ ತೋರಿಸಿದವರು. ''ನಾಟಕ, ಚರ್ಚಾಸ್ಪರ್ಧೆ ಮತ್ತಿತರ ಬೌದ್ಧಿಕ ಸ್ಪರ್ಧೆಗಳಲ್ಲಿ ಅಮ್ಮನ ಒತ್ತಾಸೆಯಿಂದಾಗಿ ಭಾಗಿಯಾದುದರ ಪರಿಣಾಮ ನನ್ನ ವ್ಯಕ್ತಿತ್ವ ರೂಪುಗೊಂಡಿತು'' ಎಂದು ಗಣೇಶರು ಹೇಳುವಾಗ ಅವರ ಕಂಗಳ ತುಂಬಾ ದಿವ್ಯಕಾಂತಿಯ ಹೊಳಪು!

ಬಹುಭಾಷಾ ವಿದ್ವಾಂಸರಾದ ಗಣೇಶರು ಕಾವ್ಯಮೀಮಾಂಸೆ, ಛಂದಶ್ಶಾಸ್ತ್ರ, ವೇದಾಂತ ಉಪನಿಷತ್, ಧರ್ಮಶಾಸ್ತ್ರ, ಇತಿಹಾಸ, ಭಾರತೀಯ ತತ್ತ್ವಶಾಸ್ತ್ರ, ಅಲಂಕಾರ ಶಾಸ್ತ್ರ, ವ್ಯಾಕರಣ ಹೀಗೆ ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಅಪಾರ ಪಾಂಡಿತ್ಯವನ್ನು ಹೊಂದಿರುವುದರ ಜತೆಗೆ, ಸಂಗೀತ, ನೃತ್ಯ, ಚಿತ್ರಕಲೆಗಳಲ್ಲೂ ಪ್ರಾವೀಣ್ಯವನ್ನು ಪಡೆದಿದ್ದಾರೆ. ಕನ್ನಡ, ಸಂಸ್ಕೃತ, ತಮಿಳು, ತೆಲುಗು, ಹಿಂದಿ, ಪಾಲಿ, ಶೌರಸೇನಿ, ಮರಾಠಿ, ಬಂಗಾಳಿ ಮುಂತಾದ ಭಾರತೀಯ ಭಾಷೆಗಳಲ್ಲಿ ಮಾತ್ರವಲ್ಲದೆ, ಇಂಗ್ಲಿಷ್, ಗ್ರೀಕ್, ಲ್ಯಾಟಿನ್, ಇಟಾಲಿಯನ್‌ನಂಥ ವಿದೇಶಿ ಭಾಷೆಗಳಲ್ಲೂ ಅಪಾರ ಪರಿಣತಿಯನ್ನು ಹೊಂದಿದ್ದಾರೆ.

ಏಕಕಾಲದಲ್ಲಿ ನೂರು ಜನರ ನೂರಾರು ಪ್ರಶ್ನೆಗಳಿಗೆ, ತರ್ಕಗಳಿಗೆ, ಕೀಟಲೆಗಳಿಗೆ ಉತ್ತರಿಸುತ್ತಾ, ಕವಿತೆಗಳನ್ನು ರಚಿಸಿ ವಾಚಿಸುತ್ತಾ ಸಾಗುವ, ಶ್ರೋತೃಗಳಿಗೆ ರಸಾನುಭವ ನೀಡುವ 'ಶತಾವಧಾನ' ಕಲೆಯಲ್ಲಿ ಇವರು ಸಿದ್ಧಹಸ್ತರು. ಪ್ರಪಂಚದಾದ್ಯಂತ ಸುಮಾರು 1200ಕ್ಕೂ ಹೆಚ್ಚಿನ ಸಂಖ್ಯೆಯ 'ಅಷ್ಟಾವಧಾನ'ಗಳನ್ನು ಮತ್ತು ಗಣನೀಯ ಸಂಖ್ಯೆಯ 'ಶತಾವಧಾನ'ಗಳನ್ನು ಅದ್ಭುತವಾಗಿ ನೆರವೇರಿಸಿರುವ ಗಣೇಶರು ಮೌಲಿಕ ಉಪನ್ಯಾಸಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ನೀಡಿದ್ದಾರೆ, 75ಕ್ಕೂ ಹೆಚ್ಚು ವಿದ್ವತ್ಪೂರ್ಣ ಗ್ರಂಥಗಳನ್ನು ಬರೆದಿದ್ದಾರೆ. ಒಟ್ಟಂದದಲ್ಲಿ ಹೇಳುವುದಾದರೆ, ವಿಶ್ವವಿದ್ಯಾಲಯವೊಂದು ಮಾಡಬೇಕಾದಷ್ಟು ಕೆಲಸಗಳನ್ನು ಏಕಾಂಗಿಯಾಗಿ ಮಾಡಿರುವ ಹೆಗ್ಗಳಿಕೆ ಗಣೇಶರದ್ದು. ಈ ನಡೆದಾಡುವ ವಿಶ್ವಕೋಶಕ್ಕೆ ಈಗ 'ಪದ್ಮಭೂಷಣ' ಪ್ರಶಸ್ತಿ ಲಭಿಸಿರುವುದು ಅತ್ಯಂತ ಹೆಮ್ಮೆಯ ಮತ್ತು ಸಂಭ್ರಮದ ಸಂಗತಿ. ಗಣೇಶರು ತಪಸ್ಸು ಮಾಡಿ ಅವಧಾನ ಕಲೆಯ ಸಾಧನೆಯ ಶಿಖರವನ್ನು ಏರಿದರು ಎನ್ನುವುದಕ್ಕಿಂತ, ಅದನ್ನು ಚಂದ್ರನ ಷೋಡಶ ಕಲೆಯ ರೀತಿ ತಮ್ಮೊಳಗೆ ಧರಿಸಿ ಮೆರೆಸುತ್ತಿರುವವರು ಎನ್ನುವುದು ಹೆಚ್ಚು ಸೂಕ್ತ. ಭಾರತೀಯ ಸಾಹಿತ್ಯ-ಸಂಸ್ಕೃತಿ ಕ್ಷೇತ್ರಗಳಲ್ಲಿ ಅವರ ಸೇವೆ ಹೀಗೆಯೇ ಅನವರತ ಮುಂದುವರಿಯಲಿ ಎಂಬುದು ಸಹೃದಯಿಗಳ ಆಶಯ.

ತೆರೆಮರೆಯ ಮತ್ತು ಅರ್ಹ ಸಾಧಕರನ್ನು ಗುರುತಿಸಿ, ಅವರಿಗೆ 'ಪದ್ಮ' ಪುರಸ್ಕಾರವನ್ನು ನೀಡುವ ಪರಿಪಾಠವನ್ನು ಕೇಂದ್ರ ಸರಕಾರವು ಕಳೆದೊಂದು ದಶಕದಿಂದ ಅತ್ಯಂತ ವ್ಯವಸ್ಥಿತವಾಗಿ ಮತ್ತು ಸಮರ್ಥವಾಗಿ ನಡೆಸಿಕೊಂಡು ಬರುತ್ತಿದೆ. ಬಹುಶ್ರುತ ವಿದ್ವಾಂಸರಾದ ಡಾ. ಆರ್. ಗಣೇಶ್ ಅವರಿಗೆ ಈ ಪ್ರಶಸ್ತಿಯು ಅರ್ಹವಾಗಿಯೇ ಒಲಿದಿದೆ ಹಾಗೂ ತನ್ಮೂಲಕ ತನ್ನ ಗರಿಮೆ-ಮೌಲ್ಯವನ್ನು ಹೆಚ್ಚಿಸಿಕೊಂಡಿದೆ. ಏಕೆಂದರೆ, ಕನ್ನಡದಲ್ಲಿ ಮರೆಯಾಗಿದ್ದ ಅದ್ಭುತ ಕಲಾಪ್ರಕಾರವೊಂದನ್ನು ಪುನರುಜ್ಜೀವನಗೊಳಿಸಿ, ಉತ್ಸಾಹಿ ತರುಣ ಅವಧಾನಿಗಳ ಪೀಳಿಗೆಯನ್ನೇ ಕಟ್ಟಿ ಬೆಳೆಸುತ್ತಿರುವ ಮಹಾನುಭಾವರಿವರು. ಡಾ. ಗಣೇಶರ ಸುಕಾರ್ಯಗಳು ಇನ್ನಷ್ಟು ಮತ್ತಷ್ಟು ವೃದ್ಧಿಯಾಗಲಿ ಎಂದು ಹಾರೈಸೋಣ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಒದುಗರ ಒಣಿ

ಒದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

'ಪದಸಾಗರ'ದ ಕರೆ

ಎಲ್ಲಿದ್ದೀರಾ ಪ್ರೇಕ್ಷಕರೇ, ಚಿತ್ರಮಂದಿರಕ್ಕೆ ಬನ್ನಿ, ಈ ಚಿತ್ರ ನೋಡಿ' ಎಂದು ಹೊಸಬರ ಉತ್ತಮ ಚಿತ್ರಗಳನ್ನು ಪ್ರೋತ್ಸಾಹಿಸಬೇಕಾದ ಸ್ಟಾರ್ ನಟರನ್ನೇ, 'ಎಲ್ಲಿದ್ದೀರಾ?' ಎಂದು ಕೂಗಿ ಕರೆಯಬೇಕಾದ ಪರಿಸ್ಥಿತಿ ಇಂದಿನ ಕನ್ನಡ ಚಲನಚಿತ್ರರಂಗದಲ್ಲಿ ಉಂಟಾಗಿರುವುದನ್ನು ನವೀನ್ ಸಾಗರ್ ಅವರು ತಮ್ಮ 'ಪದಸಾಗರ' ಅಂಕಣದಲ್ಲಿ (ಜ.27) 'ನೇರವಾಗಿ, ದಿಟ್ಟವಾಗಿ' ಪ್ರತಿಪಾದಿಸಿದ್ದಾರೆ. ಅವರು ಹೆಸರೆತ್ತಿರುವ ಸುದೀಪ್‌ರನ್ನು ಮೊದಲ್ಗೊಂಡು ಕನ್ನಡದ ಸ್ಟಾರ್ ನಟರೆಲ್ಲರೂ ಅವರ ಈ ಲೇಖನವನ್ನು ಅರ್ಥೈಸಿಕೊಂಡು ಸಕಾರಾತ್ಮಕವಾಗಿ ಸ್ವೀಕರಿಸಿ ತಮ್ಮ ಆ ವೃತ್ತಿ ಸಂಬಂಧಿತ ಹೊಣೆಗಾರಿಕೆಯನ್ನು ನಿರ್ವಹಿಸಿದರೆ ಆಗ ಮಾತ್ರ ಕನ್ನಡ ಚಲನಚಿತ್ರರಂಗ ಉಳಿದೀತು, ಬೆಳೆದೀತು. ಇಲ್ಲದೇಹೋದಲ್ಲಿ, ಕೆಲಕಾಲ ಸ್ಟಾರ್ ನಟರ ಒಂದಷ್ಟು ಹೈ ಬಜೆಟ್ಟಿನ ಚಿತ್ರಗಳು ತಮ್ಮ ವಿವಿಧ ಬಗೆಯ ವೇಷ-ಆವೇಶಗಳಿಂದ ಒಂದು ವರ್ಗದ ಪ್ರೇಕ್ಷಕರನ್ನು ಸೆಳೆದು ನಿರ್ಮಾಪಕರಿಗೆ-ನಟರಿಗೆ ಹಣಮಾಡಿಕೊಟ್ಟು ತದನಂತರ ಅನತಿ ಕಾಲದಲ್ಲಿಯೇ ಆ ವರ್ಗದ ಪ್ರೇಕ್ಷಕರಲ್ಲೂ ರೇಜಿಗೆ ಹುಟ್ಟಿಸಿ, ಅಂಥ ಚಿತ್ರಗಳೂ ಸೋಲುವಂತಾಗಿ ಕನ್ನಡ ಚಲನಚಿತ್ರರಂಗವೇ ಒಂದು ರೀತಿಯಲ್ಲಿ ಅಳಿವಿನ ಅಂಚಿಗೆ ಬಂದು ನಿಲ್ಲುತ್ತದೆ. ಮೊದಲಿನಿಂದಲೂ, ವಸ್ತುನಿಷ್ಠವಾಗಿ ಮತ್ತು ಚುರುಕುಮುಟ್ಟಿಸುವಂತೆ ಮೂಡಿಬರುತ್ತಿರುವ ನವೀನ್ ಸಾಗರ್ ಅವರ ಲೇಖನಗಳು ಈಚೀಚೆಗೆ ತಮ್ಮ ಚುರುಕನ್ನು ಇನ್ನಷ್ಟು ಹೆಚ್ಚಿಸಿಕೊಂಡಿವೆ. ಅವರ ಲೇಖನಿಯು ಹೀಗೆ 'ಪಿಕ್ಚರ್ ಪರ್ಫೆಕ್ಟ್' ಆಗಿ ಬರೆಯುವಷ್ಟು ಶಾರ್ಪ್ ಆಗಿರುವುದಕ್ಕೆ ಕಾರಣ, ಅವರು ಈಚೆಗೆ ಭಟ್ಟರ 'ಸಹವಾಸ ದೋಷ'ದಿಂದ ಇಸ್ರೇಲಿಗೆ ಹೋಗಿಬಂದದ್ದು ಇರಬಹುದೇ?

- ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಇಂದಿನ ವಾಸ್ತವತೆ

ನವೀನ್ ಸಾಗರ್ ಅವರು 'ಪದಸಾಗರ' ಅಂಕಣದಲ್ಲಿ ಕನ್ನಡ ಚಿತ್ರರಂಗದ ಏಳು-ಬೀಳುಗಳ ಕುರಿತು ಬರೆದಿದ್ದಾರೆ. 'ಚಂದನವನ'ವೆಂಬ ಕನ್ನಡ ಸಿನಿ ಪ್ರಪಂಚ ಒಂದು ಕಾಲಕ್ಕೆ ಇಡೀ ದೇಶಕ್ಕೇ ಗುಣಾತ್ಮಕ ಚಿತ್ರ ನೀಡುವಲ್ಲಿ ಹೆಸರಾಗಿತ್ತು. ಡಾ. ರಾಜ್, ವಿಷ್ಣು ಮುಂತಾದ ನಟರ ಎಷ್ಟೋ ಹಳೆಯ ಕನ್ನಡ ಚಿತ್ರಗಳು ಹಿಂದಿ ಮತ್ತು ಇತರ ಭಾಷೆಗಳಲ್ಲೂ ಮೂಡಿಬಂದಿವೆ. ನಮ್ಮ ಚಿತ್ರರಂಗ ಬೆಳೆಯಲು ಹಾಗೂ ಉಳಿಯಲು ನಮ್ಮವರೇ ಆದ ಇಂದಿನ ಹಿರಿಯ ನಾಯಕ ನಟರು ಕಾರಣರಾಗಬೇಕು. ಇತರ ಹೊಸ ನಿರ್ಮಾಪಕರ, ನಿರ್ದೇಶಕರ, ನಟರ ಚಿತ್ರ ನೋಡಿ, ಮೆಚ್ಚಿ (ನಿಜಕ್ಕೂ ವೀಕ್ಷಣೆಗೆ ಯೋಗ್ಯ ಇದ್ದಲ್ಲಿ) ಅದರ ಬಗ್ಗೆ ನಾಲ್ಕು ಕೌತುಕದ, ಪ್ರೋತ್ಸಾಹದ ಮಾತು ಹೇಳಿದಲ್ಲಿ ಆ ಚಿತ್ರಕ್ಕೂ, ತಮಗೂ ಅನಾಯಾಸವಾಗಿ ಪ್ರಚಾರ ಸಿಗುತ್ತದೆ. ವೀಕ್ಷಕರಿಗೆ ಕೂಡ ಇದರಿಂದ ಉತ್ತಮ ಹಿಮ್ಮಾಹಿತಿ ದೊರಕುತ್ತದೆ.

ನಮ್ಮ ಇಂದಿನ ಕಲಾವಿದರಲ್ಲಿ ಎಷ್ಟು ಜನ ಇದನ್ನು ಒಪ್ಪುತ್ತಾರೆ ಮತ್ತು ಆ ರೀತಿ ನಡೆದುಕೊಳ್ಳುತ್ತಾರೆ ಗೊತ್ತಿಲ್ಲ. ಇನ್ನು, ಲೇಖಕರು ಹೇಳಿದಂತೆ ರಾಜ್ಯದ ಪ್ರತಿ ಹೋರಾಟಗಳಿಗೆ ಈ ನಟ-ನಟಿಯರನ್ನು ಆಹ್ವಾನಿಸುವುದು, ಅವರು ಪಾಲ್ಗೊಳ್ಳಬೇಕೆಂದು ಅಪೇಕ್ಷಿಸುವುದು ತಪ್ಪು. ಅವರಿಗೆ ಯೋಗ್ಯತೆ, ತಿಳಿವಳಿಕೆ ಮತ್ತು ಆಸಕ್ತಿ ಇದ್ದರೆ ಅವರೇ ಬಂದು ಕೈ ಜೋಡಿಸಲಿ ಎಂಬುದು ಸತ್ಯ. ಅತಿ ಅಬ್ಬರದ, ದುಂದುವೆಚ್ಚದ, ಕ್ರೂರತೆಯ, ಕಾಲ್ಪನಿಕ ಚಿತ್ರಗಳ ನಿರ್ಮಾಣ ಕೊನೆಗೊಂಡು, ನಮ್ಮ ಕನ್ನಡ ನೆಲದ ಕಂಪಿನ ಸಾಮಾಜಿಕ, ಪೌರಾಣಿಕ, ಐತಿಹಾಸಿಕ, ಉತ್ತಮ ಸಂದೇಶ ನೀಡುವ ಸರಳ ಕಥೆಯ ಚಿತ್ರಗಳು ಬೆಳ್ಳಿ ಪರದೆಯ ಮೇಲೆ ಇನ್ನಾದರೂ ಬರಲಿ. ಕನ್ನಡ ಪ್ರೇಕ್ಷಕ ಸ್ವ-ಪ್ರೇರಣೆಯಿಂದ ಅವನ್ನು ವೀಕ್ಷಿಸಲಿ.

- ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಭಟ್ಟರ್ ಸ್ಕಾಚ್

- **ಮೋಹನ್ ಪಾಟೀಲ, ಹುಬ್ಬಳ್ಳಿ**
ಭಟ್ರೇ, ಮದುವೆಗೂ, ಮೊಬೈಲ್ ಫೋನ್‌ಗೂ ಇರುವ ವ್ಯತ್ಯಾಸವೇನು?
- **ಮೊಬೈಲ್ ಅನ್ನು ನಮಗೆ ಇಷ್ಟ ಬಂದ ಹಾಗೆ ಎಕ್ಸ್‌ಚೇಂಜ್ ಮಾಡಿಕೊಳ್ಳಬಹುದು, ಆದರೆ ಮದುವೆಯಲ್ಲಿ ರಿಂಗ್‌ಟೋನ್ ಮಾತ್ರ ಬದಲಾಯಿಸಬಹುದು!**

- **ಶಾಂತಿ ಸುಧಾಕರ, (ಇಮೇಲ್ ಮೂಲಕ)**
ಭಟ್ರೇ, ಮಳೆಗೂ, ಮನೆಗೆ ಬರುವ ಅತಿಥಿಗಳಿಗೂ ಇರುವ ಸಾಮ್ಯತೆ?
- **ಎರಡೂ ಬಂದಾಗ ಮೊದಲು ಖುಷಿಯಾಗುತ್ತದೆ, ಆದರೆ ಹೋಗುವುದು ತಡವಾದರೆ ಯಾವಾಗ ಹೋಗುತ್ತಾರೋ ಎಂದು ಅನ್ನಿಸತೊಡಗುತ್ತದೆ!**

- **ರಾಜು ಪತ್ತಾರ, ಹುಬ್ಬಳ್ಳಿ**
ಭಟ್ರೇ, ಹೆಂಡತಿಯ ಮೌನಕ್ಕೂ, ಮೊಬೈಲ್‌ನ 'ಸೈಲೆಂಟ್ ಮೋಡ್'ಗೂ ವ್ಯತ್ಯಾಸ?
- **ಮೊಬೈಲ್ ಸೈಲೆಂಟ್ ಆಗಿದ್ದರೆ 'ಮಿಸ್ಡ್ ಕಾಲ್'ಗಳು ಬರುತ್ತವೆ, ಹೆಂಡತಿ ಸೈಲೆಂಟ್ ಆಗಿದ್ದರೆ 'ಮಿಸೈಲ್'ಗಳು ಬರುತ್ತವೆ!**

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ಜ್ಞಾನಿ ಮತ್ತು ಸಂಸಾರಿಯ ನಡುವಿನ ವ್ಯತ್ಯಾಸವೇನು?
- **ಜ್ಞಾನಿಗೆ ತಪ್ಪಿನ ನಂತರ ಅರಿವಾಗುತ್ತದೆ, ಆದರೆ ಸಂಸಾರಿಗೆ ತಪ್ಪು ಮಾಡದಿದ್ದರೂ ತಪ್ಪನ್ನು ಒಪ್ಪಿಕೊಳ್ಳುವ ಅರಿವಿರುತ್ತದೆ!**

- **ಸಂದೀಪ ನಾಯಕ, ಬೆಂಗಳೂರು**
ಭಟ್ರೇ, ವಿಮಾನದ ಲ್ಯಾಂಡಿಂಗ್‌ಗೂ, ಮನೆಗೆ ಸೇರಿದ ಗಂಡನಿಗೂ ಇರುವ ಸಾಮ್ಯತೆ?
- **ಇಬ್ಬರೂ ಕೆಳಗೆ ಇಳಿಯುವ ಮುನ್ನ 'ಗ್ರೌಂಡ್ ಕಂಟ್ರೋಲ್'ನಿಂದ ಪರ್ಮಿಷನ್ ಪಡೆಯಲೇಬೇಕು!**

- **ನಂದಿತಾ, ಮಲ್ಲೇಶ್ವರ**
ಭಟ್ರೇ, ಗೂಗಲ್‌ಗಿಂತಲೂ ವೇಗವಾಗಿ ವಸ್ತುಗಳನ್ನು ಹುಡುಕಿಕೊಡುವ ಸರ್ಚ್ ಎಂಜಿನ್ ಯಾವುದು?
- **ಮನೆಯಲ್ಲಿ ಯಾವುದೇ ವಸ್ತುವನ್ನಾದರೂ ಒಂದೇ ಸೆಕೆಂಡಿನಲ್ಲಿ ಹುಡುಕುವ ಅಮ್ಮ!**

- **ಸಂಗೀತಾ ವೈದ್ಯ, ಶಿರಸಿ**
ಭಟ್ರೇ, ಜಿಮ್‌ಗೆ ಹೋಗುವವರ ಅತಿ ದೊಡ್ಡ ಸುಳ್ಳು ಯಾವುದು?
- **ನಾಳೆಯಿಂದ ಪಕ್ಕಾ ಡಯಟ್ ಶುರು ಮಾಡುತ್ತೇನೆ!**

ಶಿಕ್ಷಣ ಮಕ್ಕಳಿಗಷ್ಟೇ ಅಲ್ಲ, ಸರಕಾರಕ್ಕೂ ಬೇಕಿದೆ!

ಲೋಕಮತ

ಲೋಕೇಶ್ ಕಾಯರ್ಗ
vveditoped@gmail.com

ಶಿಕ್ಷಣದ ವಿಚಾರದಲ್ಲಿ ಇಷ್ಟೊಂದು ತಲೆಕೆಡಿಸಿಕೊಂಡ ಬೇರೆ ರಾಜ್ಯ ಇದೆಯೇ, ಇಲ್ಲವೋ ಗೊತ್ತಿಲ್ಲ; ಆದರೆ ಕರ್ನಾಟಕ ಸರಕಾರ ಮತ್ತು ಕನ್ನಡಿಗರ ಪಾಲಿಗೆ ಶಿಕ್ಷಣಕ್ಕಿಂತ ಹೆಚ್ಚು ಚಿಂತೆಯ ವಿಚಾರ ಬೇರೆ ಇಲ್ಲ. ಮೂರ್‍ನಾಲ್ಕು ದಶಕಗಳಿಂದ ಶುರುವಾದ ಈ ಚಿಂತೆ ಈಗ ನಾನಾ ಸ್ವರೂಪಗಳನ್ನು ಪಡೆದಿದೆ. ಎಷ್ಟರ ಮಟ್ಟಿಗೆ ಎಂದರೆ ನಮ್ಮ ಶಿಕ್ಷಣ ದಾಹವನ್ನು ತಣಿಸುವ ಹೆಸರಿನಲ್ಲಿ ನೆರೆಯ ಆಂಧ್ರಪ್ರದೇಶ, ತೆಲಂಗಾಣದ ಶಿಕ್ಷಣ ಕುಳಗಳು ಜೋಳಿಗೆ ತುಂಬಿಸಿಕೊಳ್ಳುತ್ತಿದ್ದಾರೆ. ಇಷ್ಟೊಂದು ಚಿಂತೆಯ ನಂತರವೂ ರಾಜ್ಯದಲ್ಲಿ ಸಾರ್ವತ್ರಿಕ ಶಿಕ್ಷಣದ ಗುಣಮಟ್ಟ, ಕಲಿಕೆಯ ಮಟ್ಟ ಏರಿಕೆ ಕಂಡಿದೆಯೇ ಎಂದು ಕೇಳಿದರೆ, ಕಳೆದ ಒಂದೂವರೆ ದಶಕಗಳಿಂದ ರಾಜ್ಯದ ಕಲಿಕಾ ಗುಣಮಟ್ಟ ಇಳಿಮುಖವಾಗುತ್ತಲೇ ಸಾಗಿದೆ.

ಕರ್ನಾಟಕವು ತಾಂತ್ರಿಕ ಶಿಕ್ಷಣ ಮತ್ತು ಐಟಿ-ಬಿಟಿ ಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುವ ರಾಜ್ಯ. ಆದರೆ, ಈ ಹೊಳಪಿನ ಹಿಂದೆ ರಾಜ್ಯದ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ ವ್ಯವಸ್ಥೆಯು ಗಂಭೀರವಾದ ಸವಾಲುಗಳನ್ನು ಮತ್ತು ಆಡಳಿತಾತ್ಮಕ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಈ ಬಿಕ್ಕಟ್ಟಿನ ಮೂಲವನ್ನು ಪತ್ತೆ ಹಚ್ಚಿ, ತಕ್ಕ ಪರಿಹಾರ ಕಂಡುಕೊಳ್ಳಬೇಕಿದ್ದ ನಾಯಕರು, ಇನ್ನೆಲ್ಲೋ ಮುಲಾಮು ಹಚ್ಚಲು ಹೊರಟಿದ್ದಾರೆ. ಇವೆಲ್ಲದರ ನಡುವೆ ಇಡೀ ಶಿಕ್ಷಣ ವ್ಯವಸ್ಥೆ ಸರಕಾರದ ಕೈ ತಪ್ಪಿ ಖಾಸಗಿಯವರ ಪಾಲಾಗಿದೆ. ಇಷ್ಟಾದರೂ ಸರಕಾರ, ತಾನೇ ನಾಡಿನ ಶಿಕ್ಷಣದ ಅಧ್ವರ್ಯು ಎಂಬ ಭ್ರಾಂತಿಯಲ್ಲಿ ದಿನಕ್ಕೊಂದು ಆದೇಶಗಳನ್ನು ಹೊರಡಿಸುತ್ತಿದೆ. ಫಲಿತಾಂಶದ ಮೇಲೆ ಕಣ್ಣಿಟ್ಟು ನೀತಿ, ನಿಯಮಗಳನ್ನು ಬದಲಿಸುತ್ತಲೇ ಇದೆ.

ರಾಜ್ಯದಲ್ಲಿ ಯಾರ್‍ಯಾರು ಪ್ರಾಥಮಿಕ ಶಿಕ್ಷಣ ಸಚಿವರಾಗಿ ಬರುತ್ತಾರೋ ಅವರವರ ಚಿಂತನೆಗೆ ಅನುಗುಣವಾಗಿ ಶಿಕ್ಷಣ ನೀತಿ ಬದಲಾಗಲೇಬೇಕು. ಈ ಹಿಂದೆ ಬಸವರಾಜ ಬೊಮ್ಮಾಯಿ ಸರಕಾರದ ಅವಧಿಯಲ್ಲಿ ಶಿಕ್ಷಣ ಸಚಿವರಾಗಿದ್ದ ಬಿ.ಸಿ. ನಾಗೇಶ್ ಅವರು ಪಠ್ಯ ಕ್ರಮದ ಬದಲಾವಣೆ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡರೆ, ಹಾಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಕರ್ನಾಟಕ ಪಬ್ಲಿಕ್ ಶಾಲೆಯ ಮಂತ್ರ ಜಪಿಸುತ್ತಿದ್ದಾರೆ. ಸದ್ಯ ಇಡೀ ಕರ್ನಾಟಕದಲ್ಲಿ ಶಿಕ್ಷಣವೆಂದರೆ ಮಾಲ್‌ಗಳಲ್ಲಿ ದೊರಕುವ ಪ್ರಸಾಧನ ಸಾಮಗ್ರಿಗಳಂತಾಗಿವೆ. ಹತ್ತಾರು ಆಯ್ಕೆಗಳ ಮುಂದೆ ಯಾವುದನ್ನು ಆಯ್ದುಕೊಳ್ಳಬೇಕೆಂಬ ವಿಷಯದಲ್ಲಿಯೇ ಪೋಷಕರು ಎಡವಿ ಬೀಳುತ್ತಿದ್ದಾರೆ.

ಸರಕಾರಿ ಕನ್ನಡ ಶಾಲೆಗಳು, ಅನುದಾನಿತ ಆಂಗ್ಲ ಮಾಧ್ಯಮ ಶಾಲೆಗಳು, ಅನುದಾನರಹಿತ ಆಂಗ್ಲ ಮಾಧ್ಯಮ ಶಾಲೆಗಳು, ಕೇಂದ್ರ ಸರಕಾರ ನಡೆಸುವ ವಸತಿಸಹಿತ ನವೋದಯ ಶಾಲೆಗಳು, ರಾಜ್ಯ ಸರಕಾರದ ಮೊರಾರ್ಜಿ, ಏಕಲವ್ಯ, ರಾಣಿ ಚೆನ್ನಮ್ಮ ಇತ್ಯಾದಿ ವಸತಿ ಸಹಿತ ಶಾಲೆಗಳು, ಕೇಂದ್ರೀಯ ವಿದ್ಯಾಲಯಗಳು ಹೀಗೆ ಥರಾವರಿ ಆಯ್ಕೆಗಳು ಒಂದೆಡೆಯಾದರೆ, ಶಾಲೆಗಳಲ್ಲೂ ನಾನಾ ವಿಧ. ಕನ್ನಡ ಮಾಧ್ಯಮವೇ, ಇಂಗ್ಲಿಷ್ ಮಾಧ್ಯಮವೇ ಎನ್ನುವುದು ಪಾಲಕರನ್ನು ಮೊದಲು ಕಾಡುವ ಗೊಂದಲ. ಕಡು ಬಡವರನ್ನು ಹೊರತುಪಡಿಸಿ ಹೊಸ ಜಮಾನಾದ ಬಹುತೇಕರ ಆಯ್ಕೆ ಇಂಗ್ಲಿಷ್ ಮೀಡಿಯಂ. ರಾಜ್ಯಪಠ್ಯವೇ ಅಥವಾ ಕೇಂದ್ರ ಪಠ್ಯವೇ ಎನ್ನುವುದು ನಂತರದ ಚಿಂತೆ. ನಗರ ಪ್ರದೇಶಗಳಲ್ಲಿ ಬಹುತೇಕರು ತಮ್ಮ ಮಕ್ಕಳನ್ನು ಸಿಬಿಎಸ್‌ಇ, ಐಸಿಎಸ್‌ಇ ಮಾನ್ಯತೆ ಪಡೆದ ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಿದರೆ, ಇನ್ನುಳಿದವರಿಗೆ ರಾಜ್ಯ ಪಠ್ಯಕ್ರಮ ಅನಿವಾರ್ಯ ಆಯ್ಕೆ. ಕನ್ನಡ ಮಾಧ್ಯಮ ಶಾಲೆ ಬಹುತೇಕರ ಕೊನೆಯ ಆಯ್ಕೆ.

ಈ ಬಹುಮಾದರಿ ಆಯ್ಕೆಗಳ ನಡುವೆ ಮಧು ಬಂಗಾರಪ್ಪ ಅವರು ಮುಂದಿಟ್ಟಿರುವ ಕೆಪಿಎಸ್ ಶಾಲೆಗಳು ಎಷ್ಟರ ಮಟ್ಟಿಗೆ ಯಶಸ್ವಿಯಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ರಾಜ್ಯದ ಶಿಕ್ಷಣ ವ್ಯವಸ್ಥೆಯ ಚಹರೆಯನ್ನು ಸಂಪೂರ್ಣವಾಗಿ ಬದಲಿಸಲಿವೆ ಎನ್ನುವುದು ದಿಟ. ಇದಕ್ಕೆ ಕಾರಣ ಇವು ಕ್ರಾಂತಿಕಾರಕ ನಿರ್ಧಾರ ಎಂದಲ್ಲ. ಇವು ಸೃಷ್ಟಿಸುವ ಗೊಂದಲಗಳಿಗೆ ಪರಿಹಾರ ಏನು ಎನ್ನುವುದು ಮುಖ್ಯ ಪ್ರಶ್ನೆ. ಮುಂದಿನ ದಿನಗಳಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ 6,000ಕ್ಕೂ ಹೆಚ್ಚು ಕೆಪಿಎಸ್ ಶಾಲೆಗಳನ್ನು ತೆರೆಯುವ ಗುರಿಯನ್ನು ಸರಕಾರ ಹೊಂದಿದೆ. ಈಗಾಗಲೇ 300ಕ್ಕೂ ಹೆಚ್ಚು ಕರ್ನಾಟಕ ಪಬ್ಲಿಕ್ ಶಾಲೆಗಳು ಕಾರ್ಯಾರಂಭ ಮಾಡಿವೆ. ಹಾಲಿ ಶೈಕ್ಷಣಿಕ ವರ್ಷದಲ್ಲಿ ಸುಮಾರು 900 ಹೊಸ ಕೆಪಿಎಸ್ ಶಾಲೆಗಳನ್ನು ಪ್ರಾರಂಭಿಸಲು ಅನುಮೋದನೆ ನೀಡಲಾಗಿದೆ.

ಸರಕಾರ ಸ್ಥಾಪಿಸಲು ಹೊರಟಿರುವ ಎಲ್ಲ ಕೆಪಿಎಸ್ ಶಾಲೆಗಳು ಯಶಸ್ವಿಯಾಯಿತೆಂದಿಟ್ಟುಕೊಳ್ಳೋಣ. ಹಳ್ಳಿಗಳಲ್ಲಿರುವ ಎಲ್ಲ ಮಕ್ಕಳು ಈ ಶಾಲೆಗಳಿಗೆ ಸೇರಿದರೆ ಹಾಲಿ ಇರುವ ಸಾವಿರಾರು ಸರಕಾರಿ ಮತ್ತು ಖಾಸಗಿ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಗಳು ಮತ್ತು ಪ್ರೌಢ ಶಾಲೆಗಳ ಭವಿಷ್ಯ ಏನು ? ಇಲ್ಲಿ ದುಡಿಯುತ್ತಿರುವ ಶಿಕ್ಷಕರ ಪಾಡೇನು? ಈ ಪ್ರಶ್ನೆಗಳಿಗೆ ಮಧು ಬಂಗಾರಪ್ಪ ಅವರ ಬಳಿ ಉತ್ತರವಿಲ್ಲ. ಒಂದು ವೇಳೆ ಇವು ಯಶಸ್ವಿಯಾಗಲಿಲ್ಲ ಎಂದಾದರೆ ಸಮಸ್ಯೆ ಇನ್ನೂ ದೊಡ್ಡದು. ಆರು ಸಾವಿರ ಕೆಪಿಎಸ್ ಶಾಲೆಗಳನ್ನು ಹೊಸದಾಗಿ ತೆರೆಯುವುದೆಂದರೆ ಸಾವಿರಾರು ಕೋಟಿ ರು. ಬಂಡವಾಳ ಹೂಡಬೇಕು. ಇಷ್ಟೊಂದು ಬಂಡವಾಳ ಹೂಡಿಕೆಯಾದ ಬಳಿಕ ಪಾಳು ಬೀಳುವ ಶಾಲೆಗಳನ್ನು ಏನು ಮಾಡಬೇಕು ? ಇಲ್ಲಿರುವ ಸಿಬ್ಬಂದಿಗಳ ಗತಿ ಏನು ? ಈ ಪ್ರಶ್ನೆಗಳಿಗೂ ಸದ್ಯಕ್ಕೆ ಸ್ಪಷ್ಟನೆ ಸಿಕ್ಕಿಲ್ಲ.

ಎಲ್‌ಕೆಜಿಯಿಂದ 12ನೇ ತರಗತಿಯವರೆಗೆ ಒಂದೇ ಸೂರಿನಡಿ ಶಿಕ್ಷಣ ನೀಡುವುದು, ಪಿಯು ಶಿಕ್ಷಣ ಮುಗಿಯುವವರೆಗೆ ಒಂದೇ ಶಾಲಾ ಆವರಣದಲ್ಲಿ ಗುಣಮಟ್ಟದ ಶಿಕ್ಷಣ ಪಡೆಯುವಂತೆ ಮಾಡುವುದು ಸರಕಾರದ ಚಿಂತನೆ. ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡಿ ಕಡಿಮೆ ಖರ್ಚಿನಲ್ಲಿ ಎಲ್ಲರಿಗೂ ಉತ್ತಮ ಶಿಕ್ಷಣ ಕೊಡಿಸಬೇಕೆಂಬ ಈ ಚಿಂತನೆಯ ಉದ್ದೇಶವೂ ಸರಿ ಇದೆ. ಈ ಶಾಲೆಗಳಲ್ಲಿ ಸ್ಮಾರ್ಟ್ ಕ್ಲಾಸ್‌ಗಳು, ಸುಸಜ್ಜಿತ ಗ್ರಂಥಾಲಯ, ಪ್ರಯೋಗಾಲಯ ಮತ್ತು ಕ್ರೀಡಾ ಸೌಲಭ್ಯಗಳ ಸಹಿತ ಆಧುನಿಕ ಮೂಲಸೌಕರ್ಯ ಕಲ್ಪಿಸಲಾಗುತ್ತದೆ ಎಂದು ಸರಕಾರ ಹೇಳಿಕೊಂಡಿದೆ. ಇವೆಲ್ಲವೂ ಸರಿ. ಆದರೆ ಈ ಶಾಲೆಗಳ ಬೋಧನಾ ಮಾಧ್ಯಮ ಇಂಗ್ಲಿಷ್. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕನ್ನಡ ಮಾಧ್ಯಮದ ವಿಭಾಗಗಳೂ ಲಭ್ಯವಿರುತ್ತವೆ ಎಂದು ಸರಕಾರ ಹೇಳಿಕೊಂಡಿದೆಯಾದರೂ ಪೋಷಕರು ಮತ್ತು ವಿದ್ಯಾರ್ಥಿಗಳು ಈ ಬೇಡಿಕೆ ಮುಂದಿಡುವುದಿಲ್ಲವೆಂಬ 'ಭರವಸೆ' ಸರಕಾರಕ್ಕಿದೆ.

ಅಲ್ಲಿಗೆ ಕರ್ನಾಟಕದಲ್ಲಿ ಕನ್ನಡ ಮಾಧ್ಯಮ ಇನ್ನು ಮುಂದೆ 'ವಸ್ತು ಸಂಗ್ರಹಾಲಯ'ದಲ್ಲಿಡಬೇಕಾದ ವಿಚಾರವಾಗಲಿದೆ. ಕನ್ನಡ ಮಾಧ್ಯಮದ ಶಾಲೆಗಳಲ್ಲಿಯೇ ಇಂಗ್ಲಿಷ್ ವಿಷಯವನ್ನು ಒಂದು ಭಾಷೆಯಾಗಿ ಚೆನ್ನಾಗಿ ಬೋಧಿಸಲು ಸರಕಾರ ಕ್ರಮ ಕೈಗೊಂಡಿದ್ದರೆ ಆಕ್ಷೇಪಕ್ಕೆ ಅವಕಾಶವಿರಲಿಲ್ಲ. ಆದರೆ ಸರಕಾರ ಖಾಸಗಿಯವರಂತೆ ಪಾಲಕರ ಇಂಗ್ಲಿಷ್ ಭ್ರಾಂತಿ ಮತ್ತು ಒಣ ಪ್ರತಿಷ್ಠೆಯನ್ನೇ ಮುಂದಿಟ್ಟುಕೊಂಡು ಅವರಿಗಾಗಿ ಕೆಪಿಎಸ್ ಶಾಲೆಗಳನ್ನು ತೆರೆಯಲು ಮುಂದಾಗಿರುವುದು ನಾಡಿನ ಬಹುದೊಡ್ಡ ದುರಂತ.

ಕೆಪಿಎಸ್ ಶಾಲೆಗಳಿಗೆ ಕರ್ನಾಟಕ ಸಾರ್ವಜನಿಕ ಸೇವಾ ಆಯೋಗ ಅಥವಾ ಶಾಲಾ ಶಿಕ್ಷಣ ಇಲಾಖೆಯ ಮೂಲಕ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಿ ಖಾಯಂ ಶಿಕ್ಷಕರನ್ನು ನೇಮಿಸಿಕೊಳ್ಳಲಾಗುತ್ತದೆ ಎಂದು ಸರಕಾರ ಹೇಳಿಕೊಂಡಿದೆ. ಆದರೆ ಈ ಮಾತು ಯಾವಾಗ ಈಡೇರುತ್ತದೆ ಎನ್ನುವ ಬಗ್ಗೆ ಸ್ಪಷ್ಟತೆ ಇಲ್ಲ. ಇತ್ತೀಚಿನ ಮಾಹಿತಿಯಂತೆ ಸುಮಾರು 18,000 ಶಿಕ್ಷಕರ ತಾತ್ಕಾಲಿಕ ನೇಮಕಾತಿಗೆ ಸರಕಾರ ಚಾಲನೆ ನೀಡಿದೆ. ನಮ್ಮ ವಿಶ್ವವಿದ್ಯಾಲಯಗಳಲ್ಲಿ ಎರಡು ದಶಕಗಳ ಹಿಂದೆ ತಾತ್ಕಾಲಿಕ ನೆಲೆಯಲ್ಲಿ ನೇಮಕಗೊಂಡು ಇದೇ ನೆಲೆಯಲ್ಲಿ ನಿವೃತ್ತಿಯಾದ ಉಪನ್ಯಾಸಕರಿದ್ದಾರೆ. ಮುಂದೊಂದು ದಿಬ ಕೆಪಿಎಸ್ ಶಾಲೆಗಳ ನೇಮಕವೂ ಇದೇ ದಾರಿ ಹಿಡಿದರೆ ಅಚ್ಚರಿ ಇಲ್ಲ.

ರಾಜ್ಯ ಸರಕಾರ ಪ್ರತಿ ಕೆಪಿಎಸ್ ಶಾಲೆಯನ್ನು ಅಭಿವೃದ್ಧಿಪಡಿಸಲು ಸುಮಾರು ₹4 ಕೋಟಿ ವೆಚ್ಚದ ಯೋಜನೆಯನ್ನು ರೂಪಿಸಿದೆ. ಆದರೆ ಹೊಸದಾಗಿ ಶಾಲೆ ತೆರೆಯುವುದಾದರೆ ಈ ಮೊತ್ತ ನಾಲ್ಕೈದು ಎಕರೆ ಜಾಗದ ಖರೀದಿಗೇ ಬೇಕಾಗಬಹುದು. ಒಂದು ವೇಳೆ ಪ್ರತಿ ಗ್ರಾಪಂನಲ್ಲೂ ಉಚಿತವಾಗಿ ನಿವೇಶನ ಸಿಕ್ಕಿದರೂ, ಕ್ರೀಡಾಂಗಣಕ್ಕೆ ಬೇಕಾದ ಜಾಗವೂ ಸೇರಿ ಕನಿಷ್ಠ ಐದಾರು ಎಕರೆ ಜಾಗ ಸಿಗುವುದು ಕಷ್ಟ. ಎಲ್‌ಕೆಜಿಯಿಂದ ಪಿಯುವರೆಗೆ ಬೇಕಾದ ಶಿಕ್ಷಣ ಎಂದರೆ ಕನಿಷ್ಠ ಪಕ್ಷ ಸಾವಿರ ಮಕ್ಕಳ ಶಿಕ್ಷಣಕ್ಕೆ ಬೇಕಾದ ಮೂಲಸೌಕರ್ಯಗಳನ್ನು ಒದಗಿಸಬೇಕು. ಇದು ಸಾಧ್ಯವೇ ಎನ್ನುವುದು ಪ್ರಶ್ನಾರ್ಹವಾಗಿಯೇ ಉಳಿಯುತ್ತದೆ.

ಕೆಪಿಎಸ್ ಶಾಲೆಗಳಿಗೆ ಎಡಿಬಿಯಂತಹ ಬ್ಯಾಂಕಿಂಗ್ ಸಂಸ್ಥೆಗಳಿಂದ ಸಾಲ ಪಡೆದು ಸುಸಜ್ಜಿತ ಕಟ್ಟಡ, ಪ್ರಯೋಗಾಲಯ ಮತ್ತು ಕ್ರೀಡಾಂಗಣಗಳನ್ನು ನಿರ್ಮಿಸಲಾಗುತ್ತದೆ ಎಂದು ಸರಕಾರ ತಿಳಿಸಿದೆ. ಈ ಸಾಲವನ್ನು ತುಂಬಬೇಕಿದ್ದರೆ ಸರಕಾರ, ವಿದ್ಯಾರ್ಥಿಗಳಿಂದ ಶುಲ್ಕ ಸಂಗ್ರಹಿಸಲೇಬೇಕು. ಬಡವರಿಗಾಗಿ ಸದಾ ತೆರೆದಿರುತ್ತಿದ್ದ ಕನ್ನಡ ಶಾಲೆಗಳು ಮುಚ್ಚಿ ಕೆಪಿಎಸ್ ಶಾಲೆಗಳಷ್ಟೇ ಉಳಿದುಕೊಂಡರೆ ಇವರ ಶಿಕ್ಷಣದ ಪಾಡೇನು ? ಈ ಪ್ರಶ್ನೆಗೂ ಭವಿಷ್ಯವೇ ಉತ್ತರ ಹೇಳಬೇಕು.

ಯಾವುದೇ ಕಾರಣಕ್ಕೂ ಕನ್ನಡ ಶಾಲೆಗಳನ್ನು ಮುಚ್ಚುವುದಿಲ್ಲ ಎನ್ನುವುದು ಮಧು ಬಂಗಾರಪ್ಪ ಅವರ ಮತ್ತೊಂದು ಜನಪ್ರಿಯ ಘೋಷಣೆ. ಆದರೆ ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲೂ ಉತ್ತಮ ಗುಣಮಟ್ಟದ ಕೆಪಿಎಸ್ ಶಾಲೆ ದೊರೆತರೆ ವಿದ್ಯಾರ್ಥಿಗಳು ಕನ್ನಡ ಮಾಧ್ಯಮದ ಸರಕಾರಿ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳುವ ಪ್ರಮೇಯ ಇರುವುದೇ ಇಲ್ಲ. ಅಲ್ಲಿಗೆ ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಎಂಬ ಸರಕಾರದ ಹೇಳಿಕೆಯೂ ಕ್ಲೀಷೆಯಾಗಲಿದೆ.

ಸರಕಾರದ ಈ ಮಹತ್ವಾಕಾಂಕ್ಷೆಯ ಯೋಜನೆಯ ನಡುವೆ ನಿಂತು ಯೋಚಿಸಿದರೆ, ಸದ್ಯ ನಮ್ಮ ಸರಕಾರಿ ಶಾಲೆಗಳಲ್ಲಿ ಸುಮಾರು 40,000 ಕ್ಕೂ ಹೆಚ್ಚು ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಸಾವಿರಾರು ಶಾಲೆಗಳು ಕೇವಲ ಒಬ್ಬರೇ ಶಿಕ್ಷಕರಿಂದ ನಡೆಯುತ್ತಿವೆ. ನೂರಾರು ಶಾಲೆಗಳಲ್ಲಿ ಇಂದಿಗೂ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯದ ಕೊರತೆಯಿದೆ. 8,000ಕ್ಕೂ ಹೆಚ್ಚು ಶಾಲಾ ಕೊಠಡಿಗಳು ಸಂಪೂರ್ಣ ಶಿಥಿಲಾವಸ್ಥೆಯಲ್ಲಿವೆ. ಕಲಿಕಾ ಸಮೀಕ್ಷೆಯ ಪ್ರಕಾರ 5ನೇ ತರಗತಿಯ ಅನೇಕ ವಿದ್ಯಾರ್ಥಿಗಳಿಗೆ 2ನೇ ತರಗತಿಯ ಪಠ್ಯವನ್ನು ಸರಿಯಾಗಿ ಓದಲು ಬರುವುದಿಲ್ಲ. ಗಣಿತದ ಸರಳ ಲೆಕ್ಕಗಳನ್ನು ಬಿಡಿಸಲು ಶೇ. 50 ರಷ್ಟು ಮಕ್ಕಳು ವಿಫಲರಾಗುತ್ತಿದ್ದಾರೆ. ಈ ಎಲ್ಲ ವೈಫಲ್ಯಗಳ ನಡುವೆಯೇ ಮಧು ಬಂಗಾರಪ್ಪ ಅವರು ಆದರ್ಶಮಯ ಶಿಕ್ಷಣ ವ್ಯವಸ್ಥೆಯೊಂದನ್ನು ಜಾರಿಗೆ ತರಲು ಹೊರಟಿದ್ದಾರೆ. ಇದು ಆದರ್ಶವಾಗುವುದೋ, ಅವ್ಯವಸ್ಥೆಯ ಆಗರವಾಗುವುದೋ ಎಂದು ಕಾಲವೇ ಹೇಳಬೇಕು. ಆದರೆ ಶಿಕ್ಷಣ ಮಕ್ಕಳಿಗಷ್ಟೇ ಅಲ್ಲ, ಸರಕಾರಕ್ಕೂ ಬೇಕಿದೆ ಎನ್ನುವುದು ದಿಟ.

ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್
naadigru@gmail.com

- ಚಡಚಣ ತಾಲೂಕಿನ ಹಲಸಂಗಿಯಲ್ಲಿ ಪಿಸ್ತೂಲ್ ತೋರಿಸಿ ಹಾಡಹಗಲೇ ಸಿನಿಮೀಯ ಶೈಲಿಯಲ್ಲಿ ಚಿನ್ನದ ಅಂಗಡಿ ದರೋಡೆ: ಸುದ್ದಿ
- **ಥೋ, ಹೋಗ್ ಅತ್ಲಾಗಿ! 'ಕೋಳಿ ಮೊದಲಾ ಅಥವಾ ಮೊಟ್ಟೆ ಮೊದಲಾ?' ಅನ್ನೋ ಗೊಂದಲದ ರೀತಿಯಲ್ಲಿ, 'ಸಿನಿಮಾಗಳಿಂದ ಪ್ರೇರಿತರಾಗಿ ದರೋಡೆ ಮಾಡ್ತಾರಾ ಅಥವಾ ದರೋಡೆಯ ಪ್ರಕರಣಗಳನ್ನು ಆಧಾರವಾಗಿ ಇಟ್ಕೊಂಡು ಸಿನಿಮಾದ ಕಥೆಗಳನ್ನು ಹೆಣೀತಾರಾ? ಅನ್ನೋ ಗೊಂದಲ ಶುರುವಾಗಿದೆ ಕಣ್ರೀ!!**
- 2028ಕ್ಕೆ ನಾನೇ ಮುಖ್ಯಮಂತ್ರಿ ಆಗೋದು ಗ್ಯಾರಂಟಿ: ಶಾಸಕ ಬಸನಗೌಡ ಪಾಟೀಲರ ಭವಿಷ್ಯ
- **ಈ ಭವಿಷ್ಯವಾಣಿ ಕೇಳಿಸಿಕೊಂಡು ಉರಿದುಬಿದ್ದ 'ಬ್ರಹ್ಮಾಂಡ' ಗುರುಗಳು, ''2026ರಿಂದ ಮುಂದುವರಿಯೋ ಮುಖ್ಯಮಂತ್ರಿ ಯಾರು ಅನ್ನೋ 'ವರ್ತಮಾನ'ದ ಕಥೆನೇ ಇನ್ನೂ ಶುರುವಾಗಿಲ್ಲ, ಇವರಾಗ್ಲೇ 2028ರ ಮುಖ್ಯಮಂತ್ರಿ ಬಗ್ಗೆ 'ಭವಿಷ್ಯ' ಹೇಳ್ತಾ ಇದ್ದಾರೆ; ಹೀಗಾದ್ರೆ, ನಮ್ಮಂಥೋರು ಮುಂಡಾಮೋಚ್ಕೋಬೇಕಾ?'' ಅಂತ ಸುದ್ದಿವಾಹಿನಿಯೊಂದರಲ್ಲಿ ಹೊಗೆಬಿಟ್ಟರಂತೆ!!**
- 400 ಕೋಟಿ ರುಪಾಯಿ ಹಣವಿದ್ದ ಕಂಟೇನರ್ ದರೋಡೆ ಪ್ರಕರಣ. ಇದು ಬಿಜೆಪಿ ನಾಯಕರ ಹಣ ಎಂದ ಕಾಂಗ್ರೆಸ್ ಮುಖಂಡರು. ಅಂತೆ-ಕಂತೆಗಳದ್ದೇ ಸದ್ದು: ಸುದ್ದಿ
- **''ನೋಟಿನ 'ಕಂತೆ'ಗಳ ಮೂಲ ಹುಡುಕ್ರಪ್ಪಾ ಅಂತ ಕೇಳ್ತಾ ಇದ್ರೆ, ಇವರು ಅಂತೆ 'ಕಂತೆ'ಗಳ ಹಿಂದೆ ಬಿದ್ದಿದ್ದಾರಲ್ಲಪ್ಪಾ'' ಎಂದು ಹಲುಬುತ್ತಾ ಹಲ್‌ಸೆಟ್ಟು ಪಕ್ಕಕ್ಕಿಟ್ಟ ವಯೋವೃದ್ಧರೊಬ್ಬರು, ಶಂಕರಪುರಂ ಬ್ರಾಹ್ಮಣರ ಕಾಫಿ ಬಾರ್‌ನಲ್ಲಿ ಕಾಫಿಯನ್ನು ಚಪ್ಪರಿಸಿದರಂತೆ!!**
- ಪೊಲೀಸ್ ಇಲಾಖೆಯ ಮೇಲೆ ಸರಕಾರಕ್ಕೆ ಕಂಟ್ರೋಲ್ ಇಲ್ಲ. ಎಲ್ಲ ಇಲಾಖೆ ಅಧಿಕಾರಿಗಳನ್ನು ಹರಾಜಿಗೆ ಇಟ್ಟಿದ್ದಾರೆ. ಬೆಂಗಳೂರು ಕಮಿಷನರ್ ಆಗಬೇಕಾದರೆ 50 ಕೋಟಿ ರು. ಕೊಡಬೇಕು, ಡಿ.ಸಿ. ಆಗೋಕ್ಕೆ 10 ಕೋಟಿ ರು. ಕೊಡಬೇಕು: ಬಾಂಬ್ ಸಿಡಿಸಿದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್
- **'ಪ್ರಿಯಂ ಬ್ರೂಯಾತ್, ಸತ್ಯಂ ಬ್ರೂಯಾತ್, ನ ಬ್ರೂಯಾತ್ ಸತ್ಯಮಪ್ರಿಯಂ...!!**
- ಬೆಳಗಾವಿಯಲ್ಲಿ ನಡೆದ 400 ಕೋಟಿ ರುಪಾಯಿ ದರೋಡೆ ಪ್ರಕರಣವು ಹಲವಾರು ಅನುಮಾನಗಳಿಗೆ ಎಡೆಮಾಡಿಕೊಟ್ಟಿದ್ದು, ಈ ಬಗ್ಗೆ 'ಸಮಗ್ರ' ಮತ್ತು 'ನಿಷ್ಪಕ್ಷಪಾತ' ತನಿಖೆಯಾಗಬೇಕು: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಆಗ್ರಹ
- **ಹ್ವ... ಹ್ವ... ಹ್ವಾ....!!**
- ಸಭ್ಯ ರಾಜಕಾರಣಕ್ಕೆ ಹೆಸರಾಗಿದ್ದ ಕರ್ನಾಟಕದಲ್ಲಿ ಈಗ ಎಲ್ಲಿ ನೋಡಿದರೂ 'ಹೊಡಿ-ಬಡಿ' ರಾಜಕಾರಣ ಶುರುವಾಗಿದ್ದು, ರಾಜ್ಯವು ಕುಖ್ಯಾತಿಯನ್ನು ಪಡೆಯುತ್ತಿದೆ: ಶಾಸಕ ಗಾಲಿ ಜನಾರ್ದನ ರೆಡ್ಡಿ ವಿಷಾದ

- ಈ ವಿಷಾದದ ನುಡಿ ಕೇಳಿ 'ದುಃಖಾಶ್ರು'ವನ್ನು ಸುರಿಸಬೇಕೋ ಅಥವಾ ಇಂಥದೊಂದು ಅರಿವು ಮೂಡಿದ್ದಕ್ಕೆ 'ಆನಂದಬಾಷ್ಪ'ವನ್ನು ಸುರಿಸಬೇಕೋ ಅಂತ ಶಾನೆ ಕನ್‌ಫ್ಯೂಸ್ ಆಗ್ತಾ ಇದೆ ಸರ್!!

ಜಗತ್ತಿನ ರೂಪವನ್ನೇ ಬದಲಿಸುತ್ತಿರುವ ಡೊನಾಲ್ಡ್ ಟ್ರಂಪ್



ಅಕ್ಬರ್‌ನಾಮಾ

ಎಂ.ಜೆ.ಅಕ್ಬರ್
vveditoped@gmail.com

ಸತ್ಯವು ಇತಿಹಾಸದ ತಾಯಿ. ಇತಿಹಾಸವು ಕಾಲದ ಶತ್ರು, ಅದ್ಭುತ ಕಾರ್ಯಗಳ ಕಣಜ, ವರ್ತಮಾನದ ಶಿಕ್ಷಕ ಮತ್ತು ಭವಿಷ್ಯದ ಸಲಹೆಗಾರ'- ಹೀಗಂತ ಹೇಳಿದವನು ಸ್ಪ್ಯಾನಿಶ್ ಲೇಖಕ ಸರ್ವಾಂಟೆಸ್. ಈತನ ಪ್ರಸಿದ್ಧ ಕಾದಂಬರಿ 'ಡಾನ್ ಕ್ವಿಕ್ಸೋಟೆ' ಯುರೋಪಿಯನ್ ಸಾಹಿತ್ಯದ ಮೊದಲ ಆಧುನಿಕ ಕಾದಂಬರಿ ಎಂದು ಪ್ರಸಿದ್ಧವಾಗಿದೆ. ಆದರೆ ಬ್ರಿಟನ್‌ನಲ್ಲಿ 1950ರ ದಶಕದಲ್ಲಿ ಅತ್ಯಂತ ಪ್ರಾಕ್ಟಿಕಲ್ ಪ್ರಧಾನಿಯೆಂಬ ಹೆಗ್ಗಳಿಕೆಯೊಂದಿಗೆ ಆಡಳಿತ ನಡೆಸಿದ್ದ ಹೆರಾಲ್ಡ್ ಮ್ಯಾಕ್‌ಮಿಲನ್ ಬೇರೆಯದೇ ರೀತಿಯಲ್ಲಿ ಇತಿಹಾಸವನ್ನು ವ್ಯಾಖ್ಯಾನಿಸಿದ್ದಾರೆ. ಅವರ ಪ್ರಕಾರ ಇತಿಹಾಸವೆಂಬುದು ಊಹಿಸಲಾಗದ ಮತ್ತು ಕಂಡುಕೇಳರಿಯದ ಸಂಗತಿಗಳ ಗುಚ್ಛ. ಅವರೇ ಇನ್ನೊಮ್ಮೆ ಇತಿಹಾಸವನ್ನು 'ಘಟನೆಗಳು ಸ್ವಾಮಿ, ಘಟನೆಗಳು' ಎಂದೂ ಹೇಳಿದ್ದಾರೆ. ನಿರಾಶಾವಾದಿಯೊಬ್ಬನನ್ನು ಕೇಳಿದರೆ ಅವನು 'ಇತಿಹಾಸವೆಂಬುದು ಮಹತ್ವಾಕಾಂಕ್ಷೆ ಮತ್ತು ಅಹಂಕಾರದಿಂದ ಜನಿಸಿದ ಕೂಸು' ಎಂದು ಹೇಳಬಹುದು.

ಡೊನಾಲ್ಡ್ ಟ್ರಂಪ್ ಹೇಗೆ ನಿಮ್ಮನ್ನು ಆಳುತ್ತಿದ್ದಾರೆ ಎಂಬುದರ ಬಗ್ಗೆ ನಿಮಗೆ ತಕರಾರು ಇರಬಹುದು. ಆದರೆ ಅವರು ಯಾವತ್ತೂ ನಿಮ್ಮನ್ನು ದಾರಿ ತಪ್ಪಿಸುವುದಿಲ್ಲ, ಅವರು ಯಾವತ್ತೂ ತಮ್ಮ ಉದ್ದೇಶಗಳನ್ನು ಮರೆಮಾಚಿ ಇನ್ನೇನನ್ನೋ ಹೇಳುವುದಿಲ್ಲ. ತಾವೇನು ಮಾಡಬೇಕು ಅಂದುಕೊಂಡಿದ್ದೇನೋ ಅದನ್ನು ನೇರವಾಗಿಯೇ ಹೇಳುತ್ತಾರೆ. ವಿರೋಧ ಎದುರಾದರೆ ಇನ್ನೂ ಹೆಚ್ಚಿನ ಉತ್ಸಾಹದಿಂದ ಅದನ್ನು ಮಾಡುತ್ತಾರೆ! ಅವರು ಕೆನಡಾಕ್ಕೆ ಅಮೆರಿಕದ 51ನೇ ರಾಜ್ಯವಾಗುವಂತೆ ಮೊದಲ ಬಾರಿ ಕರೆ ನೀಡಿದಾಗ ಕೆಲವರು ನಕ್ಕಿದ್ದರು. ಗ್ರೀನ್‌ಲ್ಯಾಂಡನ್ನು ಅಮೆರಿಕದ ವಶಕ್ಕೆ ಪಡೆಯುತ್ತೇವೆ ಮತ್ತು ವೆನಿಜುವೆಲಾವನ್ನು ಅಮೆರಿಕದಲ್ಲಿ ಸೇರಿಸಿಕೊಳ್ಳುತ್ತೇವೆ ಎಂದು ಹೇಳಿದಾಗಲೂ ಇದೇನು ಹುಚ್ಚು ಮಾತು ಎಂದೇ ಅನೇಕರು ತಳ್ಳಿಹಾಕಿದ್ದರು. ಈಗ ಅವರೆಲ್ಲರೂ ಅಳುತ್ತಿದ್ದಾರೆ.

'ಯಾರಾದರೂ ದುರಹಂಕಾರದಿಂದ ಮೆರೆಯುತ್ತಿದ್ದರೆ ನನಗೆ ತೋರಿಸಿ. ನಾನು ನಿಮಗೆ ಸೋತು ಶರಣಾದವರನ್ನು ಕೊಡುತ್ತೇನೆ' ಎಂದು ಟ್ರಂಪ್ ಹೇಳಿದ್ದರು. ಬಹುಶಃ ಟ್ರಂಪ್ ತಮ್ಮ ಸಾಮರ್ಥ್ಯವನ್ನು ಕೀಳಂದಾಜು ಮಾಡಿದ ಯಾವುದೇ ನಿದರ್ಶನವಿಲ್ಲ. ನನಗಿಂತ ಯಶಸ್ವಿ ವ್ಯಕ್ತಿ ಇನ್ನೊಬ್ಬ ಇಲ್ಲ ಎಂದು ಅವರೇ ಹೇಳಿದ್ದರು. ಅದು ನಿಜ ಕೂಡ. ಬ್ಯಾಂಕಿಂಗ್ ಕ್ಷೇತ್ರವನ್ನು ಅವರಿಗಿಂತ ಚೆನ್ನಾಗಿ ತಿಳಿದುಕೊಂಡವರು ಇಲ್ಲ, ಅವರಿಗಿಂತ ದೊಡ್ಡ ಮಿಲಿಟರಿ ಹೊಂದಿರುವವರು ಇಲ್ಲ, 'ನಿಮ್ಮೆಲ್ಲರಿಗಿಂತ ಹೆಚ್ಚು ಐಕ್ಯೂ ನನಗಿದೆ. ಅದು ನಿಮಗೂ ಗೊತ್ತಿದೆ!' ಎಂದು ಅವರು 'ಸೋತವರು ಮತ್ತು ದ್ವೇಷಿಗಳಿಗೆ' ಹೇಳಿದ್ದರು. 'ಚೀನಾಕ್ಕೆ ಕ್ಸಿ ಜಿನ್‌ಪಿಂಗ್ ಆಜೀವ ಅಧ್ಯಕ್ಷನಾಗಿರುವಂತೆ ಅಮೆರಿಕಕ್ಕೆ ನಾನೂ ಜೀವನಪರ್ಯಂತ ಅಧ್ಯಕ್ಷನಾಗಿರಬೇಕಿತ್ತು, ಆದರೆ ಅಮೆರಿಕದ ಸಂವಿಧಾನದಲ್ಲಿ ಅದಕ್ಕೆ ಅವಕಾಶವಿಲ್ಲ' ಎಂದು ಅವರೊಮ್ಮೆ ತಮಾಷೆಯಿಂದ ಹೇಳಿದ್ದರು. ಅದು ಪಶ್ಚಾತ್ತಾಪದ ಮಾತಿನಂತಿತ್ತು.

ಅವರಿಗೊಂದು ಮಹತ್ವಾಕಾಂಕ್ಷೆಯಿದೆ. ಜಗತ್ತಿನ ಇತಿಹಾಸದಲ್ಲಿ ತಾನು ವಿಶಿಷ್ಟ ಸ್ಥಾನ ಪಡೆಯಬೇಕು. ಅದಕ್ಕಾಗಿ 'ಟ್ರಂಪೇರಿಕಾ'ವನ್ನು ನಿರ್ಮಿಸಬೇಕು. ಅದು ಈಗಿರುವ ಅಮೆರಿಕದ ದುಪ್ಪಟ್ಟು ಗಾತ್ರದ ದೇಶವಾಗಬೇಕು. ಅದರಲ್ಲಿ ತೈಲ ನಿಕ್ಷೇಪಗಳು ತುಂಬಿ ಹರಿಯುತ್ತಿರಬೇಕು. 1945ರಿಂದ ಜಗತ್ತನ್ನು ಆಳುತ್ತಿರುವ ಸಂಸ್ಥೆಗಳನ್ನೆಲ್ಲ ನಿರ್ನಾಮ ಮಾಡಿ ತಾವೇ ಒಂದಷ್ಟು ಅಂತಾರಾಷ್ಟ್ರೀಯ ಸಂಸ್ಥೆಗಳನ್ನು ಹುಟ್ಟುಹಾಕಿ, ಅವುಗಳ ಸಿಂಹಾಸನದ ಮೇಲೆ ಕುಳಿತು ಮೆರೆಯಬೇಕು, ಪಶ್ಚಿಮದ ನಿರ್ಧಾರಗಳನ್ನು ತಾವೇ ತೆಗೆದುಕೊಳ್ಳಬೇಕು, ಜಗತ್ತಿನ ಪ್ರಮುಖ ದೇಶಗಳು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಬದಲು ಶ್ವೇತಭವನದಲ್ಲಿ ಕುಳಿತುಕೊಂಡ ಕಮಾಂಡರ್-ಇನ್-ಚೀಫ್‌ಗೆ ವರದಿ ಮಾಡಿಕೊಳ್ಳುವಂತಾಗಬೇಕು ಎಂಬ ಕನಸನ್ನು ಅವರು ಕಂಡಿದ್ದಾರೆ.

ಈ ಕನಸಿನೊಂದಿಗೆ ಟ್ರಂಪ್ ಆಡುತ್ತಿರುವ ಆಟಗಳೆಲ್ಲ ಸದ್ಯದಲ್ಲೇ ತಣ್ಣಗಾಗುತ್ತವೆ ಎಂದು ನ್ಯಾಟೋ ಒಕ್ಕೂಟದ ಯುರೋಪಿಯನ್ ಪಾಲುದಾರ ದೇಶಗಳು 2025ರ ಉದ್ದಕ್ಕೂ ಕತ್ತು ಉದ್ದ ಮಾಡಿಕೊಂಡು ನಿರೀಕ್ಷಿಸುತ್ತಲೇ ಇದ್ದವು. ಕೊನೆಯ ಪಕ್ಷ 2026ರ ನವೆಂಬರ್‌ನಲ್ಲಿ ನಡೆಯುವ ಮಧ್ಯಂತರ ಚುನಾವಣೆಯಲ್ಲಿ ರಿಪಬ್ಲಿಕನ್ನರು ಸೋತರೆ ಆಗಲಾದರೂ ಟ್ರಂಪ್ ಮೆತ್ತಗಾಗುತ್ತಾರೆ ಎಂಬ ನಿರೀಕ್ಷೆ ಅವರದು. ತಮ್ಮನ್ನು ತಾವೇ ಸಮಾಧಾನ ಮಾಡಿಕೊಳ್ಳಲು ಆ ದೇಶಗಳು 'ಟಾಕೋ' ಎಂಬ ಪದವೊಂದನ್ನು ಸೃಷ್ಟಿಸಿಕೊಂಡಿವೆ. 'ಟಾಕೋ' ಅಂದರೆ 'ಟ್ರಂಪ್ ಆಲ್ವೇಸ್ ಚಿಕನ್ಸ್ ಔಟ್'! ಟ್ರಂಪ್ ಯಾವಾಗಲೂ ಹಿಂದೆ ಸರಿಯುತ್ತಾರೆ ಎಂಬುದು ಇದರ ಸರಳ ಅರ್ಥ. ಅವರು ಒಂದಾದ ಮೇಲೊಂದು ದೇಶಕ್ಕೆ ತೆರಿಗೆ ವಿಧಿಸಿ, ಕೊನೆಗೆ ತೆರಿಗೆ ವಾಪಸ್ ಪಡೆಯುವುದನ್ನು ನೋಡಿ ಯುರೋಪಿಯನ್ ದೇಶಗಳು ಹೀಗೆ ಆಡಿಕೊಳ್ಳುತ್ತಿವೆ. ಸಾರ್ವಜನಿಕವಾಗಿ ಸ್ವಲ್ಪ ಹಿನ್ನಡೆಯಾದರೂ ಟ್ರಂಪ್ ಹಿಂದೆ ಸರಿಯುತ್ತಾರೆ ಎಂದು ಅವು ನಂಬಿವೆ. ಆದ್ದರಿಂದಲೇ ಅಮೆರಿಕಕ್ಕೆ ಅತ್ಯಂತ ನಿಷ್ಠ ರಾಜಕಾರಣಿಯಾಗಿರುವ ಬ್ರಿಟಿಷ್ ಪ್ರಧಾನಿ ಕೀರ್ ಸ್ಟಾರ್ಮರ್ ಕೂಡ ಟ್ರಂಪ್ ಗ್ರೀನ್‌ಲ್ಯಾಂಡನ್ನು ವಶಪಡಿಸಿಕೊಳ್ಳಲು ಹೊರಟಿರುವುದು 'ಬಹಳ ದೊಡ್ಡ ತಪ್ಪು' ಎಂದು ಹೇಳಿದ್ದಾರೆ. ತನ್ನೊಳಗಿನ ಚಾರ್ಲ್ಸ್ ಡಿ ಗೌಲೆಯನ್ನು ಮರುಶೋಧನೆ ಮಾಡಿಕೊಂಡಿರುವ ಫ್ರಾನ್ಸ್‌ನ ಎಮ್ಯಾನುಯೆಲ್ ಮ್ಯಾಕ್ರನ್ ಎಲ್ಲರಿಗಿಂತ ಒಂದು ಹೆಜ್ಜೆ ಮುಂದೆಯಿಟ್ಟು ಗ್ರೀನ್‌ಲ್ಯಾಂಡ್‌ಗೆ ತನ್ನ ಸೈನಿಕರನ್ನೇ ಕಳುಹಿಸಿದ್ದಾರೆ. ತನ್ಮೂಲಕ, ಅಮೆರಿಕವೇನಾದರೂ ಗ್ರೀನ್‌ಲ್ಯಾಂಡನ್ನು ವಶಪಡಿಸಿಕೊಳ್ಳಲು ಹೊರಟರೆ ಇಡೀ ಯುರೋಪ್ ಒಂದಾಗಿ ಅದನ್ನು ವಿರೋಧಿಸುತ್ತದೆ ಎಂಬ ಸಂದೇಶ ನೀಡಿದ್ದಾರೆ. ಇನ್ನು, 1945ರ ನಂತರ ಅಮೆರಿಕದ ಭದ್ರತೆಯಲ್ಲಿ ನೆಮ್ಮದಿಯಿಂದಿರುವ ನಾರ್ವೆ ಕೂಡ 'ಬೆದರಿಕೆಗಳಿಗೆ ಮಿತ್ರರ ನಡುವೆ ಜಾಗವಿಲ್ಲ' ಎಂದು ಉಪದೇಶ ಮಾಡಿದೆ.

ಆದರೆ ಎಲ್ಲರೂ ಒಂದು ವಿಷಯವನ್ನು ಮರೆತೇಬಿಟ್ಟಿದ್ದಾರೆ. ಇಂಥ ಯುರೋಪಿಯನ್ ನಾಯಕರನ್ನು ಟ್ರಂಪ್ 'ಜಿಗಣೆಗಳು' ಎಂದು ಕರೆಯುತ್ತಾರೆ. ನ್ಯಾಟೋ ಮೈತ್ರಿಕೂಟದ ಸ್ನೇಹಿತರೆಂದು ಇವರನ್ನು ಗೌರವಿಸುವುದರ ಬದಲು ಟ್ರಂಪ್ ಇವರನ್ನೆಲ್ಲ ಬಹಳ ತುಚ್ಛವಾಗಿ ಕಾಣುತ್ತಾರೆ. ನ್ಯಾಟೋದ ಮಿತ್ರರ ಮೇಲೇ ಅವರ ಪ್ರಹಾರ ಆರಂಭವಾಗಿದ್ದು ಜನವರಿ 18ರಂದು ನ್ಯಾಟೋದ ಎಂಟು ಸದಸ್ಯ ರಾಷ್ಟ್ರಗಳ ಮೇಲೆ ಶೇ.10ರಷ್ಟು ಹೆಚ್ಚುವರಿ ತೆರಿಗೆ ಘೋಷಿಸಿದಾಗ. ಈಗಲೂ ಅವು ಅಮೆರಿಕಕ್ಕೆ ನಿಷ್ಠವಾಗಿ ನಡೆದುಕೊಳ್ಳದಿದ್ದರೆ ಫೆಬ್ರವರಿ 1ರಿಂದ ಈ ತೆರಿಗೆ ಜಾರಿಗೆ ಬರುತ್ತದೆ ಎಂದು ಟ್ರಂಪ್ ಪ್ರಕಟಿಸಿದ್ದಾರೆ. ಅದರೊಂದಿಗೆ, ಟ್ರಂಪ್ ಆಡುತ್ತಿರುವುದು ಬರೀ ಹುಚ್ಚಾಟ ಎನ್ನುತ್ತಿದ್ದ ಯುರೋಪಿನ ಎಲ್ಲರ ಬಾಯಿಗಳು ಬಂದ್ ಆಗಿವೆ.

ತಮಗೆ ನೊಬೆಲ್ ಶಾಂತಿ ಪ್ರಶಸ್ತಿ ನೀಡದೆ ಇರುವುದಕ್ಕೆ ಜನವರಿ 19ರಂದು ನಾರ್ವೆಯನ್ನು ಉದ್ದೇಶಿಸಿ ಮಾತನಾಡಿದ್ದ ಟ್ರಂಪ್, 'ಇನ್ನುಮುಂದೆ ನಾನು ಕೇವಲ ಶಾಂತಿಯ ಬಗ್ಗೆ ಯೋಚನೆ ಮಾಡಬೇಕಿಲ್ಲ, ಈಗಲೂ ನಾನು ಶಾಂತಿಗೇ ಆದ್ಯತೆ ನೀಡುತ್ತೇನಾದರೂ, ಇನ್ನುಮುಂದೆ ಅಮೆರಿಕಕ್ಕೆ ಯಾವುದು ಒಳ್ಳೆಯದು ಮತ್ತು ಏನು ಮಾಡಿದರೆ ಸರಿ ಎಂಬುದರ ಬಗ್ಗೆ ಹೆಚ್ಚು ಯೋಚನೆ ಮಾಡಬಹುದು' ಎಂದು ಹೇಳಿದ್ದರು. ಇದು ಅಪ್ಪಟ ಟ್ರಂಪ್ ಸಿದ್ಧಾಂತ: 'ವೆನಿಜುವೆಲಾ, ಗ್ರೀನ್‌ಲ್ಯಾಂಡ್, ಡೆನ್ಮಾರ್ಕ್, ಯುರೋಪಿನ ಡಿಸ್ನಿಲ್ಯಾಂಡ್‌ಗಳೇ, ನನಗಾಗಿ ಅಳಬೇಡಿ. ಅಗತ್ಯಬಿದ್ದರೆ ತೆರಿಗೆ, ವ್ಯಾಪಾರ, ಸಮುದ್ರ ವ್ಯವಹಾರಗಳ ಮೂಲಕ 'ಪ್ಯಾಕ್ಸ್ ಅಮೆರಿಕಾನಾ'ವನ್ನು ಹುಟ್ಟುಹಾಕುತ್ತೇನೆ'. ಡೆನ್ಮಾರ್ಕನ್ನು ನೋಡಿ ಟ್ರಂಪ್ ವ್ಯಂಗ್ಯವಾಗಿ ನಕ್ಕಿದ್ದರು. 'ಗ್ರೀನ್‌ಲ್ಯಾಂಡ್‌ಗೆ ಎರಡು ನಾಯಿಮರಿಗಳು ರಕ್ಷಣೆ ನೀಡುತ್ತಿವೆ. ಅವುಗಳಲ್ಲಿ ಒಂದು ಇತ್ತೀಚೆಗಷ್ಟೇ ಸೇರ್ಪಡೆಯಾಗಿದೆ' ಎಂದು ತಮ್ಮ ಯಾವೊತ್ತಿನ ತಮಾಷೆಯ ಶೈಲಿಯಲ್ಲಿ ಹೇಳಿದ್ದರು. ಡಿಯೆಗೋ ಗಾರ್ಸಿಯಾ ದ್ವೀಪವನ್ನು ಮಾರಿಷಸ್‌ಗೆ ಮರಳಿಸಿದ ಕೀರ್ ಸ್ಟಾರ್ಮರ್ 'ಪರಮ ಮೂರ್ಖ' ಎಂದು ಟ್ವೀಟ್ ಮಾಡಿದ್ದರು. ಅದರಲ್ಲಿ ಸ್ಟುಪಿಡ್ ಪದದ ಅಕ್ಷರಗಳನ್ನು ಕ್ಯಾಪಿಟಲ್‌ನಲ್ಲಿ ಬರೆದಿದ್ದರು. ನಂತರ 'ನಾನು ಗ್ರೀನ್‌ಲ್ಯಾಂಡನ್ನು ಇಡಿಯಾಗಿ ಖರೀದಿ ಮಾಡಲು ಬಯಸುತ್ತೇನೆ' ಎಂದು ಸ್ಪಷ್ಟವಾಗಿ ಹೇಳಿದ್ದರು. ಅಮೆರಿಕದ ಒಂದು ನ್ಯೂಸ್ ಚಾನಲ್ ಈ ಕುರಿತು ಲೆಕ್ಕಾಚಾರ ಹಾಕಿ, ಗ್ರೀನ್‌ಲ್ಯಾಂಡನ್ನು ಖರೀದಿಸಲು 700 ಬಿಲಿಯನ್ ಡಾಲರ್ ಬೇಕಾಗಬಹುದು ಎಂದು ಹೇಳಿತ್ತು. ಡಾಲರ್‌ಗಳನ್ನು ಪ್ರಿಂಟ್ ಮಾಡುವ ದೇಶವೊಂದನ್ನು ಬಿಟ್ಟು ಇನ್ನಾವುದೇ ದೇಶಕ್ಕೆ ಇದು ಊಹೆ ಕೂಡ ಮಾಡಿಕೊಳ್ಳಲು ಆಗದಷ್ಟು ದೊಡ್ಡ ಮೊತ್ತದ ಹಣ.

ಇಲ್ಲಿಯವರೆಗೆ ಯುರೋಪಿಯನ್ ನಾಯಕರು ದೊಡ್ಡ ದೊಡ್ಡ ಮಾತುಗಳನ್ನಾಡುತ್ತಿದ್ದಾರೆಯೇ ಹೊರತು ಅವುಗಳನ್ನು ಕಾರ್ಯರೂಪಕ್ಕೆ ಇಳಿಸುವುದರಲ್ಲಿ ಹಿಂದೆ ಬಿದ್ದಿದ್ದಾರೆ. ಅಮೆರಿಕದ ಸಂಭವನೀಯ ದಾಳಿಯನ್ನು ತಡೆಯಲು ಗ್ರೀನ್‌ಲ್ಯಾಂಡ್‌ಗೆ ಕೆಲ ಯುರೋಪಿಯನ್ ದೇಶಗಳು ಒಂದಷ್ಟು ಸೈನಿಕರನ್ನು ಕಳುಹಿಸಿವೆ. ಗ್ರೀನ್‌ಲ್ಯಾಂಡಿನ ಜನರು ತಮ್ಮನ್ನು ತಾವೇ ಅಮೆರಿಕಕ್ಕೆ ಮಾರಾಟ ಮಾಡಿಕೊಳ್ಳದೆ ಇದ್ದರೆ ಅಮೆರಿಕ ಖಂಡಿತ ದಾಳಿ ನಡೆಸುತ್ತದೆ ಎಂಬ ಭಯ ಯುರೋಪ್‌ಗಿದೆ. ಕಳೆದ ಶತಮಾನದ ಪ್ರಸಿದ್ಧ ಐರಿಶ್ ನಾಟಕಕಾರ ಜಾರ್ಜ್ ಬರ್ನಾರ್ಡ್ ಶಾ ಈಗ ಇದ್ದಿದ್ದರೆ ಅವರನ್ನು 'ಚಾಕ್ಲೇಟ್ ಸೈನಿಕರು' ಎಂದು ಕರೆಯುತ್ತಿದ್ದರು. ಡೆನ್ಮಾರ್ಕ್‌ನ ಕೋಪನ್‌ಹೇಗನ್‌ನಲ್ಲಿ ಟ್ರಂಪ್ ಅವರ ನಗ್ನ ಪ್ರತಿಕೃತಿಯ ಮೆರವಣಿಗೆ ಮಾಡಿ ಬೆಂಕಿ ಹಚ್ಚಲಾಗಿದೆ. ಗ್ರೀನ್‌ಲ್ಯಾಂಡ್‌ನ ಮಾತೃದೇಶವಾಗಿರುವ ಡೆನ್ಮಾರ್ಕ್‌ನಲ್ಲಿ 2.8 ಲಕ್ಷ ಜನರು 'ನಾವು ಅಮೆರಿಕದ ಕ್ಯಾಲಿಫೋರ್ನಿಯಾವನ್ನು ಖರೀದಿಸಿ ಅದಕ್ಕೆ ನ್ಯೂ ಡೆನ್ಮಾರ್ಕ್ ಎಂದು ಹೆಸರಿಡುತ್ತೇವೆ' ಎಂಬ ಪತ್ರಕ್ಕೆ ಸಹಿ ಹಾಕಿದ್ದಾರೆ. ಪ್ರತಿಭಟನಾಕಾರರು 'MAGA' ಅಂದರೆ 'ಮೇಕ್ ಅಮೆರಿಕ ಗ್ರೇಟ್ ಅಗೇನ್' ಅಲ್ಲ, 'ಮೇಕ್ ಅಮೆರಿಕ ಗೋ ಅವೇ' ಎಂಬ ಸ್ಲೋಗನ್ ಬರೆದ ಪ್ಲಕಾರ್ಡ್‌ಗಳನ್ನು ಪ್ರದರ್ಶಿಸಿದ್ದಾರೆ. ಅದಕ್ಕೆ ಟ್ರಂಪ್ ಆಕಾಶದ ಮೂಲಕ ಪ್ರತಿಕ್ರಿಯೆ ನೀಡಿದ್ದಾರೆ. ಜನವರಿ 19-20ರ ರಾತ್ರಿ ಗ್ರೀನ್‌ಲ್ಯಾಂಡ್‌ನಲ್ಲಿರುವ ಅಮೆರಿಕದ ವಾಯುನೆಲೆಗೆ ಒಂದಷ್ಟು ಹೆಚ್ಚುವರಿ ಬಿ-52 ಯುದ್ಧ ವಿಮಾನಗಳು ಬಂದಿಳಿದಿವೆ. ಗಾಜಿನ ಛಾವಣಿಯ ಮೇಲೆ ಓಡುತ್ತಿರುವ ಭಯಾನಕ ಗೂಳಿಗೆ ಹಗ್ಗ ಹಾಕಿ ಹಿಡಿಯುವುದು ಸುಲಭವಲ್ಲ.

ವಿಶ್ವಸಂಸ್ಥೆಗೆ ಬದಲಾಗಿ ಶಾಂತಿ ಮಂಡಳಿ ರಚಿಸುವ ನಿರ್ಧಾರವನ್ನು ಟ್ರಂಪ್ ಪ್ರಕಟಿಸಿದಾಗ ಜಗತ್ತಿಗೆ ಅಜೀರ್ಣ ಜಾಸ್ತಿಯಾಯಿತು. ಆ ಶಾಂತಿ ಮಂಡಳಿಗೆ ಪರಮೋಚ್ಚ ಬಾಸ್ ಟ್ರಂಪ್ ಅವರೇ ಆಗಿರುತ್ತಾರೆ. ಸಂವಿಧಾನಬದ್ಧವಾಗಿ ಟ್ರಂಪ್‌ಗೇ ಅಂತಿಮ ನಿರ್ಧಾರ ಕೈಗೊಳ್ಳುವ ಅಧಿಕಾರ ಅದರಲ್ಲಿರುತ್ತದೆ. ಅದನ್ನು ಟ್ರಂಪ್ ಪ್ರಕಟಿಸಿದಾಗ ಜಗತ್ತು ಬೆರಗಾಯಿತು. ಶಾಂತಿ ಮಂಡಳಿಗೆ ಸೇರುವಂತೆ ಚೀನಾ ಹಾಗೂ ರಷ್ಯಾಗೂ ಟ್ರಂಪ್ ಆಹ್ವಾನ ನೀಡಿದರು. ಆ ದೇಶಗಳಿಗೆ ಪರಿತ್ಯಕ್ತ ಭಾವನೆ ಬರಬಾರದು ಎಂಬ ಕಾರಣಕ್ಕೆ ಆಹ್ವಾನ ನೀಡಿದ್ದಿರಬಹುದು. ಆದರೆ ಮಂಡಳಿಗೆ ಸೇರಲು ಯಾವುದೇ ದೇಶ ಸತತ 3 ವರ್ಷಗಳ ಕಾಲ ಒಂದು ಬಿಲಿಯನ್ ಡಾಲರ್ ಹಣ ನೀಡಬೇಕೆಂಬ ಷರತ್ತಿನಲ್ಲಿ ಯಾರಿಗೂ ರಿಯಾಯ್ತಿಯಿಲ್ಲ ಎಂದು ತಿಳಿಸಿದರು. ಶಾಂತಿ ದುಬಾರಿ. ಆದರೂ ರಷ್ಯಾದ ಸ್ನೇಹಿತ ರಾಷ್ಟ್ರವಾದ ಬೆಲಾರಸ್ ತಾನು ಶಾಂತಿ ಮಂಡಳಿಗೆ ಸೇರುವುದಾಗಿ ಒಪ್ಪಿಕೊಂಡಿತು. ಆದರೆ ಅದು ಬಿಲಿಯನ್ ಡಾಲರ್ ಹಣ ನೀಡುತ್ತದೆಯೇ ಎಂಬುದನ್ನು ಕಾದು ನೋಡಬೇಕಷ್ಟೆ. ಮಂಡಳಿಗೆ ಸೇರಲು ಒಪ್ಪಿರುವ ದೇಶಗಳೆಲ್ಲ 'ಸದ್ಯಕ್ಕೆ ಟ್ರಂಪ್ ಮಾತಿಗೆ ಯಸ್ ಅನ್ನುವುದೇ ಒಳ್ಳೆಯ ಉತ್ತರ' ಎಂಬ ಕಾರಣಕ್ಕೆ ಹಾಗೆ ಮಾಡಿರಬಹುದು. ಗಟ್ಟಿ ಗುಂಡಿಗೆಯ ನಾರ್ವೆಯಂಥ ದೇಶಗಳು ನೇರವಾಗಿ 'ನೋ' ಎಂದವು. ಕೆನಡಾ ಒಪ್ಪಿಕೊಂಡಿತಾದರೂ, ಹಣ ನೀಡುವುದಿಲ್ಲ ಎಂದಿತು. ಸ್ಟಾರ್ಮರ್ ಮೌನ ವಹಿಸಿದರು. ಆಪ್ತ ಸ್ನೇಹಿತನಿಂದಲೇ ಅವಮಾನ ಮಾಡಿಸಿಕೊಂಡವರಿಗೆ ಯೋಗ್ಯವಾದ ನಡೆಯದು. ಮ್ಯಾಕ್ರನ್ ಕೂಡ 'ನೋ' ಅಂದರು. ವಿಶ್ವಸಂಸ್ಥೆಯ ಸದಸ್ಯತ್ವಕ್ಕೆ ಈ ಮಂಡಳಿಯ ಸದಸ್ಯತ್ವವನ್ನು ಹೋಲಿಸಲಾಗದು ಎಂಬುದು ಅವರ ಹೇಳಿಕೆ. ಅದು ಸರಿಯಾಗಿಯೇ ಇದೆ. ಆದರೆ ಟ್ರಂಪ್‌ವಾದ ಕೂಡ ಅದೇ. ಈಗಾಗಲೇ ಸತ್ತು ಹೆಣವಾಗಿರುವ ವಿಶ್ವಸಂಸ್ಥೆಯನ್ನು ಇನ್ನಷ್ಟು ಬಡಿದು ಸಾಯಿಸುವುದು ಅವರ ಉದ್ದೇಶ.

ನಾಜೂಕಾದ ಮಾತನಾಡಿ ನಯವಾಗಿ ವ್ಯವಹರಿಸುವ ರಾಜತಾಂತ್ರಿಕರಿಗೆಲ್ಲ ಅಚ್ಚರಿ ಹುಟ್ಟಿಸುವಂತೆ ಟ್ರಂಪ್ ನೇರವಾದ ರಾಜಕೀಯ ಭಾಷೆಯಲ್ಲಿ ಮಾತನಾಡುತ್ತಾರೆ. ಉದಾಹರಣೆಗೆ, ದಾವೋಸ್‌ನಲ್ಲಿ ಜಾಗತಿಕ ವಿದ್ಯಮಾನಗಳ ಬಗ್ಗೆ ಚರ್ಚಿಸಲು ಸೇರಿದ್ದ ಯುರೋಪಿಯನ್ ದೇಶಗಳ ನಡುವೆ ಹೋಗಿ ನಿಂತು ಗ್ರೀನ್‌ಲ್ಯಾಂಡ್ ವಿಷಯದಲ್ಲಿ ನಾನು ಯಾವುದೇ ಕಾರಣಕ್ಕೂ ಹಿಂದಕ್ಕೆ ಸರಿಯುವುದಿಲ್ಲ ಎಂದು ಟ್ರಂಪ್ ಹೇಳಿದ್ದಾರೆ. ನ್ಯಾಟೋ ದೇಶಗಳ ಕಣ್ಣೀರನ್ನು ಹಿಡಿದಿಟ್ಟುಕೊಳ್ಳಲು ಗ್ರೀನ್‌ಲ್ಯಾಂಡ್ ಯತ್ನಿಸುತ್ತಿರುವಾಗ ಟ್ರಂಪ್ 'ಶಾಂತಿ ಮಂಡಳಿಯು ಈವರೆಗೆ ಜಗತ್ತಿನಲ್ಲಿ ರಚನೆಯಾದ ಯಾವುದೇ ಜಾಗತಿಕ ಒಕ್ಕೂಟಕ್ಕಿಂತಲೂ ಪ್ರಭಾವಿ ಒಕ್ಕೂಟವಾಗಿರುತ್ತದೆ' ಎಂದು ಹೇಳಿದ್ದಾರೆ. 2026ರ ನೊಬೆಲ್ ಶಾಂತಿ ಪ್ರಶಸ್ತಿ ಘೋಷಣೆಯಾಗುವ ವೇಳೆಗೆ ಜಗತ್ತಿನ ಎಲ್ಲಾ ಯುದ್ಧಗಳನ್ನೂ ನಿಲ್ಲಿಸುವುದು ಅವರ ಹವಣಿಕೆಯಿರಬಹುದು. ಕೆಲ ಯುರೋಪಿಯನ್ ದೇಶಗಳು ಎಷ್ಟು ದಯನೀಯ ಸ್ಥಿತಿಗೆ ಹೋಗಿವೆ ಅಂದರೆ, ಅವು ಶಾಂತಿ ಮಂಡಳಿಗೆ ಜಂಟಿ ಭದ್ರತೆ ಇರಬೇಕು ಎಂದು ಅಮೆರಿಕವನ್ನು ಕೇಳತೊಡಗಿವೆ. ಅಂದರೆ ಅವುಗಳಿಗೆ ವಿಷಯ ಅರ್ಥವಾಗಿಲ್ಲ. ನ್ಯಾಟೋ ಒಕ್ಕೂಟವೇ ಜಂಟಿ ಪಡೆ. ಆದರೆ ಟ್ರಂಪ್‌ಗೆ ನ್ಯಾಟೋ ಅಪ್ರಸ್ತುತವಾಗಿದೆ. ಸುದೀರ್ಘ ಕಾಲದಿಂದ ಅಮೆರಿಕದ ಭದ್ರತೆಯ ಛತ್ರದಲ್ಲಿ ಹಾಯಾಗಿದ್ದ ಯುರೋಪ್‌ಗೆ ಈಗ ಆಘಾತದಿಂದ ಚೇತರಿಸಿಕೊಳ್ಳಲು ಸಮಯ ಬೇಕಾಗುತ್ತದೆ. ಟ್ರಂಪ್ ಆಡುತ್ತಿರುವ ಆಟದಿಂದ ಸಮಸ್ಯೆಗೆ ಸಿಲುಕದೆ ಇರುವ ಏಕೈಕ ನ್ಯಾಟೋ ದೇಶವೆಂದರೆ ಟರ್ಕಿ. ಅದು ನ್ಯಾಟೋದಲ್ಲಿದ್ದುಕೊಂಡೇ ತನ್ನ ಸ್ವಂತ ಸೇನೆಯನ್ನು ಗಟ್ಟಿಯಾಗಿ ಕಟ್ಟಿಕೊಂಡಿದೆ.

★★★

ಟ್ರಂಪ್ ಆಡುವ ಮಾತುಗಳಾಚೆ ಏನಿರುತ್ತದೆ ಎಂಬುದನ್ನೊಮ್ಮೆ ಸೂಕ್ಷ್ಮವಾಗಿ ಗಮನಿಸಿ. ಅದಕ್ಕೊಂದು ಸ್ಪಷ್ಟವಾದ ಶೈಲಿ ಇದೆ. ಅಸಾಧ್ಯವಾದುದನ್ನು ಸಂಭವನೀಯ ಎಂಬಂತೆ ಮೊದಲು ಬಿಂಬಿಸುವುದು. ನಂತರ ಅದು ಸಾಧ್ಯವೇ ಎಂದು ಹುಡುಕುವುದು! ಅಮೆರಿಕದ ಹಿತಾಸಕ್ತಿಗಳಲ್ಲಿ ಮೂಗು ತೂರಿಸುವ ಯಾವುದೇ ದೇಶವನ್ನೂ ಅವರು ಗೌರವಿಸುವುದಿಲ್ಲ. ವಿಶ್ವಸಂಸ್ಥೆಯನ್ನು ಮುಚ್ಚಬೇಕು, ಏಕೆಂದರೆ ಅದರ ಚಾರ್ಟರ್ ಅಮೆರಿಕಕ್ಕೆ ಅನುಕೂಲಕರವಾಗಿಲ್ಲ ಮತ್ತು ಅದರ ಕಾರ್ಯವಿಧಾನ ಪರಿಣಾಮಕಾರಿಯಾಗಿಲ್ಲ. ವಿಶ್ವಸಂಸ್ಥೆಯ ನಿಯಮಗಳ ಪ್ರಕಾರ ಒಂದು ದೇಶ ಇನ್ನೊಂದು ದೇಶವನ್ನು ವಶಪಡಿಸಿಕೊಳ್ಳುವುದು ಅಕ್ರಮ. ಅದು ಸಾಮ್ರಾಜ್ಯಗಳ ಆಳ್ವಿಕೆಯನ್ನು ಅಂತ್ಯಗೊಳಿಸಿದೆ. ಬ್ರಿಟಿಷ್ ಸಾಮ್ರಾಜ್ಯ ಅನೈತಿಕವಾಗಿತ್ತು, ಆದರೆ ಅಕ್ರಮವಾಗಿರಲಿಲ್ಲ. ನ್ಯಾಟೋ ಎಂಬುದೊಂದು ಅವಶೇಷ. ಈಗ ಅದು ಪರಾವಲಂಬಿಯಾಗಿದೆ. ಅಮೆರಿಕದ ಸಂಪತ್ತು ಮತ್ತು ಪ್ರಭಾವವನ್ನು ಹೆಚ್ಚಿಸಲು ಆರ್ಥಿಕ ಮತ್ತು ಮಿಲಿಟರಿ ಬಲವನ್ನು ಬಳಸಲು ಟ್ರಂಪ್ ಸಿದ್ಧರಿದ್ದಾರೆ. 'ಮೇಕ್ ಅಮೆರಿಕಾ ಗ್ರೇಟ್ ಅಗೇನ್'- MAGA ಎಂಬುದರ ಅರ್ಥವೇ ಅದು. ಉಕ್ರೇನ್‌ನೊಳಗೆ ರಷ್ಯಾ ನುಸುಳಿರುವುದರಿಂದ ಯುರೋಪ್‌ಗೆ ಬೇಸರವಾಗುತ್ತದೆ ಅಂತಾದರೆ ಅದು ಯುರೋಪ್‌ನ ಸಮಸ್ಯೆ. ಅಮೆರಿಕಕ್ಕೆ ಅದರಲ್ಲಿ ಪರೋಕ್ಷ ಹಿತಾಸಕ್ತಿಯಷ್ಟೇ ಇದೆ. ಅದರ ಬದಲಿಗೆ ಚೀನಾದಿಂದ ಎದುರಾಗುವ ಸವಾಲುಗಳ ಬಗ್ಗೆ ಟ್ರಂಪ್ ತಲೆಕೆಡಿಸಿಕೊಳ್ಳುತ್ತಾರೆ.

ಟ್ರಂಪ್ ಹೋಗುತ್ತಿರುವ ವೇಗವನ್ನು ನೋಡಿ ಸಾಂಪ್ರದಾಯಿಕ ಜಗತ್ತು ನಡುಗಲು ಕಾರಣವಿದೆ. ದೇಶಗಳ ಸಾರ್ವಭೌಮತೆಗಿಂತ ಟ್ರಂಪ್‌ಗೆ ಅಮೆರಿಕದ ಭದ್ರತೆಯೇ ಹೆಚ್ಚಾದರೆ ಕತಾರ್‌ಗೂ ಗ್ರೀನ್‌ಲ್ಯಾಂಡ್‌ನಷ್ಟೇ ಅಪಾಯವಿದೆ. ಕತಾರ್ ದೇಶ ಪಶ್ಚಿಮ ಏಷ್ಯಾ ಅಥವಾ ಮಧ್ಯಪ್ರಾಚ್ಯದಲ್ಲಿ ಅಮೆರಿಕಕ್ಕೆ ಗ್ವಾಮ್ ಆಗಬಹುದು. ವಾಷಿಂಗ್ಟನ್‌ನಿಂದ ಗ್ವಾಮ್ 8000 ಮೈಲು ದೂರವಿದ್ದರೆ, ಕತಾರ್ ಕೇವಲ 7000 ಮೈಲು ದೂರವಿದೆ. ಗ್ವಾಮ್‌ನಲ್ಲಿ ಅಮೆರಿಕದ ನೌಕಾನೆಲೆಯಿದೆ; ಕತಾರ್‌ನಲ್ಲೂ ಇದೆ. 1899ರಿಂದಲೇ ಗ್ವಾಮ್ ಅಮೆರಿಕದ ಒಂದು ಭಾಗವಾಗಿದೆ. ಸ್ಪೇನ್ ಜತೆಗಿನ ಯುದ್ಧದಲ್ಲಿ ಗೆದ್ದಿದ್ದಕ್ಕೆ ಸಿಕ್ಕ ಉಡುಗೊರೆಯದು. ಕತಾರ್ ದೇಶ ಗ್ರೀನ್‌ಲ್ಯಾಂಡ್‌ಗಿಂತ ಹೆಚ್ಚಿನ ಬೆಲೆ ಕೇಳಬಹುದು. ಅಮೆರಿಕಕ್ಕೆ ಅದರಿಂದೇನೂ ಸಮಸ್ಯೆಯಿಲ್ಲ, ಕಾಗದದ ಹಣವನ್ನು ಈಗ ಕತಾರ್‌ಗೆ ನೀಡಿದರೆ, ಕತಾರ್ ಅಮೆರಿಕದ ಭಾಗವಾದ ಮೇಲೆ ಆ ಹಣ ಅಮೆರಿಕಕ್ಕೇ ಬರುತ್ತದೆ. 1867ರಲ್ಲಿ ರಷ್ಯಾದಿಂದ ಅಲಾಸ್ಕಾವನ್ನು 7.2 ಮಿಲಿಯನ್ ಡಾಲರ್‌ಗೆ ಅಮೆರಿಕ ಖರೀದಿಸಿತ್ತು. ಇವತ್ತು ಅದು 132 ಮಿಲಿಯನ್ ಡಾಲರ್‌ಗೆ ಸಮ. 1917ರಲ್ಲಿ ಡೆನ್ಮಾರ್ಕ್‌ನಿಂದ ವರ್ಜಿನ್ ಐಲ್ಯಾಂಡನ್ನು ಅಮೆರಿಕ ಖರೀದಿಸಿತ್ತು. ಅಂದರೆ ಡೆನ್ಮಾರ್ಕ್ ಈ ಹಿಂದೆ ಇಂಥ ವ್ಯಾಪಾರ ಮಾಡಿದೆ. 1946ರಲ್ಲೇ ಅಮೆರಿಕದ ಅಧ್ಯಕ್ಷ ಹ್ಯಾರಿ ಟ್ರೂಮನ್ ಡೆನ್ಮಾರ್ಕ್ ಬಳಿ 100 ಮಿಲಿಯನ್ ಡಾಲರ್‌ಗೆ ಗ್ರೀನ್‌ಲ್ಯಾಂಡನ್ನು ಕೇಳಿದ್ದರು. 2ನೇ ಮಹಾಯುದ್ಧದ ವೇಳೆ ಗ್ರೀನ್‌ಲ್ಯಾಂಡ್‌ನಲ್ಲಿ ಅಮೆರಿಕದ ಸೇನಾನೆಲೆಯನ್ನು ಸ್ಥಾಪಿಸಿದ ಬಳಿಕ ಅವರು ಈ ಪ್ರಸ್ತಾಪ ಇರಿಸಿದ್ದರು. 1951ರಲ್ಲಿ ಅಮೆರಿಕ ಮತ್ತು ಗ್ರೀನ್‌ಲ್ಯಾಂಡ್ ನಡುವೆ ಏರ್ಪಟ್ಟ ರಕ್ಷಣಾ ಒಪ್ಪಂದದ ಪ್ರಕಾರ ನ್ಯಾಟೋ ಅಸ್ತಿತ್ವದಲ್ಲಿ ಇರುವವರೆಗೂ ಗ್ರೀನ್‌ಲ್ಯಾಂಡ್‌ನಲ್ಲಿ ರಕ್ಷಣಾ ವ್ಯವಸ್ಥೆಗಳನ್ನು ನಿರ್ಮಿಸಲು ಅಮೆರಿಕಕ್ಕೆ ಹಕ್ಕಿದೆ. ಅಮೆರಿಕವನ್ನು ಗ್ರೇಟ್ ಮಾಡುವ ಟ್ರಂಪ್ ಕನಸಿಗೆ ನ್ಯಾಟೋ ಅಡ್ಡಿಯಾಗಿರುವುದಕ್ಕೆ ಇದೂ ಒಂದು ಕಾರಣ.

ಅಮೆರಿಕ ನೇತೃತ್ವದ ಪಶ್ಚಿಮವನ್ನು ಕಮ್ಯುನಿಸ್ಟ್ ಸೋವಿಯತ್ ಒಕ್ಕೂಟದಿಂದ ರಕ್ಷಿಸಿಕೊಳ್ಳಲು ನ್ಯಾಟೋ ರಚನೆಯಾಗಿತ್ತು. 1990ರಲ್ಲಿ ಸೋವಿಯತ್ ಒಕ್ಕೂಟ ಪತನವಾದಾಗಲೇ ನ್ಯಾಟೋದ ಮೂಲ ಉದ್ದೇಶವೂ ಅಂತ್ಯವಾಗಿ, ವಾರ್ಸಾ ಒಪ್ಪಂದ ಕೇವಲ ಸ್ಮರಣೆಗೆ ಸೀಮಿತವಾಯಿತು. ಆದರೆ ಪಶ್ಚಿಮ ಯುರೋಪಿಯನ್ ದೇಶಗಳು ನ್ಯಾಟೋವನ್ನು ಜೀವಂತವಾಗಿಟ್ಟುಕೊಂಡಿದ್ದವು. ಏಕೆಂದರೆ ನ್ಯಾಟೋಗೆ ಹಣ ಸುರಿಯುವುದು ಅಮೆರಿಕ. ಯುರೋಪ್‌ಗೆ ಅದು ಹಾಲು ಕರೆಯುವ ಹಸು.

ವಿಶ್ವಸಂಸ್ಥೆಯ ಬಗ್ಗೆ ಟ್ರಂಪ್‌ಗೆ ಇರುವ ತಕರಾರಿನಲ್ಲಿ ಹುರುಳಿದೆ. ಎರಡನೇ ವಿಶ್ವ ಮಹಾಯುದ್ಧದಲ್ಲಿ ಗೆದ್ದ ಐದು ದೇಶಗಳು ಕಟ್ಟಿದ ಜಾಗತಿಕ ಒಕ್ಕೂಟವದು. ನಂತರದಲ್ಲಿ ಅದು ಸುಧಾರಣೆಯೇ ಆಗಿಲ್ಲ. ಹೀಗಾಗಿ ಇಂದು ನಪುಂಸಕನಾಗಿದೆ. 1930ರಲ್ಲಿ ಲೀಗ್ ಆಫ್ ನೇಷನ್ಸ್ ಎಷ್ಟು ದಿವಾಳಿಯಾಗಿತ್ತೋ ಅದಕ್ಕಿಂತ ಹೆಚ್ಚು ಬೌದ್ಧಿಕವಾಗಿ ಮತ್ತು ರಾಜಕೀಯವಾಗಿ ಇಂದು ವಿಶ್ವಸಂಸ್ಥೆ ದಿವಾಳಿಯಾಗಿದೆ. ಲೀಗ್ ಆಫ್ ನೇಷನ್ಸ್‌ನ ವೈಫಲ್ಯದ ಅವಶೇಷಗಳ ಮೇಲೆ ಕಾಲಿಟ್ಟು ಅಮೆರಿಕ 1930ರಲ್ಲಿ ಅದರಿಂದ ಹೊರಹೋಗಿತ್ತು. ವಿಶ್ವಸಂಸ್ಥೆ ಮತ್ತು ನ್ಯಾಟೋ ಕೂಡ ಇಷ್ಟೊತ್ತಿಗೆ ವಯಸ್ಸಾಗಿ ಸಾಯಬೇಕಿತ್ತು. ಟ್ರಂಪ್ ಈಗ ದಯಾಮರಣ ನೀಡುತ್ತಿದ್ದಾರೆ.

ಅಮೆರಿಕಕ್ಕೆ ಡೊನಾಲ್ಡ್ ಟ್ರಂಪ್ ಶಾಶ್ವತವಾಗಿ ಅಧ್ಯಕ್ಷರಾಗಿರುವುದಿಲ್ಲ, ಆದರೆ ಅವರು ಈಗಾಗಲೇ ಅಂತಾರಾಷ್ಟ್ರೀಯ ಸಂಬಂಧಗಳ ಸ್ವರೂಪವನ್ನು ಗುರುತು ಸಿಗದಂತೆ ಬದಲಿಸಿದ್ದಾರೆ. 20ನೇ ಶತಮಾನವು ಕೊನೆಗೂ ಮುಗಿದು 21ನೇ ಶತಮಾನ ಆರಂಭವಾಗಿದೆಯೇ ಅಥವಾ ಇಲ್ಲವೇ ಎಂಬುದು 2026ರ ಅಂತ್ಯದ ವೇಳೆಗೆ ನಮಗೆಲ್ಲರಿಗೂ ತಿಳಿಯುತ್ತದೆ.

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 266

ಸಮಾಚಾರ ಸಣ್ಣದಲ್ಲ

ಐಎಸ್ಐ ಪರ ಬೇಹು: ಜೈಸಲ್ಮೇರ್ ವ್ಯಕ್ತಿ ಸೆರೆ

ಜೈಪುರ: ಪಾಕಿಸ್ತಾನದ ಗುಪ್ತಚರ ಸಂಸ್ಥೆ 'ಐಎಸ್ಐ'ಗಾಗಿ ಭಾರತದಲ್ಲಿ ಬೇಹುಗಾರಿಕೆ ನಡೆಸುತ್ತಿದ್ದ ವ್ಯಕ್ತಿಯೊಬ್ಬನನ್ನು ರಾಜಸ್ಥಾನದ ಗಡಿ ಜಿಲ್ಲೆ ಜೈಸಲ್ಮೇರ್‌ನಲ್ಲಿ ಕೇಂದ್ರದ ಭದ್ರತಾ ಸಂಸ್ಥೆಗಳು ಜ.25ರ ತಡರಾತ್ರಿ ಬಂಧಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಶೇಷ ಭದ್ರತಾ ಪಡೆ ಅಧಿಕಾರಿಗಳ ತಂಡ ಜೈಸಲ್ಮೇರ್‌ನ ನೆಹ್ದಾನ್ ಗ್ರಾಮದಲ್ಲಿ ಝುಬರರಾಮ್ ಮೇಘವಾಲ್ ಎಂಬಾತನನ್ನು ಬಂಧಿಸಿದೆ. ಈಗ 4 ವರ್ಷಗಳಿಂದ ಗಡಿ ಪ್ರದೇಶದಲ್ಲಿ 'ಇ-ಮಿತ್ರ' ಹೆಸರಿನಲ್ಲಿ ಸೇವಾ ಕೇಂದ್ರವನ್ನು ನಡೆಸುತ್ತಿದ್ದ. ಇನ್ನೊಂದೆಡೆ, ಪಾಕಿಸ್ತಾನ ಐಎಸ್ಐನ ಮಹಿಳಾ ಅಧಿಕಾರಿ ಜತೆಗೂ ಸಂಪರ್ಕ ಹೊಂದಿದ್ದ. ಈತನನ್ನು ಹನಿಟ್ರ್ಯಾಪ್ ಮಾಡಿ ಹೆದರಿಸಿ ಬೇಹುಗಾರಿಕೆಗೆ ಬಳಸಿಕೊಂಡಿರಬಹುದು ಎಂಬ ಅನುಮಾನಗಳಿವೆ. ಸಿಐಡಿ (ಗುಪ್ತಚರ) ಅಧಿಕಾರಿಗಳ ತಂಡ ಮೇಘವಾಲ್‌ನನ್ನು ವಿಚಾರಣೆಗಾಗಿ ಜೈಪುರಕ್ಕೆ ಕರೆದೊಯ್ದಿದೆ. ಆತ ಬಳಸುತ್ತಿದ್ದ ಮೊಬೈಲ್ ಫೋನ್ ಮತ್ತು ಕಂಪ್ಯೂಟರ್‌ಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸಿಕೊಡಲಾಗಿದೆ. ಮೇಘವಾಲ್‌ಗೆ ಭಾರತದ ಸರಕಾರಕ್ಕೆ ಸಂಬಂಧಿಸಿದ ಹಲವು ಯೋಜನೆಗಳು ಮತ್ತು ದಾಖಲೆಗಳ ಬಗ್ಗೆ ಮಾಹಿತಿಯಿತ್ತು. ಸಾಮಾಜಿಕ ಮಾಧ್ಯಮಗಳ ಮೂಲಕ ಐಎಸ್ಐ ನಿರ್ವಾಹಕರೊಂದಿಗೆ ಸಂಪರ್ಕದಲ್ಲಿದ್ದ ಎಂದು ತಿಳಿದುಬಂದಿದೆ.

ಅಪಘಾತ: ಸಿಆರ್‌ಪಿಎಫ್ ಯೋಧ ಸೇರಿ 4 ಸಾವು

ಉಧಂಪುರ: ಜಮ್ಮು-ಕಾಶ್ಮೀರದ ಉಧಂಪುರ ಜಿಲ್ಲೆಯಲ್ಲಿ ಹಾದುಹೋಗಿರುವ ಜಮ್ಮು-ಶ್ರೀನಗರ ಹೆದ್ದಾರಿಯಲ್ಲಿ ಖಾಸಗಿ ಬಸ್ ಅಪಘಾತಕ್ಕೀಡಾಗಿದ್ದು, ಕೇಂದ್ರ ಮೀಸಲು ಪೊಲೀಸ್ ಪಡೆಯ(ಸಿಆರ್‌ಪಿಎಫ್) ಯೋಧ ಸೇರಿದಂತೆ ನಾಲ್ವರು ಸಾವಿಗೀಡಾಗಿದ್ದಾರೆ. ದೋಡಾದಿಂದ ಜಮ್ಮು ನಗರಕ್ಕೆ ಸಾಗುತ್ತಿದ್ದ ಬಸ್ ಜಖಾನಿ-ಥೆನಾನಿ ಪ್ರದೇಶದಲ್ಲಿ ಮೋಟಾರ್ ಬೈಕ್‌ಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸುವ ಭರದಲ್ಲಿ ರಸ್ತೆ ಪಕ್ಕ ನಿಲುಗಡೆಯಾಗಿದ್ದ ಸರಕು ಸಾಗಣೆ ಟ್ರಕ್‌ಗೆ ಬಲವಾಗಿ ಡಿಕ್ಕಿ ಹೊಡೆದಿದೆ. ಟ್ರಕ್ ದುರಸ್ತಿ ಮಾಡುತ್ತಿದ್ದ ಮೆಕ್ಯಾನಿಕ್ ಸೇರಿದಂತೆ ಟ್ರಕ್ ಚಾಲಕ, ಬಸ್‌ನಲ್ಲಿದ್ದ ಸಿಆರ್‌ಪಿಎಫ್ ಯೋಧ ಹಾಗೂ ಮತ್ತೊಬ್ಬ ಪ್ರಯಾಣಿಕ ಸಾವಿಗೀಡಾದರು. ಹಲವು ಪ್ರಯಾಣಿಕರು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಆ್ಯಸಿಡ್ ಸಂತ್ರಸ್ತರ ಪರ ಸುಪ್ರೀಂ ನಿಲುವು

ದೆಹಲಿ: ಆ್ಯಸಿಡ್ ದಾಳಿ ಪ್ರಕರಣಗಳಲ್ಲಿ ಆರೋಪಿಗಳ ಎಲ್ಲ ಆಸ್ತಿಗಳನ್ನು ಹರಾಜು ಹಾಕಿ ಸಂತ್ರಸ್ತರಿಗೆ ಪರಿಹಾರ ನೀಡಲು ಸಾಧ್ಯವಿಲ್ಲವೇ ಎಂದು ಮಂಗಳವಾರ ಸುಪ್ರೀಂ ಕೋರ್ಟ್ ಪ್ರಶ್ನಿಸಿದ್ದು, ಸಂತ್ರಸ್ತರಿಗೆ ಜೀವನ ನಡೆಸಲು ಹೆಚ್ಚಿನ ಆರ್ಥಿಕ ಪರಿಹಾರದ ಅಗತ್ಯವಿದೆ ಎಂದು ಒತ್ತಿ ಹೇಳಿದೆ. ಆ್ಯಸಿಡ್ ದಾಳಿ ಪ್ರಕರಣದಲ್ಲಿ ರಾಜ್ಯ ಸರಕಾರಗಳು ಪರಿಹಾರ ಯೋಜನೆಗಳನ್ನು ಸರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದ್ದು, ಸದ್ಯ ನೀಡುತ್ತಿರುವ 3 ಲಕ್ಷ ರು. ಪರಿಹಾರವು ಅಗತ್ಯ ಚಿಕಿತ್ಸೆ ಮತ್ತು ಜೀವನ ನಡೆಸಲು ಸಾಲದು ಎಂದು ಅಭಿಪ್ರಾಯಪಟ್ಟಿದೆ. 'ಈ ರೀತಿಯ ಘೋರ ಅಪರಾಧಗಳನ್ನು ತಡೆಯಲು ಅತೀ ಕಠಿಣ ಶಿಕ್ಷೆ ಅಗತ್ಯ' ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಹೇಳಿದ್ದಾರೆ. 2009ರ ಆ್ಯಸಿಡ್ ದಾಳಿ ಪ್ರಕರಣದ ಸಂತ್ರಸ್ತೆ ಶಾಹೀನ್ ಮಲಿಕ್ ಸಲ್ಲಿಸಿದ ಪಿಐಎಲ್ ವಿಚಾರಣೆಯನ್ನು ನ್ಯಾಯಾಲಯವು ಮಂಗಳವಾರ ನಡೆಸಿತು.

ಜಪಾನ್‌ನತ್ತ ಉ.ಕೊ. ಖಂಡಾಂತರ ಕ್ಷಿಪಣಿ

ಸಿಯೋಲ್: ಜಪಾನ್ ಸಮುದ್ರದತ್ತ ಗುರಿಯಿಟ್ಟು ಎರಡು ಬ್ಯಾಲಿಸ್ಟಿಕ್(ಖಂಡಾಂತರ) ಕ್ಷಿಪಣಿಗಳನ್ನು ಉತ್ತರ ಕೊರಿಯಾ ಮಂಗಳವಾರ ಹಾರಿಸಿದೆ ಎಂದು ಟೋಕಿಯೊ ಆಡಳಿತ ಹೇಳಿದೆ. ಪೂರ್ವ ಸಮುದ್ರ

ಎಂದು ಕರೆಯಲಾಗುವ ಸಿಯೋಲ್ ಕಡೆಗೆ ಪ್ರೊಜೆಕ್ಟೈಲ್‌ಗಳನ್ನು ಉತ್ತರ ಕೊರಿಯ ಹಾರಿಸಿರುವುದನ್ನು ಪತ್ತೆ ಹಚ್ಚಲಾಗಿದೆ ಎಂದು ದಕ್ಷಿಣ ಕೊರಿಯ ದೇಶದ ಜಂಟಿ ಮುಖ್ಯಸ್ಥರು ಕೂಡಾ ದೃಢಪಡಿಸಿದ್ದಾರೆ. ಎರಡು ಬ್ಯಾಲಿಸ್ಟಿಕ್ ಕ್ಷಿಪಣಿಗಳು ನಮ್ಮ ದೇಶದ ಕಡಲ ತೀರದತ್ತ ಹಾರಿ ಬಂದಿರುವುದನ್ನು ಪತ್ತೆ ಹಚ್ಚಲಾಗಿದೆ. ಎರಡೂ ಕ್ಷಿಪಣಿಗಳು ಕಡಲಿಗೆ ಬಿದ್ದಿವೆ ಎಂದು ಜಪಾನ್ ಕರಾವಳಿ ಕಾವಲು ಪಡೆ ಹೇಳಿದೆ. ಖಂಡಾಂತರ ಕ್ಷಿಪಣಿಗಳಂತೆ ಕಾಣುತ್ತಿದ್ದ ಎರಡು ಕ್ಷಿಪಣಿಗಳು ಜಪಾನ್ ದೇಶದ ವಿಶೇಷ ಆರ್ಥಿಕ ವಲಯ ಸಮೀಪದ ಕಡಲಿನಲ್ಲಿ ಬಂದು ಬಿದ್ದಿವೆ ಎಂದು ಜಪಾನ್ ರಕ್ಷಣಾ ಸಚಿವಾಲಯದ ಮೂಲಗಳನ್ನು ಉಲ್ಲೇಖಿಸಿ ಜಪಾನ್ ಸುದ್ದಿಸಂಸ್ಥೆ 'ಜಿಜಿ ಪ್ರೆಸ್' ಕೂಡಾ ಮಂಗಳವಾರ ವರದಿ ಪ್ರಕಟಿಸಿದೆ. ಇತ್ತೀಚಿನ ವರ್ಷಗಳಲ್ಲಿ ಉತ್ತರ ಕೊರಿಯ ಕ್ಷಿಪಣಿ ಪರೀಕ್ಷೆ ಹೆಚ್ಚಿಸಿರುವುದು ಗಮನಾರ್ಹ.

{ **ಮಾರ್ಕ್ ಕಾರ್ನಿ** } ಕೆನಡಾ ಪ್ರಧಾನಿ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚತುರ ವ್ಯಾಪಾರಿ. ಚೀನಾ ಜತೆ ಕೆನಡಾ ವ್ಯಾಪಾರ ಒಪ್ಪಂದ ಮಾಡಿಕೊಂಡರೆ ಕೆನಡಾ ಮೇಲೆ ಶೇ.100 ಆಮದು ಸುಂಕ ವಿಧಿಸುವೆ ಎಂದು ಟ್ರಂಪ್ ಹೇಳಿರುವುದು 'ಅಮೆರಿಕ-ಮೆಕ್ಸಿಕೊ-ಕೆನಡಾ' ನಡುವಿನ ವ್ಯಾಪಾರ ಒಪ್ಪಂದ ಮಾತುಕತೆಗೆ ಮುಂಚಿನ ಬೆದರಿಕೆ ತಂತ್ರವಷ್ಟೆ. ವ್ಯಾಪಾರ ಚರ್ಚೆಯಲ್ಲಿ ಮೇಲುಗೈ ಸಾಧಿಸುವ ಹುನ್ನಾರ.



ಭಾರತ-ಇಯು ಎಫ್‌ಟಿಎ ಸಹಿ: ಆಮದು-ರಫ್ತು ದುಪ್ಪಟ್ಟು ನಿರೀಕ್ಷೆ

18 ವರ್ಷದಿಂದ ನನೆಗುದಿಗೆ ಬಿದ್ದಿದ್ದ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಉಭಯ ನಾಯಕರ ಅಂಕಿತ

ಎಫ್‌ಟಿಎ ಪೂರ್ಣ ಜಾರಿಯಾದಲ್ಲಿ ಭಾರತದ ತಯಾರಿಕಾ ವಲಯಕ್ಕೆ ಹೆಚ್ಚು ಲಾಭದ ನಿರೀಕ್ಷೆ

2025ನೇ ಹಣಕಾಸು ವರ್ಷ ಭಾರತ-ಯೂರೋಪ್ ಒಕ್ಕೂಟದ ವಹಿವಾಟು
13,660
ಕೋಟಿ ಡಾಲರ್

ಯೂರೋಪ್ ಒಕ್ಕೂಟಕ್ಕೆ ಭಾರತದ ರಫ್ತು
7,590
ಕೋಟಿ ಡಾಲರ್
ಆಮದು
6,070
ಕೋಟಿ ಡಾಲರ್

ಭಾರತದಿಂದ ಸಂಸ್ಕರಿತ ಪೆಟ್ರೋಲಿಯಂ ಉತ್ಪನ್ನಗಳ ರಫ್ತು ಪ್ರಮಾಣವೇ
1,500
ಕೋಟಿ ಡಾಲರ್

2ನೇ ಸ್ಥಾನದಲ್ಲಿ ಭಾರತದ ಎಲೆಕ್ಟ್ರಾನಿಕ್ಸ್ ಉಪಕರಣಗಳ ರಫ್ತು
1,130
ಕೋಟಿ ಡಾಲರ್ ವಹಿವಾಟು

ದೆಹಲಿ: ಭಾರತ ಮತ್ತು ಯೂರೋಪ್ ದೇಶಗಳ ಒಕ್ಕೂಟದ ಮಧ್ಯೆ, ಕಡೆಗೂ ಮುಕ್ತ ವ್ಯಾಪಾರ ಒಪ್ಪಂದ(ಎಫ್‌ಟಿಎ) ಕೈಗೂಡಿದೆ. ಇದರಿಂದ ಎರಡೂ ಭಾಗಗಳ ನಡುವಿನ ಆಮದು-ರಫ್ತು ವಹಿವಾಟಿನಲ್ಲಿನ ಶೇ.96.6ರಷ್ಟು ಉತ್ಪನ್ನಗಳು ಸುಂಕ ಮುಕ್ತವಾಗಲಿವೆ. ಇದರಿಂದಾಗಿ ಎರಡೂ ಭಾಗಗಳಲ್ಲಿನ 200 ಕೋಟಿ ಜನ ಸಮುದಾಯಕ್ಕೆ ಬಹಳಷ್ಟು ಅನುಕೂಲಗಳಾಗಲಿದೆ ಎಂಬ ನಿರೀಕ್ಷೆಗಳಿವೆ.

2025ರ ಮಾರ್ಚ್ 31ರಂದು ಕೊನೆಗೊಂಡ ಹಣಕಾಸು ವರ್ಷದಲ್ಲಿ ಭಾರತ-ಯೂರೋಪ್ ಒಕ್ಕೂಟದ ನಡುವಿನ ಸರಕುಗಳ ಆಮದು-ರಫ್ತು ವಹಿವಾಟು 13,660 ಕೋಟಿ ಡಾಲರ್(12.52 ಲಕ್ಷ ಕೋಟಿ ರು.)ಗಳಿಗೂ ಅಧಿಕ ಪ್ರಮಾಣದ್ದಾಗಿತ್ತು ಎಂಬುದು ಅಂಕಿ ಅಂಶಗಳಿಂದ ತಿಳಿದುಬಂದಿದೆ. ಈಗ ಮುಕ್ತ ವ್ಯಾಪಾರ ಒಪ್ಪಂದವಾಗಿರುವುದರಿಂದ ವಹಿವಾಟು ಗಾತ್ರ ಮುಂಬರುವ ವರ್ಷಗಳಲ್ಲಿ ದುಪ್ಪಟ್ಟಾಗಲಿದೆ ಎಂಬ ಅಂದಾಜಿದೆ.

ಭಾರತದ ರಫ್ತು ಅಧಿಕ: 2025ನೇ ಹಣಕಾಸು ವರ್ಷದಲ್ಲಿ ಯೂರೋಪ್ ಒಕ್ಕೂಟದ ದೇಶಗಳಿಗೆ ಭಾರತದ ರಫ್ತು ಪ್ರಮಾಣ 7590 ಕೋಟಿ ಡಾಲರ್(6.96 ಲಕ್ಷ ಕೋಟಿ ರು.)ಗಳಷ್ಟಾಗಿದೆ. ಇದೇ ವೇಳೆ, ಯೂರೋಪ್ ದೇಶಗಳಿಂದ ಭಾರತಕ್ಕೆ 6070 ಕೋಟಿ ಡಾಲರ್(5.56 ಲಕ್ಷ ಕೋಟಿ ರು.)ಗಳಷ್ಟು ಮೌಲ್ಯದ ಸರಕುಗಳು ಬಂದಿವೆ. ಅಂದರೆ, ಭಾರತದ ರಫ್ತು ಪ್ರಮಾಣವೇ 1520 ಕೋಟಿ ಡಾಲರ್(1.39 ಲಕ್ಷ ಕೋಟಿ ರು.)ಗಳಷ್ಟು ಅಧಿಕವಾಗಿದೆ.

ಭಾರತದ ರಫ್ತು ವಹಿವಾಟು ಅಧಿಕವಾಗುವಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಪಾತ್ರ ಪ್ರಮುಖವಾಗಿದೆ. ಸಂಸ್ಕರಣೆಗೊಂಡ ಪೆಟ್ರೋಲಿಯಂ ಉತ್ಪನ್ನಗಳ ರಫ್ತಿನಿಂದಲೇ ಭಾರತಕ್ಕೆ 1500 ಕೋಟಿ ಡಾಲರ್(1.37 ಲಕ್ಷ ಕೋಟಿ ರು.) ವರಮಾನ ಬರುತ್ತಿದೆ. ಇದರಲ್ಲಿ ಸಂಸ್ಕರಿತ ಡೀಸೆಲ್ ರಫ್ತು ಪ್ರಮಾಣ 930 ಕೋಟಿ ಡಾಲರ್‌ಗಳಷ್ಟಿದ್ದರೆ, ವಿಮಾನಗಳ ಇಂಧನವಾದ 'ಎಟಿಎಫ್' ರಫ್ತು 540 ಕೋಟಿ ಡಾಲರ್‌ಗಳಷ್ಟಿದೆ.

ನಂತರದ ಸ್ಥಾನದಲ್ಲಿ ಎಲೆಕ್ಟ್ರಾನಿಕ್ಸ್ ಉಪಕರಣಗಳು ರಫ್ತು ವಹಿವಾಟು ನಡೆಯುತ್ತಿದೆ. ಭಾರತದಿಂದ ಯೂರೋಪ್ ದೇಶಗಳಿಗೆ 2025ನೇ ಹಣಕಾಸು ವರ್ಷದಲ್ಲಿ 1130 ಕೋಟಿ ಡಾಲರ್(1.04 ಲಕ್ಷ ಕೋಟಿ ರು.) ಮೌಲ್ಯದ ಎಲೆಕ್ಟ್ರಾನಿಕ್ಸ್ ಉಪಕರಣಗಳ ರಫ್ತು ನಡೆದಿದೆ. ಅದರಲ್ಲಿ ಸ್ಮಾರ್ಟ್‌ಫೋನ್‌ಗಳ ರಫ್ತು ಪ್ರಮಾಣವೇ 430 ಕೋಟಿ ಡಾಲರ್‌ಗಳಷ್ಟಿದೆ.

ಭಾರತದಿಂದ ಯೂರೋಪ್ ಒಕ್ಕೂಟದ ದೇಶಗಳಿಗೆ ರಫ್ತಾಗುವ ಯಂತ್ರೋಪಕರಣ, ಔಷಧಗಳು, ಸಾವಯವ ರಾಸಾಯನಿಕಗಳು, ಮುತ್ತು-ರತ್ನ-ವಜ್ರಾಭರಣಗಳು, ಜವಳಿ ಉತ್ಪನ್ನಗಳು ಸೇರಿದಂತೆ ಬಹಳಷ್ಟು ಮಹತ್ವದ ವಸ್ತು-ಸಾಮಗ್ರಿಗಳು ಯೂರೋಪ್ ದೇಶಗಳ ಮಾರುಕಟ್ಟೆಗೆ ರಫ್ತಾಗುತ್ತಿವೆ.

ಇದೇ ವೇಳೆ, ಯೂರೋಪ್ ಒಕ್ಕೂಟ ದೇಶಗಳಿಂದ ಭಾರತಕ್ಕೆ ರಫ್ತಾಗುವ ಪ್ರಮುಖ ಸಾಮಗ್ರಿಗಳಲ್ಲಿ ಯುದ್ಧ ವಿಮಾನಗಳು, ರಕ್ಷಣಾ ಉಪಕರಣಗಳು, ಅತ್ಯಾಧುನಿಕ ಯಂತ್ರೋಪಕರಣಗಳು, ಕಾರುಗಳು, ಎಲೆಕ್ಟ್ರಾನಿಕ್ಸ್ ಸಾಮಗ್ರಿಗಳು, ಪ್ರಮುಖ ರಾಸಾಯನಿಕಗಳು ಸೇರಿವೆ.

ವೈನ್-ಸ್ಪಿರಿಟ್ ವಹಿವಾಟು: ವೈನ್ ಮತ್ತು ಸ್ಪಿರಿಟ್‌ಗಳೂ ಗಣನೀಯ ಪ್ರಮಾಣದಲ್ಲಿ ಭಾರತ ಮತ್ತು ಯೂರೋಪ್ ಮಾರುಕಟ್ಟೆಗಳಿಗೆ ಆಮದು-ರಫ್ತು ಆಗುತ್ತಿವೆ. ಯೂರೋಪ್‌ನಿಂದ ಭಾರತಕ್ಕೆ 79 ಲಕ್ಷ ಡಾಲರ್ ಮೌಲ್ಯದ ವೈನ್ ಮತ್ತು 8.78 ಕೋಟಿ ಡಾಲರ್ ಬೆಲೆಯ ಸ್ಪಿರಿಟ್‌ಗಳು ರಫ್ತಾಗುತ್ತವೆ. ಅದೇ ವೇಳೆ, ಭಾರತದಿಂದಲೂ 2025ನೇ ಹಣಕಾಸು ವರ್ಷದಲ್ಲಿ 14 ಲಕ್ಷ ಡಾಲರ್ ಮೌಲ್ಯದ ವೈನ್ ಮತ್ತು 2.45 ಕೋಟಿ ಡಾಲರ್ ಬೆಲೆಯ ಸ್ಪಿರಿಟ್‌ಗಳು ಯೂರೋಪ್ ಒಕ್ಕೂಟ ದೇಶಗಳಿಗೆ ರಫ್ತಾಗಿವೆ.

2025ರಲ್ಲಿ ಯೂರೋಪ್ ಒಕ್ಕೂಟದಿಂದ ಭಾರತಕ್ಕೆ ರಫ್ತು

ಯೂರೋಪ್ ಒಕ್ಕೂಟದಲ್ಲಿ ತಯಾರಾಗುವ ಐಶಾರಾಮಿ ಕಾರುಗಳು ಸೇರಿದಂತೆ ಹಲವು ಬಗೆಯ ವಾಹನಗಳಿಗೆ ಭಾರತ ಪ್ರಮುಖ ಮಾರುಕಟ್ಟೆಯಾಗಿದೆ.

ಮುಖ್ಯವಾಗಿ, ಫ್ರಾನ್ಸ್‌ನ ಡಸಾಲ್ಟ್ ಕಂಪನಿಯಲ್ಲಿ ತಯಾರಾಗುವ 'ರಾಫೇಲ್' ಯುದ್ಧ ವಿಮಾನಗಳಿಗೆ ಭಾರತ ಪ್ರಮುಖ ಮಾರುಕಟ್ಟೆಯಾಗಿದೆ.

2024-25ನೇ ಹಣಕಾಸು ವರ್ಷದಲ್ಲಿ 1300 ಕೋಟಿ ಡಾಲರ್ (1.19 ಲಕ್ಷ ಕೋಟಿ ರು.) ಮೌಲ್ಯದ ಉನ್ನತ ಶ್ರೇಣಿಯ ಯಂತ್ರಗಳು, ಇಂಡಸ್ಟ್ರಿಯಲ್ ಕಂಟ್ರೋಲ್ ವಾಲ್ವ್‌ಗಳು, ಮೂಲ ಸೌಕರ್ಯ ಅಭಿವೃದ್ಧಿ ಕ್ಷೇತ್ರದ ಯಂತ್ರಗಳು ಭಾರತಕ್ಕೆ ರಫ್ತಾಗಿವೆ.

ಗಗನನೌಕೆಗಳ ಬಿಡಿಭಾಗಗಳು, ವಾಹನಗಳು ಭಾರತಕ್ಕೆ ಯೂರೋಪ್ ದೇಶಗಳಿಂದ ರಫ್ತಾಗುವ ಪ್ರಮುಖ ಸಾಮಗ್ರಿಗಳಲ್ಲಿ ಸೇರಿವೆ.

2025-26ನೇ ಹಣಕಾಸು ವರ್ಷದಲ್ಲಿ ಯೂರೋಪ್ ಒಕ್ಕೂಟ ದೇಶಗಳಿಂದ ಭಾರತದ ಮಾರುಕಟ್ಟೆಗೆ ರಾಸಾಯನಿಕಗಳು, ವಿಶೇಷ ಔಷಧಗಳು, ವೈದ್ಯಕೀಯ ಸಲಕರಣೆಗಳು ಕೂಡಾ ರಫ್ತಾಗಿವೆ.

ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ ಉಪಕರಣಗಳ ವಿಭಾಗದಲ್ಲಿಯೇ 2025-26ನೇ ಹಣಕಾಸು ವರ್ಷದಲ್ಲಿ ಯೂರೋಪ್ ಒಕ್ಕೂಟದಿಂದ 940 ಕೋಟಿ ಡಾಲರ್(86,160 ಕೋಟಿ ರು.) ಮೌಲ್ಯದ ಸರಕುಗಳು ಭಾರತಕ್ಕೆ ರಫ್ತಾಗಿವೆ.

2025-26ನೇ ಹಣಕಾಸು ವರ್ಷ ಯೂರೋಪ್‌ಗೆ ಭಾರತದ ರಫ್ತು

1) ಪೆಟ್ರೋಲಿಯಂ ಉತ್ಪನ್ನಗಳು 1500 ಕೋಟಿ ಡಾಲರ್
   - ಡೀಸೆಲ್ 930 ಕೋಟಿ ಡಾಲರ್
   - ಎಟಿಎಫ್ 540 ಕೋಟಿ ಡಾಲರ್
2) ಎಲೆಕ್ಟ್ರಾನಿಕ್ಸ್ ಉಪಕರಣಗಳು 1130 ಕೋಟಿ ಡಾಲರ್
   - ಸ್ಮಾರ್ಟ್‌ಫೋನ್ 430 ಕೋಟಿ ಡಾಲರ್
3) ಜವಳಿ, ಸಿದ್ಧ ಉಡುಪು 570 ಕೋಟಿ ಡಾಲರ್
   - ಸ್ತ್ರೀ ವಸ್ತ್ರಗಳು 450 ಕೋಟಿ ಡಾಲರ್
4) ಯಂತ್ರೋಪಕರಣ, ಕಂಪ್ಯೂಟರ್ 500 ಕೋಟಿ ಡಾಲರ್
   - ಟರ್ಬೋಜೆಟ್ಸ್ 75.60 ಕೋಟಿ ಡಾಲರ್
5) ಸಾವಯವ ರಾಸಾಯನಿಕ 510 ಕೋಟಿ ಡಾಲರ್
6) ಕಬ್ಬಿಣ ಮತ್ತು ಉಕ್ಕು 490 ಕೋಟಿ ಡಾಲರ್
7) ವಜ್ರ, ಮುತ್ತು, ರತ್ನ ಆಭರಣ 250 ಕೋಟಿ ಡಾಲರ್
   - ವಜ್ರಗಳು 160 ಕೋಟಿ ಡಾಲರ್
8) ಔಷಧಗಳು 300 ಕೋಟಿ ಡಾಲರ್
9) ವಾಹನಗಳ ಬಿಡಿಭಾಗಗಳು 160 ಕೋಟಿ ಡಾಲರ್
   - ಟಯರ್‌ಗಳು 89 ಕೋಟಿ ಡಾಲರ್
10) ಪಾದರಕ್ಷೆಗಳು 80.90 ಕೋಟಿ ಡಾಲರ್
11) ಕಾಫಿ 77.50 ಕೋಟಿ ಡಾಲರ್

ವಾಹನೋದ್ಯಮಕ್ಕೆ ಶುಕ್ರದೆಸೆ

ಈಗ ಭಾರತ-ಯೂರೋಪ್ ಒಕ್ಕೂಟ ಮಧ್ಯ ಮುಕ್ತ ವ್ಯಾಪಾರ ಒಪ್ಪಂದವಾಗಿರುವುದರಿಂದ ಮುಂಬರುವ ದಿನಗಳಲ್ಲಿ ಯೂರೋಪ್‌ನಿಂದ ಐಶಾರಾಮಿ ಕಾರುಗಳ ಆಮದು, ಭಾರತದಿಂದ ಟ್ರ್ಯಾಕ್ಟರ್, ಬೈಕ್-ಸ್ಕೂಟರ್ ರಫ್ತು ಹೆಚ್ಚಲಿದೆ.

ಯೂರೋಪ್ ದೇಶಗಳಿಂದ ಬಿಎಂಡಬ್ಲ್ಯು, ಫೋಕ್ಸ್‌ವ್ಯಾಗನ್, ಮರ್ಸಿಡಿಸ್ ಬೆಂಜ್, ರೆನೊ ಕಾರು ಕಂಪನಿಗಳು ವಿವಿಧ ವಾಹನಗಳು ಭಾರತದ ಮಾರುಕಟ್ಟೆಗೆ ಬರುತ್ತಿವೆ. ಈ ವಾಹನಗಳ ಆಮದು ವಹಿವಾಟು ಮೇಲೆ ಭಾರತ ಸರಕಾರ ಶೇ.100ರಷ್ಟು ಸುಂಕ ವಿಧಿಸುತ್ತಿದ್ದುದರಿಂದ ಈ ಕಾರುಗಳು ಭಾರತದ ಷೋರೋಂಗಳಲ್ಲಿ ಬಲು ದುಬಾರಿ(ಅಕ್ಷರಶಃ ದುಪ್ಪಟ್ಟು ಬೆಲೆ) ಎನಿಸಿಕೊಂಡಿದ್ದವು. ಈಗ 'ಎಫ್‌ಟಿಎ' ಜಾರಿಯಾಗುವುದರಿಂದ ಈ ಕಾರುಗಳ ಬೆಲೆ ಗಣನೀಯವಾಗಿ ತಗ್ಗಲಿದೆ.

ಬಿಎಂಡಬ್ಲ್ಯು ಕಂಪನಿಯ ಐಎಕ್ಸ್ ಮತ್ತು ಐ4 ಮಾದರಿ ಕಾರುಗಳು, ಮರ್ಸಿಡಿಸ್ ಬೆಂಜ್ ಕಂಪನಿಯ ಇಕ್ಯುಎಸ್ ಮತ್ತು ಇಕ್ಯುಇ ಸೆಡಾನ್ ಮಾದರಿ ಕಾರುಗಳು ಹಾಗೂ ಆಡಿ ಕಂಪನಿಯ ಕ್ಯು8 ಇ-ಟ್ರಾನ್ ಮತ್ತು ವೋಲ್ವೊ ಕಂಪನಿಯ ಎಸ್‌ಸಿ40 ರಿಚಾರ್ಜ್ ಕಾರುಗಳಿಗೂ ಭಾರತದಲ್ಲಿ ಬೇಡಿಕೆ ಇದೆ.

ಭಾರತದಿಂದಲೂ ಗಣನೀಯ ಪ್ರಮಾಣದಲ್ಲಿ ವಾಹನಗಳು, ಬಿಡಿಭಾಗಗಳು ಯೂರೋಪ್ ದೇಶಗಳಿಗೆ ರಫ್ತಾಗುತ್ತವೆ. ಭಾರತದಿಂದ ಯೂರೋಪ್ ಒಕ್ಕೂಟಕ್ಕೆ ವಾಹನೋದ್ಯಮದ ರಫ್ತು ಪ್ರಮಾಣ 2025ನೇ ಹಣಕಾಸು ವರ್ಷದಲ್ಲಿ 220 ಕೋಟಿ ಡಾಲರ್‌ಗಳಷ್ಟಿತ್ತು. ಅವುಗಳಲ್ಲಿ ವಾಹನಗಳ ಬಿಡಿಭಾಗಗಳ ಪ್ರಮಾಣವೇ 160 ಕೋಟಿ ಡಾಲರ್‌ಗಳಾಗಿತ್ತು. ಉಳಿದಂತೆ 18.18 ಕೋಟಿ ಡಾಲರ್ ಮೌಲ್ಯದ ಟ್ರ್ಯಾಕ್ಟರ್‌ಗಳು, 16.47 ಕೋಟಿ ಡಾಲರ್ ಬೆಲೆಯ ಸ್ಕೂಟರ್ ಮತ್ತು ಮೋಟಾರ್ ಬೈಕ್‌ಗಳು, 7.22 ಕೋಟಿ ಡಾಲರ್‌ಗಳ ಡಂಪರ್ಸ್ ಮತ್ತು 3.20 ಕೋಟಿ ಡಾಲರ್ ಬೆಲೆಯ ಕಾರುಗಳು ರಫ್ತಾಗಿವೆ. ಉಳಿದಂತೆ 89 ಕೋಟಿ ಡಾಲರ್ ಮೌಲ್ಯದ ಟಯರ್‌ಗಳು ಭಾರತದಿಂದ ಯೂರೋಪ್ ದೇಶಗಳಿಗೆ ರವಾನೆಯಾಗಿವೆ.

ಉದ್ಯೋಗಾವಕಾಶ ಸೃಷ್ಟಿ ನಿರೀಕ್ಷೆ

ಭಾರತ-ಯುರೋಪ್ ಒಕ್ಕೂಟದ ನಡುವಿನ ಮುಕ್ತ ವ್ಯಾಪಾರ ಒಪ್ಪಂದ ಕೈಗೂಡಿರುವುದರಿಂದ ಭಾರತದ ತಯಾರಿಕಾ ಉದ್ಯಮ ವಲಯಕ್ಕೆ ಹೆಚ್ಚಿನ ಅನುಕೂಲವಾಗಲಿದೆ. ಆ ಮೂಲಕ ಹೆಚ್ಚಿನ ಉದ್ಯೋಗ ಸೃಷ್ಟಿಗೆ ಅವಕಾಶವಾಗಲಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಭಾರತದ ಜವಳಿ ಉದ್ಯಮ ಮತ್ತು ಸಿದ್ಧ ಉಡುಪು ಕ್ಷೇತ್ರದಿಂದ ಯೂರೋಪ್ ದೇಶಗಳಿಗೆ ರಫ್ತು ವಹಿವಾಟು 2025ನೇ ಹಣಕಾಸು ವರ್ಷದಲ್ಲಿ 730 ಕೋಟಿ ಡಾಲರ್‌ಗಳಷ್ಟಿತ್ತು. ಇದರಲ್ಲಿ ಸಿದ್ಧ ಉಡುಪು ಕ್ಷೇತ್ರದ ಪಾಲೇ 450 ಕೋಟಿ ಡಾಲರ್‌ಗಳಷ್ಟಿದೆ. ಅದರಲ್ಲೂ ಮಹಿಳೆಯರ ಉಡುಪುಗಳ ರಫ್ತು ವಹಿವಾಟು 82.20 ಕೋಟಿ ಡಾಲರ್‌ಗಳಷ್ಟಿದೆ. ಜವಳಿ ಉದ್ಯಮದ ಪಾಲು 160 ಕೋಟಿ ಡಾಲರ್ ಮತ್ತು ಮೇಡ್ ಅಪ್ ಟೆಕ್ಸ್‌ಟೈಲ್ ಉತ್ಪನ್ನಗಳ ಪಾಲು 120 ಕೋಟಿ ಡಾಲರ್‌ಗಳಷ್ಟಿದೆ. ಈಗ 'ಎಫ್‌ಟಿಎ' ಪರಿಣಾಮವಾಗಿ ಜವಳಿ ಮತ್ತು ಸಿದ್ಧ ಉಡುಪು ಕ್ಷೇತ್ರದ ವಹಿವಾಟು ವೃದ್ಧಿಯಾಗುವುದರಿಂದ ಹೆಚ್ಚು ಉದ್ಯೋಗಗಳ ಸೃಷ್ಟಿಯಾಗಲಿದೆ.

ಇನ್ನೊಂದೆಡೆ, ಟ್ರ್ಯಾಕ್ಟರ್, ಮೋಟಾರ್ ಬೈಕ್, ಸ್ಕೂಟರ್‌ಗಳು ಹಾಗೂ ವಜ್ರ-ಮುತ್ತು-ರತ್ನಾಭರಣಗಳ ರಫ್ತು ವಹಿವಾಟು ವೃದ್ಧಿಯಾಗುವುದರಿಂದಲೂ ಹೆಚ್ಚಿನ ಉದ್ಯೋಗ ಸೃಷ್ಟಿಯಾಗಲಿವೆ ಎಂಬ ನಿರೀಕ್ಷೆ ಮೂಡಿದೆ.

ಆದೇಶ ಕೊಡುವುದನ್ನು ನಿಲ್ಲಿಸಿ: ಅಮೆರಿಕಕ್ಕೆ ವೆನೆಜುವೆಲಾ ಗುದ್ದು

ವಾಷಿಂಗ್ಟನ್: ತುಂಬಾ ಆದೇಶಗಳನ್ನು ಕೊಟ್ಟಿದ್ದೀರಿ.. ಇನ್ನು ಸಾಕು ಮಾಡಿ ಎಂದು ವೆನೆಜುವೆಲಾ ಹಂಗಾಮಿ ಅಧ್ಯಕ್ಷೆ ಡೆಲ್ಸಿ ರೊಡ್ರಿಗಸ್ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರುದ್ಧ ಗುಡುಗಿದ್ದಾರೆ.

ರೋಡ್ರಿಗಸ್

ಕರಾವಳಿ ನಗರವಾದ ಪೋರ್ಟೊ ಲಾ ಕ್ರೂಜ್‌ನಲ್ಲಿ ತೈಲೋತ್ಪನ್ನ ಘಟಕಗಳ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದ ರೊಡ್ರಿಗಸ್, 'ವೆನೆಜುವೆಲಾದ ಆಡಳಿತ ಮತ್ತು ರಾಜಕಾರಣವನ್ನು ವಿದೇಶಿ ಹಸ್ತಕ್ಷೇಪವಿಲ್ಲದೆ ಆಂತರಿಕವಾಗಿಯೇ ಪರಿಹರಿಸಿ ಕೊಳ್ಳಬೇಕಿದೆ. ವೆನೆಜುವೆಲಾ ಸರಕಾರ ಮತ್ತು ರಾಜಕಾರಣಿಗಳಿಗೆ ವಾಷಿಂಗ್ಟನ್ ಆದೇಶಗಳನ್ನು ಕೊಡವುದನ್ನು ಸಾಕು ಮಾಡಲಿ. ವೆನೆಜುವೆಲಾದ ರಾಜಕೀಯ, ಆಂತರಿಕ ಭಿನ್ನಾಭಿಪ್ರಾಯ-ಸಂಘರ್ಷಗಳನ್ನು ನಾವೇ ಪರಿಹರಿಸಿ ಕೊಳ್ಳುತ್ತೇವೆ ಎಂದು ಹೇಳಿ ದ್ದಾರೆ. ಅವರ ಈ ಭಾಷಣ ಸರಕಾರಿ ಸ್ವಾಮ್ಯದ ವೆನೆಜೋಲಾನಾ ಡಿ ಟೆಲಿವಿಷನ್‌ನಲ್ಲಿ ಪ್ರಸಾರವಾಗಿದೆ. ಅಮೆರಿಕ ಜತೆಗೆ ಗೌರವಯುತವಾದ ಸಂಬಂಧ ಹೊಂದಲು ಬಯಸುತ್ತೇವೆಯೇ ಹೊರತು ಅಮೆರಿಕಕ್ಕೆ ನಾವೇನೂ ಹೆದರುವುದಿಲ್ಲ. ಅಂತಾರಾಷ್ಟ್ರೀಯ ಕಾನೂನಿಗೆ ಗೌರವ, ಪರಸ್ಪರ ಸಂಬಂಧಗಳಲ್ಲಿ ಘನತೆ ಮತ್ತು ವೆನೆಜುವೆಲಾ ಇತಿಹಾಸಕ್ಕೆ ಗೌರವ ಇರಬೇಕು ಎಂಬುದು ನಮ್ಮ ಆಶಯವಾಗಿದೆ ಎಂದರು.

ವಾಟ್ಸಾಪ್‌ಗೆ ಯುರೋಪ್ ಕಮಿಷನ್ ಲಗಾಮು

ಮೆಟಾ ಕಂಪನಿ ಸಂದೇಶ ವಾಹಕಕ್ಕೆ 'ಡಿಎಸ್ಎ' ನಿಯಮಗಳಡಿ ಕಠಿಣ ಸವಾಲು

ಬ್ರುಸೆಲ್ಸ್: ಯೂರೋಪ್ ಒಕ್ಕೂಟದ ದೇಶಗಳಲ್ಲಿ 'ವಾಟ್ಸಾಪ್'ಗೆ ಕಠಿಣ ನಿಯಮಗಳು ಸವಾಲು ಎದುರಾಗಿವೆ. ಏಕೆಂದರೆ, ಮೆಟಾ ಕಂಪನಿಯ ಒಡೆತನದ ಸಂದೇಶ ವಾಹಕ ಅಪ್ಲಿಕೇಷನ್ 'ವಾಟ್ಸಾಪ್' ಅನ್ನು ಕೂಡಾ 'ಯೂರೋಪಿಯನ್ ಕಮಿಷನ್' ತನ್ನ ಕಠಿಣ ನಿಯಮಗಳಿಗೆ ಒಳಪಡಿಸಲು ಮುಂದಾಗಿದೆ.

'ಆನ್‌ಲೈನ್ ಕಂಟೆಂಟ್' ನಿಯಂತ್ರಿಸುವ ಸಲುವಾಗಿ ಯೂರೋಪಿಯನ್ ಕಮಿಷನ್ ಕಠಿಣ ನಿಯಮಗಳನ್ನು ರೂಪಿಸಿದ್ದು, ಅದರಡಿ ಟಿಕ್‌ಟಾಕ್, 'ಎಕ್ಸ್' ಸೇರಿದಂತೆ 26 ಸಾಮಾಜಿಕ ಮಾಧ್ಯಮ ಆಪ್‌ಗಳನ್ನು ನಿರಂತರ ನಿಗಾ ಪಟ್ಟಿಗೆ ಸೇರಿಸಲಾಗಿದೆ. ಈಗ ವಾಟ್ಸಾಪ್ಪನ್ನೂ ಈ ಪಟ್ಟಿಗೆ ಸೇರಿಸಲು ಯೂರೋಪಿಯನ್ ಕಮಿಷನ್ ಮುಂದಾಗಿರುವುದು ಸದ್ಯ ಮಾಸಿಕ 4.50 ಕೋಟಿ ಸಕ್ರಿಯ ಬಳಕೆದಾರರನ್ನು ಹೊಂದಿರುವ ವಾಟ್ಸಾಪ್ ಚಾನೆಲ್‌ಗೆ ಸಂಕಷ್ಟ ತಂದಿಟ್ಟಿದೆ.

'ವಾಟ್ಸಾಪ್ ಚಾನೆಲ್ಸ್' ಅನ್ನು ಇನ್ನು ಮುಂದೆ ಕೇವಲ ಖಾಸಗಿ ಕಿರು ಸಂದೇಶ ವಾಹಕವಾಗಿಯಷ್ಟೇ

ಪರಿಗಣಿಸಲಾಗದು. ಅದನ್ನು 'ಬ್ರಾಡ್‌ಕಾಸ್ಟಿಂಗ್' ರೀತಿಯ ಪ್ರಸಾರ ವೇದಿಕೆಯಾಗಿಯೇ ಪರಿಗಣಿಸಲಾಗುವುದು. ಹಾಗಾಗಿ ವಾಟ್ಸಾಪ್ ಚಾನೆಲ್ ಇನ್ನು ಮುಂದೆ, ಸದ್ಯ ಒಕ್ಕೂಟ ದೇಶಗಳಲ್ಲಿ ಜಾರಿಯಲ್ಲಿರುವ 'ಡಿಜಿಟಲ್ ಸರ್ವಿಸ್ ಆಕ್ಟ್'(ಡಿಎಸ್ಎ) ಅನ್ವಯವೇ ಕಾರ್ಯನಿರ್ವಹಿಸಬೇಕಿದೆ ಎಂದು ಯೂರೋಪಿಯನ್ ಕಮಿಷನ್(ಇ.ಸಿ) ಸ್ಪಷ್ಟವಾಗಿ ಹೇಳಿದೆ.

ಈ ನಿಯಮಗಳಡಿ ವಾಟ್ಸಾಪ್ ಬಿತ್ತರಿಸುವ ಸಂದೇಶ, ಮಾಹಿತಿಗಳಿಂದ ಮೂಲಭೂತವಾದ ಮಾನವ ಹಕ್ಕುಗಳು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಉಲ್ಲಂಘನೆ ಆಗದಂತೆ ನಿಗಾ ವಹಿಸಬೇಕಿದೆ. ಕಾನೂನು ಬಾಹಿರವಾದ ಅಂಶಗಳನ್ನು ಒಳಗೊಳ್ಳುವ ಮೂಲಕ ಚುನಾವಣಾ ಅಕ್ರಮಗಳಿಗೆ ಅವಕಾಶ ಮಾಡಿಕೊಡದಂತೆಯೂ ಗಮನವಿಡಬೇಕಿದೆ ಎಂದು 'ಇ.ಸಿ' ಹೇಳಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಡಳಿತದಿಂದ ಜಾರಿಯಾಗಿರುವ 'ಸೆನ್ಸಾರ್‌ಷಿಪ್' ಎಂಬ ಈ ನಿಯಮಗಳನ್ನು ಪರಿಪೂರ್ಣವಾಗಿ ಜಾರಿಗೆ ತರುವುದಕ್ಕೆ ವಾಟ್ಸಾಪ್‌ಗೆ ಮೇ ಮಾಸಾಂತ್ಯವರೆಗೂ ಸಮಯಾವಕಾಶ ನೀಡಲಾಗಿದೆ

ಯೂರೋಪ್ ಒಕ್ಕೂಟದ 27 ದೇಶಗಳಲ್ಲಿ ವಾಟ್ಸಾಪ್ ಚಾನೆಲ್‌ಗಳಿಗೆ ಮಾಸಿಕ 5.17 ಕೋಟಿ ಬಳಕೆದಾರರಿದ್ದಾರೆ ಎಂದು ಕಳೆದ ವರ್ಷ ಪ್ರಕಟಿಸಿದ್ದ ಡಿಎಸ್ಎ ಪಾರದರ್ಶಕ ವರದಿಯಲ್ಲಿ ವಾಟ್ಸಾಪ್ ಹೇಳಿಕೊಂಡಿದೆ.

ಭಾರತ-ಇ.ಯು 'ಎಫ್‌ಟಿಎ'ಗೆ ಅಮೆರಿಕದ ಕಟು ಟೀಕೆ

ಯೂರೋಪ್ ತನ್ನ ಕಾಲ ಮೇಲೆ ತಾನೇ ಚಪ್ಪಡಿ ಎಳೆದುಕೊಂಡಿದೆ

ವಾಷಿಂಗ್ಟನ್: ಭಾರತದ ಜತೆ ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ)ಕ್ಕೆ ಸಹಿ ಹಾಕುವ ಮೂಲಕ 'ಯೂರೋಪ್ ಒಕ್ಕೂಟ' ತನಗೆ ತಾನೇ ಸಂಕಷ್ಟ ತಂದುಕೊಳ್ಳುತ್ತಿದೆ ಎಂದು ಅಮೆರಿಕ ಹೇಳಿದೆ.



ಭಾರತ-ಯೂರೋಪ್ ಒಕ್ಕೂಟದ ನಡುವೆ ಮಂಗಳವಾರ ದೆಹಲಿಯ ಹೈದರಾಬಾದ್ ಹೌಸ್‌ನಲ್ಲಿ ನಡೆದ 'ಎಫ್‌ಟಿಎ' ಚರ್ಚೆ ಮತ್ತು ಸಹಿ ಕಾರ್ಯಕ್ರಮವನ್ನು ಅಮೆರಿಕ ತನ್ನದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದೆ. ಆ ಮೂಲಕ ಯೂರೋಪ್ ಖಂಡದ 27 ದೇಶಗಳು ಭಾರತದ ಜತೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಂಡಿರುವುದಕ್ಕೆ ತನಗೆ ಆಗುತ್ತಿರುವ ಸಂಕಟವನ್ನು ಡೊನಾಲ್ಡ್ ಟ್ರಂಪ್ ಆಡಳಿತ ಹೀಗೆ ಹೊರಹಾಕುತ್ತಿದೆ.

'ಈ ಒಪ್ಪಂದ ಹೇಗಿದೆ ಎಂದರೆ, ಯೂರೋಪ್ ತನ್ನ ವಿರುದ್ಧದ ಯುದ್ಧಕ್ಕೆ ತಾನೇ ಹಣ ತೊಡಗಿಸುತ್ತಿದೆ' ಎಂದು ಅಮೆರಿಕದ ಟ್ರೆಷರಿ ಸೆಕ್ರೆಟರಿ ಸ್ಕಾಟ್ ಬೆಸೆಂಟ್ ವ್ಯಾಖ್ಯಾನಿಸಿದ್ದಾರೆ. ಆ ಮೂಲಕ ತಮಗೆ ಆಗಿರುವ ಅಸಮಾಧಾನವನ್ನು ಹೊರಹಾಕಿದ್ದಾರೆ.

ರಷ್ಯನ್ ತೈಲ ಖರೀದಿಸುತ್ತಿರುವುದಕ್ಕೆ ಭಾರತದ ಮೇಲೆ ನಾವು ಶೇ. 25 ಟ್ಯಾರಿಫ್ ಹಾಕಿದ್ದೇವೆ. ಆದರೆ, ಯೂರೋಪಿಯನ್ನರು ಭಾರತದೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಂಡಿದ್ದಾರೆ. ರಷ್ಯಾದಿಂದ ಕಚ್ಚಾತೈಲ ಭಾರತಕ್ಕೆ ಹೋಗಿ ಅಲ್ಲಿ ಸಂಸ್ಕರಣೆಗೊಂಡು ಪೆಟ್ರೋಲಿಯಂ ಉತ್ಪನ್ನಗಳು ಯೂರೋಪ್‌ಗೆ ಹೋಗುತ್ತವೆ. ಇತ್ತ ರಷ್ಯಾ ವಿರುದ್ಧದ ಯುದ್ಧದಲ್ಲಿ ಉಕ್ರೇನ್‌ಗೆ ನೆರವಾಗುವ ಯೂರೋಪ್ ಒಕ್ಕೂಟ, ಈಗ ಭಾರತದ ಜತೆ 'ಎಫ್‌ಟಿಎ'ಗೆ ಸಹಿಹಾಕುವ ಮೂಲಕ ತನ್ನ ವಿರುದ್ಧದ ಯುದ್ಧಕ್ಕೆ ತಾನೇ ಹಣ ಒದಗಿಸಿದಂತೆ ಆಗುತ್ತಿದೆ' ಎಂದು ಬೆಸೆಂಟ್ ವ್ಯಂಗ್ಯವಾಡಿದ್ದಾರೆ.

ಟ್ರಂಪ್ ಹೊಟ್ಟೆಯುರಿ

ಎಷ್ಟೇ ವಿರೋಧಿಸಿದರೂ, ಅದೆಷ್ಟೇ ಸುಂಕ ವಿಧಿಸಿದರೂ ತಲೆ ಕೆಡಿಸಿಕೊಳ್ಳದ ಭಾರತ, ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದನ್ನು ಮುಂದುವರಿಸಿದೆ. ಆ ಮೂಲಕ ರಷ್ಯಾಗೆ ಯುದ್ಧ ಮುಂದುವರಿಸಲು ನೆರವಾಗುತ್ತಿದೆ ಎಂಬುದು ಅಮೆರಿಕದ ತಗಾದೆ. ಈಗ ಭಾರತದ ಜತೆ ಯೂರೋಪ್ ಒಕ್ಕೂಟ ದೊಡ್ಡ ಮಟ್ಟದ ವ್ಯಾಪಾರ ಒಪ್ಪಂದ ಮಾಡಿಕೊಂಡಿರುವುದು ಟ್ರಂಪ್ ಆಡಳಿತದ ಹೊಟ್ಟೆ ಉರಿ ಇನ್ನಷ್ಟು ಹೆಚ್ಚಿಸಿದೆ.

ಪರೀಕ್ಷಾ ಪೆ ಚರ್ಚಾ ದಾಖಲೆ: 6.76 ಕೋಟಿ ವಿದ್ಯಾರ್ಥಿ ಭಾಗಿ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ವಿದ್ಯಾರ್ಥಿಗಳಲ್ಲಿನ ಪರೀಕ್ಷೆಯ ಭಯ-ಒತ್ತಡವನ್ನು ದೂರ ಮಾಡುವ ಸಲುವಾಗಿ ಬಹಳ ಆಸಕ್ತಿಯಿಂದ 9 ವರ್ಷಗಳ ಹಿಂದೆ ಆರಂಭಿಸಿದ 'ಪರೀಕ್ಷಾ ಪೆ ಚರ್ಚಾ' ಕಾರ್ಯಕ್ರಮ ವರ್ಷಗಳು ಕಳೆದಂತೆಲ್ಲಾ ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಲೇ ಇದೆ. ಪರಿಣಾಮವಾಗಿ, ಪ್ರತಿ ವರ್ಷದ ಜನವರಿ/ಫೆಬ್ರವರಿಯಲ್ಲಿ ಆಯೋಜಿಸಲಾಗುವ 'ಪರೀಕ್ಷಾ ಪೆ ಚರ್ಚಾ'ದ 9ನೇ ಆವೃತ್ತಿಯು ಈ ಬಾರಿ ಹೊಸ ದಾಖಲೆ ಬರೆದಿದೆ.



ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರನ್ನೂ ಒಳಗೊಂಡಂತೆ ಪ್ರಧಾನಿ ಮೋದಿ ಅವರು ನಡೆಸಿಕೊಡುವ ಜನಪ್ರಿಯ ಕಾರ್ಯಕ್ರಮ 'ಪರೀಕ್ಷಾ ಪೆ ಚರ್ಚಾ' ದೆಹಲಿಯ ಭಾರತ್ ಮಂಟಪಂನಲ್ಲಿ ನಡೆದಿದ್ದು, ದೇಶಾದ್ಯಂತ ಒಟ್ಟು 6.76 ಕೋಟಿ ವಿದ್ಯಾರ್ಥಿಗಳನ್ನು ಆಕರ್ಷಿಸುವ ಮೂಲಕ ಹೊಸ ದಾಖಲೆ ನಿರ್ಮಿಸಿದೆ.

ಈ ಕಾರ್ಯಕ್ರಮದಲ್ಲಿ ದೆಹಲಿ, ತಮಿಳುನಾಡಿನ ಕೊಯಮತ್ತೂರು, ಛತ್ತೀಸ್‌ಗಢ ರಾಜ್ಯದ ರಾಯಪುರ, ಗುಜರಾತ್‌ನ ದೇವ್ ಮೋಗ್ರಾ ಮತ್ತು ಅಸ್ಸಾಂ ರಾಜ್ಯದ ಗುವಾಹಟಿಯಲ್ಲಿ ಸಮಾವೇಶಗೊಂಡಿದ್ದ ವಿದ್ಯಾರ್ಥಿಗಳೊಂದಿಗೆ ಪ್ರಧಾನಿ ನರೇಂದ್ರ ಮೋದಿ ನೇರ ಸಂವಾದ ನಡೆಸಿದ್ದಾರೆ. ಈ ಬಾರಿ ಪರೀಕ್ಷಾ ಪೆ ಚರ್ಚಾ ಕಾರ್ಯಕ್ರಮಕ್ಕೆ ದೇಶದ ವಿವಿಧೆಡೆಯ 4.5 ಕೋಟಿಗೂ ಹೆಚ್ಚು ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು. ಅಲ್ಲದೇ, 2.26 ಕೋಟಿ ವಿದ್ಯಾರ್ಥಿಗಳು ಸೇರಿ ಹಲವು ಜನರು ಪರೀಕ್ಷಾ ಪೆ ಚರ್ಚಾ ತಯಾರಿ, ಸಂಬಂಧಿತ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು. 2018ರಲ್ಲಿ ಕೇವಲ 22 ಸಾವಿರ ವಿದ್ಯಾರ್ಥಿಗಳ ಭಾಗವಹಿಸುವಿಕೆಯೊಂದಿಗೆ ಆರಂಭವಾದ ಪರೀಕ್ಷಾ ಪೆ ಚರ್ಚಾ ಕಾರ್ಯಕ್ರಮ ಇಂದು ಕೋಟಿಗಟ್ಟಲೆ ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರನ್ನು ತಲುಪುವ ಮೂಲಕ 'ಜನ ಆಂದೋಲನ'ವಾಗಿ ಬದಲಾಗಿದೆ.

ಸಮಾಚಾರ ಸಣ್ಣದಲ್ಲ

ವಿವಿಧೆಡೆ ಸಂಭ್ರಮದ ಗಣರಾಜ್ಯೋತ್ಸವ

ಕೊಲ್ಹಾರ: ಪಟ್ಟಣದ ವಿವಿದ ಸಂಘ, ಸಂಸ್ಥೆ, ಸರಕಾರಿ ಕಚೇರಿಗಳ ಸಹಿತ ವಿವಿಧೆಡೆ ಸಂಭ್ರಮದ ಗಣರಾಜ್ಯೋತ್ಸವ ಕಾರ್ಯಕ್ರಮ ಆಚರಿಸಲಾಯಿತು. ಪಟ್ಟಣದ ತಹಸೀಲ್ದಾರ್‌ಕಾರ್ಯಾಲಯ, ಪೊಲೀಸ್ ಠಾಣೆ, ಪಟ್ಟಣ ಪಂಚಾಯತ್ ಕಾರ್ಯಾಲಯ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ, ಪ್ರಾಥಮಿಕ ಆರೋಗ್ಯ ಕೇಂದ್ರ, ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಮಹಾತ್ಮ ಗಾಂಧೀಜಿ ವೃತ್ತ, ಅಮಾನತ್ ಬ್ಯಾಂಕ್, ಆಕ್ಸ್‌ಫರ್ಡ್ ಆಂಗ್ಲ ಮಾಧ್ಯಮ ಶಾಲೆ, ಅಂಜುಮನ್ ಇಸ್ಲಾಂ ಮದರಸಾ, ಟಿಪ್ಪು ಸುಲ್ತಾನ ವೃತ್ತ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ರೈತ ಸಂಪರ್ಕ ಕೇಂದ್ರ, ನಾಡ ಕಾರ್ಯಾಲಯ, ಖಜಾನೆ ಇಲಾಖೆ, ಕಾರ್ಮಿಕ ಇಲಾಖೆ ಸಹಿತ ವಿವಿದೆಡೆ ಗಣರಾಜ್ಯೋತ್ಸವ ಕಾರ್ಯಕ್ರಮ ಆಚರಿಸಲಾಯಿತು.

ವಲಸಿಗರ ಗಡಿಪಾರಿಗೆ ಯತ್ನಾಳ್ ಕೇಂದ್ರಕ್ಕೆ ಪತ್ರ

ವಿಜಯಪುರ: ದೇಶದ ಐಕ್ಯತೆಗೆ, ಒಗ್ಗಟ್ಟಿಗೆ ಹಾಗೂ ಸಮಗ್ರತೆಗೆ ಬಾಂಗ್ಲಾ ನಿವಾಸಿಗಳನ್ನು ಕೂಡಲೇ ಗಡಿಪಾರುಗೊಳಿಸಲು ರಾಜ್ಯ ಸರಕಾರಕ್ಕೆ ನಿರ್ದೇಶಿಸಲು ಕೇಂದ್ರ ಗೃಹ ಸಚಿವ ಅಮಿಶ್ ಶಾ ಅವರಿಗೆ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳರು ಪತ್ರ ಬರೆದಿದ್ದಾರೆ. ಕಾಂಗ್ರೆಸ್ ಸರಕಾರದ ವೈಫಲ್ಯದಿಂದ ಕರ್ನಾಟಕ ಬಾಂಗ್ಲಾ ನಿವಾಸಿಗಳ ತವರೂರಾಗಿದೆ. ರಾಜ್ಯದೆಲ್ಲೆಡೆ ಬಾಂಗ್ಲಾ ನಿವಾಸಿಗಳು ಅಕ್ರಮವಾಗಿ ನೆಲೆಸಿದ್ದಲ್ಲದೆ, ಆಧಾರ್‌ಕಾರ್ಡ್ ಸೇರಿದಂತೆ ಅನೇಕ ಗುರುತಿನ ಚೀಟಿಯನ್ನು ಪಡೆದು ಸ್ಥಳೀಯ ದೇಶವಾಸಿಗಳಿಗೆ ಸಲ್ಲಬೇಕಾಗಿದ್ದ ಸಂಪನ್ಮೂಲಗಳನ್ನು ಬಳಸುತ್ತಿರುವುದು ದುರದೃಷ್ಟಕರ. ಇಲ್ಲಿ ದುಡಿಯುವ ಹಣವನ್ನು ಬಾಂಗ್ಲಾದೇಶಕ್ಕೆ ರವಾನಿಸಿ, ಭಾರತವನ್ನು ಅಭದ್ರಗೊಳಿಸಲು ಉಗ್ರ ಸಂಘಟನೆಗಳಿಗೆ ನೆರವು ನೀಡುತ್ತಿರುವ ಬಗ್ಗೆಯೂ ಗೊತ್ತಾಗಿದೆ. ಕಾಫಿ ತೋಟ, ತ್ಯಾಜ್ಯ ನಿರ್ವಹಣಾ ಘಟಕ, ಮನೆ ಹಾಗೂ ಅಪಾರ್ಟ್‌ಮೆಂಟ್‌ಗಳಲ್ಲಿ ಮನೆಗೆಲಸ, ಚಾಲಕ, ಚಿಂದಿ ಆಯುವ ಕೆಲಸವನ್ನು ಮಾಡಿಕೊಂಡು ಭಾರತವನ್ನೇ ತಮ್ಮ ನೆಲೆಯನ್ನಾಗಿ ಮಾಡಿಕೊಂಡಿರುವುದನ್ನು ಮಾಧ್ಯಮಗಳು, ಹಿಂದೂ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಬಯಲಿಗೆಳೆದಿದ್ದಾರೆ. ಇಷ್ಟೆಲ್ಲಾ ಸಾಕ್ಷ್ಯಗಳಿದ್ದರೂ ಸಹ ಅಕ್ರಮ ಬಾಂಗ್ಲಾದೇಶಿ ವಾಸಿಗಳನ್ನು ಹುಡುಕಿಕೊಟ್ಟ ಮಾಧ್ಯಮ, ಕಾರ್ಯಕರ್ತ ರ ಮೇಲೆ ಪ್ರಕರಣ ದಾಖಲಿಸಿ ಸರಕಾರ ಪರೋಕ್ಷವಾಗಿ ಅವರ ಪರವೇ ನಿಂತಿದೆ. ರಾಜ್ಯದಲ್ಲಿರುವ ಪ್ರತಿಯೊಬ್ಬ ಬಾಂಗ್ಲಾದೇಶೀಯರನ್ನು ಎಸ್.ಐ.ಆರ್‌ಮಾದರಿಯಂತೆ ಪತ್ತೆ ಮಾಡುವುದು, ಅವರ ದಾಖಲಾತಿಯನ್ನು ಅಳಿಸುವುದು ಹಾಗೂ ಅವರ ದೇಶಕ್ಕೆ ಗಡಿಪಾರು ಮಾಡುವ ಮಾದರಿಯಲ್ಲಿ ಹುಡುಕಿ ಅವರನ್ನು ಗಡಿಪಾರು ಮಾಡುವಂತೆ ಸವಿವರವಾಗಿ ಪತ್ರದಲ್ಲಿ ವಿವರಿಸಿರುವುದಾಗಿ ಎಕ್ಸ್ ಖಾತೆಯಲ್ಲಿ ಟ್ವಿಟ್ ಮಾಡಿದ್ದಾರೆ.

ಬಿಎಲ್‌ಡಿಇ ಸಂಸ್ಥೆಯಲ್ಲಿ ಗಣರಾಜ್ಯೋತ್ಸವ

ವಿಜಯಪುರ: ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಶ್ರೀ ಸಂಗನಬಸವ ಮಹಾಸ್ವಾಮೀಜಿ ಪಾಲಿಟೆಕ್ನಿಕ್ ನಲ್ಲಿ ಗಣರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಭಾರತೀಯ ಸೇನೆಯ ನಿವೃತ್ತ ಸುಬೇದಾರ ಅನೀಲಕುಮಾರ ಧ್ವಜಾರೋಹಣ ನೆರವೇಸಿದರು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಚಾರ್ಯ ಪ್ರಭುದೇವ. ಬಿ. ಕಳಸಗೊಂಡ, ಉಪನ್ಯಾಸಕಿ ನಿರ್ಮಲಾ ಸೊಲಾಪುರ, ಆನಂದ ಚವ್ಹಾಣ ಮುಂತಾದವರು ಉಪಸ್ಥಿತರಿದ್ದರು.

ಭೂಮಿ ಯೋಜನೆಯಡಿ ಜಿಲ್ಲೆ ಉತ್ತಮ ಸಾಧನೆ

ವಿಜಯಪುರ: ಭೂಮಿ ಯೋಜನೆಯಡಿ ಉತ್ತಮ ಸಾಧನೆ ಮಾಡಿದ ವಿಜಯಪುರ ಜಿಲ್ಲೆಯು ತೃತೀಯ ಸ್ಥಾನ ಪಡೆದಿರುವುದಕ್ಕೆ ಕಂದಾಯ ಇಲಾಖೆ ಭೂಮಿ ಉಸ್ತುವಾರಿ ಕೋಶದಿಂದ ಅಭಿನಂದನಾ ಪತ್ರ ನೀಡಲಾಗಿದೆ. ಡಿಸೆಂಬರ್ 2025 ಮಾಹೆಯಲ್ಲಿ ಸಾರ್ವಜನಿಕರಿಂದ ಸ್ವೀಕರಿಸಲಾಗಿದ್ದ ಒಟ್ಟು 14,060 ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ಶೀಘ್ರವಾಗಿ ವಿಲೇವಾರಿ ಮಾಡಿರುವ ಹಿನ್ನೆಲೆಯಲ್ಲಿ ವಿಜಯಪುರ ಜಿಲ್ಲೆ ರಾಜ್ಯಮಟ್ಟದಲ್ಲಿ ತೃತೀಯ ಸ್ಥಾನ ಪಡೆದುಕೊಂಡಿದೆ. ಡಿಸೆಂಬರ್ 2025 ಮಾಹೆಯಲ್ಲಿ ಜಿಲ್ಲೆ 5.52 ಸಿಂಮಾ ಮೌಲ್ಯವನ್ನು ಸಾಧಿಸಿದ್ದು, ಇದರ ಫಲವಾಗಿ ವಿಲೇವಾರಿ ಸೂಚ್ಯಾಂಕ 4.58766 ದಾಖಲಾಗಿದೆ. ಈ ಸಾಧನೆ ಜಿಲ್ಲೆಯಲ್ಲಿ ಭೂಮಿ ಯೋಜನೆಯ ಅನುಷ್ಠಾನವು ಪರಿಣಾಮಕಾರಿಯಾಗಿ ನಡೆಯುತ್ತಿರುವುದಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ.ಈ ಮಹತ್ವದ ಕಾರ್ಯಸಾಧನೆಗೆ ಜಿಲ್ಲಾಧಿಕಾರಿಗಳ ಮಾರ್ಗದರ್ಶ ನದಲ್ಲಿ ಕಾರ್ಯನಿರ್ವಹಿಸಿದ ಸಂಬಂಧಿತ ಎಲ್ಲಾ ಅಧಿಕಾ ರಿಗಳು ಹಾಗೂ ಸಿಬ್ಬಂದಿಗಳ ಸಮರ್ಪಿತ ಸಹಕಾರ, ಕಾರ್ಯತತ್ಪರತೆ ಮತ್ತು ಹೊಣೆಗಾರಿಕೆ ಪ್ರಮುಖ ಕಾರಣವಾಗಿದೆ ಎಂದು ಭೂಮಿ ಉಸ್ತುವಾರಿ ಕೋಶ ತಿಳಿಸಿದೆ.

ಜಿಲ್ಲೆಯ ಈ ಸಾಧನೆಗೆ ಭೂಮಿ ಉಸ್ತುವಾರಿ ಕೋಶದ ಪರವಾಗಿ ಜಿಲ್ಲಾಧಿಕಾರಿಗಳಿಗೆ ಹಾಗೂ ಅವರ ವ್ಯಾಪ್ತಿಯ ಎಲ್ಲಾ ಅಧಿಕಾರಿಗಳುತ್ತು ಸಿಬ್ಬಂದಿಗಳಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸಲಾಗಿದೆ. ಮುಂದಿನ ದಿನಗಳಲ್ಲಿಯೂ ಸಹ ಇದೇ ರೀತಿಯ ಸಹಕಾರ, ವೇಗದ ಕಾರ್ಯನಿರ್ವಹಣೆ ಹಾಗೂ ಸಾರ್ವಜನಿಕ ಸೇವೆಯ ಬದ್ಧತೆಯನ್ನು ಮುಂದುವರಿಸುವಂತೆ ಆಶಿಸಲಾಗಿದೆ.

ಕರಪತ್ರ ಬಿಡುಗಡೆ | ಸ್ಥಳೀಯ ಕಲಾವಿದರಿಗೂ ಅವಕಾಶ: ಎಂ.ಬಿ.ಪಾಟೀಲ

ಮಾರ್ಚ್‌ಗೆ ನವರಸಪುರ ಉತ್ಸವ

ವಿಜಯಪುರ: ಮಾರ್ಚ್ ಮಾಸಾಂತ್ಯದಲ್ಲಿ ನವರಸಪುರ ಉತ್ಸವ–2026ನ್ನು ಆಯೋಜಿಸುವ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ. ಪಾಟೀಲ ಘೋಷಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅನೇಕ ದಿನಗಳಿಂದ ಆಚರಣೆಯಾಗದ ನವರಸಪುರ ಉತ್ಸವವನ್ನು ಈ ಬಾರಿ ಅತ್ಯಂತ ವೈಭವದಿಂದ ಆಚರಿಸಲಾಗುವುದು, ಇದೊಂದು ರಾಷ್ಟ್ರೀಯ ಉತ್ಸವವಾಗಿದ್ದು ರಾಷ್ಟ್ರೀಯ ಕಲಾವಿದರ ಜೊತೆಗೆ ಸ್ಥಳೀಯ ಕಲಾವಿದರಿಗೂ ಆದ್ಯತೆ ನೀಡಲಾಗುವುದು, ಮಾರ್ಚನಲ್ಲಿ ಪರೀಕ್ಷಾ ಸಮಯ ಸಹ ಇದ್ದು, ಪರೀಕ್ಷೆಗಳು ಮುಗಿದು ಸರಿ ಹೊಂದುವ ವೇಳೆಗೆ ಹೆಚ್ಚುಕಡಿಮೆ ಮಾರ್ಚ್ ತಿಂಗಳ ಮಾಸಾಂತ್ಯಕ್ಕೆ ನವರಸಪುರ ಉತ್ಸವ ಆಚರಿಸಲಾಗುವುದು ಎಂದು ಪ್ರಕಟಿಸಿದರು.

ವಿಜಯಪುರದಲ್ಲಿ ಈಗಾಗಲೇ ಸೈಕ್ಲಿಂಗ್ ವೆಲೋಡ್ರೋಂ ಆರಂಭಗೊಂಡಿದೆ, ಸೈಕ್ಲಿಂಗ್ ಹಾಸ್ಟೆಲ್‌ನ್ನು ಇನ್ನೂ ಪರಿಣಾಮಕಾರಿಯಾಗಿ ಅಭಿವೃದ್ಧಿಪಡಿಸಿ ಸೈಕ್ಲಿಂಗ್ ಅಕಾಡೆಮಿಯನ್ನು ಸ್ಥಾಪಿಸಲಾಗುವುದು ಎಂದು ಭರವಸೆ ನೀಡಿದರು.

ಉದ್ಯೋಗ ಮೇಳ ಫೆ.2 ರಂದು: ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಇವರ ಸಹಯೋಗದಲ್ಲಿ ದರಬಾರ ಶಾಲೆಯ ಆವರಣದಲ್ಲಿ ಫೆಬ್ರವರಿ 2ರಂದು ಕೌಶಲ್ಯದಿಂದ ಉದ್ಯೋಗದ ಕಡೆಗೆ ಯುವ ಸಮೃದ್ಧಿ ಸಮ್ಮೇಳನ ಎಂಬ ಹೆಸರಿನಲ್ಲಿ ಉದ್ಯೋಗ ಮೇಳ ನಡೆಯಲಿದೆ ಎಂದು ಸಚಿವ ಡಾ. ಎಂ.ಬಿ. ಪಾಟೀಲ ಪ್ರಕಟಿಸಿದರು.

ಈ ಮೇಳದಲ್ಲಿ ಉತ್ತರ ಕರ್ನಾಟಕ ಭಾಗದ ಯುವನಿಧಿ ಫಲಾನುಭವಿಗಳು ಹಾಗೂ ಎಸ್.ಎಸ್.ಎಲ್.ಸಿ. ಪಿ.ಯು.ಸಿ, ಐ.ಟಿ.ಐ, ಡಿಪ್ಲೋಮಾ, ಪದವಿ, ಸ್ನಾತ್ತಕೊತ್ತರ ಪದವಿ ಹಾಗೂ ಇಂಜಿನೀಯರಿಂಗ್ ಪದವಿಯಲ್ಲಿ ಉತ್ತೀರ್ಣರಾದವರು ತಮ್ಮ ಹೆಸರನ್ನು ನೋಂದಣಿ ಮಾಡಿಕೊಂಡು, ಉದ್ಯೋಗಮೇಳದಲ್ಲಿ ಭಾಗವಹಿಸಿ, ತಮ್ಮ ಆಸಕ್ತಿ ಹಾಗೂ ಅರ್ಹತೆಗೆ ಅನುಗುಣವಾಗಿ ಉದ್ಯೋಗ ಪಡೆದುಕೊಳ್ಳುವಂತೆ ಕೋರಿದರು.

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತಾ ನಾಯ್ಕ, ವಿಡಿಎ ಅಧ್ಯಕ್ಷ ಕನ್ನಾನ್ ಮುಶ್ರೀಫ್, ಜಿಲ್ಲಾಧಿಕಾರಿ ಡಾ.ಕೆ. ಆನಂದ, ಕನಾನ್ ಮುಶ್ರೀಪ್, ಸಿಇಓ ರಿಷಿ ಆನಂದ, ಎಸ್.ಪಿ. ಲಕ್ಷ್ಮಣ ನಿಂಬರಗಿ, ಜಿಲ್ಲಾ ಕೌಶಲ್ಯಾಭಿವೃದ್ಧಿಕಾರಿ ಮಹೇಶ ಮಾಳವಾಡೇಕರ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ವಿಜಯಪುರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಚಿವ ಡಾ.ಎಂ.ಬಿ. ಪಾಟೀಲ ಉದ್ಯೋಗ ಮೇಳಕ್ಕೆ ಸಂಬಂಧಿಸಿದ ಕರಪತ್ರಗಳನ್ನು ಬಿಡುಗಡೆಗೊಳಿಸಿದರು.

150ಕ್ಕೂ ಅಧಿಕ ಕಂಪನಿ ಭಾಗವಹಿಸುವ ನಿರೀಕ್ಷೆ

ಪ್ರತಿಷ್ಠಿತ 150ಕ್ಕೂ ಅಧಿಕ ಉದ್ಯೋಗದಾತ ಕಂಪನಿ ಭಾಗವಹಿಸುವ ನಿರೀಕ್ಷೆಯಿದ್ದು, ಈಗಾಗಲೇ 143 ಉದ್ಯೋಗದಾತ ಕಂಪನಿಗಳು ನೋಂದಣಿಯಾಗಿವೆ. ಈಗಾಗಲೇ ರಾಜ್ಯ, ವಿಭಾಗ ಮತ್ತು ಜಿಲ್ಲಾ ಮಟ್ಟಗಳಲ್ಲಿ ಉದ್ಯೋಗ ಮೇಳಗಳನ್ನು ಯಶಸ್ವಿಯಾಗಿ ಆಯೋಜಿಸಿ, ನಿರುದ್ಯೋಗಿ ಯುವ ಜನಾಂಗಕ್ಕೆ ಉದ್ಯೋಗ ಅವಕಾಶ ಒದಗಿಸಲಾಗಿದೆ. ಅದರಂತೆ ಯುವಶಕ್ತಿ ಈ ದೇಶದ ಸಂಪತ್ತು, ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ಬೆಳವಣಿಗೆಗೆ ಅನುಗುಣವಾಗಿ ದೇಶದ ಯುವಶಕ್ತಿಯನ್ನು ಬಳಸಿಕೊಂಡು ಆರ್ಥಿಕತೆ ಬಲಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು ಉದ್ಯೋಗದಾತರ ಮತ್ತು ಉದ್ಯೋಗಾಕಾಂಕ್ಷಿಗಳ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಸಚಿವ ಡಾ.ಎಂ.ಬಿ. ಪಾಟೀಲ ಹೇಳಿದರು.

> ಕಳೆದ ಹಲವಾರು ದಿನಗಳಿಂದ ನಿಂತು ಹೋಗಿರುವ ಜನತಾ ದರ್ಶನ ಪುನರ್ ಆರಂಭಿಸಲಾಗುವುದು, ಈ ಕಾರ್ಯಕ್ರಮದಿಂದ ಅನೇಕ ಜನರ ಸಮಸ್ಯೆಗಳು ನಿವಾರಣೆಯಾಗುತ್ತವೆ, ಶೀಘ್ರವೇ ಈ ಜನತಾ ದರ್ಶನ ಕಾರ್ಯಕ್ರಮವನ್ನು ಪುನರ್‌ಆರಂಭಿಸಿ ಶೀಘ್ರವೇ ದಿನಾಂಕ ನಿಗದಿಗೊಳಿಸಲಾಗುವುದು''
> – ಡಾ.ಎಂ.ಬಿ. ಪಾಟೀಲ, ಜಿಲ್ಲಾ ಉಸ್ತುವಾರಿ ಸಚಿವರು

ಮಕ್ಕಳಿಗೆ ನೈತಿಕ ಶಿಕ್ಷಣ ನೀಡಿ

ವಿಜಯಪುರ: ಅಂಕಗಳಿಕೆಗೆ ಮಹತ್ವ ನೀಡದೆ, ಮಕ್ಕಳಿಗೆ ನೈತಿಕ ಹಾಗೂ ಮೌಲ್ಯಾಧಾರಿತ ಶಿಕ್ಷಣ ನೀಡಿ ಎಂದು ಮಾಜಿ ವಿಧಾನ ಪರಿಷತ ಸದಸ್ಯ ಅರಣು ಶಹಾಪುರ ಹೇಳಿದರು.

ಇಟ್ಟಂಗಿಹಾಳದ ವೇದ ಇಂಟರನ್ಯಾಷನಲ್ ಪಬ್ಲಿಕ ಶಾಲೆಯಲ್ಲಿ 'ವೇದ ಸಿರಿ 2026' ಎಂಬ ಧ್ಯೇಯದೊಂದಿಗೆ ವೇದ ಸಮೂಹ ಸಂಸ್ಥೆಗಳ ವಾರ್ಷಿಕ ಸ್ನೇಹ ಸಮ್ಮೇಳನವನ್ನು ಶಹಾಪುರ ಉದ್ಘಾಟಿಸಿ ಮಾತನಾಡಿದ ಅವರು ಪ್ರಸ್ತುತ ಸಮಾಜದಲ್ಲಿ ಅಂಕಗಳಿಕೆಗೆ ಮಹತ್ವ ನೀಡದೆ, ಮಕ್ಕಳಿಗೆ ನೈತಿಕ ಹಾಗೂ ಮೌಲ್ಯಾಧಾರಿತ ಶಿಕ್ಷಣ, ಭಾರತೀಯ ಸಂಸ್ಕೃತಿ ಹಾಗೂ ಸಂಸ್ಕಾರಕ್ಕೆ ಮಹತ್ವ ನೀಡುವದು ಪಾಲಕರ ಹಾಗೂ ಶಿಕ್ಷಕರ ಆದ್ಯಕರ್ತವ್ಯವಾಗಿದೆ, ಬಂಥನಾಳದ ಶಿವಯೋಗಿಗಳು 19ನೇ ಶತಮಾನದಲ್ಲಿ ಮೌಢ್ಯ, ಕಂದಾಚಾರ ತುಂಬಿದ ಸಮಾಜದಲ್ಲಿ ಮೌಲ್ಯಾಧಾರಿತ ಶಿಕ್ಷಣದ ಮಹತ್ವ ಸಾರಿದ್ದರು. ಆ ನಿಟ್ಟಿನಲ್ಲಿ ವೇದ ಸಂಸ್ಥೆಯು ಮುನ್ನಡೆಯುತ್ತಿದೆ 'ವೇದ ಸಿರಿ' ಕಾರ್ಯಕ್ರಮವು ಭಾರತೀಯ ಶ್ರೀಮಂತ ಸಂಸ್ಕೃತಿ ಮತ್ತು ಆದರ್ಶಗಳನ್ನು ಬಿಂಬಿಸುವ ಕಾರ್ಯಕ್ರಮವಾಗಿ ಆಯೋಜನೆ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿ ವೇದ ಸಂಸ್ಥೆಯ ಅಧ್ಯಕ್ಷ ಡಾ. ಶಿವಾನಂದ ಕೆಲೂರ ನಮ್ಮ ಶಿಕ್ಷಣ ಸಂಸ್ಥೆಗಳು ಕೇವಲ ಪಠ್ಯ ಬೋಧನೆಗೆ ಸೀಮಿತವಾಗದೆ, ಭಾರತೀಯ ಶ್ರೀಮಂತ ಮತ್ತು ಅಪರೂಪದ ಆದರ್ಶಗಳನ್ನು ಎತ್ತಿಹಿಡಿಯುವ ಹಾಗೂ ಉತ್ತಮ ಸಮಾಜ ನಿರ್ಮಾಣಕ್ಕೆ ಕೊಡುಗೆ ನೀಡುವಲ್ಲಿ ಕಾರ್ಯಪ್ರವೃತ್ತವಾಗಿದೆ ಆ ನಿಟ್ಟಿನಲ್ಲಿ ಮಕ್ಕಳಿಗೆ ಇಂತಹ ಸಂಸ್ಕೃತಿಯ ಹಬ್ಬವನ್ನು 'ವೇದ ಸಿರಿ' ಎಂಬ ಹೆಸರಿನಲ್ಲಿ ಆಯೋಜನೆಗೊಂಡಿದೆ ಹಾಗೂ ಇದು ನಿರಂತರ ಎಂದರು.

ದಿವ್ಯ ಸನ್ನಿಧಾನ ವಹಿಸಿದ್ದ ಬಂಥನಾಳದ ವೃಷಭಲಿಂಗೇಶ್ವರ ಮಹಾಸ್ವಾಮಿಗಳು ಮಾತನಾಡಿ ಜಗಜ್ಯೋತಿ ಬಸವೇಶ್ವರರ 'ಕಾಯಕವೇ ಕೈಲಾಸ' ತತ್ವವನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಪ್ರಾಮಾಣಿಕವಾಗಿ ಮಾಡುವ ಕೆಲಸವೇ ದೈವ ಪೂಜೆ ಎಂದು ತಿಳಿಸುತ್ತಾ, ಶಿಕ್ಷಣವು ಮನುಷ್ಯನ ಸರ್ವತೋಮುಖ ಬೆಳವಣಿಗೆಗೆ ಹೇಗೆ ಸಹಕಾರಿಯಾಗುತ್ತದೆ ಎಂದರು.

> ಕೇವಲ 3 ವರ್ಷಗಳಲ್ಲಿ ಈ ಶಿಕ್ಷಣ ಸಂಸ್ಥೆಯು ಮೌಲ್ಯಾಧಾರಿತ ಶಿಕ್ಷಣ ನೀಡುವಲ್ಲಿ ಹೆಸರು ವಾಸಿಯಾಗಿದೆ, ವಿಜಯಪುರದಲ್ಲಿ ಶೈಕ್ಷಣಿಕ ಕ್ಷೇತ್ರಕ್ಕೆ ವೇದ ಸಮೂಹ ಸಂಸ್ಥೆಗಳು ನೀಡುತ್ತಿರುವ ಕೊಡುಗೆ ಅಪಾರವಾಗಿದೆ. ಇಂತಹ ಅಚ್ಚುಕಟ್ಟಾದ ಮತ್ತು ಮೌಲ್ಯಯುತ ಕಾರ್ಯಕ್ರಮವನ್ನು ಆಯೋಜಿಸುವಲ್ಲಿ ಸಂಸ್ಥೆಯ ಸಿಬ್ಬಂದಿ ವರ್ಗದ ಶ್ರಮ ಎದ್ದು ಕಾಣುತ್ತಿದೆ.
> – ಬಿ. ಆರ್. ಚೌಕಿಮಠ, ನಿವೃತ್ತ ಪೊಲೀಸ್ ಅಧಿಕಾರಿ

ವೇದ ಇಂಟರನ್ಯಾಷನಲ್ ಪಬ್ಲಿಕ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನವನ್ನು ಮಾಜಿ ವಿಧಾನ ಪರಿಷತ್ ಸದಸ್ಯ ಅರಣು ಶಹಾಪುರ ಉದ್ಘಾಟಿಸಿದರು.

ನಾಡಿಗೆ ಕನ್ನಡ ಸಂಘಟನೆಗಳ ಕೊಡುಗೆ

ತಾಳಿಕೋಟಿ: ನಾಡಿನ ನೆಲ ಜಲ ಭಾಷೆ ಹಾಗೂ ಸಂಸ್ಕೃತಿಯನ್ನು ರಕ್ಷಿಸುವಲ್ಲಿ ಕನ್ನಡ ಪರ ಸಂಘಟನೆಗಳ ಕೊಡುಗೆ ಅಪಾರವಾಗಿದೆ ಎಂದು ಮುದ್ದೇಬಿಹಾಳ ಕ್ಷೇತ್ರ ಸಮನ್ವಯಾ ಧಿಕಾರಿ ಆರ್.ಬಿ.ದಮ್ಮೂರಮಠ ಹೇಳಿದರು.

ಪಟ್ಟಣದಲ್ಲಿ 77ನೇ ಗಣರಾಜ್ಯೋತ್ಸವ ಅಂಗವಾಗಿ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣ ಹಾಗೂ ತಾಳಿಕೋಟಿ ಸ್ಪೋರ್ಟ್ಸ್ ಮತ್ತು ರಿಕ್ರೇಶನ್ ಕ್ಲಬ್ ವತಿಯಿಂದ ಹಮ್ಮಿಕೊಂಡ ಕನ್ನಡ ನಾಡು ನುಡಿ ಬಿಂಬಿಸುವ ನೃತ್ಯ ಸ್ಪರ್ಧೆ ಹಾಗೂ ಅಂತಾರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾದ ಕ್ರೀಡಾಪಟುಗಳ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿ, ಭಾರತದ ಭವಿಷ್ಯವಾಗಿರುವ ಮಕ್ಕಳ ಪ್ರತಿಭೆಗೆ ಪ್ರೋತ್ಸಾಹ ನೀಡಲು ಹಾಗೂ ವಿವಿಧ ಕ್ಷೇತ್ರಗಳ ಸಾಧಕರಿಗೆ ಗೌರವಿಸಲು ಕರ್ನಾಟಕ ರಕ್ಷಣಾ ವೇದಿಕೆ ಸ್ಥಳೀಯ ಘಟಕವು ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಶ್ಲಾಘನೀಯವಾಗಿದೆ ಎಂದರು.

ರಾಜ್ಯ ಉಪಾಧ್ಯಕ್ಷ ಬಸವರಾಜ ತಾಳಿ ಕೋಟಿ ಮಾತನಾಡಿ, ಸೋಲು ಗೆಲುವು ಮುಖ್ಯವಲ್ಲ ಭಾಗವಹಿಸುವಿಕೆ ಮುಖ್ಯ, ಇಂದಿನ ಸೋಲು ನಾಳಿನ ಗೆಲುವಿನ ಸೋಪಾ ನವಾಗಿದೆ. ನೃತ್ಯ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಅಭಿನಂದಿಸುತ್ತೇನೆ ಎಂದರು. ಮಹೇಶ್ ಚಲವಾದಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕರವೇ ತಾಲೂಕು ಘಟಕದ ಅಧ್ಯಕ್ಷ ರವೀಂದ್ರ ಕಟ್ಟಿಮನಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

> ಬಿ.ಆರ್. ಡಾ.ಬಾಬಾ ಸಾಹೇಬರು ಇಡೀ ವಿಶ್ವಕ್ಕೆ ಮಾದರಿ ಆಗುವ ಸಂವಿಧಾನ ವನ್ನು ನಮಗೆ ಕೊಟ್ಟು ಹೋಗಿದ್ದಾರೆ ಇದರ ರಚನೆಗಾಗಿ ಅವರು ಮಾಡಿದ ತ್ಯಾಗ ಪರಿಶ್ರಮವನ್ನು ನಾವು ಸದಾ ಸ್ಮರಿಸಬೇಕು.
> -ಆರ್‌ಎಸ್ ಪಾಟೀಲ(ಕೂಚಬಾಳ), ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ

ಎಕ್ಸ್‌ಲೆಂಟ್ ವಿಜ್ಞಾನ ಪ. ಪೂ ಕಾಲೇಜಿನಲ್ಲಿ ಗಣರಾಜ್ಯೋತ್ಸವ | ನಿವೃತ್ತ ನ್ಯಾ. ಪಾಟೀಲ ಅಭಿಮತ

ಸಂವಿಧಾನ ಉಳಿಸುವ ಕಾರ್ಯಕ್ಕೆ ಯುವಕರು ಮುಂದಾಗಿ

ವಿಜಯಪುರ: ಜಗತ್ತಿನ ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತ ಬೃಹತ್ ಸಂವಿಧಾನವನ್ನು ರಚನೆ ಮಾಡಿ ಅಳವಡಿಸಿಕೊಳ್ಳುವ ಮೂಲಕ ಸಮೃದ್ಧ ಹಾಗೂ ಸಮಾನತೆಯ ರಾಷ್ಟ್ರ ಕಟ್ಟುವಲ್ಲಿ ಹೆಜ್ಜೆ ಹಾಕಿತು. ಆದರೆ ಸಂವಿಧಾನ ಜಾರಿಯಾಗಿ 76 ವರ್ಷಗಳು ಗತಿಸಿದರೂ ಅದರ ಆಶೆಯಗಳನ್ನು ಗಾಳಿಗೆ ತೂರುವ ಕಾರ್ಯ ಯಗ್ಗಿಲ್ಲದೆ ಸಾಗುತ್ತಿದೆ. ಈ ಕಾರಣದಿಂದಾಗಿ ಸಂವಿಧಾನ ಅಪಾಯದಲ್ಲಿದೆ ಎಂದು ಹೇಳಲಾಗುತ್ತದೆ. ಇಂದಿನ ಯುವಪೀಳಿಗೆ ಎಚ್ಚೆತ್ತುಕೊಂಡು ಸಂವಿಧಾನ ಉಳಿಸುವ ಕಾರ್ಯಕ್ಕೆ ಅಣಿಯಾಗಬೇಕು ಎಂದು ನಿವೃತ್ತ ಸರಕಾರಿ ವಕೀಲರಾದ ಬಿ. ಎ. ಪಾಟೀಲ ಹೇಳಿದರು.

ನಗರದ ಎಕ್ಸ್‌ಲೆಂಟ್ ವಿಜ್ಞಾನ ಪ.ಪೂ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 77ನೇ ಗಣರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿ ಸಂದೇಶ ನೀಡಿದ ಅವರು ಭಾರತೀಯರ ಪಾಲಿನ ಜೀವನ ಗ್ರಂಥವಾಗಿರುವ ಭಾರತ ಸಂವಿಧಾನ ಜಾರಿಗೆ ಬಂದು ಇಂದಿಗೆ 77 ವರ್ಷಗಳಾದವು. ಅಂದಿನಿಂದ ಇಂದಿನ ತನಕ ನಾವು ಈ ದೇಶದಲ್ಲಿ ನೆಮ್ಮದಿಯಾಗಿ ನೆಲೆ ನಿಲ್ಲುವುದಕ್ಕೆ ಕಾರಣವಾಗಿದ್ದೇ ಆದರೆ ಪ್ರಸ್ತುತ ಸನ್ನಿವೇಶದಲ್ಲಿ ಸಂವಿಧಾನದ ಸದುಪಯೋಗಕ್ಕಿಂತ ದುರುಪಯೋಗವೇ ಅಧಿಕವಾಗುತ್ತಿದೆ ಯುವ ಸಮೂಹ ಮುಂದಿನ ದಿನಗಳಲ್ಲಿ ಸಂವಿಧಾನ ಉಳಿಸುವ ಕಾರ್ಯವನ್ನು ಮಾಡಬೇಕು ಎಂದು ಕರೆ ನೀಡಿದರು.

ನಿವೃತ್ತ ಪ್ರಾಂಶುಪಾಲರು ಹಾಗೂ ರಾಜ್ಯಶಾಸ್ತ್ರ ಉಪನ್ಯಾಸಕರಾದ ಲಕ್ಷ್ಮೀ ನರಸಯ್ಯ ಎನ್ ಮಾತನಾಡಿ, ಎಲ್ಲ ದೇಶದ ಸಂವಿಧಾನಗಳನ್ನು ನೋಡಿದರೆ ಭಾರತ ಸಂವಿಧಾನ ಗಾತ್ರದಲ್ಲಿ ಮಾತ್ರ ದೊಡ್ಡದಿಲ್ಲ. ಬದಲಿಗೆ ಅದರಲ್ಲಿನ ಅಂಶಗಳಲ್ಲಿಯೂ ಸಹ ದೊಡ್ಡದಾಗಿದೆ. ಅದರಲ್ಲಿ ಅಳವಡಿಸಲಾಗಿರುವ ವಿಚಾರಗಳು ಪ್ರತಿಯೊಬ್ಬ ಭಾರತೀಯನು ಸಹ ಬದುಕು ಕಟ್ಟಿಕೊಳ್ಳುವುದಕ್ಕೆ ಬೇಕಾಗುವ ಅತ್ಯುತ್ತಮವಾದ ತತ್ವಗಳಿಂದ ತುಂಬಿದೆ ಎಂದರು. ಪ್ರಾಂಶುಪಾಲ ಮಂಜುನಾಥ ಜುನಗೊಂಡ ಪ್ರಾಸ್ತವಾಗಿ ಮಾತನಾಡಿದರು.

ವಿಜಯಪುರದ ಎಕ್ಸ್‌ಲೆಂಟ್ ವಿಜ್ಞಾನ ಪ. ಪೂ ಕಾಲೇಜಿನಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಾತು.

> ಭಾರತ ಸ್ವಾತಂತ್ರ್ಯ ಗೊಂಡು 78 ವರ್ಷಗಳು ಗತಿಸಿದವು. ಸ್ವಾತಂತ್ರ್ಯ ಬಂದಾಗಿನಿಂದಲೂ ಹಲವು ಅಡ್ಡಿ ಆತಂಕಗಳ ಮಧ್ಯದಲ್ಲಿಯೂ ಎದ್ದು ಬಂದಿರುವ ಭಾರತ ಇಂದು ಜಗತ್ತಿನ ನಾಲ್ಕನೇ ದೊಡ್ಡ ಆರ್ಥಿಕತೆಯಾಗಿ ಹೊರ ಹೊಮ್ಮಿದೆ. ಮುಂದಿನ ದಿನಗಳಲ್ಲಿ ಇನ್ನೂ ಮುಂದೆ ಸಾಗುತ್ತದೆ ಎನ್ನುವ ನಿರೀಕ್ಷೆಗಳ ಮಧ್ಯದಲ್ಲಿ ನಾವು ನಡೆಯಬೇಕಿದೆ. ಎಲ್ಲವನ್ನು ಕೊಟ್ಟ ದೇಶಕ್ಕೆ ನಾವು ಒಂದಷ್ಟು ಕೊಡುಗೆಯನ್ನು ಕೊಟ್ಟು ಹೋಗುವ ಮಟ್ಟದಲ್ಲಿ ನಾವು ಬದುಕ ಬೇಕಿದೆ.
> -ಬಸವರಾಜ ಕೌಲಗಿ, ಎಕ್ಸ್‌ಲೆಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ

ಸಂವಿಧಾನದಿಂದ ಸರ್ವರಿಗೂ ಸಮಬಾಳು ಸಮಪಾಲು

ಭಾರತ ವಿಶ್ವದಲ್ಲಿ ಬಲಾಢ್ಯಗೊಳುತ್ತಿದೆ: ಶಾಸಕ ಯಶವಂತರಾಯಗೌಡ ಪಾಟೀಲ

ಇಂಡಿ: ಇಂದು ಇಡೀ ದೇಶ ಸಂಭ್ರಮಪಡುವಂತಹ ಹಬ್ಬವಾಗಿದ್ದು ಭಾರತ ದೇಶದ ಭವ್ಯ ಭವಿಷ್ಯವನ್ನು ರೂಪಿಸಿ ಇಡೀ ಮಾನವ ಕುಲಕೋಟಿಗೆ ಸಮಾನತೆ ,ಸಹೋದರತೆ ಎಂಬ ಸಿದ್ಧಾಂತದಲ್ಲಿ ಬಾಳಿ ಬದಕಲು ಸಂವಿಧಾನ ರಚನೆ ಮಾಡಿ ಸಮರ್ಪಣಾ ದಿನವಾಗಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ದೇಶದ ಅಂಖಂಡತೆ ಸಾರ್ವಭೌಮತೆಯನ್ನು ಎತ್ತಿ ಹಿಡಿದು ಸರ್ವರಿಗೂ ಸಮಬಾಳು ಸಮಪಾಲು ಸಿದ್ದಾಂತದ ಮೇಲೆ ಇಡೀ ವಿಶ್ವ ಮೆಚ್ಚುವಂತಹ ಸಂವಿಧಾನ ಬರೆದ ಡಾ.,ಬಿ.ಆರ್‌ಅಂಬೇಡ್ಕರವರಿಗೆ ನಾವೀಂದು ಚಿರಋಣಿಯಾಗಿರಬೇಕು. ಮಹಾತ್ಮಾಗಾಂಧೀಜಿ, ಸುಭಾಷಚಂದ್ರ, ಬೋಸ್, ಕಿತ್ತೂರರಾಣಿ ಚೆನ್ನಮ್ಮಾ, ಸಂಗೊಳ್ಳಿ ರಾಯಣ್ಣ, ಶಿವಾಜಿ ಮಹಾರಾಜ ಅನೇಕ ದೇಶ ಭಕ್ತರು ಈ ದೇಶಕಟ್ಟುವಲ್ಲಿ ತಮ್ಮ ದೇಹವನ್ನು ತ್ಯಾಗ ಮಾಡಿದ್ದಾರೆ. ಇಂತಹ ವೀರಪುರುಷರನ್ನು ಸದಾ ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಹೇಳಿದರು.

ಇಂದು ಭಾರತ ವಿಶ್ವದಲ್ಲಿ ಬಲಾಢ್ಯಗೊಳುತ್ತಿದೆ ಆಹಾರ ಭದ್ರತೆ ಇದೆ, ವಿದ್ಯುತ್,ಮಾಹಿತಿ ತಂತ್ರಜ್ಞಾನ ಹೊಸ ಅವಿಸ್ಕಾರದಡೆ ಭಾರತ ಮುನ್ನುಗ್ಗುತ್ತಿದೆ.ಕರ್ನಾಟಕ ರಾಜ್ಯ ಕೂಡಾ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಪಾಲುದಾರಿಕೆ ಇದೆ ಜಿ.ಎಸ್.ಟಿ ದೊಡ್ಡಪ್ರಮಾಣದಲ್ಲಿ ಕೆಂದ್ರಕ್ಕೆ ಒದಗಿಲಾಗುತ್ತಿದೆ .4ಲಕ್ಷ ಕೋಟಿಗಿಂತ ಅಧಿಕ ನಮ್ಮ ರಾಜ್ಯದಿಂದ ಕೊಡಲಾಗುತ್ತಿದೆ. ಇಂದು ವಿಜಯಪೂರ ಬಾಗಲೋಟ ಅವಳಿ ಜಿಲ್ಲೆ 6 ಜಿಲ್ಲೆಗಳಿಗೆ ನೀರು ಕೃಷ್ಣಾ ನದಿಯಿಂದ ನೀರು ಪೂರೈಸುತ್ತಿದೆ , ಬಾಗಲಕೋಟ–ವಿಜಯಪೂರ ಅವಳಿ ಜಿಲ್ಲೆಯ ಜನರು ಮನೆ ಮಠಗಳನ್ನು ಕಳೆದುಕೊಂಡು ಇಂದು ಬೇರೆಯವರಿಗೆ ಸಹಾಯ ಮಾಡುತ್ತಿದ್ದಾರೆ. ಆದ್ದರಿಂದ ಇವರ ನೆರವಿಗೆ ಬರಬೇಕು ಸುಮಾರು 70 ಸಾವಿರ ಕೋಟಿಯಷ್ಟು ಆಭಾಗದ ಜನರಿಗೆ ಕೊಡಬೇಕು ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ ಕೂಡಲೆ ತುರ್ತುಕ್ರಮ ಕೈಗೊಳ್ಳುವಭರಸೆ ನೀಡಿದ್ದಾರೆ ಎಂದು ತಿಳಿಸಿದರು.

ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ. ತಹಸೀಲ್ದಾರ ಬಿ.ಎಸ್ ಕಡಕಭಾವಿ, ಲೋಕೋಪಯೋಗಿ ಇಲಾಖೆ ಅಧಿಕಾರಿ ದಯಾನಂದ ಮಠ, ಪೌರಾಯುಕ್ತ ಶಿವಾನಂದ ಪೂಜಾರ, ಸಮಾಜ ಕಲ್ಯಾಣಾಧಿಕಾರಿ ಉಮೇಶ ಪೂಜಾರಿ, ಎಸ್. ಎಸ್ ಗದ್ಯಾಳ,ಕೃಷಿ ಅಧಿಕಾರಿ ಮಾಹಾದೇವಪ್ಪ ಏವೂರ,ಎಸ್.ಎಸ್ ಪಾಟೀಲ ಇದ್ದರು.



ಸುದ್ದಿಗೋಷ್ಠಿಯಲ್ಲಿ ಶಾಸಕ ಯಶವಂತರಾಯಗೌಡ ಪಾಟೀಲ ಮಾತನಾಡಿದರು.

> ಆಲಮಟ್ಟಿ 5.24 ರಷ್ಟು ಎತ್ತರಿಸಿದರೆ ಇಡೀ ವಿಜಾಪೂರ ಜಿಲ್ಲೆ ನೀರಾವರಿಯಾಗುತ್ತದೆ .ತಾಲೂಕಿನಲ್ಲಿ ಎಲ್ಲಾ ಕೆರೆಗಳು ತುಂಬಿವೆ ರೈತರಲ್ಲಿ ಸಂತಸ ತಂದಿದೆ. ಇ ಬಾರಿ ಮಳೆಗಾಲ ಸಾಕಷ್ಟು ಆಗಿರುವುದರಿಂದ ಬೆಳೆಗಳು ಹಾನಿಯಾಗಿವೆ ಕರ್ನಾಟಕ ಸರಕಾರ ಹಾನಿಯಾದ ರೈತರಿಗೆ ಬೆಳೆ ಪರಿಹಾರ ನೀಡಿದೆ. ಕರ್ನಾಟಕ ರಾಜ್ಯದಲ್ಲಿಯೇ ಅತೀ ಪರಿಹಾರ ಇಂಡಿಗೆ ಹರಿದು ಬಂದಿದೆ. ಸಂವಿಧಾನ ಶಿಲ್ಪಿ ಡಾ.ಬಿ.ಆರ್‌ಅಂಬೇಡ್ಕರ ಹೆಸರು ಕ್ರೀಡಾಂಗಣಕ್ಕೆ ಇಟ್ಟರುವುದು ಸಂತಸ ತಂದಿದೆ.
> -ಯಶವಂತರಾಯಗೌಡ ಪಾಟೀಲ, ಶಾಸಕ

ಯುವಕರು ಸಂವಿಧಾನದ ಮೌಲ್ಯಗಳ ಕಾಪಾಡಿ

ವಿಜಯಪುರ: ಅತ್ಯುತ್ತಮ ಸೇವೆ ಸಲ್ಲಿಸಿದವರನ್ನು ಪ್ರಶಸ್ತಿ ನೀಡಿ ಗೌರವಿಸುವ ಮೂಲಕ ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎ. ವಿ. ಎಸ್. ಆಯುರ್ವೇದ ಕಾಲೇಜಿನಲ್ಲಿ ಗಣರಾಜ್ಯೋತ್ಸವ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಡಾ. ಅಶೋಕ ಪಾಟೀಲ ಅವರು ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಭಾರತೀಯ ಸಂವಿಧಾನದ ಮೌಲ್ಯಗಳು ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಯುವಜನತೆಯ ಪಾತ್ರ ಮುಖ್ಯವಾಗಿದೆ ಎಂದು ಹೇಳಿದರು.

ಬಿ.ಎಲ್.ಡಿ.ಇ ಸಂಸ್ಥೆಯ ನಾನಾ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಪರಿಶ್ರಮ, ನಿಷ್ಠೆ ಹಾಗೂ ಉತ್ತಮ ಕಾರ್ಯಕ್ಷಮತೆಯನ್ನು ಗುರುತಿಸುವ ಉದ್ದೇಶದಿಂದ, ನಾನಾ ವರ್ಗದ ನೌಕರರಿಗೆ ಪ್ರಶಸ್ತಿಗಳನ್ನು ನೀಡಲಾಯಿತು. ಅತ್ಯುತ್ತಮವಾಗಿ ರೋಗಿಗಳ ಸೇವೆ ಸಲ್ಲಿಸಿದ ಸಲುವಾಗಿ ಡಾ. ಸಂಜಯ ಕಡ್ಲಿಮಟ್ಟಿ ಇವರಿಗೆ ಅತ್ಯುತ್ತಮ ವೈದ್ಯ ಪ್ರಶಸ್ತಿ, ಅಧ್ಯಾಪಕ ವೃತ್ತಿಯಲ್ಲಿನ ಸೇವೆಗಾಗಿ ಡಾ. ಶಶಿಧರ ನಾಯಕ ಅವರಿಗೆ ಅತ್ಯುತ್ತಮ ಅಧ್ಯಾಪಕ, ವೈದ್ಯಕೀಯ ಮತ್ತು ಸಹವೈದ್ಯಕೀಯ ಸಿಬ್ಬಂದಿ ಅನೀಲ ಅಳಗುಂಡಗಿ, ಮಹಾವಿದ್ಯಾಲಯದ ಕಚೇರಿಯಲ್ಲಿ ಕಾರ್ಯನಿರ್ವಹಿಸಿದ ಡಿ. ಎಸ್. ಪಾಟೀಲ, ಸಹಾಯಕ ಸಿಬ್ಬಂದಿ ಬಂದೇನವಾಜ ಶೇಖ ಹಾಗೂ ಮಹಾದೇವಿ ಬಡಿಗೇರ ಸಲ್ಲಿಸಿದ ಅತ್ಯುತ್ತಮ ಸೇವೆಗಾಗಿ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ, ವೈದ್ಯ ವಿದ್ಯಾರ್ಥಿಗಳು ತಾವು ಕಲಿತ ಆಯುರ್ವೇದ ವೈದ್ಯ ಪದ್ಧತಿಯನ್ನೇ ತಮ್ಮ ವೃತ್ತಿ ಜೀವನದಲ್ಲಿ ಅಳವಡಿಸಿಕೊಂಡು ಮಾತ್ರ ವಿದ್ಯೆ ಹಾಗೂ ಸಮಾಜಕ್ಕೆ ನ್ಯಾಯ ಒದಗಿಸಬೇಕು ಎಂದು ಕರೆ ನೀಡಿದರು.

ಈ ವೇಳೆ ಕಾಲೇಜಿನ ಉಪನ್ಯಾಸಕರು, ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಿಜಯಪುರ ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎ. ವಿ. ಎಸ್ ಆಯುರ್ವೇದ ಕಾಲೇಜಿನಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ಸಂಸ್ಥೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ವೈದ್ಯರು ಮತ್ತು ಸಿಬ್ಬಂದಿಯನ್ನು ಅತುತ್ತಮ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪರ್ಯಾಯ ವ್ಯವಸ್ಥೆ ಕಲ್ಪಿಸಲು ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮಗೆ ಭೀಮ್ ಆರ್ಮಿ ಆಗ್ರಹ

ಬ್ಯಾಂಕ್ ನೌಕರರ ಮುಷ್ಕರದಿಂದ ಜನರಿಗೆ ತೊಂದರೆ

ವಿಜಯಪುರ: ಬ್ಯಾಂಕ್ಗಳ ಐದು ದಿನಗಳ ಕಾರ್ಯ ವ್ಯವಸ್ಥೆ, ಮುಷ್ಕರದಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಅನುಭವಿಸುವಂತಾಗಿದೆ ಹಾಗೂ ದೇಶದ ನಿರುದ್ಯೋಗಿ ಯುವಕರ ಮಾನವ ಸಂಪನ್ಮೂಲವನ್ನು ರಾಷ್ಟ್ರ ನಿರ್ಮಾಣಕ್ಕೆ ಬಳಸುವಂತೆ ಆಗ್ರಹಿಸಿ ಭೀಮ್ ಆರ್ಮಿ ಭಾರತ ಏಕತಾ ಮಿಷನ್ ಸಂಘಟನೆಯ ಕಾರ್ಯಕರ್ತರು ಅಪರ ಜಿಲ್ಲಾಧಿಕಾರಿ ಡಾ ಔದ್ರಾಮ ಅವರಿಗೆ ಮನವಿ ಸಲ್ಲಿಸಿದರು.

ದೇಶದಾದ್ಯಂತ ಅನೇಕ ಬ್ಯಾಂಕ್‌ಗಳು ಐದು ದಿನಗಳ ಕಾರ್ಯವ್ಯವಸ್ಥೆ ಹಾಗೂ ಕೆಲವು ಸಂದರ್ಭಗಳಲ್ಲಿ ಮುಷ್ಕರ ನಡೆಸುತ್ತಿರುವುದರಿಂದ ಸಾಮಾನ್ಯ ಜನರು, ರೈತರು, ಕಾರ್ಮಿಕರು ಮತ್ತು ವಿಶೇಷವಾಗಿ ಸಾರ್ವಜನಿಕರಿಗೆ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಬ್ಯಾಂಕ್ ಸೇವೆಗಳ ವಿಳಂಬದಿಂದ ಸಾಲ, ವಿದ್ಯಾರ್ಥಿ ಶುಲ್ಕ, ಸರಕಾರದ ಯೋಜನೆಗಳ ಲಾಭ. ಉದ್ಯೋಗ ಸಂಬಂಧಿತ ದಾಖಲೆಗಳು ಮುಂತಾದ ಅಗತ್ಯ ಕಾರ್ಯಗಳು ಸ್ಥಗಿತಗೊಳ್ಳುತ್ತಿವೆ. ಇನ್ನೊಂದೆಡೆ, ದೇಶದಾದ್ಯಂತ ಲಕ್ಷಾಂತರ ನಿರುದ್ಯೋಗಿ ಯುವಕರು ಇದ್ದು, ಅವರಲ್ಲಿ ಅಪಾರ ಶಕ್ತಿ, ಶಿಕ್ಷಣ ಮತ್ತು ಕೌಶಲ್ಯವಿದೆ. ಈ ಮಾನವ ಸಂಪನ್ಮೂಲವನ್ನು ಸಮರ್ಪಕವಾಗಿ ಬಳಸಿದರೆ ರಾಷ್ಟ್ರದ ಅಭಿವೃದ್ಧಿಗೆ ಬಹು ದೊಡ್ಡ ಕೊಡುಗೆ ನೀಡಬಹುದು. ಆದರೆ ಬ್ಯಾಂಕ್‌ಗಳ ಸೇವಾ ಅಸಮರ್ಪಕತೆ ಮತ್ತು ಮುಷ್ಕರಗಳಿಂದ ಯುವಕರ ಭವಿಷ್ಯ ಮತ್ತಷ್ಟು ಹಿನ್ನಡೆ ಅನುಭವಿಸುತ್ತಿದೆ.

ನಿರುದ್ಯೋಗಿ ಯುವಕರನ್ನು ಬ್ಯಾಂಕಿಂಗ್, ಸಾರ್ವಜನಿಕ ಸೇವೆ. ಅಭಿವೃದ್ಧಿ ಯೋಜನೆಗಳು ಮತ್ತು ರಾಷ್ಟ್ರ ನಿರ್ಮಾಣ ಕಾರ್ಯಗಳಲ್ಲಿ ತಾತ್ಕಾಲಿಕ /ಶಾಶ್ವತವಾಗಿ ಬಳಸುವ ನೀತಿ ರೂಪಿಸಬೇಕು, ಯುವಕರಿಗೆ ಉದ್ಯೋಗಾವಕಾಶ ಸೃಷ್ಟಿಸಿ ಅವರ ಶಕ್ತಿಯನ್ನು ರಾಷ್ಟ್ರದ ಪ್ರಗತಿಗೆ ಬಳಸಿಕೊಳ್ಳಬೇಕು, ಈ ವಿಷಯ ಕೇವಲ ಬ್ಯಾಂಕ್‌ಗಳ ವಿಷಯವಲ್ಲ ಇದು ದೇಶದ ಭವಿಷ್ಯ ಮತ್ತು ಯುವಕರ ಬದುಕಿನ ಪ್ರಶ್ನೆ ಆಗಿದೆ. ಮಾನವೀಯ ಹಾಗೂ ಸಾಮಾಜಿಕ ನ್ಯಾಯ ದ ದೃಷ್ಟಿಯಿಂದ ಈ ಮನವಿಯನ್ನು ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಮನವಿಯಲ್ಲಿ ಒತ್ತಾಯಿಸಲಾಗಿದೆ. ಈ ಸಂದರ್ಭದಲ್ಲಿ ದತ್ತಾ ಡೋಣಿಕರ, ತಳಕೇರಿ, ಅನಿಲ್ ನಾಯಕ, ಜಗದೀಶ್ ಬಿದನೂರು, ಶ್ರೀಶೈಲ ತರಲಗಟ್ಟಿ ಇದ್ದರು.

ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಭೀಮ್ ಆರ್ಮಿ ಭಾರತ ಏಕತಾ ಮಿಷನ್ ಸಂಘಟನೆಯ ಕಾರ್ಯಕರ್ತರು ಅಪರ ಜಿಲ್ಲಾಧಿಕಾರಿ ಡಾ ಔದ್ರಾಮ ಅವರಿಗೆ ಮನವಿ ಸಲ್ಲಿಸಿದರು.

ನಿರುದ್ಯೋಗಿ ಯುವಕರಿಗೆ ತರಬೇತಿ ನೀಡಿ

ನಿರುದ್ಯೋಗಿ ಯುವಕರನ್ನು ಸರಿಯಾದ ರೀತಿಯಲ್ಲಿ ಆಯ್ಕೆ ಮಾಡಿಕೊಂಡು ತರಬೇತಿ ನೀಡಿ ಅವರಿಗೆ ಈ ಬ್ಯಾಂಕ್ ಕಾರ್ಯದಲ್ಲಿ ತೊಡಗಿಸಿದರೆ 4 ಶನಿವಾರಗಳ ಕೆಲಸ ಮತ್ತು ಅದರ ಜತೆಗೆ 4 ಭಾನುವಾರಗಳ ಕೆಲಸ ನೀಡಿದರೆ ಇದರಿಂದ ನಿರುದ್ಯೋಗಿ ಯುವಕರಿಗೂ ಉದ್ಯೋಗ ನೀಡಿದಂತಾಗುತ್ತದೆ. ಅದರ ಜತೆಗೆ ಸಾರ್ವಜನಿಕರಿಗೂ ತಮ್ಮ ಬ್ಯಾಂಕ್ ಮತ್ತು ದೈನಂದಿನ ವ್ಯವಹಾರಕ್ಕೆ ಅನುಕೂಲವಾಗುತ್ತದೆ ಆದ್ದರಿಂದ ಸರಕಾರ ಬ್ಯಾಂಕ್‌ಗಳ ಕಾರ್ಯದಿನಗಳು ಮತ್ತು ಸೇವಾ ಲಭ್ಯತೆಯನ್ನು ದೇಶದಾದ್ಯಂತ ಏಕರೂಪವಾಗಿ ನಿಗದಿಪಡಿಸಬೇಕು, ಎಂದು ಭೀಮ್ ಆರ್ಮಿ ಅಪರ ಜಿಲ್ಲಾಧಿಕಾರಿ ಡಾ ಔದ್ರಾಮಗೆ ಒತ್ತಾಯಿಸಿದರು.

ಗ್ಲೋಬಲ್ ಬಿಸಿನೆಸ್ ಕಾನಕ್ಲೇವ್ ನಾಳೆಯಿಂದ

ವಿಜಯಪುರ: ಅಂತಾರಾಷ್ಟ್ರೀಯ ಲಿಂಗಾಯತ ಯುವ ವೇದಿಕೆಯಿಂದ ವೀರಶೈವ ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನಕ್ಲೇವ್– ಜ.29 ರಿಂದ ಫೆ.1ರ ವರೆಗೆ ನಾಲ್ಕು ದಿನಗಳ ಕಾಲ ಬೆಂಗಳೂರಿನಲ್ಲಿ ನಡೆಯಲಿದೆ ಎಂದು ವಿಜಯಪುರ ಜಿಲ್ಲಾ ಸಣ್ಣ ಕೈಗಾರಿಕೆ ಉದ್ದಿಮೆದಾರರ ಸಂಘದ ಅಧ್ಯಕ್ಷ ಡಾ. ಗಂಗಾಧರ ಸಂಬಣ್ಣಿ ಮತ್ತು ಉದ್ಯಮಿ ಶಾಂತೇಶ ಕಳಸಗೊಂಡ ತಿಳಿಸಿದ್ದಾರೆ. ಈ ಕುರಿತು ಜಂಟಿ ಮಾಧ್ಯಮ ಪ್ರಕಟಣೆ ನೀಡಿರುವ ಅವರು, ಬೆಂಗಳೂರಿನ ಪ್ಯಾಲೇಸ್ ಗ್ರೌಂಡ್ ನಲ್ಲಿರುವ ವೈಟ್ ಪೆಟೆಲ್ಸ್ ನಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದ್ದಾರೆ. ಜ. 29 ರಂದು ಗುರುವಾರ ಸಂಜೆ 4.30ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿ, ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ, ಅರಣ್ಯ ಮತ್ತು ಪರಿಸರ ವಿಜ್ಞಾನ ಸಚಿವ ಈಶ್ವರ ಖಂಡ್ರೆ, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವ ಶರಣಬಸಪ್ಪ ದರ್ಶನಾಪುರ ಹಾಗೂ ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಉಪಸ್ಥಿತರಿರಲಿದ್ದಾರೆ. ಫೆ. 1 ರಂದ ಭಾನುವಾರ ಸಂಜೆ 4.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಚಿಕ್ಕಮಗಳೂರು ಬಸವತತ್ವ ಪೀಠದ ಡಾ. ಶ್ರೀ ಶಿವಬಸವ ಮರುಳಸಿದ್ಧ ಸ್ವಾಮೀಜಿ, ಸಚಿವ ಡಾ. ಶರಣಪ್ರಕಾಶ ಪಾಟೀಲ ಉಪಸ್ಥಿತರಿರಲಿದ್ದಾರೆ.

{ಪರಮೇಶ್ವರ} ಗೃಹ ಸಚಿವ

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ರಾಜ್ಯ ರಾಜಕಾರಣಕ್ಕೆ ಬರಲಿ ಅವರೇನು ಕ್ರಾಂತಿಕಾರಿ ಮುಖಂಡರಲ್ಲ. ಅವರೊಬ್ಬ ಹಿರಿಯ ಮುಖಂಡರು. ರಾಜ್ಯ ರಾಜಕಾರಣಕ್ಕೆ ಬರಲಿ ನೋಡೋಣ. ನಾವು ಅವರನ್ನು ಎದುರಿಸುತ್ತೇವೆ, ಯಾವುದೇ ತೊಂದರೆ ಇಲ್ಲ.

ಸಮಾಚಾರ ಸಣ್ಣದಲ್ಲ

ಬಜೆಟ್ ಅಧಿವೇಶನಕ್ಕೆ ಮುನ್ನ ಸರ್ವಪಕ್ಷ ಸಭೆ

ದೆಹಲಿ: ಎನ್‌ಡಿಎ ಮೈತ್ರಿಕೂಟದ ಕೇಂದ್ರ ಸರಕಾರ ಫೆ.1ರಂದು ಬಜೆಟ್ ಮಂಡನೆಗೆ ಸಿದ್ಧತೆ ಮಾಡಿಕೊಳ್ಳುತ್ತಿರುವ ಮಧ್ಯೆಯೇ ಸಂಸತ್ತಿನ ಬಜೆಟ್ ಅಧಿವೇಶನಕ್ಕೆ ಮುಂಚಿತವಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ಮಂಗಳವಾರ ಸರ್ವಪಕ್ಷ ಸಭೆ ನಡೆಯಿತು. 'ಯುಪಿಎ' ಸರಕಾರದ ಆಡಳಿತಾವಧಿಯಲ್ಲಿನ 'ಎಂಜಿಎನ್‌ಆರ್‌ಇಜಿಎ'(ಎಂ ನರೇಗಾ) ಯೋಜನೆಯ ಮರು ಜಾರಿ, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಐಆರ್), ಭಾರತದ ವಿದೇಶಾಂಗ ನೀತಿ ಮತ್ತು ಹೊಸ ಯುಜಿಸಿ ಮಾರ್ಗಸೂಚಿಗಳು ಸೇರಿದಂತೆ ಹಲವು ವಿಷಯಗಳ ಕುರಿತು ಸಂಸತ್ ಅಧಿವೇಶನದಲ್ಲಿ ರಚನಾತ್ಮಕ ಚರ್ಚೆಯಾಗಬೇಕಿದೆ ಎಂದು ಪ್ರತಿಪಕ್ಷಗಳು ಸರ್ವಪಕ್ಷ ಸಭೆಯಲ್ಲಿ ಮಂಗಳವಾರ ಆಗ್ರಹಿಸಿದವು. ಆದರೆ, ಹೊಸದಾಗಿ ಜಾರಿಗೆ ತರಲಾದ ವಿಬಿ-ಜಿ ರಾಮ್ ಜಿ ಯೋಜನೆಯನ್ನು ಕೇಂದ್ರ ಸರಕಾರ ಯಾವುದೇ ಕಾರಣಕ್ಕೂ ಹಿಂದಕ್ಕೆ ಪಡೆಯುವುದಿಲ್ಲ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಸ್ಪಷ್ಟಪಡಿಸಿದರು. ಬಜೆಟ್ ಅಧಿವೇಶನದ ಪ್ರಥಮ ಆದ್ಯತೆ ಬಜೆಟ್ ಮಂಡನೆ ಮತ್ತು ಅದರ ಕುರಿತು ಚರ್ಚೆ ನಡೆಸುವುದಾಗಿರುತ್ತದೆ ಎಂದು ಹೇಳಿದ ಸಚಿವ ರಿಜಿಜು, ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ ವೇಳೆ ಸದಸ್ಯರು ಇತರೆ ವಿಷಯಗಳನ್ನು ಪ್ರಸ್ತಾಪಿಸಬಹುದು ಎಂದು ಹೇಳಿದರು. ಕೇಂದ್ರ ಸಚಿವರಾದ ಜೆ.ಪಿ.ನಡ್ಡಾ ಮತ್ತು ಹಿರಿಯ ಸಚಿವರು, ಲೋಕಸಭೆ ಮತ್ತು ರಾಜ್ಯಸಭೆಯಲ್ಲಿನ ರಾಜಕೀಯ ಪಕ್ಷಗಳ ಸದನ ನಾಯಕರು ಸಭೆಯಲ್ಲಿದ್ದರು.

400 ಕೋಟಿ ರು. ದರೋಡೆಯಲ್ಲಿ ಪೊಲೀಸರು ಭಾಗಿ?

← ಮೊದಲ ಪುಟದಿಂದ

ಅಪಹರಣ ಪ್ರಕರಣದಲ್ಲಿ ಬಂಧನಕ್ಕೆ ಒಳಗಾದ ಕಿಶೋರ್ ಹಾಗೂ ಜಯೇಶ್ ಮಧ್ಯೆ ನಡೆದ ವಾಟ್ಸಪ್ ಕರೆ ಸಂಭಾಷಣೆ ವೈರಲ್ ಆಗಿದೆ. ಸಂಭಾಷಣೆ ಪ್ರಕಾರ ದರೋಡೆ ಪ್ರಕರಣ ಗುಜರಾತ್ ಮೂಲದ ರಾಜಕಾರಣಿಗೆ ಗೊತ್ತಾಗಿದೆ. ಇಷ್ಟೊಂದು ಹಣ ನಾಪತ್ತೆ ಆಗಲು ಹೇಗೆ ಸಾಧ್ಯ? ಇದರ ಹಿಂದೆ ಕರ್ನಾಟಕ ಪೊಲೀಸರು ಇದ್ದಾರೆ ಎಂದು ಮಾತನಾಡಿದ್ದಾರೆ. ಚೋರ್ಲಾ ಘಾಟ್‌ನಲ್ಲಿ ಸಂಭವಿಸಿದ್ದ ದರೋಡೆ ಪ್ರಕರಣದಲ್ಲಿ ಬೆಳಗಾವಿ ಪೊಲೀಸರ ಕೈವಾಡ ಕುರಿತು ಹೊರಬಿದ್ದಿರುವ ಸಂಭಾಷಣೆ ಸಾಕಷ್ಟು ಕುತೂಹಲ ಹುಟ್ಟುಹಾಕಿದೆ. ಈ ಮಧ್ಯೆ, ರಾಜ್ಯದ ರಾಜಕಾರಣಿಗಳು ಪ್ರಕರಣದ ಕುರಿತು ತಲೆಗೊಂದು ಹೇಳಿಕೆ ನೀಡುತ್ತಿದ್ದು, ಪ್ರಕರಣದ ದಿಕ್ಕು ಬದಲಾಗುತ್ತಿದೆ.

ಬಂಧಿತರ ಸಂಖ್ಯೆ 7ಕ್ಕೆ ಏರಿಕೆ : 400 ಕೋಟಿ ದರೋಡೆ ಹಾಗೂ ಸಂದೀಪ್ ಪಾಟೀಲ್ ಅಪಹರಣಕ್ಕೆ ಸಂಬಂಧಿಸಿದಂತೆ ಈವರೆಗೂ ಒಟ್ಟು ಏಳು ಜನರ ಬಂಧನವಾಗಿದೆ. ಅಪಹರಣಕ್ಕೆ ಬಳಸಿದ್ದ ಕಾರು ಚಾಲಕನನ್ನು ಮಹಾರಾಷ್ಟ್ರದ ಎಸ್‌ಐಟಿ ಅಧಿಕಾರಿಗಳು ವಶಕ್ಕೆ ಪಡೆದು ತನಿಖೆ ಚುರುಕುಗೊಳಿಸಿದ್ದಾರೆ. ಸದ್ಯ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೂ 7 ಜನರ ಬಂಧನವಾಗಿದೆ.

ಐದು ರಾಜ್ಯಕ್ಕೆ ವ್ಯಾಪಿಸಿದ ದರೋಡೆ ಕೇಸ್: 400 ಕೋಟಿ ರು. ದರೋಡೆ ಪ್ರಕರಣ ಮೊದಲಿಗೆ ಮಹಾರಾಷ್ಟ್ರ ಹಾಗೂ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿತ್ತು. ಆದರೆ ಈಗ ಈ ಪ್ರಕರಣದ ಗೋವಾ, ಗುಜರಾತ್ ಹಾಗೂ ಆಂದ್ರಪ್ರದೇಶಕ್ಕೂ ವ್ಯಾಪಿಸಿದೆ. ಪಂಚ ರಾಜ್ಯಗಳ ವ್ಯಾಪ್ತಿಗೆ ಸದ್ಯ ದರೋಡೆ ಪ್ರಕರಣದ ವಿಸ್ತರಿಸಿದ್ದು ಇದರಿಂದ ಮಹಾರಾಷ್ಟ್ರ ಸರಕಾರ ರಚಿಸಿದ ಎಸ್‌ಐಟಿ ಅಧಿಕಾರಿಗಳ ಜವಾಬ್ದಾರಿ ಹೆಚ್ಚಿಸಿದೆ. 2 ಸಾವಿರ ರು. ನೋಟುಗಳಿದ್ದ 400 ಕೋಟಿ ರು. ಹಣವನ್ನು ವರ್ಗಾಯಿಸುವ ಜವಾಬ್ದಾರಿಯನ್ನು ಮಹಾರಾಷ್ಟ್ರದ ವ್ಯಕ್ತಿ ಹೊತ್ತಿದ್ದರು. ಆದರೆ ಈ ಹಣ ಹೊರಟಿದ್ದು ಗೋವಾ ರಾಜ್ಯದಿಂದ. ಇನ್ನೂ ಕರ್ನಾಟಕ ಮಾರ್ಗವಾಗಿ ಸಾಗಿಸುವ ವೇಳೆ ಚೋರ್ಲಾ ಘಾಟ್ ಬಳಿ ದರೋಡೆ ಆಗಿದ್ದರೆ ಈ ಹಣ ಆಂದ್ರಪ್ರದೇಶದ ತಿರುಪತಿ ಟ್ರಸ್ಟ್‌ಗೆ ಹೋಗುವುದಿತ್ತು ಎನ್ನಲಾಗುತ್ತಿದೆ. ಇನ್ನು ಹಣದ ಮೂಲ ಗುಜರಾತ್‌ನ ಉದ್ಯಮಿಯದ್ದು ಎಂದು ಕೆಲ ಸಾಕ್ಷಿಗಳಿಂದ ತಿಳಿದುಬಂದಿದೆ. ಹಾಗಾಗಿಯೇ ದರೋಡೆ ಪ್ರಕರಣ ಐದು ರಾಜ್ಯಕ್ಕೆ ವ್ಯಾಪಿಸಿದೆ.

ಮೆಟ್ರೋ ನಗರ ಸ್ಥಾನಮಾನದ ನಿರೀಕ್ಷೆಯಲ್ಲಿ ಬೆಂಗಳೂರಿಗರು | ಸಂಸತ್‌ನಲ್ಲಿ ಬೇಡಿಕೆ ಇಟ್ಟಿದ್ದ ಸಂಸದ ತೇಜಸ್ವಿ ಸೂರ್ಯ

ಕೇಂದ್ರ ಬಜೆಟ್: ಎಚ್‌ಆರ್‌ಎ ಮಿತಿ ಏರಿಕೆ ನಿರೀಕ್ಷೆ

ದೆಹಲಿ: ಕೇಂದ್ರ ಬಜೆಟ್ 2026-27 ಮಂಡನೆಗೆ ಇನ್ನು ಕೆಲವೇ ದಿನಗಳು ಬಾಕಿ ಇವೆ. ಸಂಬಳದಾರರು ಹಾಗೂ

ಮಧ್ಯಮ ವರ್ಗದ ಜನರು ಈ ಬಾರಿಯೂ ಭಾರಿ ನಿರೀಕ್ಷೆಯಲ್ಲಿದ್ದಾರೆ. ಅತೀ ಹೆಚ್ಚು ಸಂಬಳದಾರರಿರುವ ನಗರಗಳ ಪೈಕಿ ಒಂದಾದ ಬೆಂಗಳೂರಿನ ಜನರು ಈ ಬಾರಿ ಎಚ್‌ಆರ್‌ಎ (ಮನೆ ಬಾಡಿಗೆ ಭತ್ಯೆ) ಮಿತಿ ಏರಿಕೆಯ ನಿರೀಕ್ಷೆಯಲ್ಲಿದ್ದಾರೆ.

ಆದಾಯ ತೆರಿಗೆಗಾಗಿ ಬೆಂಗಳೂರನ್ನು ಮೆಟ್ರೋ ನಗರವಾಗಿ ಪರಿಗಣಿಸಬೇಕು ಎಂದು ಸಂಸತ್‌ನಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಪ್ರಸ್ತಾಪಿಸಿದ್ದರು, ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನೂ ಭೇಟಿ ಮಾಡಿ ಮನವಿ ಮಾಡಿದ್ದರು. ಈ ಬಾರಿಯಾದರೂ ಬೆಂಗಳೂರಿಗೆ ಮೆಟ್ರೋ ನಗರದ ಸ್ಥಾನಮಾನ ಸಿಗಬಹುದು ಎನ್ನುವ ನಿರೀಕ್ಷೆ ಇದೆ. ಪುಣೆ, ಹೈದರಾಬಾದ್ ನಗರಕ್ಕೂ ಈ ಸ್ಥಾನಮಾನ ಸಿಗಬೇಕು ಎನ್ನುವ ಬೇಡಿಕೆ ಇದೆ. ಹಳೆ ತೆರಿಗೆ ಪದ್ಧತಿಯಲ್ಲಿ ಮಾತ್ರ ಇದಕ್ಕೆ ಅವಕಾಶ ಇರುವುದರಿಂದ ಬೆಂಗಳೂರಿಗೆ ಮೆಟ್ರೋ ನಗರ ಸ್ಥಾನಮಾನ ಸಿಗುವುದು ಅನುಮಾನ ಎನ್ನಲಾಗಿದೆ.

ಬೆಂಗಳೂರಿನಲ್ಲಿ ಮನೆ ಬಾಡಿಗೆ ಭಾರಿ ಪ್ರಮಾಣದಲ್ಲಿ ಹೆಚ್ಚಾಗುತ್ತಿದ್ದು, ಮೆಟ್ರೊ ನಗರವಾಗಿ ಪರಿಗಣಿಸಿದರೆ ಮಧ್ಯಮ ವರ್ಗದ ವೇತನದಾರರಿಗೆ ತೆರಿಗೆ ಪಾವತಿಯಲ್ಲಿ ಅನುಕೂಲವಾಗಲಿದೆ. ಸದ್ಯ ಮೆಟ್ರೊ ನಗರಗಳಿಗೆ ಎಚ್.

ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಕೇಂದ್ರ ಸರಕಾರದ 2026-27ನೇ ಹಣಕಾಸು ವರ್ಷದ ಮುಂಗಡಪತ್ರದ ತಯಾರಿ ಅಂತಿಕ ಹಂತ ತಲುಪಿದ್ದು, ಅದರ ಪ್ರಯುಕ್ತ ಸಂಪ್ರದಾಯದಂತೆ ನಡೆಯುವ 'ಹಲ್ವಾ ತಯಾರಿ'ಗೆ ದೆಹಲಿಯಲ್ಲಿನ ಹಣಕಾಸು ಸಚಿವಾಲಯದಲ್ಲಿ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಗಳವಾರ ಸಂಜೆ ಚಾಲನೆ ನೀಡಿದರು. ಈ ಸಂದರ್ಭ ಕೇಂದ್ರ ಹಣಕಾಸು ಸಚಿವಾಲಯ ಕಾರ್ಯದರ್ಶಿ ಸೇರಿದಂತೆ ಹಿರಿಯ ಅಧಿಕಾರಿಗಳು ಹಾಜರಿದ್ದರು. ಲೋಕಸಭೆಯಲ್ಲಿ ಫೆ.1ರ ಭಾನುವಾರ ಬೆಳಗ್ಗೆ 11 ಗಂಟೆಗೆ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಪ್ರತಿ ಮಂಡಿಸಲಿದ್ದಾರೆ. ಇದು ಅವರು ಮಂಡಿಸುತ್ತಿರುವ 9ನೇ ಬಜೆಟ್ ಆಗಿರಲಿದೆ.

ಆರ್.ಎ ಶೇ 50ರಷ್ಟು ಇದ್ದರೆ, ಮೆಟ್ರೊ ಅಲ್ಲದ ನಗರಗಳಿಗೆ ಶೇ 40ರಷ್ಟಿದೆ, ಆದರೆ ಈಗ ಎರಡನೇ ಹಂತದ ನಗರಗಳಲ್ಲೂ ಮನೆ ಬಾಡಿಗೆ ದರ ಮೆಟ್ರೋ ನಗರಗಳಿಗೆ ಸಮನಾಗಿದೆ. ಸದ್ಯ ದೆಹಲಿ, ಮುಂಬೈ, ಕೋಲ್ಕತ್ತ ಹಾಗೂ ಚೆನ್ನೈ ನಗರದ ತೆರಿಗೆ ಪಾವತಿದಾರರಿಗೆ ಶೇ 50ರಷ್ಟು ಎಚ್‌ಆರ್ ಭತ್ಯೆ ವಿನಾಯಿತಿ ಪಡೆದುಕೊಳ್ಳಬಹುದು. (ಮೂಲ ವೇತನದ ಶೇ. 50 ಅಥವಾ ಪಾವತಿ ಮಾಡಿದ ಬಾಡಿಗೆ ಇದರಲ್ಲಿ ಕಡಿಮೆ ಇರುವುದನ್ನು ಎಚ್‌ಆರ್‌ಎ ವಿನಾಯಿತಿಗೆ ಪರಿಗಣಿಸಲಾಗುತ್ತದೆ). ಮೆಟ್ರೊ ಅಲ್ಲದ ನಗರಗಳಲ್ಲಿ ವೇತನ ಪಡೆಯುತ್ತಿರುವವರಿಗೆ ಈ ವಿನಾಯಿತಿ ಶೇ. 40ರಷ್ಟಿದೆ.

ಮೆಟ್ರೋ ಅಲ್ಲದ ನಗರಗಳಲ್ಲಿ ಉದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದ್ದು, ಎಚ್‌ಆರ್‌ಎ ವಿನಾಯಿತಿ ತಾರತಮ್ಯದಿಂದಾಗಿ ಅಸಮತೋಲನ ಉಂಟು ಮಾಡುತ್ತಿದೆ. ದೇಶದ ಹಲವು ನಗರಗಳನ್ನು ಮೆಟ್ರೊ ನಗರಗಳೆಂದು ಪರಿಗಣಿಸಿದರೆ ಹಲವು ಉದ್ಯೋಗಿಗಳಿಗೆ ಅನುಕೂಲವಾಗಲಿದೆ.

ಬೆಂಗಳೂರು, ಹೈದರಾಬಾದ್, ಪುಣೆ ಹಾಗೂ ಅಹಮದಾಬಾದ್ ಮುಂತಾದ ನಗರಗಳಲ್ಲಿ ಬಾಡಿಗೆ ದರ ಭಾರೀ ಏಚ್ಚಳವಾಗಿದೆ, ಆದರೆ ವಿನಾಯಿತಿ ಪ್ರಮಾಣ ಹಾಗೇ ಇದೆ. ಹೀಗಾಗಿ ಬೆಂಗಳೂರು ಸೇರಿ ಹಲವು ನಗರದ ವೇತನದಾದರಿಗೆ ಎಚ್‌ಆರ್‌ಎ ಸೌಲಭ್ಯ ಹೆಚ್ಚಿಸುವುದರಿಂದ ಅನುಕೂಲವಾಗಲಿದೆ.

ಕಸ್ಟಮ್ ಸುಂಕ ಪರಿಷ್ಕರಣೆ, ಸ್ಟ್ಯಾಂಡರ್ಡ್ ಡಿಡಕ್ಷನ್ ಹೆಚ್ಚಳ?

ಕಳೆದ ವರ್ಷ ಜಿಎಸ್‌ಟಿ ಸರಳೀಕರಣದ ಬಳಿಕ, ಕಸ್ಟಮ್ ಸುಂಕ ಪದ್ಧತಿಯ ಪರಿಷ್ಕರಣೆಯನ್ನು ಈ ಬಜೆಟ್‌ನಲ್ಲಿ ನಿರೀಕ್ಷಿಸಲಾಗುತ್ತಿದೆ. ಜಾಗತಿಕ ಭೌಗೋಳಿಕ ರಾಜಕೀಯ ಅನಿಶ್ಚಿತತೆ ಇರುವುದರಿಂದ ಆರ್ಥಿಕತೆಗೆ ಹೆಚ್ಚಿನ ಒತ್ತು ನೀಡಲು ಹಲವು ಸುಧಾರಣ ಕ್ರಮಗಳು ಇರಬಹುದು ಎನ್ನಲಾಗಿದೆ.

ಜಿಡಿಪಿ ಬೆಳವಣಿಗೆ ಹಾಗೂ ಸಾಲ ಇಳಿಕೆ ಬಗ್ಗೆಯೂ ಬಜೆಟ್‌ನಲ್ಲಿ ಮುನ್ನೋಟ ಇರುವ ಸಾಧ್ಯತೆ ಇದೆ. ಕಳೆದ ವರ್ಷದ ಬಜೆಟ್‌ನಲ್ಲಿ ವೈಯಕ್ತಿಕ ತೆರಿಗೆ ಪಾವತಿದಾರರಿಗೆ ಆದಾಯ ತೆರಿಗೆ ಮಿತಿಯನ್ನು 7 12 ಲಕ್ಷಕ್ಕೆ ಏರಿಕೆ ಮಾಡಲಾಗಿತ್ತು. ಬಳಿಕ ಜಿಎಸ್‌ಟಿ ಸರಳೀಕರಣ ಆಗಿತ್ತು. ಈ ಬಾರಿ ಸ್ಟ್ಯಾಂಡರ್ಡ್ ಡಿಡಕ್ಷನ್ ಮೊತ್ತ (ಪ್ರಮಾಣಿತ ಕಡಿತ) ಹೆಚ್ಚಿಸುವ ನಿರೀಕ್ಷೆ ಇದೆ. ಇದು ಹೊಸ ತೆರಿಗೆ ಪದ್ಧತಿ ಆಯ್ಕೆ ಮಾಡುವಂತೆ ತೆರಿಗೆದಾರರಿಗೆ ಪ್ರೋತ್ಸಾಹಿಸಿದಂತಾಗುತ್ತದೆ.

ಭೌಗೋಳಿಕ ರಾಜಕೀಯ ಅನಿಶ್ಚಿತತೆಯಲ್ಲಿರುವುದರಿಂದ ರಕ್ಷಣಾ ವಲಯಕ್ಕೆ ಹೆಚ್ಚಿನ ಅನುದಾನ ಮೀಸಲಿಡಬಹುದು. ನರೇಗಾ ಬದಲು ಇತ್ತೀಚೆಗೆ ಜಾರಿಗೆ ಬಂದ ವಿಬಿ-ಜಿ ರಾಮ್ ಜಿ ಯೋಜನೆ ಮೇಲೆಯೂ ಹೆಚ್ಚಿನ ಖರ್ಚು ನಿರೀಕ್ಷಿಸಬಹುದು. 2026ರ ಜನವರಿ 1 ರಿಂದಲೇ ಪೂರ್ವಾನ್ವಯವಾಗುವಂತೆ 8ನೇ ವೇತನಾ ಆಯೋಗದ ಘೋಷಣೆಯೂ ಈ ಬಜೆಟ್ ನಿರೀಕ್ಷೆಯಲ್ಲೊಂದಾಗಿದೆ. 16ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ರಾಜ್ಯಗಳಿಗೆ ತೆರಿಗೆ ಹಂಚಿಕೆಯ ಪ್ರಸ್ತಾಪವೂ ಬಜೆಟ್‌ನಲ್ಲಿ ನಿರೀಕ್ಷಿಸಬಹುದು. ಅತೀ ಸಣ್ಣ ಸಣ್ಣ ಹಾಗೂ ಮಧ್ಯಮ ಗಾತ್ರದ ಕೈಗಾರಿಕೆಗಳಿಗೆ ಪ್ರೋತ್ಸಾಹಕ ಯೋಜನೆಗಳು, ರತ್ನ ಮತ್ತು ಅಭರಣ, ಸಿದ್ಧ ಉಡುಪುಗಳು ಮತ್ತು ಚರ್ಮ ವಲಯಗಳಿಗೂ ಹೆಚ್ಚಿನ ಬೆಂಬಲ ದೊರಕುವ ಸಾಧ್ಯತೆ ಇದೆ. ಲೀಥಿಯಂ ಹಾಗೂ ಕೋಬಾಲ್ಟ್ ಮುಂತಾದ ಅಪರೂಪದ ಖನಿಜಗಳ ಉತ್ಪನನ ಮತ್ತು ಸಂಸ್ಕರಣೆಗೆ ಹೆಚ್ಚಿನ ನಿಧಿ ಮೀಸಲಿಡಬಹುದು.

ಬಿಗ್‌ಬಾಸ್ ಗೆದ್ದದ್ದು ಗಿಲ್ಲಿಯಲ್ಲ, ನಿರ್ಮಲಾ!

← ಮೊದಲ ಪುಟದಿಂದ

ಈ ವೇಳೆ ಕನ್ನಡದ ಜನಪ್ರಿಯ ರಿಯಾಲಿಟಿ ಶೋ ಬಿಗ್‌ಬಾಸ್ ವಿನ್ನರ್ ಗಿಲ್ಲಿ ಗೆದ್ದ 50 ಲಕ್ಷ ರು. ಬಹುಮಾನ ಕುರಿತು ವಿಧಾನಸಭೆಯಲ್ಲಿ ಕುತೂಹಲಕರ ಚರ್ಚೆಯಾಯಿತು. ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಭಾಷಣದ ಮಧ್ಯೆ ಈ ವಿಚಾರ ಪ್ರಸ್ತಾಪಿಸಿದರು. ಬಿಗ್‌ಬಾಸ್ ರಿಯಾಲಿಟಿ ಶೋ ನಿಜವಾದ ವಿನ್ನರ್ ಗಿಲ್ಲಿ ಅಲ್ಲ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನಿಜವಾದ ವಿನ್ನರ್ ಎಂದು ಕುತೂಹಲ ಹುಟ್ಟುಹಾಕಿದರು.

ಅದು ಹೇಗೆ ಎಂದು ವಿವರಿಸಿದ ಪ್ರದೀಪ್ ಈಶ್ವರ್, ಬಿಗ್‌ಬಾಸ್ ವಿನ್ನರ್‌ಗೆ 50 ಲಕ್ಷ ರು. ಬಹುಮಾನ ನೀಡಲಾಗಿದೆ. ಈ 50 ಲಕ್ಷ ರು. ಪೈಕಿ ಶೇ.18ರಷ್ಟು ಜಿಎಸ್‌ಟಿ, ಶೇ.13ರಷ್ಟು ಆದಾಯ ತೆರಿಗೆ ಮತ್ತು ಶೇ.4ರಷ್ಟು ಸೆಸ್ ಒಟ್ಟು ಶೇ.52ರಷ್ಟು ಹಣ ತೆರಿಗೆ ರೂಪದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್‌ಗೆ ಹೋಗುತ್ತದೆ. ಮಂಡ್ಯದ ಹುಡುಗ ಗಿಲ್ಲಿಗೆ ಶೇ.48ರಷ್ಟು ಮಾತ್ರ ಹಣ ಸಿಗುತ್ತದೆ ಎಂದು ಗಮನ ಸೆಳೆದರು. ಕೇಂದ್ರದ ತೆರಿಗೆ ವ್ಯವಸ್ಥೆಯಿಂದ ಜನಸಾಮಾನ್ಯರಿಗೆ ಆಗುತ್ತಿರುವ ತೊಂದರೆ ಬಗ್ಗೆ ತಿಳಿಸುವ ಉದ್ದೇಶದಿಂದ ಇದನ್ನು ಇಲ್ಲಿ ಪ್ರಸ್ತಾಪಿಸಿದೆ ಎಂದರು.

ಸಿದ್ದು ನನ್ನ ಪಾಲಿನ ಶ್ರೀರಾಮಚಂದ್ರ: ನಂತರ ಮಾತು ಮುಂದುವರಿಸಿ ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟುವುದಷ್ಟೇ ದೇಶಪ್ರೇಮವಲ್ಲ. ಬಡವರ, ಹಸಿದವರ ಹೊಟ್ಟೆ ತುಂಬಿಸಿದ ಸಿದ್ದರಾಮಯ್ಯ ಅವರು ನನ್ನ ಪಾಲಿನ ಶ್ರೀರಾಮಚಂದ್ರ. ಮಹಾತ್ಮ ಗಾಂಧಿ ಅವರು ದಲಾಯಿಲಾಮಾ, ನೆಲ್ಸನ್ ಮಂಡೇಲಾ, ಬರಾಕ್ ಒಬಾಮಾಗೆ ಸ್ಫೂರ್ತಿಯಾಗಿದ್ದರು. ಮನರೇಗಾ ಯೋಜನೆಯಿಂದ ಮಹಾತ್ಮ ಗಾಂಧಿ ಹೆಸರನ್ನೇ ಬಿಡಲಾಗಿದೆ. ರಾಜ್ಯಪಾಲರ ಭಾಷಣದಲ್ಲಿ ನಾವು ಕೇಂದ್ರ ಸರಕಾರದಿಂದ ಜಿಎಸ್‌ಟಿ, ಆದಾಯ ತೆರಿಗೆ, ಸೆಸ್ ಹೆಸರಿನಲ್ಲಿ ಆಗುತ್ತಿರುವ ರಾಜ್ಯದ ಲೂಟಿ ಬಗ್ಗೆ ಹೇಳಿದ್ದೆವು. ಈ ಹಿಂದೆ ನರೇಗಾದಲ್ಲಿ ಕೇಂದ್ರ ಮತ್ತು ರಾಜ್ಯಗಳ ಅನುದಾನ ಶೇ.90:10ರ ಅನುಪಾತ ಇತ್ತು. ಈಗ ಶೇ.60:40 ಆಗಿದೆ. ರಾಜ್ಯದ ಮೇಲೆ ಆರ್ಥಿಕ ಹೊರೆ ಹೆಚ್ಚಾಗಿದೆ ಎಂದು ರಾಜ್ಯಪಾಲರ ಗಮನಕ್ಕೆ ತರಲಾಗಿದೆ ಎಂದು ಹೇಳಿದರು.

ಮನರೇಗಾ ಯೋಜನೆಯ ಹೆಸರನ್ನು ವಿಬಿ ಜಿ ರಾಮ್ ಜಿ ಎಂದು ಬದಲಿಸಿದ್ದಾರೆ. ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಿದರು. ಆದರೆ ಅಯೋಧ್ಯೆ ಶ್ರೀರಾಮಚಂದ್ರ ಇಂಡಿಯಾ ಕೂಟಕ್ಕೆ ಒಲಿದುಬಿಟ್ಟ. ಈಗ ಮನರೇಗಾ ಹೆಸರು ಬದಲಿಸಿ ಶ್ರೀರಾಮಚಂದ್ರನನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಬಡವರು ಹಸಿವು ನೀಗಿಸುವ, ಹೊಟ್ಟೆ ತುಂಬಿಸುವ ಹಾಗೂ ಸ್ವಾಭಿಮಾನದಿಂದ ಬದುಕಲು ಪ್ರೇರೇಪಿಸಿದ ನನ್ನ ಪಾಲಿನ ಶ್ರೀರಾಮಚಂದ್ರ ಸಿದ್ದರಾಮಯ್ಯ, ಅನ್ನರಾಮಯ್ಯ ಎಂದು ಪ್ರದೀಪ್ ಈಶ್ವರ್ ಸಿದ್ದರಾಮಯ್ಯ ಅವರನ್ನು ಹಾಡಿಹೊಗಳಿದರು.

ನಮ್ಮ ಸರಕಾರದ ಪಂಚ ಗ್ಯಾರಂಟಿ ಕುರಿತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ. ಕಿಂಗ್ಸ್ ಕಾಲೇಜಿನಲ್ಲಿ ಪಂಚ ಗ್ಯಾರಂಟಿಗಳಿಂದ ಕ್ರಾಂತಿಕಾರ ಬದಲಾವಣೆಗಳಾಗಲಿವೆ ಎಂದು ಹೇಳಲಾಗಿದೆ. ಹಲವು ವಿಶ್ವವಿದ್ಯಾಲಯಗಳಲ್ಲಿ ಈ ಬಗ್ಗೆ ಚರ್ಚೆಯಾಗಿದೆ. ಅಂದರೆ, ನಮ್ಮ ಸರಕಾರದ ಪಂಚ ಗ್ಯಾರಂಟಿಗಳ ಮುಖಾಂತರ ಪ್ರತಿ ಮನೆ ತಲುಪುತ್ತಿದ್ದೇವೆ. ಅನ್ನಭಾಗ್ಯದ ಮುಖಾಂತರ ಹಸಿದ ಹೊಟ್ಟೆ ತುಂಬಿಸುವ ಶ್ರೇಷ್ಠ ಕಾರ್ಯ ಮಾಡಲಾಗುತ್ತಿದೆ. ಈ ಪಂಚ ಗ್ಯಾರಂಟಿಗಳು ಹಲವು ಕಡೆ ಸ್ಫೂರ್ತಿಯಾಗಿವೆ ಎಂದು ಶ್ಲಾಘಿಸಿದರು.

ರಾಜ್ಯಪಾಲರ ಭಾಷಣದಲ್ಲಿ ಕೇಂದ್ರದಿಂದ ನಮ್ಮ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯದ ಬಗ್ಗೆ ಪ್ರಸ್ತಾಪಿಸಲಾಗಿದೆ. ಭದ್ರ ಮೇಲ್ದಂಡೆ ಯೋಜನೆಗೆ 5,300 ಕೋಟಿ ರು., 15ನೇ ಹಣಕಾಸು ಆಯೋಗದಡಿ 5,495 ಕೋಟಿ ರು. ಕೇಳಿದೆವು. ಕೇಂದ್ರ ಸರಕಾರ ಕೊಡಲಿಲ್ಲ. ನಮ್ಮ ಪಾಲಿನ ಜಿಎಸ್‌ಟಿ ಹಣ ವಾಪಸ್ ಕೊಟ್ಟಿಲ್ಲ ಎಂಬುದನ್ನು ರಾಜ್ಯಪಾಲರ ಗಮನಕ್ಕೆ ತಂದಿದ್ದೇವೆ ಎಂದರು.

ಗ್ಯಾರಂಟಿ ಯೋಜನೆಗಳಿಗೆ 1 ಲಕ್ಷ ಕೋಟಿ ರು. ಖರ್ಚು ಮಾಡುತ್ತಿದ್ದರೂ ಅಭಿವೃದ್ಧಿ ನಿಂತಿಲ್ಲ. ಕೇಂದ್ರ ಸರಕಾರ ನಮಗೆ ಮೋಸ ಮಾಡುತ್ತಿದೆ. ಮನರೇಗಾ ಯೋಜನೆಯು ಉದ್ಯೋಗ ಸೃಷ್ಟಿಸಿ ಜಗತ್ತಿನ ಅತಿದೊಡ್ಡ ಯೋಜನೆ ಎಂಬ ಹೆಗ್ಗಳಿಕೆ ಪಡೆದಿದೆ. ವಿರೋಧ ಪಕ್ಷಗಳು ಈ ಹೊಗಳಿಕೆ ಸಹಿಸದೆ ಯೋಜನೆಯ ಹೆಸರು ಬದಲಿಸಿವೆ. ಈ ಮೂಲಕ ಮಹಾತ್ಮ ಗಾಂಧಿಗೆ ಅವಮಾನಿಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕೇಂದ್ರ ಸರಕಾರವು ನಮ್ಮ ಯುಪಿಎ ಸರಕಾರದ ಯೋಜನೆಗಳ ಹೆಸರು ಬದಲಿಸಿಕೊಂಡು ಕ್ರೆಡಿಟ್ ತೆಗೆದುಕೊಳ್ಳುತ್ತಿದೆ. ಕೇಂದ್ರದಿಂದ ಕರ್ನಾಟಕಕ್ಕೆ ಪದೇ ಪದೇ ಅವಮಾನವಾಗುತ್ತಿದೆ. ಗಣರಾಜ್ಯೋತ್ಸವ ಪರೇಡ್‌ನ ರಾಜ್ಯದ ಸ್ತಬ್ಧಚಿತ್ರಕ್ಕೆ ಗೌರವ ಇಲ್ಲ. ಇದನ್ನು ಪ್ರಶ್ನಿಸುವುದು ತಪ್ಪಾ ಎಂದು ಪ್ರದೀಪ್ ಈಶ್ವರ್ ಕೇಂದ್ರ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯಪಾಲರ ನಡೆ ಆತಂಕಕಾರಿ: ಇದಕ್ಕೂ ಮೊದಲು ಮಾತನಾಡಿದ ಶಾಸಕ ಎ.ಎಸ್. ಪೊನ್ನಣ್ಣ, ರಾಜ್ಯಪಾಲರು ಭಾಷಣ ಪೂರ್ಣ ಓದದೆ ಕೆಲ ಸಾಲಿನಲ್ಲೇ ಮುಗಿಸಿರುವುದು ಆತಂಕಕಾರಿ ನಡೆ. ವಿರೋಧಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳ ರಾಜ್ಯಪಾಲರು ಕೇಂದ್ರದವರು ಹೇಳಿದಂತೆ ನಡೆಯುತ್ತಿರುವ ಆತಂಕವಿದೆ. ರಾಜ್ಯಪಾಲರು ಜೈ ಸಂವಿಧಾನ ಕೂಡ ಹೇಳಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯ ಪ್ರಸ್ತಾಪಿಸಿ ಮಾತನಾಡಿದ ಅವರು, ರಾಜ್ಯಪಾಲರು ಸಾಂವಿಧಾನಿಕ ಜವಾಬ್ದಾರಿ ನಿಭಾಯಿಸಿಲ್ಲ. ಜೈ ಸಂವಿಧಾನ್ ಕೂಡ ಹೇಳಿಲ್ಲ, ಭಾಷಣದಲ್ಲಿ ಉಲ್ಲೇಖಿಸಿದ್ದ ರಾಜ್ಯ ಸರಕಾರದ ಸಾಧನೆ, ಮುಂದಿನ ಹಾದಿ ಬಗ್ಗೆ ಓದಿಲ್ಲ. ಅವರಿಗೆ ಯಾಕೆ ಅಷ್ಟು ಆತಂಕ? ಯಾಕೆ ಅಷ್ಟು ಭಯ? ಎಂದು ಪ್ರಶ್ನಿಸಿದರು. ಅಲ್ಲದೆ, ಕೇಂದ್ರದ ತೆರಿಗೆ ಅನ್ಯಾಯ ಹಾಗೂ ರಾಜ್ಯ ಸರಕಾರದ ಗ್ಯಾರಂಟಿ ಸಾಧನೆ, ಅಭಿವೃದ್ಧಿ ಕುರಿತು ರಾಜ್ಯಪಾಲರು ಮಾತನಾಡಿಲ್ಲ ಎಂದ ಪೊನ್ನಣ್ಣ, ರಾಜ್ಯದ ಸಾಧನೆಗಳ ಬಗ್ಗೆ ಬಿಚ್ಚಿಟ್ಟರು.

ವಂದನಾ ನಿರ್ಣಯ ಪ್ರಸ್ತಾಪಿಸಿ ಮಾತನಾಡಿದ ಅವರು, ರಾಜ್ಯಪಾಲರು ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡದೆ ಕೆಲ ಸಾಲಿನಲ್ಲೇ ಮುಗಿಸಿ ಹೊರ ನಡೆದಿದ್ದಾರೆ. ಪಶ್ಚಿಮ ಬಂಗಾಳ, ತೆಲಂಗಾಣ, ಕೇರಳ, ತಮಿಳುನಾಡು, ಕರ್ನಾಟಕದಲ್ಲಿ ರಾಜ್ಯಪಾಲರ ಕರ್ತವ್ಯದ ರೀತಿ ಬಹಳ ಆತಂಕಕಾರಿ ಆಗಿದೆ. ರಾಷ್ಟ್ರಪತಿಗಳು ನೇಮಿಸಿದರೂ ಅದೊಂದು ಸಾಂವಿಧಾನಿಕ ಹುದ್ದೆ. ಸಂವಿಧಾನದ ಅಡಿಯಲ್ಲೇ ನಡೆಯಬೇಕು. ಆದರೆ ಇವರು ಕೇಂದ್ರದವರು ಹೇಳಿದಂತೆ ನಡೆಯುತ್ತಿದ್ದಾರೆ ಎಂಬ ಆತಂಕವಿದೆ. ಯಾರೂ ಸಂವಿಧಾನಕ್ಕಿಂತ ದೊಡ್ಡವರಿಲ್ಲ. ಯಾರೂ ಸಂವಿಧಾನದ ಜವಾಬ್ದಾರಿಗಳನ್ನು ಅಲ್ಲಗೆಳೆಯಬಾರದು. ರಾಜ್ಯಪಾಲರ ಹುದ್ದೆ ಸಾಂವಿಧಾನಿಕ ಹುದ್ದೆಯೇ ಹೊರತು ಅವರಿಗೆ ವಿವೇಚನಾಧಿಕಾರ ಇಲ್ಲ ಎಂದು ಸುಪ್ರೀಂಕೋರ್ಟ್ ಆದೇಶಗಳನ್ನು ಉಲ್ಲೇಖಿಸಿದರು.

ಅಶೋಕಣ್ಣನ ಫಾದರ್ ಆಫ್ ನೇಷನ್ ಯಾರು?

ಕರ್ನಾಟಕದ ಸ್ತಬ್ಧಚಿತ್ರ ಮೂಲೆಗೆ ನಿಲ್ಲಿಸುತ್ತಾರೆ. ಕರ್ನಾಟಕದ ಸ್ತಬ್ಧ ಚಿತ್ರಕ್ಕೆ ಹೀಗಾ ಮಾಡುವುದು. ನನಗೆ ಒಂದು ಕನಸು ಬಂತು ಸಭಾಧ್ಯಕ್ಷರೇ ಫಾದರ್ ಆಫ್ ನೇಷನ್ ಯಾರು ಅಂತ ಪ್ರಶ್ನೆಯನ್ನು ಕನಸಿನಲ್ಲಿ ಕೇಳುತ್ತಾರೆ. ಅದಕ್ಕೆ ನಾನು ಮಹಾತ್ಮಗಾಂಧಿ ಅಂತ ಬರೆದೆ. ಕನಸಿನಲ್ಲಿ ಅಶೋಕಣ್ಣಗೂ ಒಂದು ಪ್ರಶ್ನೆ ಕೇಳ್ತಾರೆ. ಅದರಲ್ಲಿ ಫಾದರ್ ಆಫ್ ನೇಶನ್ ಯಾರು ಅಂತಾ ಕೇಳ್ತಾರೆ. ಅಶೋಕಣ್ಣ ಉತ್ತರ ಕೊಡ್ತಾರೆ.. ಒಂದು ವಾರದ ಹಿಂದೆ ಆಗಿದ್ರೆ ನಡ್ಡಾಜಿ., ಈಗ ನಿತಿನ್‌ಜಿ ಅಂತ ಬರೆದಿರಬಹುದು ಎಂದು ಬಿಜೆಪಿ ನಾಯಕರ ಕಾಲೆಳೆದಾಗ ಸದನದಲ್ಲಿ ಕೆಲ ಕಾಲ ಗದ್ದಲದ ವಾತಾವರಣ ಉಂಟಾಯಿತು. ನಂತರ ಮಾತು ಮುಂದುವರಿದಾಗ .. ಫೋರ್ಸ್ ಬೇಕಯ್ಯ ಮಾತು ಅಂತಿಮವಾಯಿತು.

ಭಾರತ-ಅಮೆರಿಕ ವ್ಯಾಪಾರ ಒಪ್ಪಂದ ಸ್ಥಗಿತದ ಕುರಿತು ಸಂಸದ ಟೆಡ್ ಕ್ರೂಜ್ ಆರೋಪ

ವ್ಯಾಪಾರ ಒಪ್ಪಂದಕ್ಕೆ ಭಾರತದ ಅಳಿಯನೇ ಅಡ್ಡಿ

ವಾಷಿಂಗ್ಟನ್: ಭಾರತ-ಅಮೆರಿಕ ವ್ಯಾಪಾರ ಒಪ್ಪಂದ ಸ್ಥಗಿತಕ್ಕೆ ಭಾರತದ ಅಳಿಯನಾಗಿರುವ ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್, ಶ್ವೇತಭವನದ ಆರ್ಥಿಕ ಸಲಹೆಗಾರ ಪೀಟರ್ ನವಾರೋ ಮತ್ತು ಅಲ್ಲಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೇ ಕಾರಣ ಎಂಬ ಆರೋಪ ರಿಪಬ್ಲಿಕನ್ ಪಕ್ಷದ ಪ್ರಭಾವಿ ಸಂಸದ ಟೆಡ್ ಕ್ರೂಜ್ ಆರೋಪಿಸಿದ್ದಾರೆ.

ಮುಂಬರುವ ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸಲು ತಯಾರಿ ನಡೆಸುತ್ತಿರುವ ಟೆಡ್ ಕ್ರೂಜ್ ಅವರು ದಾನಿಗಳ ಜತೆಗೆ ಮಾತನಾಡಿರುವ 10 ನಿಮಿಷಗಳ ಆಡಿಯೋವೊಂದು ಇದೀಗ ಬಹಿರಂಗವಾಗಿದ್ದು, ತೀವ್ರ ಸಂಚಲನ ಮೂಡಿಸಿದೆ. ಇದು ಕಳೆದ ವರ್ಷದ ಮಧ್ಯಂತರದ ಅವಧಿ ಆಡಿಯೋ ಎಂದು ಹೇಳಲಾಗಿದೆ.

ತಮ್ಮನ್ನು ತಾವು ಸಾಂಪ್ರದಾಯಿಕ, ಮುಕ್ತ ವ್ಯಾಪಾರ ಮತ್ತು ಮಧ್ಯಸ್ಥಿಕೆಯನ್ನು ಬೆಂಬಲಿಸುವ ರಿಪಬ್ಲಿಕನ್ ಸದಸ್ಯ ಎಂದು ಹೇಳಿಕೊಂಡಿರುವ ಕ್ರೂಜ್ ಅವರು, ಜೆ.ಡಿ.ವ್ಯಾನ್ಸ್ ಅವರನ್ನು ಪ್ರತ್ಯೇಕತಾ ನೀತಿ ಬೆಂಬಲಿಸುವವರು ಎಂದು ಹೇಳಿಕೊಂಡಿದ್ದಾರೆ. ಕ್ರೂಜ್ ಅವರ ಈ ಹೇಳಿಕೆ ತೀವ್ರ ಸಂಚಲನ ಮೂಡಿಸಿದೆ. ಟ್ರಂಪ್ ಅವರ ತೆರಿಗೆ ಕೇಂದ್ರಿತ ವ್ಯೂಹತಂತ್ರವು ಅಮೆರಿಕದ ಆರ್ಥಿಕತೆ ಮೇಲೆ ಭಾರೀ ಅಡ್ಡಪರಿಣಾಮ ಬೀರಲಿದೆ, ಅಧ್ಯಕ್ಷರಿಗೆ ವಾಗ್ದಂಡನೆಯ ಸಾಧ್ಯತೆಯನ್ನೂ ಹೆಚ್ಚಿಸುತ್ತದೆ

ಎಂದೂ ಅವರು ಎಚ್ಚರಿಸಿದ್ದಾರೆ.

2025ರ ಏಪ್ರಿಲ್‌ನ ಆರಂಭದಲ್ಲಿ ತೆರಿಗೆ ಯುದ್ಧ ಘೋಷಣೆಯಾದಾಗ ನಾನು ಮತ್ತು ಸಂಸದರ ಗುಂಪೊಂದು ತಡರಾತ್ರಿ ಟ್ರಂಪ್ ಅವರಿಗೆ ಕರೆ ಮಾಡಿ ಈ ಕುರಿತು ಪುನರ್ ಪರಿಶೀಲಿಸುವಂತೆ ಮನವಿ ಮಾಡಿದ್ದೆವು, ಆದರೆ ಟ್ರಂಪ್ ಅವರಿಗೆ ಅದು ಇಷ್ಟವಾಗಲಿಲ್ಲ. ಅವರು ನಮ್ಮ ವಿರುದ್ಧ ಕೂಗಾಡಿದರು, ಹಿಡಿ ಶಾಪ ಹಾಕಿದರು ಎಂದು ಅವರು ಹೇಳಿದ್ದಾರೆ.

ಈ ವರ್ಷ ನವೆಂಬರ್‌ನಲ್ಲಿ ಸಂಸತ್ತಿಗೆ ಮಧ್ಯಂತರ ಚುನಾವಣೆ ನಡೆಯುವ ಸಾಧ್ಯತೆ ಇದೆ. ಆ ಹೊತ್ತಿಗೆ ಜನರ ನಿವೃತ್ತಿಯ ಉಳಿತಾಯ ಶೇ.30ರಷ್ಟು ಕುಸಿದರೆ ಮತ್ತು ದಿನಬಳಕೆ ವಸ್ತುಗಳ ಬೆಲೆ ಶೇ.10ರಿಂದ ಶೇ.20ರಷ್ಟು ಏರಿಕೆಯಾದರೆ ರಿಪಬ್ಲಿಕನ್ ಅಭ್ಯರ್ಥಿಗಳು ಭಾರೀ ಸೋಲು ಅನುಭವಿಸಬೇಕಾದೀತು ಎಂದು ಎಚ್ಚರಿಸಿದ್ದಾರೆ. ಆ ರೀತಿಯೇನಾದರೂ ಆದರೆ ಮುಂದಿನ ಎರಡು ವರ್ಷ ಪ್ರತಿ ವಾರ ಸರಕಾರ ವಾಗ್ದಂಡನೆಗೆ ಒಳಗಾಗಬೇಕಾದೀತು ಎಂದು ಅಧ್ಯಕ್ಷರಿಗೆ ಎಚ್ಚರಿಸಿದ್ದೇನೆ, ಆದರೆ ಟ್ರಂಪ್ ಅದಕ್ಕೆ ಆಕ್ರೋಶಭರಿತವಾಗಿ ಕಿಡಿಕಾರಿದ್ದಾರೆ ಎಂದು ಕ್ರೂಜ್ ತಿಳಿಸಿದ್ದಾರೆ.

ವ್ಯಾಪಾರ ತೆರಿಗೆಯನ್ನು ವಿಮೋಚನಾ ದಿನ ಎಂದು ಬ್ರ್ಯಾಂಡ್ ಮಾಡುತ್ತಿರುವ ಕುರಿತೂ ಅಸಮಾಧಾನ ವ್ಯಕ್ತಪಡಿಸಿದ ಕ್ರೂಜ್, ಯಾರಾದರೂ ನನ್ನ ತಂಡದಲ್ಲಿ ಅಂಥ ಪದ ಬಳಸಿದ್ದೇ ಆದರೆ ತಕ್ಷಣ ಅವರನ್ನು ಕೆಲಸದಿಂದ ವಜಾ ಮಾಡುತ್ತೇನೆ ಎಂದು ಹೇಳಿದ್ದಾರೆ.

ಭಾರತಕ್ಕೆ ಕೆನಡಾ ಪ್ರಧಾನಿ ಭೇಟಿ?

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಜತೆ ಭಾರತ ಹಾಗೂ ಕೆನಡಾ ತೆರಿಗೆ ಸಂಘರ್ಷ ನಡೆಸಿರುವ ನಡುವೆಯೇ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಮಾರ್ಚ್‌ನಲ್ಲಿ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಆ ವೇಳೆ ಅಣುಶಕ್ತಿ, ಕೃತಕ ಬುದ್ಧಿಮತ್ತೆ ಮತ್ತು ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ಸಾಧ್ಯತೆಯಿದೆ. 2023ರಲ್ಲಿ ಖಲಿಸ್ತಾನಿ ಉಗ್ರ ನಿಜ್ಜರ್ ಹತ್ಯೆ ಬಳಿಕ ಹಳಸಿದ್ದ ಭಾರತ-ಕೆನಡಾ ಸಂಬಂಧ ವೃದ್ಧಿಗೂ ಇದು ಸಾಕ್ಷಿಯಾಗಲಿದೆ ಎನ್ನಲಾಗಿದೆ. ನಿಜ್ಜರ್ ಹತ್ಯೆ ವಿಚಾರವಾಗಿ ಭಾರತ ಮತ್ತು ಅಂದಿನ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೋ ನಡುವೆ ಸಂಬಂಧ ಹಳಸಿತ್ತು.

ಕೇರಳ, ಪ.ಬಂಗಾಳದಲ್ಲಿ ಸೋಂಕು ವ್ಯಾಪಕ: 110 ಮಂದಿಗೆ ಕ್ವಾರಂಟೈನ್

ನಿಫಾ ವೈರಸ್: 2 ರಾಜ್ಯಗಳು ಎಂಡೆಮಿಕ್ ವಲಯಕ್ಕೆ

ದೆಹಲಿ: ಭಾರತದ 2 ರಾಜ್ಯಗಳಲ್ಲಿ 'ನಿಫಾ' ವೈರಸ್ ಕಾಡಲಾರಂಭಿಸಿದೆ. ಪಶ್ಚಿಮ ಬಂಗಾಳ ಮತ್ತು



ಕೇರಳದಲ್ಲಿ ನಿಫಾ ವೈರಸ್ ಪ್ರಕರಣಗಳ ಸಂಖ್ಯೆಯಲ್ಲಿ ದಿನೇ ದಿನೇ ಏರಿಕೆಯಾಗುತ್ತಿದೆ. ಹಾಗಾಗಿಯೇ ಪಶ್ಚಿಮ ಬಂಗಾಳ ಹಾಗೂ ಕೇರಳ ರಾಜ್ಯಗಳನ್ನು 'ಎಂಡೆಮಿಕ್ ಝೋನ್'ಗೆ ಸೇರಿಸಲಾಗಿದೆ. ಭಾರತದ 2 ರಾಜ್ಯಗಳಲ್ಲಿ ಈಗಾಗಲೇ 110 ಮಂದಿ ಕ್ವಾರಂಟೈನ್ ಮಾಡಲಾಗಿದೆ. 200ಕ್ಕೂ ಹೆಚ್ಚು ಮಂದಿಯನ್ನು ಸ್ಕ್ರೀನಿಂಗ್ ಮಾಡಲಾಗಿದೆ.

ಪಶ್ಚಿಮ ಬಂಗಾಳದಲ್ಲಿ ನಿಫಾ ವೈರಸ್ ಸೋಂಕಿತರ ಸಂಖ್ಯೆ ಹೆಚ್ಚುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಆರೋಗ್ಯ ಇಲಾಖೆ ಕಟ್ಟು ನಿಟ್ಟಿನ ಕ್ರಮಗಳನ್ನು ಜಾರಿಗೊಳಿಸಿದೆ. ಸರಕಾರಿ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಸೋಂಕಿತರ ಶುಶ್ರೂಷೆ ವಿಚಾರದಲ್ಲಿ ಎಚ್ಚರಿಕೆಯಿಂದ ಇರುವಂತೆ ಸೂಚನೆ ನೀಡಲಾಗಿದೆ. ನಿಫಾ ವೈರಸ್ ಸೋಂಕಿತರ ಪತ್ತೆ ಹಚ್ಚಿ ಕ್ವಾರಂಟೈನ್ ಮಾಡಲು ಸೂಚಿಸಲಾಗಿದೆ.

ಭಾರತ ಮಾತ್ರವಲ್ಲ ಏಷ್ಯಾ ಖಂಡದ ಹಲವು ದೇಶಗಳಲ್ಲಿ ನಿಫಾ ವೈರಸ್ ಸೋಂಕಿತರ ಸಂಖ್ಯೆ ಹೆಚ್ಚುತ್ತಿದ್ದು, ಕೆಲವು ದೇಶಗಳಲ್ಲಿ ವಿಮಾನ ನಿಲ್ದಾಣಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ ನಡೆಸಲಾಗುತ್ತಿದೆ. ಸೋಂಕಿತರು ಕಂಡುಬಂದರೆ ಅವರನ್ನು ಪ್ರತ್ಯೇಕಿಸಿ ಏಕಾಂತ ವಾಸಕ್ಕೆ ಕಳುಹಿಸಿಕೊಡಲಾಗುತ್ತಿದೆ ಎಂದು ವರದಿಯಾಗಿದೆ.

ಪ್ರಾಣಿಗಳಿಂದ ಮನುಷ್ಯರಿಗೆ ಹರಡುವ ಈ ವೈರಸನ್ನು ಝೂನೋಟಿಕ್ ವೈರಸ್ ಎಂದು ಕರೆಯುತ್ತಾರೆ. ವೈರಸ್ ಸೋಂಕಿತರ ಸಾವಿನ ಸಾಧ್ಯತೆ ಕನಿಷ್ಠ ಶೇ.40ರಿಂದ ಗರಿಷ್ಠ ಶೇ.70ರವರೆಗೂ ಇದೆ ಎನ್ನಲಾಗಿದೆ.

ಕರೋನಾಗಿಂತಲೂ ನಿಫಾ ವೈರಸ್ ಪ್ರಾಣಾಂತಿಕ ಎನ್ನಲಾಗುತ್ತಿದೆ. ಏಕೆಂದರೆ ಕರೋನಾ ಹರಡುವಿಕೆ ಪ್ರಮಾಣ ಅತ್ಯಂತ ವೇಗವಾಗಿದದರೂ ಕರೋನಾ ಚಿಕಿತ್ಸೆಗೆ ಸದ್ಯ ಲಸಿಕೆ ಲಭ್ಯವಿದೆ. ಆದರೆ ನಿಫಾ ವೈರಸ್ ಸೋಂಕಿಗೆ ಲಸಿಕೆ ಇಲ್ಲ. ರೋಗನಿರೋಧ ಲಸಿಕೆಗಳು ಈ ಸೋಂಕಿತರಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದಿಲ್ಲ. ಹೀಗಾಗಿ ನಿಫಾ ಸೋಂಕಿತರ ವಿಚಾರದಲ್ಲಿ ಅತೀವ ಎಚ್ಚರಿಕೆ ವಹಿಸುವುದು ಅಗತ್ಯ ಎಂದು ವೈದ್ಯರು ಸೂಚಿಸಿದ್ದಾರೆ. ಪಶ್ಚಿಮ ಬಂಗಾಳದ ಆರೋಗ್ಯ ಕಾರ್ಯಕರ್ತರಲ್ಲಿಯೇ ಐವರಿಗೆ ಈಗ ಸೋಂಕು ತಗುಲಿದೆ.

ಕಾಂಗ್ರೆಸ್ ಬಿಜೆಪಿ ಪ್ರತಿಭಟನೆ

← ಮೊದಲ ಪುಟದಿಂದ

ಜನಪರ ಚಿಂತನೆಯ ಕಾಯಿದೆ: ಲೋಕಭವನದಲ್ಲಿ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿದ ಬಳಿಕ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸರಕಾರ ನರೇಗಾ ಕಾಯಿದೆ ರದ್ದುಗೊಳಿಸಿ ವಿಬಿ ಜಿ ರಾಮ್ ಜಿಯನ್ನು ಜಾರಿಗೊಳಿಸಿದೆ. ಮನಮೋಹನ್ ಸಿಂಗ್ ಅವರ ಜನಪರ ಚಿಂತನೆಯಿಂದ ಜಾರಿಗೊಂಡ ಮನರೇಗಾ ಯೋಜನೆಯಡಿ ಬಡವರು, ಸಣ್ಣರೈತರು, ಮಹಿಳೆಯರು 100 ದಿನಗಳ ಕಾಲ ಕೆಲಸವನ್ನು ಖಾತ್ರಿಪಡಿಸುತ್ತಿತ್ತು. ಬಡವರಿಗೆ ಕೆಲಸದ ಹಕ್ಕು ಸಂವಿಧಾನಬದ್ಧವಾದದ್ದು. ಆದರೆ ವಿಬಿ ಜಿ ರಾಮ್ ಜಿ ಕಾಯ್ದೆಯಿಂದ ಸಂವಿಧಾನಬದ್ಧವಾದ ಹಕ್ಕನ್ನು ಕಸಿದುಕೊಂಡಂತಾಗಿದೆ ಎಂದು ಟೀಕಿಸಿದರು.

ಕರ್ನಾಟಕವೊಂದರಲ್ಲೇ ಸುಮಾರು 71 ಲಕ್ಷ ಜನ ಕಾರ್ಮಿಕರಿದ್ದು, ಇವರಲ್ಲಿ ಶೇ.53ರಷ್ಟು ಮಹಿಳೆಯರು, ಶೇ.28ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು, 5 ಲಕ್ಷ ಜನ ಅಂಗವಿಕಲ ಕಾರ್ಮಿಕರಿದ್ದಾರೆ. ಹೊಸ ಕಾಯಿದೆಯಲ್ಲಿ ಬಡ ಕೂಲಿ ಕಾರ್ಮಿಕರ ಕೆಲಸದ ಸ್ಥಳ ಮತ್ತು ದಿನಗಳನ್ನು ಕೇಂದ್ರ ಸರಕಾರ ನಿರ್ಧಾರ ಮಾಡಲಿದೆ. ಇದರೊಂದಿಗೆ ಕಾಯಿದೆ ಜಾರಿಗೆ ಕೇಂದ್ರ ಹಣ ಕೊಡದೇ, ರಾಜ್ಯ ಸರಕಾರಕ್ಕೆ ಹೊರೆಹಾಕಿದೆ. ಇದು ಜನರಿಗೆ ಮಾರಕವಾದ ಕಾಯಿದೆ ಎಂದು ಟೀಕಿಸಿದರು.

ಯೂರೋಪ್-ಭಾರತ ಚಾರಿತ್ರಿಕ ಒಪ್ಪಂದ

← ಮೊದಲ ಪುಟದಿಂದ

5.1 ಲಕ್ಷ ಕೋಟಿ ರು. ಮೌಲ್ಯದ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತಿದೆ. ಎರಡೂ ಗುಂಪಿನ ನಡುವೆ ಸೇವಾ ವಲಯದ ವಿನಿಮಯ 7.2 ಲಕ್ಷ ಕೋಟಿ ರು.ನಷ್ಟಿದೆ.

ತಾನೇ ಜಗತ್ತಿನ ಎಲ್ಲ ಆಗುಹೋಗುಗಳ ನಿಯಂತ್ರಕ ಎಂದು ಮೆರೆಯುತ್ತಿರುವ ಹಾಗೂ ಭಾರತವೂ ಸೇರಿ ಕಂಡ ಕಂಡ ದೇಶಗಳ ಮೇಲೆ ಹಿಂದೆ ಮುಂದೆ ನೋಡದೇ ತೆರಿಗೆ ಹಾಕುತ್ತಿರುವ ಅಮೆರಿಕಕ್ಕೆ ಇದು ಬಹುದೊಡ್ಡ ಬೆದರಿಕೆಯಾಗಿದೆ. ಅಮೆರಿಕದ ನೆರವಿಲ್ಲದೇ ಭಾರತ ಸ್ವತಂತ್ರವಾಗಿ ಬದುಕಲಿದೆ ಎನ್ನುವುದನ್ನು ಈ ಒಪ್ಪಂದ ಸ್ಪಷ್ಟವಾಗಿ ತೋರಿಸಿದೆ.

ಭಾರತ ವಿಶ್ವದಲ್ಲೇ 4ನೇ ಬೃಹತ್ ಆರ್ಥಿಕತೆಯಾಗಿದ್ದರೆ, 27 ದೇಶಗಳ ಐರೋಪ್ಯ ಒಕ್ಕೂಟವು ವಿಶ್ವದಲ್ಲೇ 2ನೇ ಬೃಹತ್ ಆರ್ಥಿಕತೆಯೆನಿಸಿಕೊಳ್ಳುತ್ತದೆ. ಈ ಎರಡು ಬಣಗಳ ನಡುವಿನ ಒಪ್ಪಂದವು ವಿಶ್ವದ ಜಿಡಿಪಿಯಲ್ಲೇ (ಒಟ್ಟು ದೇಶೀಯ ಉತ್ಪನ್ನ) ಶೇ.25 ಪಾಲು ಹೊಂದಿದೆ. ಇದುವರೆಗೆ ಅಮೆರಿಕದೊಂದಿಗೆ ಆತ್ಮೀಯ ಸಂಬಂಧ, ವ್ಯಾಪಾರವನ್ನು ಹೊಂದಿದ್ದ ಭಾರತ ಟ್ರಂಪ್ ಅವರ ಸತತ ತೆರಿಗೆ ಬೆದರಿಕೆ ನಂತರ ಇದೀಗ ಅನ್ಯ ಮಾರ್ಗಗಳನ್ನು ಹಿಡಿದಿದೆ.



ಗಣರಾಜ್ಯೋತ್ಸವದಲ್ಲಿ ಯೂರೋಪ್ ನಾಯಕರು ಪಾಲ್ಗೊಂಡಿದ್ದು ಒಂದು ಐತಿಹಾಸಿಕ ಸಂದರ್ಭ. ಮಂಗಳವಾರ ಎರಡು ಪ್ರಬಲ ಪ್ರಜಾಪ್ರಭುತ್ವ ಶಕ್ತಿಗಳು ಒಂದು ನಿರ್ಣಾಯಕ ಅಧ್ಯಾಯವನ್ನು ಆರಂಭಿಸಿವೆ.
-ನರೇಂದ್ರ ಮೋದಿ, ಪ್ರಧಾನಿ

ಎಲ್ಲ ಒಪ್ಪಂದಗಳ ತಾಯಿ ಸ್ಥಾನದಲ್ಲಿರುವ ಒಪ್ಪಂದಕ್ಕೆ ನಾವಿಂದು ಸಹಿ ಹಾಕಿದ್ದೇವೆ. 200 ಕೋಟಿ ಜನರ ನಡುವೆ ಮುಕ್ತ ವ್ಯಾಪಾರ ವಲಯವನ್ನು ಸೃಷ್ಟಿಸಿದ್ದೇವೆ. ಇದು ಕೇವಲ ಆರಂಭ. ಈ ವ್ಯೂಹಾತ್ಮಕ ಬಾಂಧವ್ಯ ಇನ್ನೂ ಪ್ರಬಲಗೊಳ್ಳಲಿದೆ.
-ಉರ್ಸುಲಾ ವಾನ್ ಡೆರ್ ಲೆಯೆನ್, ಐರೋಪ್ಯ ಆಯೋಗದ ಅಧ್ಯಕ್ಷೆ

ಯೂರೋಪ್ ಪರೋಕ್ಷವಾಗಿ ತನ್ನ ವಿರುದ್ಧವೇ ಹಣ ಹೂಡುತ್ತಿದೆ. ಭಾರತದಿಂದ ಒಪ್ಪಂದ ಮಾಡಿಕೊಳ್ಳುವ ರಷ್ಯಾಕ್ಕೆ ಪರೋಕ್ಷವಾಗಿ ನೆರವು ನೀಡುತ್ತಿದೆ. ಉಕ್ರೇನ್ ಮೇಲಿನ ರಷ್ಯಾ ದಾಳಿಗೆ ಸಹಕರಿಸುತ್ತಿದೆ.
-ಸ್ಕಾಟ್ ಬೆಸೆಂಟ್, ಅಮೆರಿಕ ವಿತ್ತಸಚಿವ

ಒಳಚರಂಡಿಯೊಳಗಿನ ಕೊಳಚೆ ಎತ್ತಿದ್ದ ಕೈಗಳಲ್ಲಿ ಕನ್ನಡದ ಸೇವೆ
ತನ್ನ ಗ್ರಂಥಾಲಯಕ್ಕೆ ನೆರವಿನ ನಿರೀಕ್ಷೆಯಲ್ಲಿರುವ ಕನ್ನಡಾಭಿಮಾನಿ

ಬಾಗಿಲು ಮುಚ್ಚುವ ಹಂತ ತಲುಪಿದ ಕನಸಿನ ಗ್ರಂಥಾಲಯ

ಕೆ.ಜೆ. ಲೋಕೇಶ್ ಬಾಬು ಮೈಸೂರು

ಎಡಗೈ ಸ್ವಾಧೀನ ಕಳೆದುಕೊಂಡರೂ, ಸ್ವಾಭಿಮಾನದ ಬಿಡಲೊಲ್ಲದ ಜೀವವೊಂದು ಚಿಂದಿ ಆಯ್ದು ಕನಸಿನ ಕನ್ನಡ ಗ್ರಂಥಾಲವೊಂದನ್ನು ನಡೆಸುತ್ತಿದೆ.

ಬಂದವರು-ಹೋದವರು ನೀಡಿದ ಆಶ್ವಾಸನೆ, ಕೇವಲ ಆಶ್ವಾಸನೆಯಾಗಿ ಉಳಿದಿವೆಯೇ ಹೊರತು ಅನುಷ್ಠಾನಕ್ಕೆ ಬಾರಲಿಲ್ಲ, ಆದರೂ ಮಾನಸಿಕವಾಗಿ, ನೈತಿಕವಾಗಿ ಕುಗ್ಗದ ವ್ಯಕ್ತಿ, ಚಿಂದಿ ಆಯ್ದು ಅದನ್ನು ಮಾರಾಟ ಮಾಡಿ ಬಂದ ಬಿಡಿಕಾಸಿನಲ್ಲೇ ಈ ನೆಲದ ಅಸ್ಮಿತೆ ಉಳಿಸುವ ಕೆಲಸ ಮಾಡುತ್ತಿದ್ದಾರೆ.

ಅವರ ಹೆಸರು ಸೈಯ್ಯದ್ ಇಸಾಕ್. ಮೈಸೂರಿನ ಮುಸ್ಲಿಂ ಬಾಹುಳ್ಯವುಳ್ಳ ನರಸಿಂಹರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಾಜೀವ್ ನಗರ ಬಡಾವಣೆಯಲ್ಲಿ ಕನ್ನಡ ಗ್ರಂಥಾಲಯ ತೆರೆದು ಇದೀಗ ನಿತ್ಯ ಕಣ್ಣೀರಿನ ಬದುಕು ಸಾಗಿಸುತ್ತಿದ್ದಾರೆ.

ಒಂದೆಡೆ ಬದುಕಿನ ಹೊರೆಯಾದರೆ, ಮತ್ತೊಂದೆಡೆ ಗ್ರಂಥಾಲಯದ ನಿರ್ವಹಣೆಯ ಭಾರ ಇಸಾಕ್ ಹೆಗಲೇರಿದೆ. ಒಂದು ಹೊತ್ತು ತಿಂದು ಬೇಕಾದರೆ ಜೀವಿಸಬಲ್ಲೆ, ನಾನು ಸೊರಗುವುದಿಲ್ಲ. ಆದರೆ ನನ್ನ ಕನಸಿನ ಈ ಕನ್ನಡ ಗ್ರಂಥಾಲಯ ಸೊರಗಬಾರದು ಎಂಬುದು ಇಸಾಕ್ ಅವರ ಮನದಾಳದ ಮಾತು. ಹೀಗೆ ಹೇಳುವಾಗ ಅವರಲ್ಲಿ ದುಃಖ ಉಮ್ಮಳಿಸಿ ಬರುತ್ತದ. ತಾನು ಕಲಿತದ್ದು ಕಡಿಮೆಯಾದರೂ, ಈ ನೆಲದ ಭವಿಷ್ಯದ ಪೀಳಿಗೆಗೆ ಳಿಗೆ ಆ ಕೊರತೆ ಎದುರಾಗಿ ಕಾಡದಿರಲೆಂಬ ದೃಢ

ಸಂಕಲ್ಪದೊಂದಿಗೆ ಸದ್ದಿಲ್ಲದೆ ಕನ್ನಡದ ಪರಿಚಾರಿಕೆಯಲ್ಲಿ ತೊಡಗಿದ್ದಾರೆ ಸೈಯದ್ ಇಸಾಕ್.

ಮೈಸೂರಿನ ರಾಜೀವ್ ನಗರ ಬಡಾವಣೆ ನಿವಾಸಿಯಾಗಿರುವ ಇವರು ಓದಿದ್ದು ಕೇವಲ ಒಂದನೇ ತರಗತಿ, ಆದರೆ ನೋಡಿ ಕಲಿತದ್ದು ಅಪಾರ. ಬಡತನದ ಬೇಗೆಯಲ್ಲಿ ನಲುಗಿದ ಕುಟುಂಬದಲ್ಲಿ ಹುಟ್ಟಿದ ಇಸಾಕ್ ಅವರಿಗೆ ಓದು ಹತ್ತಲಿಲ್ಲ ಎಂದಲ್ಲ, ತುಂಬಿದ ಕುಟುಂಬದ ಹೊಟ್ಟೆ ತುಂಬಿಸಬೇಕಾದ ಅನಿವಾರ್ಯತೆ. ಅದರ ಪರಿಣಾಮವಾಗಿ ಎಳೆಯ ವಯಸ್ಸಿಗೇ ಬಾಲಕಾರ್ಮಿಕ, ಜೀತದಾಳು.

ಅಂತಹ ಇಸಾಕ್ ಇಂದು ಈ ನೆಲದ ಆದರ್ಶಪ್ರಾಯ ಜೀವ, ವಯಸ್ಸು 66. ಅವರ ವಯಸ್ಸಿನ ಏರಿಕೆಯಂತೆ ಕನ್ನಡದ ಬಗೆಗಿನ ತುಡಿತವೂ ಅವರಲ್ಲಿ ಏರತೊಡಗಿದೆ. ಅದರ ಫಲವೇ ಇಸಾಕ್ ಅವರ ಕನಸಿನ ಕನ್ನಡ ಸಾರ್ವಜನಿಕ ಗ್ರಂಥಾಲಯ.

ಕನ್ನಡ ಭಾಷೆಯ ಮೇಲಿನ ಅಭಿಮಾನ ಕಡಿಮೆ ಇರುವ ಜಾಗದಲ್ಲಿ ಕನ್ನಡ ಸಾರ್ವಜನಿಕ ಗ್ರಂಥಾಲಯವೊಂದನ್ನು ತೆರೆದು ಆ ಮೂಲಕ ಕನ್ನಡ ಸೇವೆ ಮಾಡುತ್ತಿರುವ ಇಸಾಕ್ ಅವರಿಗೆ ಇಂದು ನೆರವಿನ ಅಗತ್ಯತೆ ಇದೆ, ಆ ನಿರೀಕ್ಷೆಯಲ್ಲಿ ಅವರಿದ್ದಾರೆ. ಆದರೆ ಸ್ಪಂದಿಸುವ ಮನಸ್ಸುಗಳು ಬೇಕಷ್ಟೇ.

ಕೂಲಿ ಕೆಲಸ ಮಾಡಿಕೊಂಡು, ತಮ್ಮ ಹಾಗೂ ದಾನಿಗಳ ನೆರವಿನಿಂದ ಗ್ರಂಥಾಲಯ ಸ್ಥಾಪಿಸಿ, ಜನರ ಮನ ಗೆದ್ದ ಸಯ್ಯದ್ ಇಸಾಕ್ ಅವರಿಗೆ ಈಗ ಗ್ರಂಥಾಲಯ ನಡೆಸಲು ಹಣಕಾಸಿನ ಸಮಸ್ಯೆ ಎದುರಾಗಿದೆ. ಸತತ 16 ವರ್ಷಗಳ ಕಾಲ ಗ್ರಂಥಾಲಯವನ್ನು ಮುನ್ನಡೆಸಿದ ಸಯ್ಯದ್ ಇಸಾಕ್ ಅವರಿಗೆ ಹಣಕಾಸಿನ ತೊಂದರೆಯ ಜೊತೆಗೆ ಅನಾರೋಗ್ಯದ ಸಮಸ್ಯೆಯೂ ಎದುರಾಗಿದೆ. ಹಾಗಾಗಿ ತಾವು ನಡೆಸುತ್ತಿರುವ ಗ್ರಂಥಾಲಯಕ್ಕೆ ಯಾರಾದರೂ ಸಹಾಯಹಸ್ತದ ನಿರೀಕ್ಷೆಯಲ್ಲಿದ್ದಾರೆ.

ಮುಸ್ಲಿಂ ಬಾಹುಳ್ಯವುಳ್ಳ ರಾಜೀವ್‌ನಗರದಲ್ಲಿ ಕನ್ನಡ ಪುಸ್ತಕಪ್ರೇಮಿಯಾಗಿರುವ ಸಯ್ಯದ್ ಇಸಾಕ್ ಸ್ಥಾಪಿಸಿದ ಗ್ರಂಥಾಲಯಕ್ಕೆ ಸಣ್ಣ ಮಕ್ಕಳಿಂದ ಹಿಡಿದು ವೃದ್ಧರವರೆಗೂ ಪುಸ್ತಕಗಳು ಹಾಗೂ ಪತ್ರಿಕೆಗಳನ್ನು ಓದಲು ಪ್ರತಿನಿತ್ಯ ನೂರಾರು ಮಂದಿ ಬರುತ್ತಾರೆ. ಇಲ್ಲಿನ ಗ್ರಂಥಾಲಯದಿಂದ ಅಕ್ಕಪಕ್ಕದ ನಿವಾಸಿಗಳಿಗೂ ಹಾಗೂ ವಿದ್ಯಾರ್ಥಿಗಳಿಗೂ ತುಂಬ ಅನುಕೂಲವಾಗಿದೆ.

2021ರ ಏಪ್ರಿಲ್ 9ರಂದು ಕಿಡಿಗೇಡಿಗಳು ಹೊತ್ತಿಸಿದ ಬೆಂಕಿಗೆ ಗ್ರಂಥಾಲಯ ಸಂಪೂರ್ಣ ಸುಟ್ಟು ಕರಲಾಗಿತ್ತು. ದಾನಿಗಳ ನೆರವಿನಿಂದ ಬಂದ ಮೂರೂ ಮುಕ್ಕಾಲು ಲಕ್ಷ ರು., ಇತರೆ ಮೂಲಗಳಿಂದ ಬಂದ ಒಂದು ಲಕ್ಷ ರು. ನಿಂದ ಮತ್ತೆ ಗ್ರಂಥಾಲಯವನ್ನು ಮರುಸ್ಥಾಪನೆ ಮಾಡಲಾಗಿತ್ತು.

ಆದರೆ, ಇತ್ತೀಚೆಗೆ ಸಯ್ಯದ್ ಇಸಾಕ್ ಅನಾರೋಗ್ಯಕ್ಕಿಡಾಗಿದ್ದಾರೆ, ಅಲ್ಲದೇ ಐದಾರು ತಿಂಗಳಿನಿಂದ ಗ್ರಂಥಾಲಯದ ವಿದ್ಯುತ್ ಬಿಲ್ ಕಟ್ಟಲಾಗದೇ, ಹಣಕಾಸಿನ ತೊಂದರೆ ಎದುರಿಸುತ್ತಿದ್ದಾರೆ. ಗ್ರಂಥಾಲಯಕ್ಕೆ ಮೊದಲು ಪ್ರತಿನಿತ್ಯ 19 ಪತ್ರಿಕೆಗಳನ್ನು ತರಿಸುತ್ತಿದ್ದರು. ಇದೀಗ ಆ ಸಂಖ್ಯೆ 4 ಪತ್ರಿಕೆಗಳಿಗೆ ಇಳಿದಿದೆ. ಪ್ರತೀ ತಿಂಗಳು ಪತ್ರಿಕೆ ಬಿಲ್ 2700 ರು. ಆಗುತ್ತಿತ್ತು, ಆದರೆ ಅದನ್ನು ಭರಿಸುವ ಶಕ್ತಿ ಇಸಾಕ್ ಅವರಿಗೆ ಇಲ್ಲವಾಗಿದೆ. ಗ್ರಂಥಾಲಯಕ್ಕೆ ನೆರವು ನೀಡುವುದಾಗಿ ಹೇಳಿದ ಕೆಲವರ ಆಶ್ವಾಸನೆಗಳು ಆಶ್ವಾಸನೆಗಳಾಗಿಯೇ ಉಳಿದಿವೆ.

ಸಾರ್ವಜನಿಕರ ಅನುಕೂಲಕ್ಕಾಗಿ ಸ್ಥಾಪಿಸಿದ ಗ್ರಂಥಾಲಯವನ್ನು ಮುನ್ನೆಡಸಲು ಈಗ ನನ್ನಲ್ಲಿ ಶಕ್ತಿ ಇಲ್ಲ ಎನ್ನುತ್ತಾ ತಲೆ ಮೇಲೆ ಕೈಹೊತ್ತು ಕುಳಿತಿದ್ದಾರೆ ಸಯ್ಯದ್ ಇಸಾಕ್.

ವಿಶ್ವವಾಣಿ
@vishwavaninews
28-01-2026
ಬುಧವಾರ

ಆರಾಮ

ಸಾವಿರಾರು ವರ್ಷಗಳಾದರೂ ಕೆಡದ ಔಷಧವಿದು!

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
naasomeswara@gmail.com

ಜೇನುತುಪ್ಪ! ಹಾಗಂದರೆ ಏನು? ಕಾರ್ಮಿಕ ಜೇನುನೊಣವು ಒಂದು ಎಂ.ಎಲ್. ಜೇನುತುಪ್ಪವನ್ನು ತಯಾರಿಸಲು ಸುಮಾರು 6500 ಹೂವುಗಳನ್ನು ಸಂದರ್ಶಿಸುತ್ತದೆ. ಹೂವಿನ ತಳದಲ್ಲಿರುವ ಮಕರಂದವನ್ನು ತನ್ನ ಹೀರುಕೊಳವೆಯಿಂದ ಹೀರಿಕೊಂಡು, ಅದನ್ನು ತನ್ನ ಉದರದಲ್ಲಿರುವ 'ಮಧು ಜಠರ'ದಲ್ಲಿ (ಹನಿ ಸ್ಟಮಕ್) ಸಂಗ್ರಹಿಸುತ್ತದೆ. ಮಕರಂದದಲ್ಲಿ ಸುಮಾರು ಶೇ.70ರಷ್ಟು ನೀರಿನಂಶವಿರುತ್ತದೆ. ಇದರಲ್ಲಿರುವ ಅನೇಕ ರಾಸಾಯನಿಕ ಘಟಕಗಳು ಅಸ್ಥಿರವಾಗಿರುತ್ತವೆ ಹಾಗೂ ಮಕರಂದದಲ್ಲಿ ಪ್ರಧಾನವಾಗಿರುವ ಸುಕ್ರೋಸ್ ತ್ವರಿತವಾಗಿ ಹುದುಗುವಿಕೆಗೆ (ಫರ್ಮೆಂಟೇಶನ್) ತುತ್ತಾಗುವ ಕಾರಣ, ಬೇಗನೆ ಹಾಳಾಗುವ ಸಾಧ್ಯತೆಯಿರುತ್ತದೆ. ಹಾಗಾಗಿ ಜೇನುನೊಣದ ಹೊಟ್ಟೆಯಲ್ಲಿರುವ 'ಇನ್ವರ್ಟೇಸ್' ಎಂಬ ಕಿಣ್ವವು ಸುಕ್ರೋಸನ್ನು ರಾಸಾಯನಿಕವಾಗಿ ವಿಭಜಿಸಿ 'ಗ್ಲೂಕೋಸ್' ಮತ್ತು 'ಫ್ರಕ್ಟೋಸ್' ಆಗಿ ಪರಿವರ್ತಿಸುತ್ತದೆ. ಈ ಎರಡು ರೂಪದ ಶರ್ಕರಗಳು ಸ್ಥಿರವಾಗಿರುತ್ತವೆ. ಅನಿರೀಕ್ಷಿತ ಹರಳುಗಟ್ಟುವಿಕೆಯನ್ನು ತಡೆಯುತ್ತವೆ. ಅವು ಘನೀಕರಣಗೊಳ್ಳುವ ಬಿಂದುವನ್ನು ಕಡಿಮೆ ಮಾಡುತ್ತವೆ. ಅವು ಆಸ್ಮಾಟಿಕ್ ಒತ್ತಡವನ್ನು ಕಡಿಮೆ ಮಾಡುವುದರಿಂದ ಬ್ಯಾಕ್ಟೀರಿಯಗಳ ಬೆಳವಣಿಗೆಯು ನಿಯಂತ್ರಣಕ್ಕೆ ಬರುತ್ತದೆ.

ಕಾರ್ಮಿಕ ಜೇನುನೊಣ ಗೂಡಿಗೆ ಹಿಂದಿರುಗುತ್ತದೆ. ತನ್ನ ಮಧುಜಠರದಲ್ಲಿ ಅರೆಸಂಸ್ಕರಿಸಿದ ಮಕರಂದವನ್ನು ಅದು ಮತ್ತೊಂದು ಕಾರ್ಮಿಕ ಜೇನುನೊಣಕ್ಕೆ ಬಾಯಿಯಿಂದ ಬಾಯಿಗೆ ಊಡುತ್ತದೆ. ಹೀಗೆ ಊಡಿದಾಗ ಅರೆಸಂಸ್ಕರಿಸಿದ ಜೇನುತುಪ್ಪಕ್ಕೆ ಹೊಸ ಜೇನುನೊಣದಿಂದ ಮತ್ತಷ್ಟು ಇನ್ವರ್ಟೇಸ್ ಬೆರೆಯುತ್ತದೆ. ಜತೆಗೆ 'ಗ್ಲೂಕೋಸ್ ಆಕ್ಸಿಡೇಸ್' ಹಾಗೂ 'ಅಮೈಲೇಸ್' ಸಹ ಸೇರಿಕೊಳ್ಳುತ್ತವೆ. ಇದನ್ನು 'ಟ್ರೋಫಲ್ಲಾಕ್ಸಿಸ್' ಎನ್ನುತ್ತಾರೆ. ಈ ಪ್ರಕ್ರಿಯೆಯನ್ನು ಒಂದಕ್ಕಿಂತ ಹೆಚ್ಚಿನ ಕಾರ್ಮಿಕ ಜೇನುನೊಣಗಳು ಪುನರಾವರ್ತಿಸುತ್ತವೆ. ಹಾಗಾಗಿ ಜೇನುತುಪ್ಪ ಎನ್ನುವುದು ಹಲವು ಕಾರ್ಮಿಕ ಜೇನುನೊಣಗಳ ಸಂಯುಕ್ತ ಶ್ರಮದ ಫಲವೆನ್ನಬಹುದು.

ಗ್ಲೂಕೋಸ್ ಆಕ್ಸಿಡೇಸ್, ಆಕ್ಸಿಜನ್ ಉಪಸ್ಥಿತಿಯಲ್ಲಿ ಗ್ಲೂಕೋಸಿನೊಡನೆ ರಾಸಾಯನಿಕವಾಗಿ ವರ್ತಿಸಿ, 'ಗ್ಲುಕೋನಿಕ್ ಆಸಿಡ್' ಹಾಗೂ 'ಹೈಡ್ರೋಜನ್ ಪೆರಾಕ್ಸೈಡ್'ಗಳನ್ನು ಉತ್ಪಾದಿಸುತ್ತದೆ. ಇದು ಬಹಳ ಮುಖ್ಯವಾದ ಘಟ್ಟ. ಗ್ಲುಕೋನಿಕ್ ಆಸಿಡ್ ಜೇನುತುಪ್ಪದ ಆಮ್ಲೀಯತೆಯನ್ನು 3.2–4.5ರಷ್ಟು ಕಡಿಮೆ ಮಾಡುತ್ತದೆ. ಆಮ್ಲೀಯ ಪರಿಸರದಲ್ಲಿ ಬ್ಯಾಕ್ಟೀರಿಯಗಳು ಬೆಳೆಯುವುದು ಅಪರೂಪ. ಜತೆಗೆ ಹೈಡ್ರೋಜನ್ ಪೆರಾಕ್ಸೈಡ್ ಪ್ರಬಲ ಬ್ಯಾಕ್ಟೀರಿಯ ನಾಶಕ. ಇಲ್ಲಿ ವಿಶೇಷವೆಂದರೆ, ಹೈಡ್ರೋಜನ್ ಪೆರಾಕ್ಸೈಡ್ ಅತ್ಯಂತ ನಿಧಾನಗತಿಯಲ್ಲಿ ಹಾಗೂ ನಿರಂತರವಾಗಿ ಬಿಡುಗಡೆಯಾಗುತ್ತಿರುತ್ತದೆ. ಹಾಗಾಗಿ ಬ್ಯಾಕ್ಟೀರಿಯಗಳ ಬೆಳವಣಿಗೆಯನ್ನು ನಿಗ್ರಹಿಸುವಷ್ಟು ಹೈಡ್ರೋಜನ್ ಪೆರಾಕ್ಸೈಡ್ ನಿರಂತರವಾಗಿ ಬಿಡುಗಡೆಯಾಗುತ್ತಲೇ ಇರುವುದು ಪ್ರಕೃತಿಯ ಒಂದು ಚೋದ್ಯವಾಗಿದೆ.

ಅರೆಸಂಸ್ಕರಿಸಿದ ಮಕರಂದದಲ್ಲಿ ನೀರಿನಂಶ ಸಾಕಷ್ಟಿರುತ್ತದೆ. ಎಲ್ಲ ಕಾರ್ಮಿಕ ನೊಣಗಳು ಮಧು ಜಠರದಲ್ಲಿ ತಾವು ಸಂಸ್ಕರಿಸಿದ ಅರೆ ಜೇನನ್ನು, ಗೂಡಿನ ಷಟ್ಕೋನ ಮನೆಗಳಲ್ಲಿ 'ವಾಂತಿ' ಮಾಡಿ ಅವನ್ನು ತುಂಬುತ್ತವೆ. ಇವುಗಳ ಮೇಲೆ ತಮ್ಮ ರೆಕ್ಕೆಗಳಿಂದ ಬಲವಾದ ಗಾಳಿಯನ್ನು ಬೀಸುತ್ತವೆ. ಬಿಸಿಗಾಳಿಯು ಎಲ್ಲೆಡೆ ಸಂಚರಿಸುತ್ತದೆ. ಮಕರಂದದಲ್ಲಿದ್ದ ಶೇ.70ರಷ್ಟು ನೀರಿನಂಶವು ಶೇ.18ಕ್ಕಿಳಿಯುತ್ತದೆ. ಈ ನಿರ್ಜಲತೆಯು ಆಸ್ಮಾಟಿಕ್ ಒತ್ತಡವನ್ನು ಹೆಚ್ಚಿಸುತ್ತದೆ, ಸೂಕ್ಷ್ಮಜೀವಿಗಳ ಬೆಳವಣಿಗೆಯನ್ನು ಹಾಗೂ ಹುದುಗುವಿಕೆಯನ್ನು ಸಂಪೂರ್ಣವಾಗಿ ತಡೆಗಟ್ಟುತ್ತದೆ. ಜೇನುತುಪ್ಪವು ರೂಪುಗೊಳ್ಳುತ್ತದೆ.

ಜೇನುತುಪ್ಪವು ರೂಪುಗೊಳ್ಳುತ್ತಿರುವಂತೆಯೇ ಜೇನುನೊಣಗಳು ಷಟ್ಕೋನ ಮನೆಗಳನ್ನು ಜೇನುಮೇಣವನ್ನು ಮೆತ್ತಿ ಮುದ್ರೆಯನ್ನು ಒತ್ತುತ್ತವೆ. ಈಗ ಷಟ್ಕೋನದೊಳಗಿರುವ ಮನೆಗಳಲ್ಲಿ ಆಕ್ಸಿಜನ್‌ರಹಿತ ಪರಿಸರವು ರೂಪುಗೊಳ್ಳುತ್ತದೆ. ದೀರ್ಘಕಾಲ ಸುರಕ್ಷಿತವಾಗಿರುತ್ತದೆ. ಹೊರಗಿನ ತೇವಾಂಶವು ಜೇನುತುಪ್ಪದ ಮೇಲೆ ಯಾವುದೇ ದುಷ್ಪರಿಣಾಮವನ್ನು ಉಂಟುಮಾಡುವುದಿಲ್ಲ. ಅಂತಿಮವಾಗಿ ರೂಪುಗೊಂಡ ಜೇನುತುಪ್ಪದಲ್ಲಿ ಫ್ರಕ್ಟೋಸ್–ಶೇ.38ರಷ್ಟು, ಗ್ಲೂಕೋಸ್–ಶೇ.31ರಷ್ಟು, ನೀರು–ಶೇ.18ರಷ್ಟು, ಗ್ಲುಕೋನಿಕ್ ಆಸಿಡ್, ಇನ್ವರ್ಟೇಸ್, ಗ್ಲುಕೂಸ್ ಆಕ್ಸಿಡೇಸ್, ಐರನ್, ಝಿಂಕ್, ಪೊಟಾಸಿಯಂ, ಪ್ರತಿಉತ್ಕರ್ಷಕಗಳಾದ ಪಾಲಿಫೀನಾಲ್, ಫ್ಲೇವನಾಯ್ಡ್ಸ್, ಹೈಡ್ರೋಜನ್ ಪೆರಾಕ್ಸೈಡ್ ಇರುತ್ತವೆ. ಈ ಆಮ್ಲೀಯ ಜೇನುತುಪ್ಪವು ಸಾವಿರಾರು ವರ್ಷಗಳ ಕಾಲ ಕೆಡದಂತೆ ಇರಬಲ್ಲದು.

ಅನಾದಿಕಾಲ: ಜೇನುತುಪ್ಪದ ಮೊದಲ ದಾಖಲೆಯು ಈಜಿಪ್ಷಿಯನ್ ಸಂಸ್ಕೃತಿಯಲ್ಲಿ ದೊರೆಯುತ್ತದೆ. ಜೇನುನೊಣಗಳು ಸೂರ್ಯದೇವ 'ರಾ' ಕಣ್ಣಿನ ನೀರಿನಿಂದ ಉತ್ಪಾದನೆಯಾದವು ಎಂದು ಅವರ ನಂಬಿಕೆ. ಹಾಗಾಗಿ ಅವರ ಪಾಲಿಗೆ ಜೇನುತುಪ್ಪವು ಪಾವಿತ್ರ್ಯ, ಪರಿಶುದ್ಧತೆ, ಸಂರಕ್ಷಣೆ ಹಾಗೂ ಪುನರ್ಜನ್ಮದ ಪ್ರತೀಕವಾಗಿದ್ದವು. ಅವರು ಜೇನುತುಪ್ಪವನ್ನು ಆಹಾರವನ್ನಾಗಿ ಬಳಸಿದರು. ಈಜಿಪ್ಟಿನ ಅರಸ ಫ್ಯಾರೋ ಮರಣಿಸಿದಾಗ, ಅವನ ದೇಹವನ್ನು ಮುಂದಿನ ಜನ್ಮಕ್ಕಾಗಿ ಸಂರಕ್ಷಿಸಿಡಲು ಹಲವು ಔಷಧಗಳನ್ನು, ಮೂಲಿಕೆಗಳನ್ನು ಹಾಗೂ ರಾಸಾಯನಿಕಗಳನ್ನು ಬಳಸುತ್ತಿದ್ದರು. ಅವುಗಳಲ್ಲಿ ಜೇನುತುಪ್ಪವು ಮುಖ್ಯವಾಗಿತ್ತು. ಜೇನನ್ನು ಇಡೀ ದೇಹಕ್ಕೆ ಲೇಪಿಸುತ್ತಿದ್ದರು. ಪಿರಮಿಡ್ಡುಗಳಲ್ಲಿ ಫ್ಯಾರೋವಿನ ಜತೆ ಹೂಳುತ್ತಿದ್ದ ಅಸಂಖ್ಯ ವಸ್ತುಗಳಲ್ಲಿ ಜೇನುತುಪ್ಪದ ಜಾಡಿಗಳು ಪ್ರಮುಖವಾಗಿದ್ದವು. ಅವುಗಳಲ್ಲಿರುವ ಜೇನುತುಪ್ಪವನ್ನು ಇಂದಿಗೂ ಸೇವಿಸಬಹುದಾಗಿದೆ. ಸಾವಿರಾರು ವರ್ಷಗಳು ಸಂದಿದ್ದರೂ ಜೇನುತುಪ್ಪದ ಗುಣಮಟ್ಟ ಹಾಳಾಗಿಲ್ಲ. ದೇವಾಲಯಗಳಲ್ಲಿ ಯಾವಾಗಲೂ ಜೇನುತುಪ್ಪದ ಬೃಹತ್ ಜಾಡಿಗಳಿರುತ್ತಿದ್ದವು. ಜೇನುತುಪ್ಪವನ್ನು ಹಲವು ಧಾರ್ಮಿಕ ವಿಧಿವಿಧಾನಗಳಲ್ಲಿ ಬಳಸುತ್ತಿದ್ದರು.

ಈಜಿಪ್ಟಿನ ವೈದ್ಯಕೀಯ ಗ್ರಂಥಗಳಲ್ಲಿ ಈಬರ್ಸ್ ಪ್ಯಾಪಿರಸ್ (ಕ್ರಿ.ಪೂ.1550) ಹಾಗೂ ಸ್ಮಿಥ್ ಪ್ಯಾಪಿರಸ್ (ಕ್ರಿ.ಪೂ.1600) ಮುಖ್ಯವಾದವು. ಈ ಎರಡೂ ಗ್ರಂಥಗಳು ಜೇನುತುಪ್ಪದ ಔಷಧೀಯ ಗುಣಗಳ ಬಗ್ಗೆ ಪದೇ ಪದೇ ಪ್ರಸ್ತಾಪಿಸುತ್ತವೆ. ಸೀಳುಗಾಯಗಳಿಗೆ, ಸುಟ್ಟಗಾಯಗಳಿಗೆ, ಕೊಳೆತು ನಾರುವ ವ್ರಣಗಳಿಗೆ ಜೇನುತುಪ್ಪವು ಅತ್ಯುತ್ತಮ ಔಷಧ. ಗಾಯವನ್ನು ಸ್ವಚ್ಛಗೊಳಿಸಿ, ಜೇನುತುಪ್ಪವನ್ನು ಲೇಪಿಸಿ, ಅದರ ಮೇಲೆ ಕಟ್ಟು ಕಟ್ಟಿದರೆ ಕೆಲವೇ ದಿನಗಳಲ್ಲಿ ಗಾಯ ಗುಣವಾಗುತ್ತದೆ ಎಂದು ಅವರು ನಂಬಿ ಪರಿಪಾಲಿಸುತ್ತಿದ್ದರು. ಈಜಿಪ್ಷಿಯನ್ ವೈದ್ಯರು ಮೂಲತಃ ಪುರೋಹಿತರಾಗಿದ್ದರು, ದಾರ್ಶನಿಕರಾಗಿದ್ದರು. ಜತೆಯಲ್ಲಿ ವೈದ್ಯಕೀಯವನ್ನು ನಡೆಸುತ್ತಿದ್ದರು. ಅವರಿಗೆ ರೋಗಜನಕ ಬ್ಯಾಕ್ಟೀರಿಯಗಳ ಅಸ್ತಿತ್ವದ ಬಗ್ಗೆ ಲವಲೇಶ ತಿಳಿವಳಿಕೆಯು ಇರಲಿಲ್ಲ. ಅವರಿಗೆ ಗಾಯವು ಗುಣವಾಗುವುದು ಮುಖ್ಯವಾಗಿತ್ತು. ಅದು ಹೇಗೆ ಗುಣವಾಗುತ್ತದೆ, ಜೇನುತುಪ್ಪದಲ್ಲಿರುವ ಯಾವ ರಾಸಾಯನಿಕವು ಗುಣಪಡಿಸುತ್ತದೆ– ಇತ್ಯಾದಿ ವಿಚಾರಗಳ ಬಗ್ಗೆ ಅವರು ಯೋಚಿಸುತ್ತಿರಲಿಲ್ಲ.

ಆಯುರ್ವೇದ: ಆಯುರ್ವೇದವು ವೇದಗಳಷ್ಟೇ ಪ್ರಾಚೀನವಾದದ್ದು. ಚರಕಸಂಹಿತೆ ಹಾಗೂ ಸುಶ್ರುತ ಸಂಹಿತೆ ಆಯುರ್ವೇದದ ಪ್ರಮಾಣ ಗ್ರಂಥಗಳು. ಆಯುರ್ವೇದ ಗ್ರಂಥಗಳು ಈಜಿಪ್ಷಿಯನ್ ವೈದ್ಯರಿಗಿಂತ ಒಂದು ಹೆಜ್ಜೆ

ಮುಂದೆಹೋದವು. ಜೇನುತುಪ್ಪವು 'ಹೇಗೆ' ಗುಣಪಡಿಸುತ್ತದೆ? ಯಾವ ಸಮಯದಲ್ಲಿ ಜೇನುತುಪ್ಪವನ್ನು ಹಚ್ಚುವುದರಿಂದ ಹೆಚ್ಚಿನ ಲಾಭವಿದೆ? ಯಾವ ಯಾವ ಸಂದರ್ಭದಲ್ಲಿ ಜೇನುತುಪ್ಪವು ಅಪಾಯವನ್ನು ಉಂಟುಮಾಡಬಹುದು ಎನ್ನುವುದರ ಬಗ್ಗೆಯೂ ಅವು ಬೆಳಕನ್ನು ಚೆಲ್ಲುತ್ತವೆ. ಜತೆಗೆ ಜೇನುತುಪ್ಪವು ಇಂಥ ಸಿಹಿ ಪದಾರ್ಥಗಳಿಗಿಂತ ಹೇಗೆ ಭಿನ್ನ ಎನ್ನುವುದರ ಬಗ್ಗೆಯೂ ಒಳನೋಟವನ್ನು ನೀಡುತ್ತವೆ.

ಚರಕಮಹರ್ಷಿಗಳು ಜೇನುತುಪ್ಪವನ್ನು ಕುರಿತು 'ರೂಕ್ಷಮ್, ಲಘು, ವಿಶದಂ, ಯೋಗವಾಹೀ ಚ ಮಧು' (ಚರಕಸಂಹಿತ, ಸೂತ್ರಸ್ಥಾನ, ಅನ್ನಪಾನಾವಿಧಿ) ಎಂದಿರುವರು. ರೂಕ್ಷ ಎಂದರೆ ಒಣಗುಣ ಅಥವಾ ಹೀರುವಗುಣ, ಲಘು ಎಂದರೆ ಸುಲಭವಾಗಿ ಜೀರ್ಣವಾಗುವಂಥದ್ದು, ವಿಶದಂ ಎಂದರೆ ಸ್ವಚ್ಛ ಮತ್ತು ಶುದ್ಧೀಕರಿಸುವ ಹಾಗೂ ಯೋಗವಾಹೀ ಎಂದರೆ ವೇಗವರ್ಧಕ ವಾಹಕ ಎಂದರ್ಥ. ವೇಗವರ್ಧಕ ವಾಹಕ ಎಂದರೆ, ಜೇನುತುಪ್ಪವು ತನ್ನ ಜತೆಯಲ್ಲಿರುವ ಇತರ ಔಷಧಿಗಳನ್ನು ಅವು ತಲುಪಬೇಕಾದ ಸ್ಥಳಕ್ಕೆ ತಲುಪಿಸುವ ಮಾರ್ಗದರ್ಶಕ ಎನ್ನಬಹುದು. ಒಬ್ಬ ಸಾರಥಿಯು ತನ್ನ ರಥವನ್ನು ಗಮ್ಯಸ್ಥಾನಕ್ಕೆ ತಲುಪಿಸುವಂತೆ, ಜೇನುತುಪ್ಪವು ಇತರ ಔಷಧೀಯ ವಸ್ತುಗಳನ್ನು ತಲುಪಿಸುತ್ತದೆ ಎನ್ನುವುದು ಯೋಗವಾಹೀ ಎಂಬ ಶಬ್ದದ ತಿರುಳು. ಆಧುನಿಕ ವೈಜ್ಞಾನಿಕ ಪರಿಭಾಷೆಯಲ್ಲಿ ಹೇಳುವುದಾದರೆ, ಜೇನುತುಪ್ಪವು ಒಂದು ಔಷಧದ ಜೈವಿಕ ಲಭ್ಯತೆಯನ್ನು (ಬಯೋ–ಅವೈಲಬಿಲಿಟಿ) ಹೆಚ್ಚಿಸುತ್ತದೆ ಎನ್ನಬಹುದು. ಈಜಿಪ್ಷಿಯನ್ ವೈದ್ಯರು ಜೇನುತುಪ್ಪವು ಚರ್ಮದ ಮೇಲೆ ಬೀರುವ ಪರಿಣಾಮವನ್ನು ಅಧ್ಯಯನ ಮಾಡುವುದರಲ್ಲಿ ತೃಪ್ತರಾದರೆ, ಆಯುರ್ವೇದ ವೈದ್ಯರು ದೇಹದ ಒಳಗೆ ಜೇನುತುಪ್ಪವು ಮಾಡಬಹುದಾದ ಕಾರ್ಯದ ಬಗ್ಗೆ ಅಧ್ಯಯನವನ್ನು ಮಾಡಿ, ಒಂದು

ಒಳನೋಟವನ್ನು ನೀಡಿದರು.

ಚರಕಮಹರ್ಷಿಗಳು ಮೂಲತಃ ದಾರ್ಶನಿಕರು ಹಾಗೂ ವೈದ್ಯರಾಗಿದ್ದರು. ಸುಶ್ರುತ ಮಹರ್ಷಿಗಳು ಶಸ್ತ್ರವೈದ್ಯರಾಗಿದ್ದ ಕಾರಣ, ಎಲ್ಲವನ್ನು ರಕ್ತಮಾಂಸಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದರು. ಸುಶ್ರುತ ಮಹರ್ಷಿಗಳು ವಾಸಿಯಾಗದ ಗಾಯ–ವ್ರಣ, ಸುಟ್ಟಗಾಯ, ಸೋಂಕುಗ್ರಸ್ತ ಗಾಯಗಳಿಗೆ ಮಧು/ಜೇನುತುಪ್ಪವನ್ನು ಬಳಸುತ್ತಿದ್ದರು. ಮೊದಲು ಗಾಯದಲ್ಲಿರುವ ಮೃತಜೀವಕೋಶಗಳನ್ನೆಲ್ಲ ತೆಗೆದು ಸ್ವಚ್ಛಗೊಳಿಸುತ್ತಿದ್ದರು. ಆನಂತರ ಕೆಲವು ಮೂಲಿಕೆಗಳನ್ನು ಅರೆದು ಜೇನುತುಪ್ಪದಲ್ಲಿ ಬೆರೆಸಿ, ಅದನ್ನು ಗಾಯದ ಮೇಲೆ ಲೇಪಿಸುತ್ತಿದ್ದರು. ಗಾಯವು ಗುಣವಾಗುತ್ತಿತ್ತು. ಜೇನುತುಪ್ಪವನ್ನು ಗಾಯದ ಮೇಲೆ ಲೇಪಿಸಿದಾಗ ಅದು ಉರಿಯುವುದಿಲ್ಲ. ಬಿರುಕುಬಿಟ್ಟ ಚರ್ಮವನ್ನು ಜತೆಗೂಡಿಸುತ್ತದೆ. ಹೊಸ ಹೊಸ ಅಂಗಾಂಶವು ಹುಟ್ಟುವಂತೆ ಪ್ರಚೋದಿಸುತ್ತದೆ.

ಚರಕಮಹರ್ಷಿಗಳು ಮಧುವು ಯಾವಾಗ ವಿಷವಾಗಬಹುದು ಎನ್ನುವುದರ ಬಗ್ಗೆಯೂ ಮಾಹಿತಿಯನ್ನು ನೀಡಿರುವರು. ಜೇನುತುಪ್ಪವನ್ನು ಯಾವ ಕಾರಣಕ್ಕೂ ಬಿಸಿ ಮಾಡಬಾರದು. ಬಿಸಿ ಮಾಡಿದರೆ ಅದರ ಔಷಧೀಯ ಗುಣಗಳೆಲ್ಲ ನಾಶವಾಗುತ್ತವೆ, ಆಗ ಅದು ವಿಷಮಯವಾಗಬಹುದು ಎಂದಿರುವುದು ಗಮನೀಯ. ಇದರ ಬಗ್ಗೆ ಆಧುನಿಕ ವಿಜ್ಞಾನವು ಹೆಚ್ಚಿನ ಬೆಳಕನ್ನು ಚೆಲ್ಲಿದೆ. ಜೇನನ್ನು ಬಿಸಿಮಾಡಿದಾಗ, ಅದರೊಳಗೆ ಇರುವ ಉಪಯುಕ್ತ ಕಿಣ್ವಗಳು (ಎನ್‌ಜೈಮ್ಸ್) ನಾಶವಾಗುತ್ತವೆ. ಗ್ಲೂಕೋಸ್ ಆಕ್ಸಿಡೇಸ್ ತನ್ನ ಸ್ವಭಾವವನ್ನು ಕಳೆದುಕೊಳ್ಳುತ್ತದೆ. ಹೈಡ್ರೋಜನ್ ಪೆರಾಕ್ಸೈಡ್ ರಾಸಾಯನಿಕವಾಗಿ ವರ್ತಿಸಿ, ನೀರನ್ನು ಉತ್ಪಾದಿಸಿ, ಆಕ್ಸಿಜನ್ ಅನ್ನು ಬಿಡುಗಡೆ ಮಾಡಿ, ಶಾಖವನ್ನು ಹೊರಹರಿಸುತ್ತದೆ. ಆಗ ಹೈಡ್ರೋಜನ್ ಪೆರಾಕ್ಸೈಡ್ ತನ್ನ ಬ್ಯಾಕ್ಟೀರಿಯನಾಶಕ ಗುಣವನ್ನು ಕಳೆದುಕೊಳ್ಳುತ್ತದೆ.

ಗ್ರೀಕರು: ಈಜಿಪ್ಷಿಯನ್ ಸಂಸ್ಕೃತಿಯು ಅಳಿದು ಸುಮಾರು 2000 ವರ್ಷಗಳಾದ ಮೇಲೆ ಗ್ರೀಕ್ ಸಂಸ್ಕೃತಿಯು ಪ್ರವರ್ಧಮಾನಕ್ಕೆ ಬಂದಿತು. ಈ ಅವಧಿಯಲ್ಲಿ ಈಜಿಪ್ಷಿಯನ್ ಜ್ಞಾನಪ್ರವಾಹವು ನಿರಂತರವಾಗಿ ಮುಂದುವರಿಯಲಾಗದೆ, ಸಾಕಷ್ಟು ನಷ್ಟವಾಗಿ ಅಲ್ಪಸ್ವಲ್ಪ ಮಾತ್ರ ಗ್ರೀಕರಿಗೆ ಲಭಿಸಿತು. ಅವುಗಳಲ್ಲಿ ಜೇನುತುಪ್ಪದ ಔಷಧೀಯ ಗುಣಗಳೂ ಒಂದು. ಹಿಪ್ಪೋಕ್ರೇಟ್ಸ್ ಹಳೆಯ ಗಾಯಗಳನ್ನು ಗುಣಪಡಿಸಲು ಜೇನನ್ನು ಬಳಸಿದ. ಗಂಟಲ ಕಿರಿಕಿರಿ ಮತ್ತು ನೋವನ್ನು ನಿವಾರಿಸಲು ಜೇನುತುಪ್ಪವನ್ನು ಲೇಪಿಸಿದ. ರೋಮನ್ನರು ಯುದ್ಧಭೂಮಿಯಲ್ಲಿ ಸಂಭವಿಸಿದ ಗಾಯಗಳಿಗೆ ಅಲ್ಲಿಯೇ ಜೇನುತುಪ್ಪವನ್ನು ಲೇಪಿಸುವುದನ್ನು ಆರಂಭಿಸಿದರು. ಇಸ್ಲಾಮಿಕ್ ವೈದ್ಯನಾದ ಅವಿಸೆನ್ನ ತನ್ನ 'ದಿ ಕ್ಯಾನನ್ ಆಫ್ ಮೆಡಿಸಿನ್' ಎನ್ನುವ ಗ್ರಂಥದಲ್ಲಿ ಜೇನುತುಪ್ಪದ ಔಷಧೀಯ ಗುಣಗಳ ಬಗ್ಗೆ ವಿಸ್ತೃತವಾಗಿ ವರ್ಣಿಸಿದ್ದಾನೆ.

ಆಧುನಿಕತೆ: 19 ಮತ್ತು 20ನೆಯ ಶತಮಾನದಲ್ಲಿ ಆಧುನಿಕ ವೈದ್ಯಕೀಯವು ಪ್ರವರ್ಧಮಾನಕ್ಕೆ ಬಂದು ನಮ್ಮ ಅರಿವಿನ ಜಗತ್ತು ಹಿಗ್ಗುತ್ತಿರುವಂತೆಯೇ ಜೇನುತುಪ್ಪದ ಪಾರಂಪರಿಕ ಜ್ಞಾನವು ಹಿಂದೆ ಹಿಂದೆ ಸಾಗುತ್ತದೆ. ಸೂಕ್ಷ್ಮದರ್ಶಕವನ್ನು ಕಂಡುಹಿಡಿದೆವು. ಬ್ಯಾಕ್ಟೀರಿಯಗಳ ರೋಗಜನಕ ಲೋಕವನ್ನು ಅನಾವರಣ ಮಾಡಿದೆವು. ಒಂದು ರೋಗಕ್ಕೆ ಒಂದು ರೋಗಜನಕ ಕಾರಣ ಎಂಬ ಸಿದ್ಧಾಂತವನ್ನು ಮಂಡಿಸಿದೆವು. ಕ್ರಿಮಿಸ್ವಚ್ಛ ಪರಿಸರಕ್ಕೆ (ಸ್ಟೆರಿಲಿಟಿ) ಆದ್ಯತೆಯನ್ನು ನೀಡಿದೆವು. ಆ ರೋಗಜನಕಗಳನ್ನು ಕೊಲ್ಲಲು ಪ್ರತಿಜೈವಿಕ ಔಷಧಿಗಳನ್ನು ರೂಪಿಸಿದೆವು. ಇದನ್ನು ಕಂಡ ಬ್ಯಾಕ್ಟೀರಿಯಗಳು ತಿರುಗಿಬಿದ್ದವು. ನಾವು ಪ್ರಯೋಗಿಸುವ ಔಷಧಗಳನ್ನು ತಿಂದು ಬೆಳೆದು ರೋಗ ನಿರೋಧಕತೆಯನ್ನು (ಡ್ರಗ್ ರೆಸಿಸ್ಟನ್ಸ್) ಬೆಳೆಸಿಕೊಂಡವು. ಅವನ್ನು ನಿಗ್ರಹಿಸಲು ಪ್ರಬಲಾತಿಪ್ರಬಲ ಪ್ರತಿಜೈವಿಕಗಳನ್ನು ಸೃಜಿಸಲಾರಂಭಿಸಿದೆವು. ಈ ಕ್ಷಣಕ್ಕೂ ಬ್ಯಾಕ್ಟೀರಿಯ–ಮಾನವ ಸಂಗ್ರಾಮವು ನಿರಂತರವಾಗಿ ನಡೆಯುತ್ತಿದೆ.

ಅನಿಯಂತ್ರಿತ ಮಧುಮೇಹವು, ಕೆಲವರಲ್ಲಿ ಮಧುಮೇಹ ವ್ರಣಕ್ಕೆ (ಡಯಾಬಿಟಿಕ್ ಅಲ್ಸರ್) ಕಾರಣವಾಗುತ್ತದೆ. ಈ ವ್ರಣದಲ್ಲಿ ನಾನಾ ರೋಗಜನಕಗಳು ಸೇರಿಕೊಂಡಾಗ, ಅವುಗಳನ್ನು ಕೊಲ್ಲಲು ಲಭ್ಯ ಪ್ರತಿಜೈವಿಕಗಳು ವಿಫಲವಾಗುತ್ತವೆ. ಆಗ ವ್ರಣವು ಉಗ್ರವಾಗಿ ಒಂದು ಘಟ್ಟದಲ್ಲಿ ಅಂಗವನ್ನೇ ಛೇದಿಸಬೇಕಾದಂಥ ಸ್ಥಿತಿಯು ಬರಬಹುದು. ಹಾಗೆಯೇ ಸುಟ್ಟ ಗಾಯಗಳು ಸಹ! ಸುಟ್ಟಗಾಯಗಳೆಂದರೆ ಬ್ಯಾಕ್ಟೀರಿಯಗಳಿಗೆ ಹಬ್ಬ! ಇವುಗಳನ್ನು ನಿಗ್ರಹಿಸುವುದು ಮನುಕುಲಕ್ಕೆ ಒಂದು ದೊಡ್ಡ ಸವಾಲಾಗಿದೆ.

ಈ ಸಂದಿಗ್ಧ ಸಮಯದಲ್ಲಿ ವೈದ್ಯರು ಜೇನುತುಪ್ಪವನ್ನು ನೆನಪಿಸಿಕೊಂಡು, ಪ್ರಯೋಗಿಸಿದರು. ಪಾರಂಪರಿಕ ಔಷಧಗಳಲ್ಲಿ ನಂಬಿಕೆಯಿಲ್ಲದ ಆಧುನಿಕ ವೈದ್ಯಕೀಯ ತಜ್ಞರು ಬೆರಗಾದರು. ಆಧುನಿಕ ವೈದ್ಯಕೀಯ ವಿಜ್ಞಾನವು ಜೇನುತುಪ್ಪದ ಗುಣಗಳನ್ನು ವೈಜ್ಞಾನಿಕ ಪರಿಭಾಷೆಯಲ್ಲಿ ವಿವರಿಸಿತು.

ಅಸ್ಮಾಟಿಕ್ ಶಕ್ತಿ: ಜೇನುತುಪ್ಪವೆಂದರೆ ಶರ್ಕರಗಳ ಭಂಡಾರ. ಇದನ್ನು ಗಾಯಗಳ ಮೇಲೆ ಲೇಪಿಸಿದಾಗ, ಗಾಯದಲ್ಲಿರುವ ಬ್ಯಾಕ್ಟೀರಿಯಗಳ ಒಡಲಿನಲ್ಲಿರುವ ನೀರಿನಂಶವನ್ನು ಆಸ್ಮಾಟಿಕ್ ಬಲದಿಂದ ಹೊರಸೆಳೆಯುತ್ತವೆ. ಅವುಗಳಲ್ಲಿರುವ ನೀರಿನಂಶವೆಲ್ಲ ನಷ್ಟವಾದಾಗ ಅವು ಸಾಯುತ್ತವೆ.

ಹೈಡ್ರೋಜನ್ ಪೆರಾಕ್ಸೈಡ್ ಉತ್ಪಾದನೆ: ಇಂದಿಗೂ ವೈದ್ಯರು ಹಳೆಯ ಗಾಯಗಳನ್ನು ಸ್ವಚ್ಛಗೊಳಿಸಲು ಮೊದಲು ಅದನ್ನು ಹೈಡ್ರೋಜನ್ ಪೆರಾಕ್ಸೈಡಿನಿಂದ ಸ್ವಚ್ಛಗೊಳಿಸುವ ಪದ್ಧತಿಯಿದೆ. ನೇಸಂಟ್ ಆಕ್ಸಿಜನ್ ಬ್ಯಾಕ್ಟೀರಿಯಗಳನ್ನು ಕೊಲ್ಲುತ್ತದೆ. ಜೇನುತುಪ್ಪವನ್ನು ಗಾಯದ ಮೇಲೆ ಲೇಪಿಸಿದಾಗ, ಗಾಯದಲ್ಲಿರುವ ದ್ರವವು ಜೇನುತುಪ್ಪದ ಮೇಲೆ ವರ್ತಿಸಿ ಗ್ಲೂಕೋಸ್ ಆಕ್ಸಿಡೇಸ್ ಎಂಬ ಕಿಣ್ವವನ್ನು ಉತ್ಪಾದಿಸುತ್ತದೆ. ಇದು ಹೈಡ್ರೋಜನ್ ಪೆರಾಕ್ಸೈಡನ್ನು ಸಾವಕಾಶವಾಗಿ ಹಾಗೂ ನಿರಂತರವಾಗಿ ಉತ್ಪಾದಿಸುತ್ತದೆ. ಇದರ ನೇಸಂಟ್ ಆಕ್ಸಿಜನ್ ಬ್ಯಾಕ್ಟೀರಿಯಗಳನ್ನು ಕೊಲ್ಲುತ್ತದೆ.

ಆಮ್ಲೀಯತೆ: ಜೇನು ತುಪ್ಪದ ಆಮ್ಲೀಯತೆಯು 3.2–4.5 ನಡುವೆಯಿರುತ್ತದೆ. ಆಮ್ಲೀಯ ಪರಿಸರದಲ್ಲಿ ಬ್ಯಾಕ್ಟೀರಿಯಗಳು ಬೆಳೆಯುವುದಿಲ್ಲ.

ಸಸ್ಯಜನ್ಯರಾಸಾಯನಿಕಗಳು (ಫೈಟೋಕೆಮಿಕಲ್ಸ್): ಕೆಲವು ಹೂವುಗಳಿಂದ ಅಥವಾ ಕೆಲವು ಪ್ರದೇಶಗಳಿಂದ ಸಂಗ್ರಹವಾಗುವ ಜೇನುತುಪ್ಪದಲ್ಲಿ ವಿಶೇಷವಾದ ಸಸ್ಯ ರಾಸಾಯನಿಕಗಳಿರುತ್ತವೆ. ಉದಾಹರಣೆಗೆ ನ್ಯೂಜಿಲೆಂಡಿನ ಮನುಕಾ ಜೇನಿನಲ್ಲಿ ಮೀಥೈಲ್ ಗ್ಲಯಾಕ್ಸಾಲ್ ಮತ್ತು ಫ್ಲೇವನಾಯ್ಡುಗಳಿರುತ್ತವೆ. ಇವು ನೇರವಾಗಿ ಬ್ಯಾಕ್ಟೀರಿಯಗಳನ್ನು ಕೊಲ್ಲುತ್ತವೆ.

ಜೈವಪೊರೆಯ ವಿನಾಶ: ಬ್ಯಾಕ್ಟೀರಿಯಗಳು ತಮ್ಮ ಸುತ್ತಲೂ ಬಲವಾದ ಲೋಳೆ ಪದರದ ಕೋಟೆಯನ್ನು ಕಟ್ಟಿಕೊಂಡು ಸುರಕ್ಷಿತವಾಗಿರಲು ಬಯಸುತ್ತವೆ. ಈ ಲೋಳೆಕೋಟೆಯನ್ನು ಭೇದಿಸಿ ಬ್ಯಾಕ್ಟೀರಿಯಗಳನ್ನು ಕೊಲ್ಲುವ ಔಷಧಿಗಳು ಕಡಿಮೆ. ಆದರೆ ಜೇನುತುಪ್ಪವು ಈ ಲೋಳೆಕೋಟೆಯೇ ನಿರ್ಮಾಣವಾಗದಂತೆ ಛಿದ್ರಗೊಳಿಸುತ್ತದೆ.

ಉಪಸಂಹಾರ: ಜೇನುತುಪ್ಪವು ಪ್ರಕೃತಿಯ ಸರ್ವಶ್ರೇಷ್ಠ ಆಹಾರ ಮತ್ತು ಔಷಧ. ಜೇನುನೊಣಗಳು ಅಪಾರ ಪರಿಶ್ರಮದಿಂದ ನಿರ್ಮಿಸುವ ತಮ್ಮ ಆಹಾರವನ್ನು ನಾವು ಕೊಳ್ಳೆ ಹೊಡೆಯುತ್ತೇವೆ. ಮನುಷ್ಯನು ಏನೆಲ್ಲವನ್ನು ಕೃತಕವಾಗಿ ತಯಾರಿಸಿದ್ದರೂ, ಜೇನನ್ನು ಅವನಿಂದ ತಯಾರಿಸಲು ಸಾಧ್ಯವಾಗಿಲ್ಲ. ಕೊನೆಯ ಪಕ್ಷ ಜೇನುನೊಣಗಳಿಗೆ ಅಗತ್ಯವಾದ ಹೂವಿನ ಗಿಡಗಳನ್ನಾದರೂ ಬೆಳೆಸೋಣ.

ವಿವೇಕ ಮರೆದ ಉಶೀನರ

● ವಿದ್ಯಾಶಂಕರ ಶರ್ಮ, ಬೆಂಗಳೂರು

ಕೆಲವೊಮ್ಮೆ ನಮಗೆ ಎರಡು ಆಯ್ಕೆಗಳ ನಡುವೆ ಸಂದಿಗ್ಧತೆ ಬರುವುದುಂಟು, ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದು ತೋಚುವುದೇ ಇಲ್ಲ. ಇಂಥ ಸಂದರ್ಭಗಳಲ್ಲಿ ನಮಗೆ ಅನುಕೂಲಕರವಾದ ದಾರಿಯನ್ನು ಆರಿಸಿಕೊಳ್ಳುವ ಇರಾದೆಯನ್ನೇ ಹೊಂದಿರುತ್ತೇವೆ. ನ್ಯಾಯ ಮತ್ತು ಅನ್ಯಾಯಗಳ ವಿವೇಕವನ್ನು ಅಷ್ಟಾಗಿ ಮಾಡಲಾರೆವು. ಪ್ರಾಣಭಿಕ್ಷೆಯನ್ನು ಬೇಡಿಬಂದ ಪಾರಿವಾಳ ಮತ್ತು ಅದನ್ನು ಆಹಾರವಾಗಿ ಮಾಡಿಕೊಳ್ಳಲು ಇಚ್ಛಿಸಿದ ಗಿಡುಗದ ನಡುವೆ 'ಉಶೀನರ' ಎಂಬ ರಾಜನ ವರ್ತನೆ ನಿಜಕ್ಕೂ ನಮ್ಮ ಗೌರವಕ್ಕೆ ಪಾತ್ರವಾಗುತ್ತದೆ. ಯಾಗವೊಂದನ್ನು ಮಾಡಿ ಇಂದ್ರನಿಗಿಂತಲೂ ಶ್ರೇಷ್ಠನಾದವನೆಂದು ಕೀರ್ತಿ ಪಡೆದಿದ್ದ ಉಶೀನರ. ಅವನ ಯೋಗ್ಯತೆಯನ್ನು ಪರೀಕ್ಷಿಸಲು ಇಂದ್ರನು ಗಿಡುಗವಾಗಿಯೂ, ಅಗ್ನಿಯು ಪಾರಿವಾಳವಾಗಿಯೂ ಉಶೀನರನ ಯಾಗಭೂಮಿಯ ಬಳಿ ಬಂದರು.

ಪಾರಿವಾಳವು ಭಯಗೊಂಡು ಉಶೀನರನ ತೊಡೆಯ ಮೇಲೆ ಕುಳಿತುಕೊಂಡಿತು. ಆಗ ಗಿಡುಗವು ಉಶೀನರನಿಗೆ ತನ್ನ ಆಹಾರವನ್ನು ಬಿಡುವಂತೆಯೂ, ಪಾರಿವಾಳಗಳು ಬಹುಕಾಲದಿಂದಲೂ ಗಿಡುಗಗಳ ಆಹಾರವಾಗಿವೆ ಎಂದೂ ಹೇಳಿತು. ಗಿಡುಗದ ಮಾತಿಗೆ ಉಶೀನರನು, ''ರಾಜನಾದ ನನ್ನಲ್ಲಿ ಆಶ್ರಯ ಕೇಳಿ ಬಂದವರಿಗೆ ರಕ್ಷಣೆ ನೀಡುವುದು ಧರ್ಮ; ಪ್ರಾಣಭಿಕ್ಷೆ ಕೇಳಿ ಬಂದವರಿಗೆ ಸಹಾಯ ಮಾಡದಿದ್ದರೆ, ನನಗೆ ಗುರುತರವಾದ ದೋಷವು ಬರುವುದು. ಪಾರಿವಾಳದ ಬದಲಾಗಿ ಬೇರೆ ಯಾವುದಾದರೂ ಪ್ರಾಣಿಯನ್ನು ಆಹಾರವಾಗಿ ಸ್ವೀಕರಿಸು'' ಎಂದನು. ಆದರೆ ಗಿಡುಗವು, ''ನನಗೆ ಬೇರೆ ಯಾವ ಪ್ರಾಣಿಯ ಆಹಾರವೂ ಬೇಡ, ಪಾರಿವಾಳವೇ ಬೇಕು; ಆಹಾರ ಧರ್ಮ ಮತ್ತು ರಾಜ ಧರ್ಮ ಈ ರೀತಿ, ಎರಡು ಧರ್ಮಗಳ ನಡುವೆ ಪ್ರಶ್ನೆ ಬಂದಾಗ, ಯಾವ ಧರ್ಮದಿಂದ ಹೆಚ್ಚು ತೊಂದರೆ ಆಗುವುದಿಲ್ಲವೋ ಅದನ್ನು ಅನುಸರಿಸಬೇಕು'' ಎಂದಿತು.

ವಾದವು ಮುಂದುವರಿಯಿತು. ಉಶೀನರನು ಪಾರಿವಾಳವನ್ನು ಕೊಡಲು ಒಪ್ಪದೆ, ''ನಾನು ಶಿಬಿ ವಂಶದ ರಾಜ, ಹಾಗಾಗಿ ನಿನ್ನನ್ನು ಬರಿಗೈಯಲ್ಲಿ ಕಳಿಸಲಾರೆ. ಆಹಾರವಾಗಿ ಬೇರೆ ಏನನ್ನಾದರೂ ಕೇಳು'' ಎಂದನು. ಆಗ ಗಿಡುಗವು, ''ಪಾರಿವಾಳದ ತೂಕಕ್ಕೆ ಸಮನಾದ ನಿನ್ನ ಮಾಂಸವನ್ನೇ ಕೊಡುವುದಾದರೆ ನನಗೆ ಒಪ್ಪಿಗೆ'' ಎಂದಿತು. ಆಗ ಉಶೀನರನು ಪಾರಿವಾಳವನ್ನು ತಕ್ಕಡಿಯಲ್ಲಿಟ್ಟು ತನ್ನ ದೇಹದ ಒಂದು ಭಾಗದ ಮಾಂಸವನ್ನು ಇನ್ನೊಂದು ತಕ್ಕಡಿಯಲ್ಲಿಟ್ಟನು. ಆದರೆ ಪಾರಿವಾಳದ ತೂಕಕ್ಕೆ ಅದು ಸಮನಾಗಲಿಲ್ಲ. ಉಶೀನರನು ತನ್ನ ದೇಹದಿಂದ ಎಷ್ಟು ಮಾಂಸವನ್ನು ಹಾಕಿದರೂ ಪಾರಿವಾಳದ ತೂಕಕ್ಕೆ ಅದು ಸಮನಾಗಲಿಲ್ಲ. ಇದನ್ನು ನೋಡಿ ಉಶೀನರನು ತಾನೇ ತಕ್ಕಡಿಯಲ್ಲಿ ಕುಳಿತುಕೊಂಡನು. ಅವನ ಈ ನಡೆಯಿಂದ ಗಿಡುಗ ಮತ್ತು ಪಾರಿವಾಳದ ರೂಪದಲ್ಲಿದ್ದ ಇಂದ್ರ ಮತ್ತು ಅಗ್ನಿ ಬಹು ಸಂತಸಗೊಂಡರು ಮತ್ತು ಅವನು ನಿಜವಾಗಿಯೂ ಶ್ರೇಷ್ಠನು ಎಂಬುದನ್ನು ಒಪ್ಪಿಕೊಂಡರು. ಬಹು ಇಕ್ಕಟ್ಟಿನ ಪ್ರಸಂಗದಲ್ಲೂ ತನ್ನ ಸ್ವಾರ್ಥವನ್ನು ಮರೆತು ರಾಜನಾಗಿ ತಾನು ಅನುಸರಿಸಬೇಕಾದ ಧರ್ಮವನ್ನು ಕಾಪಾಡಿಕೊಂಡ ಉಶೀನರನ ವೃತ್ತಾಂತವು ನಮಗೆ ಹೇಳುವ ನೀತಿ ಅಪಾರ. ನಮ್ಮ ಕರ್ತವ್ಯಪಾಲನೆಯು ಸ್ವಾರ್ಥವನ್ನು ಮೀರಿರಬೇಕು, ಬಹು ಸಂಕಷ್ಟದಲ್ಲಿ ಇರುವವರಿಗೆ ಸಹಾಯ ಮಾಡುವಾಗ ನಮಗೆ ಪ್ರಯಾಸವಾದರೂ ಸಹಿಸಿಕೊಳ್ಳಬೇಕು ಎಂಬ ಉದಾತ್ತ ಸಂದೇಶಗಳನ್ನು ಉಶೀನರನ ಕಥೆ ನಮಗೆ ಹೇಳುತ್ತದೆ.

ಮಿನಿಕಥೆ

ನಾಯಿಪಾಡು

● ಪದ್ಮಲತಾ ಮೋಹನ್, ಬೆಂಗಳೂರು

ಆತ ಇರುವುದು ಮಹಾನಗರಿಯ ಅರಮನೆಯಂಥ ಬಂಗಲೆಯಲ್ಲಿ. ಅದರಲ್ಲಿ ಹತ್ತಾರು ಕೋಣೆಗಳು. ಆತನಿಗೆ ಪ್ರಾಣಿ–ಪಕ್ಷಿಗಳು ಅಂದರೆ ಬಹಳ ಪ್ರೀತಿ. ಅವುಗಳಿಗಾಗಿ ಆತನ ಮನೆಯಲ್ಲಿ ವಿಶೇಷ ವ್ಯವಸ್ಥೆಯಿತ್ತು. ಹಲವು ಜಾತಿನಾಯಿಗಳನ್ನು ಕೂಡ ಆತ ಸಾಕುತ್ತಿದ್ದ, ಅವುಗಳಿಗಾಗಿ ಪ್ರತ್ಯೇಕವಾದ ಗೂಡಿನ ವ್ಯವಸ್ಥೆ ಮಾಡಲಾಗಿತ್ತು. ಬೀದಿನಾಯಿಗಳಿಗೂ ಆತನದು ವಿಶೇಷವಾದ ಆರೈಕೆ. ಆತನ ಈ ಕೆಲಸವನ್ನು ಗುರುತಿಸಿ ಹಲವು ಸಂಸ್ಥೆಗಳು ಅವನಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಿವೆ. ದೂರದ ಹಳ್ಳಿಯಲ್ಲಿ ಚಿಕ್ಕದಾದ ಗುಡಿಸಲು, ಅದರೊಳಗೆ ಎರಡು ಮುದಿಜೀವಗಳು. ಹಸಿವಾದಾಗ ಗಂಜಿ ತಿನ್ನುವುದು, ದಣಿವಾದಾಗ ನಿದ್ರಿಸುವುದು ಇಷ್ಟೇ ಅವುಗಳ ಕೆಲಸ. ಆದರೆ ಅದಕ್ಕಿಂತ ಮುಖ್ಯವಾಗಿ, ಪಾಪ! ಆ ಮುದಿಜೀವಗಳು ಪ್ರಾಣವನ್ನು ಕೈಯಲ್ಲಿಟ್ಟುಕೊಂಡು ಕಾಯುತ್ತಿವೆ– ತಮ್ಮ ಮಗನು ಅರಮನೆಯಂಥ ಆ ಬಂಗಲೆಯಿಂದ ತಾವಿದ್ದಲ್ಲಿಗೆ ಬಂದು ಪ್ರೀತಿಯಿಂದ ನಾಲ್ಕು ಮಾತು ಆಡಲಿ ಅಂತ....

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಬೆಟ್ಟದ ತುದಿಯು ತಲೆಯ ನಡುವೆಯಿದೆ (3)
3. ಕಾಡಿನ ಮಧ್ಯಭಾಗ ಎಂದರ್ಥ (4)
5. ಪರಿಣಯದ ದಿನ ಸಿದ್ಧವಾದ ವರ (4)
7. ಯುದ್ಧದ ಸಮಯದಲ್ಲಿ ಆಯುಧಗಳ ಏಟು ತಪ್ಪಿಸಲು ಬಳಸಿದ ಸಾಧನ (3)
8. ದಿನವೂ ರಾಜನನ್ನು ಭೇಟಿಯಾಗುವ ಮಂತ್ರಿ (3)
10. ಮನೆ ಅಥವಾ ವಸ್ತುವೊಂದನ್ನು ಬೇರೆಯವರಿಗೆ ಕೊಟ್ಟಾಗ ಪಡೆಯುವ ಹಣ (3)
12. ಹಿಂದಿನ ಕಾಲದ ಶಿಕ್ಷಣಕೇಂದ್ರ (4)
14. ದಿಕ್ಕುತಪ್ಪಿಸಿ ಬಂದಿರುವ ಕಾಯಿಪಲ್ಲೆ (4)
16. ಕತೆಯಲ್ಲ, ಪದ್ಯ (3)
18. ಕಾಲುವೆಯ ಬಳಿ ಕಂಡಳು ಸುಂದರಿ (3)
19. ಹೂವುಗಳಿಂದ ಭಟ್ಟಿಯಿಳಿಸಿ ತೆಗೆದ ಸುಗಂಧದ್ರವ್ಯ (3)
20. ಹರಿದಾರಿಯಲ್ಲಿ ನೀಡಿದ ಒಪ್ಪಿಗೆ ಪತ್ರ (4)
21. ಈ ಆಟದ ಚಕ್ರವು ಗಾಳಿಗೆ ತಿರುಗುತ್ತದೆ (4)
22. ನೆರಳು ಕಂಡರೂ ಕೋಪಗೊಳ್ಳು (3)

ಮೇಲಿಂದ ಕೆಳಕ್ಕೆ

2. ಚೆಲುವೆಯಾದ ಹೆಂಡತಿ (3)
3. ದೊಡ್ಡ ಪಟ್ಟಣದಲ್ಲಿ ಸಿಕ್ಕಿದ ಒಡವೆ (2)
4. ಆಗಸದಲ್ಲಿ ಪ್ರಯಾಣಿಸಲು ಇದನ್ನು ಬಳಸುತ್ತೇವೆ (3)
6. ಉಪ್ಪರಿಗೆ ಅಥವಾ ಅಂತಸ್ತು (3)
7. ಮೋಡಗಳ ಘರ್ಷಣೆಯಿಂದ ಉಂಟಾದ ಸದ್ದು (3)
9. ವಾರದ ನಡುವೆ ಸಿಲುಕಿರುವ ಕಪಿ (3)
10. ಲಾಂಗೂಲದೊಂದಿಗೆ ಬಂದಿರುವ ಹುಡುಗ (3)
11. ತಲೆಕೆಳಗಾಗಿರುವ ಸುಂಕ (3)
13. ತಲೆಗೆ ಸುತ್ತಿಕೊಳ್ಳುವ ಮುಂಡಾಸು (3)
15. ಬಾಗಿಲಿಗೆ ಕಟ್ಟುವ ಚಿಗುರು (3)
17. ಪ್ರೀತಿಪಾತ್ರರ ಅಗಲಿಕೆಯಿಂದ ಉಂಟಾದ ನೋವು (3)
18. ಸೊಗಸಾಗಿ ಅಥವಾ ಅಂದವಾಗಿ ಎಂದರ್ಥ (3)
19. ಆಕೆ ಮಾಡಿಕೊಂಡ ಮನವಿ 3
20. ತೋಳು ಅಥವಾ ಬಾಹು (2)

ಸರಿಯುತ್ತರಗಳು

[illegible]

ಇರುವೆಗಳಿಂದ ಮದ್ದು ಮಾಡಿಸಿಕೊಳ್ಳುವ ಕಾಗೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಪ್ರಕೃತಿಯ ಅಖಾಡದಲ್ಲಿ ಬದುಕುಳಿಯುವುದು ಎಂದರೆ ಕೇವಲ ಓಡುವುದು ಅಥವಾ ಬೇಟೆಯಾಡುವುದು ಮಾತ್ರವಲ್ಲ; ಅದು ಕೆಲವೊಮ್ಮೆ ಅತ್ಯಂತ ನಿಗೂಢ ಮೌನದಿಂದಲೂ ಕೂಡಿರುತ್ತದೆ.

ಒಂದು ಹಳೆಯ ಮರದ ಕೊಂಬೆಯ ಮೇಲೆ ಕಾಗೆಯೊಂದು ಭಾರವಾದ ಮನಸ್ಸಿನಿಂದ ಕುಳಿತಿದೆ. ಅದರ ರೆಕ್ಕೆಗಳು ಎಂದಿನಂತೆ ಚುರುಕಾಗಿಲ್ಲ. ರೆಕ್ಕೆಗಳ ಒಳಗೆ ಕಣ್ಣಿಗೆ ಕಾಣದ ನೂರಾರು ಪರಾವಲಂಬಿ ಕ್ರಿಮಿಗಳು ಅದರ ಚರ್ಮವನ್ನು ಕಚ್ಚುತ್ತಿವೆ. ಆ ತುರಿಕೆ, ಆ ಕಿರಿಕಿರಿ ಅಸಹನೀಯವಾಗಿದೆ. ಆದರೆ, ಕಾಗೆ ಗಾಬರಿಯಾಗುವುದಿಲ್ಲ, ದಿಕ್ಕಾಪಾಲಾಗಿ ಹಾರುವುದಿಲ್ಲ. ಬದಲಿಗೆ, ತನ್ನ ಪೂರ್ವಜರಿಂದ ಬಳುವಳಿಯಾಗಿ ಬಂದ ಜ್ಞಾನದಂತೆ ಅದು ಮೌನವಾಗಿ ಕೆಳಕ್ಕೆ ಇಳಿಯುತ್ತದೆ.

ಅದು ಬಂದು ಕೂರುವುದು ಒಂದು ಇರುವೆಯ ಗೂಡಿನ ಮುಂದೆ. ಇತರ ಪ್ರಾಣಿಗಳಿಗೆ ಇರುವೆಯ ಗೂಡು ಎಂದರೆ ಅಪಾಯದ ತಾಣ, ಆದರೆ ಈ ಕಾಗೆಗೆ ಅದು ಒಂದು ಜೀವಂತ ಔಷಧಾಲಯ.

ಕಾಗೆ ನೆಲದ ಮೇಲೆ ಕುಳಿತು ತನ್ನ ರೆಕ್ಕೆಗಳನ್ನು ಅಗಲವಾಗಿ ಹರಡುತ್ತದೆ. ನೂರಾರು ಇರುವೆಗಳು ತನ್ನ ದೇಹದ ಮೇಲೆ ಹರಿದಾಡಲು ಅದು ಅವಕಾಶ ಮಾಡಿಕೊಡುತ್ತದೆ. ಮೇಲ್ನೋಟಕ್ಕೆ ಇದು ಕಾಗೆಯ ಸೋಲಿನಂತೆ ಕಂಡರೂ, ವಾಸ್ತವದಲ್ಲಿ ಇದು ಅದರ ಅದ್ಭುತ ಚಿಕಿತ್ಸಾ ತಂತ್ರ. ವಿಜ್ಞಾನಿಗಳು ಇದನ್ನು 'ಆಂಟಿಂಗ್' (Anting) ಎಂದು ಕರೆಯುತ್ತಾರೆ.



ಇರುವೆಗಳು ರಕ್ಷಣೆಗಾಗಿ ತಮ್ಮ ದೇಹದಿಂದ 'ಫಾರ್ಮಿಕ್ ಆಸಿಡ್' ಎಂಬ ರಾಸಾಯನಿಕವನ್ನು ಹೊರಹಾಕುತ್ತವೆ. ಈ ಆಮ್ಲವು ಕಾಗೆಯ ಪಾಲಿಗೆ ಅದ್ಭುತ ಸಂಹಾರಕ. ರೆಕ್ಕೆಗಳ ನಡುವೆ ಅಡಗಿರುವ ಬ್ಯಾಕ್ಟೀರಿಯಾ, ಶಿಲೀಂಧ್ರ, ಮತ್ತು ಕ್ರಿಮಿಗಳನ್ನು ಈ ಆಮ್ಲವು ನಾಶಪಡಿಸುತ್ತದೆ. ಕಾಗೆ ಎಷ್ಟು ಜಾಣ ಎಂದರೆ, ಕೆಲವೊಮ್ಮೆ ತನ್ನ ಕೊಕ್ಕಿನಿಂದ ಇರುವೆಗಳನ್ನು ಹಿಡಿದು, ರೆಕ್ಕೆಗಳ ಕೆಳಗೆ ಎಲ್ಲಿ ಹೆಚ್ಚು ತುರಿಕೆ ಇದೆಯೋ ಅಲ್ಲಿ ಸಾವಕಾಶವಾಗಿ ಉಜ್ಜಿಕೊಳ್ಳುತ್ತದೆ. ಇದು ಒಬ್ಬ ತಾಯಿ ಮಗುವಿನ ಗಾಯಕ್ಕೆ ಮದ್ದು ಹಚ್ಚುವಷ್ಟೇ ನಾಜೂಕಾದ ಕ್ರಿಯೆ.

ಕೆಲವೊಮ್ಮೆ ಬದುಕಿನಲ್ಲಿ ನಮಗೆ ನೋವಾದಾಗ, ಕಿರಿಕಿರಿಯಾದಾಗ ನಾವು ಮನುಷ್ಯರಿಂದ ದೂರ ಓಡುತ್ತೇವೆ. ಆದರೆ ಈ ಕಾಗೆ ಕಲಿಸುವ ಪಾಠವೆಂದರೆ ಗುಣವಾಗಬೇಕೆಂದರೆ ನಾವು ಕೆಲವೊಮ್ಮೆ ಅಷ್ಟೇ ವಿನಯದಿಂದ ನಮಗಿಂತ ಸಣ್ಣವರ ಬಳಿ ಹೋಗಬೇಕಾಗುತ್ತದೆ. ತಾನು ಬಲಿಷ್ಠ ಪಕ್ಷಿ ಎಂಬ ಅಹಂಕಾರ ತೊರೆದು, ಪುಟ್ಟ ಇರುವೆಗಳ ಮುಂದೆ ಶರಣಾದಾಗ ಮಾತ್ರ ಅದಕ್ಕೆ ವಿಮುಕ್ತಿ ಸಿಗುತ್ತದೆ.

ಕಾಗೆಗೆ ರಸಾಯನಶಾಸ್ತ್ರ ತಿಳಿದಿಲ್ಲ, ಅದಕ್ಕೆ ಯಾವುದೇ ವೈದ್ಯಕೀಯ ಪದವಿ ಇಲ್ಲ. ಆದರೆ ಪ್ರಕೃತಿಯ ಜತೆ ಹೇಗೆ ಸಮತೋಲನದಿಂದ ಬದುಕಬೇಕು ಎಂಬ ಮೌನಜ್ಞಾನ ಅದಕ್ಕಿದೆ. ಈ ಜ್ಞಾನವು ಯಾವುದೇ ಪುಸ್ತಕದಲ್ಲಿ ಬರೆದಿಲ್ಲ, ಅದು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಕೇವಲ ವೀಕ್ಷಣೆಯ ಮೂಲಕ ಹರಿದುಬಂದಿದೆ.

ಚಿಕಿತ್ಸೆ ಮುಗಿದ ನಂತರ, ಕಾಗೆ ತನ್ನ ರೆಕ್ಕೆಗಳನ್ನು ಒಮ್ಮೆ ಜೋರಾಗಿ ಕೊಡವುತ್ತದೆ. ಈಗ ಅದರ ಮೈಮೇಲಿದ್ದ ಕಿರಿಕಿರಿ ಮಾಯವಾಗಿದೆ, ಭಾರ ಇಳಿದಿದೆ ಎಂದರ್ಥ. ಅದು ಒಮ್ಮೆ ಜೋರಾಗಿ 'ಕಾವ್ ಕಾವ್' ಎಂದು ಕೂಗಿ ನೀಲಾಕಾಶಕ್ಕೆ ಜಿಗಿಯುತ್ತದೆ. ಕಾಗೆ ಇದನ್ನು ಔಷಧ ಎಂದು ಕರೆಯುವುದಿಲ್ಲ, ಆದರೆ ಅದು ಕೆಲಸ ಮಾಡುತ್ತದೆ. ಬದುಕಿನಲ್ಲಿ ಅನೇಕ ತೊಂದರೆಗಳು ಹೇಳಿ ಬರುವುದಿಲ್ಲ, ಕೆಲವೊಮ್ಮೆ ಅವುಗಳನ್ನು ಹೇಳಿಕೊಂಡರೂ ಬೇರೆಯವರಿಗೆ ಅರ್ಥವಾಗುವುದಿಲ್ಲ. ತಮಾಷೆ ಎಂದರೆ ಅವರಿಗೆ ಅದು ತೊಂದರೆ ಎಂದೇ ಅನಿಸುವುದಿಲ್ಲ. ಅಂಥ ಸಮಯದಲ್ಲಿ ನಮ್ಮ ತೊಂದರೆಗಳಿಗೆ ನಾವೇ ಪರಿಹಾರವನ್ನು ಕಂಡುಕೊಳ್ಳಬೇಕು. ಎಲ್ಲಕ್ಕೂ ಕೆಲವೊಮ್ಮೆ ಒಂದೇ ರೀತಿಯ ಪರಿಹಾರ ಇರುವುದಿಲ್ಲ. ಬದುಕಿನ ಪ್ರಶ್ನೆಪತ್ರಿಕೆಗೆ ನಾವು ಉತ್ತರ ಕಂಡುಕೊಳ್ಳುವಷ್ಟರಲ್ಲಿ, ಪ್ರಶ್ನೆಪತ್ರಿಕೆಯೇ ಬದಲಾಗಿ ಹೋಗಿರುತ್ತದೆ. ಆದ್ದರಿಂದಲೇ ಸಮಸ್ಯೆ ಬಂದಾಗ ಧೃತಿಗೆಡದೆ ನಾವು ಎಲ್ಲಿ ಸಹಾಯ ಕೇಳಬೇಕು ಮತ್ತು ಹೇಗೆ ತಾಳ್ಮೆಯಿಂದ ಇರಬೇಕು ಎಂದು ತಿಳಿದುಕೊಂಡರೆ, ಬದುಕು ಸಹನೀಯವಾಗುತ್ತದೆ.

ಅಡಕೆಮರಕ್ಕೆ ಸುಣ್ಣ ಬಳಿಯೋದೇಕೆ ಗೊತ್ತೇ?

● ಪುರುಷೋತ್ತಮ್ ವೆಂಕಿ, ಚಿತ್ರದುರ್ಗ

ಇನ್ನೇನು ಬೇಸಗೆ ಸಮೀಪಿಸುತ್ತಿದೆ. ಜನವರಿ ತಿಂಗಳಲ್ಲಿಯೇ ತಾಪಮಾನ ಏರಿಕೆಯಾಗುತ್ತಿದೆ. ಅತಿಯಾದ ಬಿಸಿಲಿನಿಂದ ಅಡಕೆ ಮರಗಳ ಇಳುವರಿ ಕೂಡಾ ಕುಂಠಿತವಾಗುವ ಸಾಧ್ಯತೆಗಳು ಜಾಸ್ತಿಯಾಗಿದ್ದು, ಬಿಸಿಲಿನಿಂದ ಅಡಕೆಯನ್ನು ರಕ್ಷಿಸಿಕೊಳ್ಳಲು ರೈತರು ಎಲ್ಲಾ ರೀತಿಯ ಕಸರತ್ತುಗಳನ್ನು ಮಾಡುತ್ತಿದ್ದಾರೆ. ಈ ಪೈಕಿ, ಅಡಕೆ ಕಾಂಡಗಳಿಗೆ ಸುಣ್ಣ ಬಳಿಯುವುದು ಹೆಚ್ಚು ಪರಿಣಾಮಕಾರಿ ಎನ್ನುವುದು ಬಹುತೇಕ ರೈತರ ಅಭಿಪ್ರಾಯ. ಮಲೆನಾಡು, ಕರಾವಳಿ ಭಾಗದಲ್ಲಿ ಮಾತ್ರವಲ್ಲದೇ ಬಯಲುಸೀಮೆ ಭಾಗದಲ್ಲೂ ಇತ್ತೀಚೆಗೆ ಅತಿ ಹೆಚ್ಚಾಗಿ ಅಡಕೆಯನ್ನು ಬೆಳೆಯಲಾಗುತ್ತಿದ್ದು, ಬೇಸಗೆ ಕಾಲ ಸಮೀಪಿಸುವ ಮುನ್ನವೇ ಅದರ ಮರಗಳಿಗೆ ಸುಣ್ಣ ಬಳಿದು ಅವು ತಂಪಾಗಿರುವಂತೆ ನೋಡಿಕೊಳ್ಳಲಾಗುತ್ತಿದೆ. ಆ ಮೂಲಕ, ಆದಾಯಕ್ಕೆ ಯಾವುದೇ ಸಂಚಕಾರ ಒದಗದಂತೆ ಸೂಕ್ತ ರಕ್ಷಣೆ ನೀಡಲಾಗುತ್ತಿದೆ.

ಹೀಗೆ ಸುಣ್ಣ ಬಳಿಯವುದೇಕೆ ಎಂದು ನೋಡೋಣ ಬನ್ನಿ. ಅತಿಯಾದ ಮಳೆಯಿಂದ ಕೊಳೆರೋಗಕ್ಕೆ ತುತ್ತಾಗಿದ್ದ ಅಡಕೆ ಈಗ ತಾಪಮಾನದ ಹೊಡೆತಕ್ಕೆ ಸಿಲುಕಿದೆ. ಆದ್ದರಿಂದ ಕೆಲ ರೈತರು ಒಣಗಿಬಿದ್ದಿರುವ ಸೋಗೆ, ಕುರುಚಲು ಗಿಡಗಳನ್ನು ಸೇರಿಸಿ ಅಡಕೆ ಮರಗಳಿಗೆ ನೆರಳು ಮಾಡುತ್ತಿದ್ದು, ಈ ವಿಧಾನದಿಂದ ಸಣ್ಣ ಗಿಡಗಳಿಗೆ ಸ್ವಲ್ಪ ಮಟ್ಟಿಗಿನ ತಾಪ ಕಡಿಮೆಯಾಗುತ್ತದೆ. ಆದರೆ 3ರಿಂದ 4 ವರ್ಷದ ಮರಗಳಿಗೆ ಸುಣ್ಣ

ಬಳಿಯುವುದರಿಂದ ಬಿಸಿಲಿನಿಂದ ರಕ್ಷಿಸಬಹುದು ಎನ್ನುವುದು ವೈಜ್ಞಾನಿಕವಾಗಿ ಕಂಡುಕೊಂಡಿರುವ ಮಾರ್ಗ.

ಬಿಳಿ ಬಣ್ಣಕ್ಕೆ ಸೂರ್ಯನ ಶಾಖವನ್ನು ಪ್ರತಿಫಲಿಸುವ ಗುಣವಿದೆ. ಹಾಗಾಗಿ ಬಿಸಿಲಿನ ಭರಾಟೆಯಿಂದ ಅಡಕೆ ಮರಗಳನ್ನು ರಕ್ಷಿಸಲು ಸುಣ್ಣ ಬಳಿಯಲಾಗುತ್ತದೆ. ಸುಣ್ಣವನ್ನು ಒಂದು ದಿನ ಮೊದಲೇ ನೀರಲ್ಲಿ ನೆನೆಸಿಟ್ಟು, ಮಾರನೇ ದಿನ ಮೈದಾಹಿಟ್ಟು, ಬೆಲ್ಲ, ಅಂಟು ಮಿಶ್ರಣದ ದ್ರಾವಣವನ್ನು ಸಿದ್ಧಪಡಿಸಿ ಕಾಂಡಗಳಿಗೆ ಬಳಿಯಲಾಗುತ್ತದೆ. ಹೀಗೆ ಬಳಿಯುವಾಗ ಸುಣ್ಣವು ಕೈಗೆ ಹಾಗೂ ಕಣ್ಣುಗಳಿಗೆ ತಾಗದಂತೆ ಎಚ್ಚರ ವಹಿಸಲಾಗುತ್ತದೆ. ಸುಣ್ಣ ಬಳಿಯುವುದರಿಂದ ಅಡಕೆ ಗಿಡ/ಮರಗಳ ಆಯುಷ್ಯ ಹಾಗೂ ಇಳುವರಿ ಹೆಚ್ಚುತ್ತದೆ. ಕ್ಯಾಲ್ಸಿಯಂ ಪೋಷಕಾಂಶವೂ ದೊರೆಯುವುದರಿಂದ ಕಾಂಡಗಳನ್ನು ರಕ್ಷಿಸಿಕೊಳ್ಳಬಹುದು.

ಸಮಾಚಾರ ಸಣ್ಣದಲ್ಲ

ಟಾಟಾ ಮಾಸ್ಟರ್ಸ್ ಚೆಸ್: ಗೆಲುವಿನ ಹಳಿಗೆ ಗುಕೇಶ್

ವಿಯ್ಕ್ ಆನ್ ಝೀ (ನೆದರ್ಲೆಂಡ್): ಸತತ ಎರಡು ಸೋಲುಗಳ ಬಳಿಕ ಪುಟದೆದ್ದ ವಿಶ್ವ ಚಾಂಪಿಯನ್ ಡಿ. ಗುಕೇಶ್ ಅವರು ಟಾಟಾ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಗೆಲುವಿನ ಹಳಿಗೆ ಮರಳಿದ್ದಾರೆ. ಭಾರತದ ಗ್ರ್ಯಾಂಡ್ ಮಾಸ್ಟರ್ ಸೋಮವಾರ ನಡೆದ ಎಂಟನೇ ಸುತ್ತಿನಲ್ಲಿ ಸ್ಲೋವೇನಿಯಾದ ವ್ಲಾದಿಮಿರ್ ಫೆಡೊಸೀವ್ ಅವರನ್ನು ಮಣಿಸಿದರು. ಕಪ್ಪು ಕಾಯಿಯಲ್ಲಿ ಆಡಿದ ಗುಕೇಶ್, 41 ಚಲನೆಯಲ್ಲಿ ಆಟವನ್ನು ಮುಗಿಸಿದರು. ಆರಂಭಿಕ ನಾಲ್ಕು ಡ್ರಾಗಳ ನಂತರ ಐದನೇ ಸುತ್ತಿನಲ್ಲಿ ಗೆಲುವು ಸಾಧಿಸಿದ್ದ ಗುಕೇಶ್, ನಂತರದ ಎರಡು ಸುತ್ತಿನಲ್ಲಿ ಮುಗ್ಗರಿಸಿದ್ದರು. ಇದೀಗ ಅವರು ಒಟ್ಟು 4 ಅಂಕಗಳೊಂದಿಗೆ ಭಾರತದ ಆಟಗಾರರ ಪೈಕಿ ಮುಂಚೂಣಿಯಲ್ಲಿದ್ದಾರೆ. ಟೂರ್ನಿಯು ಒಟ್ಟು 13 ಸುತ್ತುಗಳನ್ನು ಒಳಗೊಂಡಿವೆ. ಭಾರತದ ಅರ್ಜುನ್ ಇರಿಗೇಶಿ (3.5) ಅವರು ಸ್ವದೇಶದ ಅರವಿಂದ ಚಿದಂಬರಂ (2.5) ಅವರೊಂದಿಗೆ ಪಂದ್ಯವನ್ನು ಡ್ರಾ ಮಾಡಿಕೊಂಡರು. ಆರ್. ಪ್ರಜ್ಞಾನಂದ (3) ಅವರು ಟರ್ಕಿಯ ಯಾಗಿಝ್ ಕಾನ್ ಎರ್ಡೋಗ್ಮಸ್ (4.5) ಅವರೊಂದಿಗೆ ಅಂಕ ಹಂಚಿಕೊಂಡರು.

ವಿಶ್ವಕಪ್‌ಗೆ ವೆಸ್ಟ್‌ಇಂಡೀಸ್ ತಂಡಕ್ಕೆ ಹೋಪ್ ನಾಯಕ



ದೆಹಲಿ: ಮುಂಬರುವ ಐಸಿಸಿ ಟಿ20 ವಿಶ್ವಕಪ್ ಟೂರ್ನಿಗೆ 15 ಸದಸ್ಯರ ವೆಸ್ಟ್ ಇಂಡೀಸ್ ತಂಡವನ್ನು ಪ್ರಕಟಿಸಲಾಗಿದೆ. ಹಿರಿಯ ಆಲ್‌ರೌಂಡರ್ ಜೇಸನ್ ಹೋಲ್ಡರ್ ಹಾಗೂ ಮಾಜಿ ನಾಯಕ ರೊವ್ಮನ್ ಪೊವೆಲ್ ರಾಷ್ಟ್ರೀಯ ತಂಡಕ್ಕೆ ಮರಳಿದ್ದಾರೆ. ಚುಟುಕು ವಿಶ್ವಕಪ್ ಟೂರ್ನಿಯಲ್ಲಿ ವೆಸ್ಟ್ ಇಂಡೀಸ್ ತಂಡವನ್ನು ಶೇಯ್ ಹೋಪ್ ಮುನ್ನಡೆಸಲಿದ್ದಾರೆ. ಕಳೆದ ಸರಣಿಯಲ್ಲಿ ಜೇಸನ್ ಹೋಲ್ಡರ್ ಹಾಗೂ ರೊವ್ಮನ್ ಪೊವೆಲ್‌ಗೆ ವಿಶ್ರಾಂತಿಯನ್ನು ನೀಡಲಾಗಿತ್ತು. ಆದರೆ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಈ ಇಬ್ಬರು ಅನುಭವಿಗಳೂ ತಂಡದ್ದಲಿದ್ದಾರೆ. ಹಾರ್ಡ್ ಹಿಟ್ಟರ್ ಕ್ವಿಂಟನ್ ಸ್ಯಾಂಪ್ಸನ್ ಅವರಿಗೂ ತಂಡದಲ್ಲಿ ಅವಕಾಶವನ್ನು ನೀಡಲಾಗಿದೆ.

ವಿಂಡೀಸ್ ತಂಡ: ಶೇಯ್ ಹೋಪ್ (ನಾಯಕ), ಶಿಮ್ರಾನ್ ಹೆಟ್ಮೈಯೆರ್, ಜಾನ್ಸನ್ ಚಾರ್ಲ್ಸ್. ಬ್ರ್ಯಾಂಡನ್ ಕಿಂಗ್, ರಾಸ್ಟನ್ ಚೇಸ್, ಜೇಸನ್ ಹೋಲ್ಡರ್, ರೊವ್ಮನ್ ಪೊವೆಲ್, ಶೆರ್ಫೇನ್ ಋದರ್ಫೋರ್ಡ್, ರೊಮ್ಯಾರಿಯೊ ಶೆಫರ್ಡ್, ಕ್ವಿಂಟಿನ್ ಸ್ಯಾಂಪ್ಸನ್ ಅಕೀಲ್ ಹುಸೇನ್, ಗುಡಕೇಶ್ ಮೋಟಿ, ಶಮರ್ ಜೋಸೆಫ್, ಜೇಡನ್ ಸೀಲ್ಸ್, ಮ್ಯಾಥ್ಯೂ ಫಾರ್ಡ್.

ಇಂದು ಕಿವೀಸ್–ಟೀಮ್ ಇಂಡಿಯಾ 4ನೇ ಟಿ20 | ಸರಣಿ ಗೆದ್ದಿರುವ ಸೂರ್ಯ ಪಡೆಗೆ ಔಪಚಾರಿಕ ಪಂದ್ಯ

4ನೇ ಪಂದ್ಯದಲ್ಲೂ ಭಾರತಕ್ಕೆ ಗೆಲ್ಲುವ ತವಕ

ವಿಶಾಖಪಟ್ಟಣ: ಭಾರತ–ನ್ಯೂಜಿಲೆಂಡ್ ನಡುವಿನ 4ನೇ ಟಿ20 ಪಂದ್ಯವು ಇಂದು ಇಲ್ಲಿ ನಡೆಯಲಿದೆ. ಒಟ್ಟು 5 ಪಂದ್ಯಗಳ ಪೈಕಿ ಈಗಾಗಲೇ 3–0 ಅಂತರದಿಂದ ಸರಣಿಯನ್ನು ಗೆದ್ದಿರುವ ಸೂರ್ಯಕುಮಾರ್ ಯಾದವ್ ಪಡೆಗೆ ಈ ಪಂದ್ಯವು ಕೇವಲ ಔಪಚಾರಿಕವಾಗಲಿದ್ದು, 4ನೇ ಸೋಲನ್ನು ತಪ್ಪಿಸಲು ಕಿವೀಸ್ ಹೋರಾಟ ನಡೆಸಲಿದೆ.

ವಿರಾಟ್ ಕೊಹ್ಲಿಯ ಭರ್ಜರಿ ಆಟದ ಹೊರತಾಗಿಯೂ ನ್ಯೂಜಿಲೆಂಡ್ ವಿರುದ್ಧ 3 ಪಂದ್ಯಗಳ ಏಕದಿನ ಪಂದ್ಯಗಳ ಸರಣಿಯಲ್ಲಿ ಭಾರತವು ಕೇವಲ ಒಂದು ಪಂದ್ಯದಲ್ಲಿ ಮಾತ್ರ ಗೆದ್ದು ಸರಣಿಯಲ್ಲಿ ಸೋತು ತವರಿನಲ್ಲಿ ತೀವ್ರ ಮುಖಭಂಗ ಅನುಭವಿಸಿತ್ತು. ಆದರೆ ಆ ಬಳಿಕ ಟಿ20 ಪಂದ್ಯದಲ್ಲಿ ಫೀನಿಕ್ಸ್‌ನಂತೆ ಮೇಲೆದ್ದು, ನಿರಂತರ ಗೆಲುವನ್ನು ತನ್ನದನ್ನಾಗಿಸುವಲ್ಲಿ ಯಶಸ್ಸು ಕಂಡಿದೆ.

ಜ.21ರಂದು ನಾಗ್ಪುರದಲ್ಲಿ ನಡೆದ ಮೊದಲ ಟಿ20 ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತವು ಅಭಿಷೇಕ್ ಶರ್ಮಾ ಅವರ 84 ರನ್‌ಗಳ ಭರ್ಜರಿ ಆಟ ಮತ್ತು ರಿಂಕುಸಿಂಗ್ ಅವರ ಅಜೇಯ 44 ರನ್‌ಗಳ ನೆರವಿನಿಂದ 7 ವಿಕೆಟ್‌ಗೆ 238 ರನ್ ಗಳಿಸಿತ್ತು. ಆ ನಂತರ ನ್ಯೂಜಿಲೆಂಡ್ ಅನ್ನು 190 ರನ್‌ಗಳಿಗೆ ನಿಯಂತ್ರಿಸಿ 48 ರನ್‌ಗಳ ಗೆಲುವನ್ನು ಕಂಡಿತ್ತು.

ಜ.23ರಂದು ರಾಯ್ಪುರದಲ್ಲಿ ನಡೆದ 2ನೇ ಟಿ20 ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಕಿವೀಸ್ ಪಡೆಯನ್ನು ಭಾರತವು 208 ರನ್‌ಗಳಿಗೆ ನಿಯಂತ್ರಿಸಿತ್ತು. ಆ ಗುರಿ ಬೆಂಬತ್ತಿದ ಭಾರತವು 32 ಬಾಲ್‌ಗಳಲ್ಲಿ 76 ರನ್ ಗಳಿಸಿದ್ದ ಇಶಾನ್ ಕಿಶನ್ ಮತ್ತು 37 ಬಾಲ್‌ಗಳಲ್ಲಿ 82 ರನ್ ಗಳಿಸಿದ್ದ ಸೂರ್ಯಕುಮಾರ್ ಯಾದವ್ ಅವರ ಭರ್ಜರಿ ಬ್ಯಾಟಿಂಗ್ ನೆರವಿನಿಂದ 15.2 ಓವರ್‌ಗಳಲ್ಲೇ 7 ವಿಕೆಟ್‌ಗಳ ಮತ್ತೊಂದು ಗೆಲುವನ್ನು ಸಾಧಿಸಿತ್ತು.

ಜ.25ರಂದು ಗುವಾಹಟಿಯಲ್ಲಿ ನಡೆದ 3ನೇ ಟಿ20 ಪಂದ್ಯದಲ್ಲಿ ಭಾರತ ತಂಡವು ನ್ಯೂಜಿಲೆಂಡನ್ನು 153 ರನ್‌ಗೆ ಕಟ್ಟಿ ಹಾಕಿತ್ತು. ಆ ಗುರಿ ಬೆಂಬತ್ತಿದ ಭಾರತವು ಅಭಿಷೇಕ್ ಶರ್ಮಾ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಕೇವಲ 10 ಓವರ್‌ಗಳಲ್ಲಿ ತನ್ನ ಗುರಿ ತಲುಪಿತ್ತು.

ನಾಲ್ಕನೇ ಟಿ20 ಪಂದ್ಯದಲ್ಲಿ ಭಾರತ ತಂಡವು 3 ಪಂದ್ಯಗಳಲ್ಲೂ ಅವಕಾಶ ಸಿಗದ ಆಟಗಾರರ ಸಾಮರ್ಥ್ಯವನ್ನು ಪರೀಕ್ಷಿಸಲಿದೆ. ಹಾಗಾಗಿ ಆಲ್ ರೌಂಡರ್ ಹಾರ್ದಿಕ್ ಪಾಂಡ್ಯ, ರಿಂಕು ಸಿಂಗ್ ಹಾಗೂ ಹರ್ಷಿತ್ ರಾಣಾ ಅವರಿಗೆ ವಿಶ್ರಾಂತಿ ನೀಡಬಹುದು. ಆ ಸ್ಥಾನಗಳಿಗೆ ಕ್ರಮವಾಗಿ ಶ್ರೇಯಸ್ ಅಯ್ಯರ್, ಅಕ್ಷರ್ ಪಟೇಲ್ ಹಾಗೂ ಅರ್ಷದೀಪ್ ಸಿಂಗ್‌ಗೆ ಅವಕಾಶವನ್ನು ಕೊಡಬಹುದು.

ನ್ಯೂಜಿಲೆಂಡ್ ತಂಡದಿಂದ ವೇಗಿ ಕ್ರಿಸ್ಟಿಯನ್ ಕ್ಲಾರ್ಕ್ ಮತ್ತು ಆರಂಭಿಕ ಬ್ಯಾಟ್ಸ್‌ಮನ್ ಟಿಮ್ ರಾಬಿನ್ಸನ್ ಅವರನ್ನು ಬಿಡುಗಡೆ ಮಾಡಲಾಗಿದೆ. 5 ಪಂದ್ಯಗಳ ಸರಣಿಯಲ್ಲಿ ಸತತ ಮೂರು ಸೋಲು ಕಂಡಿರುವ ಕಿವೀಸ್ ಅಂತಿಮ ಎರಡು ಪಂದ್ಯಗಳಿಗಾಗಿ ಈ ಬದಲಾವಣೆ ಮಾಡಿದೆ.

ಪಿಚ್ ರಿಪೋರ್ಟ್: ವಿಶಾಖಪಟ್ಟಣಂನ ಆಂಧ್ರ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಭಾರತವು ಕೊನೆಯ ಬಾರಿ ಏಕದಿನ ಪಂದ್ಯವನ್ನು ಆಡಿತ್ತು. ಆ ಪಂದ್ಯದಲ್ಲಿ ಭಾರತ 9 ವಿಕೆಟ್‌ಗಳಿಂದ ಗೆದ್ದಿತ್ತು. ಪಿಚ್ ಬ್ಯಾಟಿಂಗ್‌ಗೆ ಯೋಗ್ಯವಾಗಿದ್ದು, ಆರಂಭದಲ್ಲಿ ಪಿಚ್ ವೇಗದ ಬೌಲರ್‌ಗಳಿಗೆ ನೆರವು ನೀಡಲಿದೆ. ಪಂದ್ಯ ಸಾಗುತ್ತಿದ್ದಂತೆ ಪಿಚ್ ಸ್ಪಿನರ್‌ಗಳಿಗೆ ನೆರವು ನೀಡಲಿದೆ.

ಸಂಭಾವ್ಯ ತಂಡ

ಭಾರತ: ಸೂರ್ಯಕುಮಾರ್ ಯಾದವ್ (ನಾಯಕ), ಅಭಿಷೇಕ್ ಶರ್ಮಾ, ಇಶಾನ್ ಕಿಶನ್, ಶ್ರೇಯಸ್ ಅಯ್ಯರ್, ಶಿವಂ ದುಬೆ, ಅಕ್ಷರ್ ಪಟೇಲ್, ರವಿ ಬಿಷ್ಣೋಯ್, ಕುಲ್ದೀಪ್ ಯಾದವ್, ಅರ್ಷದೀಪ್ ಸಿಂಗ್, ಜಸ್‌ಪ್ರೀತ್ ಬುಮ್ರಾ, ಸಂಜು ಸ್ಯಾಮ್ಸನ್ (ಕೀಪರ್).

ನ್ಯೂಜಿಲೆಂಡ್: ಮಿಚೆಲ್ ಸ್ಯಾಂಟ್ನರ್ (ನಾಯಕ), ಡೆವೋನ್ ಕಾನ್ವೆ, ಟಿಮ್ ಸೀಫರ್ಟ್ (ಕೀಪರ್), ರಚಿನ್ ರವೀಂದ್ರ, ಗ್ಲೆನ್ ಫಿಲಿಪ್ಸ್, ಮಾರ್ಕ್ ಚಾಪ್ಮನ್, ಡ್ಯಾರಿಲ್ ಮಿಚೆಲ್, ಮ್ಯಾಟ್ ಹೆನ್ರಿ, ಕೈಲ್ ಜೇಮಿಸನ್, ಇಶ್ ಸೋಧಿ, ಜಾಕೋಬ್ ಡಫಿ/ಲಾಕಿ ಫರ್ಗ್ಯೂಸನ್.

ವಾರದೊಳಗೆ ನಿರ್ಧಾರ ಪ್ರಕಟ: ನಖ್ವಿ

ಭಾರತದ ವಿರುದ್ಧ ಪಂದ್ಯ ಬಹಿಷ್ಕಾರಕ್ಕೆ ಪಾಕ್ ಚಿಂತನೆ

ಕರಾಚಿ: ಫೆ.7ರಿಂದ ಆರಂಭವಾಗುವ ಟಿ20 ವಿಶ್ವ ಕಪ್ ಟೂರ್ನಿಯ ವಿಚಾರದಲ್ಲಿ ಪಾಕಿಸ್ತಾನ ಹೊಸ ದುರಾಲೋಚನೆ ಮಾಡಿದೆ. ವಿಶ್ವಕಪ್‌ನಲ್ಲಿ ತಾನು ಪಾಲ್ಗೊಂಡರೂ ಭಾರತದ ವಿರುದ್ಧ ಪಂದ್ಯ ಆಡದಿರಲು ಚಿಂತನೆ ನಡೆಸುತ್ತಿದೆ ಎಂದು ವರದಿಯಾಗಿದೆ. ವಿಶ್ವಕಪ್‌ನಿಂದ ಬಾಂಗ್ಲಾದೇಶವನ್ನು ಅಂತಾರಾಷ್ಟ್ರೀಯ ಕ್ರಿಕೆಟ್ ಸಮಿತಿಯು (ಐಸಿಸಿ) ಹೊರಗಿಟ್ಟದ್ದಕ್ಕೆ ತನ್ನ ಬೆಂಬಲ ಘೋಷಿಸಿರುವ ಪಾಕಿಸ್ತಾನವು, ಬಾಂಗ್ಲಾವನ್ನು ಹೊರಗಿಟ್ಟರೆ ತಾನೂ ವಿಶ್ವಕಪ್‌ನಿಂದ ಹೊರಗುಳಿಯುವುದಾಗಿ ಬೆದರಿಸಿತ್ತು. ಅದಕ್ಕೆ ಐಸಿಸಿ ತೀಕ್ಷ್ಣವಾಗಿ ಉತ್ತರಿಸಿ ಕಠಿಣ ಕ್ರಮದ ಎಚ್ಚರಿಕೆ ನೀಡಿತ್ತು. ಅದಾದ ಬಳಿಕ ತನ್ನ ನಿರ್ಧಾರವನ್ನು ಅಲ್ಪ ಬದಲಿಸಿದಂತಿರುವ ಪಾಕ್, ವಿಶ್ವಕಪ್‌ನಲ್ಲಿ ಪಾಲ್ಗೊಳ್ಳಲು ನಿರ್ಧರಿಸಿದ್ದರೂ ಭಾರತ ವಿರುದ್ಧ ಪಂದ್ಯ ಆಡದಿರಲು ತೀರ್ಮಾನಿಸಿದೆ ಎನ್ನಲಾಗುತ್ತಿದೆ. ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅವರನ್ನು ಭೇಟಿಯಾದ ನಂತರ ಪಾಕ್ ಕ್ರಿಕೆಟ್ ಮಂಡಳಿ ಮುಖ್ಯಸ್ಥ ಮೊಹ್ಸಿನ್ ನಖ್ವಿ ಎಕ್ಸ್‌ನಲ್ಲಿ ಟ್ವೀಟ್ ಮಾಡಿ, ಈ ವಿಷಯದಲ್ಲಿ ಶುಕ್ರವಾರ ಅಥವಾ ಸೋಮವಾರ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ.

ಐಸಿಸಿ ಕ್ರಮ ಸಾಧ್ಯತೆ: ಪಾಕ್ ತಂಡ ಭಾರತದ ವಿರುದ್ಧ ಪಂದ್ಯಗಳನ್ನು ಬಹಿಷ್ಕರಿಸಿದರೆ ಐಸಿಸಿ ಭಾರಿ ನಿರ್ಬಂಧಗಳನ್ನು ವಿಧಿಸುವ ಸಾಧ್ಯತೆಯಿದ್ದು, ಅದರಿಂದ ಪಿಸಿಬಿಗೆ ದೊಡ್ಡ ಆರ್ಥಿಕ ಹೊಡೆತ ಬೀಳಲಿದೆ. ಭಾರತ ಪಂದ್ಯ ಅಥವಾ ವಿಶ್ವಕಪ್ ಅನ್ನು ಬಹಿಷ್ಕರಿಸುವುದು ಐಸಿಸಿ ಯೊಂದಿಗಿನ ಒಪ್ಪಂದದ ಉಲ್ಲಂಘನೆಯಾಗುತ್ತದೆ. ಒಂದು ವೇಳೆ ಆ ರೀತಿ ಮಾಡಿದ್ದಲ್ಲಿ ಐಸಿಸಿಯು ವಿಶ್ವಕಪ್ ಮತ್ತು ಏಷ್ಯಾ ಕಪ್‌ನಂತಹ ಜಾಗತಿಕ ಮತ್ತು ದ್ವಿಪಕ್ಷೀಯ ಪಂದ್ಯಾವಳಿಗಳಿಂದ ಪಾಕ್ ತಂಡವನ್ನು ಅಮಾನತುಗೊಳಿಸಬಹುದು.

ಫೆ.1ರಿಂದ ಮೊಹಾಲಿಯಲ್ಲಿ ಪಂಜಾಬ್ ವಿರುದ್ಧ ಪಂದ್ಯ | ತಂಡಕ್ಕೆ ರಾಹುಲ್ ಸೇರ್ಪಡೆ

ರಾಜ್ಯ ರಣಜಿ ತಂಡಕ್ಕೆ ಪಡಿಕ್ಕಲ್ ನಾಯಕ

ಬೆಂಗಳೂರು: ಪಂಜಾಬ್ ವಿರುದ್ಧದ ರಣಜಿ ಟ್ರೋಫಿ ಟೂರ್ನಿಯ ಪಂದ್ಯಕ್ಕೆ ಕರ್ನಾಟಕ ತಂಡವನ್ನು ಪ್ರಕಟಿಸಲಾಗಿದ್ದು, ರಾಜ್ಯ ತಂಡದ ನಾಯಕತ್ವವನ್ನು ದೇವದತ್ ಪಡಿಕ್ಕಲ್‌ಗೆ ನೀಡಲಾಗಿದೆ. ಫೆಬ್ರವರಿ ಒಂದರಂದು ಮೊಹಾಲಿಯ ಪಂಜಾಬ್ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ಪಂದ್ಯ ಆರಂಭವಾಗಲಿದೆ. ಮಾಯಾಂಕ್ ಅಗರ್ವಾಲ್ ಕೂಡಾ ಆಡಲಿದ್ದು, ಟೀಮ್ ಇಂಡಿಯಾ ಬ್ಯಾಟ್ಸ್‌ಮನ್ ಕೆಎಲ್ ರಾಹುಲ್ ಅವರೂ ಕರ್ನಾಟಕ ರಣಜಿ ತಂಡಕ್ಕೆ ಮರಳಿದ್ದಾರೆ. ಮೊದಲ ಹಂತದ ಟೂರ್ನಿಯಲ್ಲಿ ಕರ್ನಾಟಕ ತಂಡದ ಪ್ರದರ್ಶನ ನೀರಸವಾಗಿತ್ತು. ಹಾಗಾಗಿ ಟೂರ್ನಿಯ ನಾಕ್‌ಔಟ್ ರೇಸ್‌ನಲ್ಲಿ ಉಳಿಯಬೇಕೆಂದರೆ ಕರ್ನಾಟಕ ತಂಡ, ಎಲೈಟ್–ಬಿ ಗುಂಪಿನಲ್ಲಿ ಪಂಜಾಬ್ ವಿರುದ್ಧ ಮುಂದಿನ ಪಂದ್ಯವನ್ನು ಗೆಲ್ಲಲೇಬೇಕಾದ ಒತ್ತಡಕ್ಕೆ ಒಳಗಾಗಿದೆ. ಈ ಮಹತ್ವದ ಪಂದ್ಯಕ್ಕೆ ಕೆಎಲ್ ರಾಹುಲ್ ಮರಳಿರುವುದು ರಾಜ್ಯ ತಂಡಕ್ಕೆ ಆನೆಬಲ ಬಂದಂತಾಗಿದೆ. ರಾಹುಲ್ 2018 ರಿಂದ ಕೇವಲ ಎರಡು ರಣಜಿ ಪಂದ್ಯಗಳನ್ನು ಆಡಿದ್ದಾರೆ, ಕೊನೆಯದಾಗಿ 2025ರ ಜನವರಿಯಲ್ಲಿ ಹರಿಯಾಣ ವಿರುದ್ಧ ಆಡಿದ್ದರು.

ಕರ್ನಾಟಕ ಸಂಭಾವ್ಯ ತಂಡ: ದೇವದತ್ ಪಡಿಕ್ಕಲ್ (ನಾಯಕ), ಮಯಾಂಕ್ ಅಗರ್ವಾಲ್, ಕೆಎಲ್ ರಾಹುಲ್, ಅನೀಶ್ ಕೆವಿ, ರವಿಚಂದ್ರನ್ ಸ್ಮರಣ್, ಶ್ರೇಯಸ್ ಗೋಪಾಲ್, ಕೃತಿಕ್ ಕೃಷ್ಣ (ಕೀಪರ್), ವೆಂಕಟೇಶ್ ಎಂ, ವಿದ್ಯಾಧರ್ ಪಾಟೀಲ್, ವಿದ್ವತ್ ಕಾವೇರಪ್ಪ, ಪ್ರಸಿದ್ಧ್ ಕೃಷ್ಣ, ಮೊಹ್ಸಿನ್ ಖಾನ್, ಶಿಖರ್ ಶೆಟ್ಟಿ, ಶ್ರೀಜಿತ್ ಕೆಎಲ್ (ಕೀಪರ್), ಧ್ರುವ್ ಪ್ರಭಾಕರ್.

ಡಾನ್ ಬ್ರಾಡ್ಮನ್ ಕ್ಯಾಪ್ ಹರಾಜು

ಸಿಡ್ನಿ: 1947–48ರಲ್ಲಿ ಭಾರತ ವಿರುದ್ಧದ ಸರಣಿಯಲ್ಲಿ ಸರ್ ಡಾನ್ ಬ್ರಾಡ್ಮನ್ ಧರಿಸಿದ್ದ ಬ್ಯಾಗಿ ಗ್ರೀನ್ ಕ್ಯಾಪ್ ಗೋಲ್ಡ್ ಕೋಸ್ಟ್ ಹರಾಜಿನಲ್ಲಿ ದಾಖಲೆಯ 2.92 ಕೋಟಿ ರು. ಮೌಲ್ಯಕ್ಕೆ ಮಾರಾಟವಾಯಿತು. ಇದು ಕ್ರೀಡೆಯಲ್ಲಿ ಬ್ರಾಡ್ಮನ್ ಅವರ ನಿರಂತರ ಪರಂಪರೆ ಮತ್ತು ಅವರೊಂದಿಗೆ ಸಂಬಂಧಿಸಿದ ಸ್ಮರಣಿಕೆಗಳ ಅಪಾರ ಐತಿಹಾಸಿಕ ಮೌಲ್ಯವನ್ನು ಎತ್ತಿ ತೋರಿಸುತ್ತದೆ. ಆ ಐತಿಹಾಸಿಕ ಸರಣಿಯ ಸಮಯದಲ್ಲಿ ಬ್ರಾಡ್ಮನ್ ಅದನ್ನು ಭಾರತೀಯ ಕ್ರಿಕೆಟಿಗ ಶ್ರೀರಂಗ ವಾಸುದೇವ್ ಸೊಹೋನಿಗೆ ಉಡುಗೊರೆಯಾಗಿ ನೀಡಿದ್ದರು, ಮತ್ತು ಸೊಹೋನಿ ಕುಟುಂಬವು ಕಳೆದ 75 ವರ್ಷಗಳಿಂದ ಈ ಕ್ಯಾಪ್ ಅನ್ನು ಸಾರ್ವಜನಿಕವಾಗಿ ಪ್ರದರ್ಶಿಸದೆ ಸಂರಕ್ಷಿಸಿತ್ತು.

ಕ್ಯಾಪ್‌ನ ಒಳಭಾಗದಲ್ಲಿ ಡಿ.ಜಿ. ಬ್ರಾಡ್ಮನ್ ಮತ್ತು ಎಸ್.ಡಬ್ಲ್ಯೂ.ಸೊಹೋನಿ ಎಂಬ ಹೆಸರುಗಳನ್ನು ಕೆತ್ತಲಾಗಿದೆ. ಕ್ಯಾಪ್ ಹಳೆಯದಾಗಿದ್ದರೂ ಸುಸ್ಥಿತಿಯಲ್ಲಿದೆ. 1947–48ರಲ್ಲಿ ಕಸೂತಿ ಮಾಡಲಾಗಿದ್ದು, ಟೆಸ್ಟ್ ಕ್ರಿಕೆಟ್‌ನ ನಿರ್ಣಾಯಕ ಯುಗಕ್ಕೆ ಸ್ಪಷ್ಟವಾದ ನಿದರ್ಶನವಾಗಿದೆ. ಕ್ಯಾಪ್ ಅನ್ನು ಅನಾಮಧೇಯ ಬಿಡ್ದಾರರು ಖರೀದಿಸಿದ್ದು, ಅದನ್ನು ಆಸ್ಟ್ರೇಲಿಯಾದ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶಿಸುವ ನಿರೀಕ್ಷೆಯಿದೆ. ಸಾರ್ವಕಾಲಿಕ ಶ್ರೇಷ್ಠ ಬ್ಯಾಟ್ಸ್‌ಮನ್ ಎಂದು ಸಾರ್ವತ್ರಿಕವಾಗಿ ಪರಿಗಣಿಸಲ್ಪಟ್ಟ ಬ್ರಾಡ್ಮನ್ ಕೇವಲ 52 ಟೆಸ್ಟ್ ಪಂದ್ಯಗಳನ್ನಾಡಿದ್ದರೂ ದಾಖಲೆಯ 99.94ರ ಸರಾಸರಿಯಲ್ಲಿ 6,996 ರನ್ ಗಳಿಸಿದ್ದಾರೆ, ಅದರಲ್ಲಿ 12 ದ್ವಿಶತಕ, 29 ಶತಕ ಮತ್ತು 13 ಅರ್ಧಶತಕಗಳು ಸೇರಿವೆ. 2001ರಲ್ಲಿ ತಮ್ಮ 92ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು.

ವಿಶ್ವಕಪ್‌ಗೆ ಬಾಂಗ್ಲಾ ಸ್ಥಾನದಲ್ಲಿ ಆಯ್ಕೆಯಾದ ದೇಶ

ಸ್ಕಾಟ್ಲೆಂಡ್ ತಂಡ ಪ್ರಕಟ

ದುಬೈ: ಮುಂದಿನ ತಿಂಗಳು ಭಾರತ ಮತ್ತು ಶ್ರೀಲಂಕಾ ಜಂಟಿಯಾಗಿ ಆಯೋಜಿಸಲಿರುವ ಟಿ20 ವಿಶ್ವಕಪ್‌ಗೆ ಅನಿರೀಕ್ಷಿತ ಪ್ರವೇಶ ಪಡೆದ ಸ್ಕಾಟ್ಲೆಂಡ್, ಪಂದ್ಯಾವಳಿಗೆ ತನ್ನ 15 ಜನರ ತಂಡವನ್ನು ಹೆಸರಿಸಿದೆ. ರಿಚಿ ಬೆರಿಂಗ್ಟನ್ ಅವರನ್ನು ನಾಯಕನನ್ನಾಗಿ ನೇಮಿಸಲಾಗಿದೆ. 2024ರ ಆವೃತ್ತಿಯ 11 ಆಟಗಾರರನ್ನು ತಂಡದಲ್ಲಿ ಉಳಿಸಿಕೊಳ್ಳಲಾಯಿತು. ಕಳೆದ ತಿಂಗಳು ಹೊಸದಾಗಿ ನೇಮಕಗೊಂಡ ಪುರುಷರ ಮುಖ್ಯ ಕೋಚ್ ಓವನ್ ಡಾಕಿನ್ಸ್ ತಂಡವನ್ನು ಆಯ್ಕೆ ಮಾಡಿದರು.

ತಂಡದ 11 ಸದಸ್ಯರು ವೆಸ್ಟ್ ಇಂಡೀಸ್ ಮತ್ತು ಯುಎಇಯಲ್ಲಿ ನಡೆದ 2024ರ ಟಿ 20 ವಿಶ್ವಕಪ್‌ನಲ್ಲಿ ಕಾಣಿಸಿಕೊಂಡಿದ್ದರು. ಬೆರಿಂಗ್ಟನ್ ತಂಡವನ್ನು ಮುನ್ನಡೆಸಲಿದ್ದು, ಟಾಮ್ ಬ್ರೂಸ್, ಫಿನ್ಲೇ ಮೆಕ್‌ಕ್ರೀತ್ ಮತ್ತು ಆಲಿವರ್ ಡೇವಿಡ್ಸನ್ ಕಳೆದ ವರ್ಷ ಸ್ಕಾಟ್ಲೆಂಡ್‌ನ ಟಿ20 ಮತ್ತು ಏಕದಿನ ತಂಡಗಳಲ್ಲಿ ಕಾಣಿಸಿಕೊಂಡ ನಂತರ ತಮ್ಮ ಮೊದಲ ಟಿ20 ವಿಶ್ವಕಪ್ ಆಡಲು ಸಜ್ಜಾಗಿದ್ದಾರೆ. ತಂಡದಲ್ಲಿ ಮೊದಲ ಬಾರಿಗೆ ಸೇರ್ಪಡೆಗೊಂಡ ಏಕೈಕ ಆಟಗಾರ ವೇಗಿ ಜೈನುಲ್ಲಾ ಇಹ್ಸಾನ್ ಆಫ್ಘಾನ್ ಮೂಲದವರಾಗಿದ್ದು, ಅವರು ಇತ್ತೀಚೆಗೆ ಸ್ಕಾಟ್ಲೆಂಡ್ ಅನ್ನು ಪ್ರತಿನಿಧಿಸಲು ಅರ್ಹತಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದರು. ಇದೀಗ ಮೊದಲ ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಸ್ಕಾಟ್ಲೆಂಡ್ ತಂಡವು, ಅಲ್ಪಾವಧಿಯ ಸೂಚನೆ ಮತ್ತು ಸಿದ್ಧತೆಗಳಿಗೆ ಲಭ್ಯವಿರುವ ಸೀಮಿತ ಸಮಯವನ್ನು ಗಮನದಲ್ಲಿಟ್ಟು ಕೊಂಡು, ಆಯ್ಕೆದಾರರು ಎರಡು ಪ್ರಯಾಣಿಕ ಮೀಸಲು ಮತ್ತು ಮೂರು ಪ್ರಯಾಣೇತರ ಮೀಸಲು ಆಟಗಾರರನ್ನು ಹೆಸರಿಸಿದ್ದಾರೆ. ತಂಡದ ಪ್ರಯಾಣ ಯೋಜನೆಗಳು ಮತ್ತು ಅಭ್ಯಾಸ ವೇಳಾಪಟ್ಟಿಯ ವಿವರಗಳನ್ನು ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು ಎಂದು ಕ್ರಿಕೆಟ್ ಸ್ಕಾಟ್ಲೆಂಡ್ ತಿಳಿಸಿದೆ.

ಸ್ಕಾಟ್ಲೆಂಡ್ ತಂಡ: ರಿಚೀ ಬೆರಿಂಗ್ಟನ್, ಟಾಮ್ ಬ್ರೂಸ್, ಮ್ಯಾಥ್ಯೂ ಕ್ರಾಸ್, ಬ್ರಾಡ್ಲಿ ಕ್ಯೂರಿ, ಆಲಿವರ್ ಡೇವಿಡ್ಸನ್, ಕ್ರಿಸ್ ಗ್ರೀವ್ಸ್, ಜೈನುಲ್ಲಾ ಇಹ್ಸಾನ್, ಮೈಕೆಲ್ ಜೋನ್ಸ್, ಮೈಕೆಲ್ ಲೀಸ್ಕ್, ಫಿನ್ಲೇ ಮೆಕ್‌ಕ್ರೀತ್, ಬ್ರಾಂಡನ್ ಮೆಕ್‌ಮುಲ್ಲೆನ್, ಜಾರ್ಜ್ ಮುನ್ಸೆ, ಸಫ್ಯಾನ್ ಷರೀಫ್, ಮಾರ್ಕ್ ವ್ಯಾಟ್, ಬ್ರಾಡ್ಲಿ ವೀಲ್.

ಕ್ರಿಕೆಟ್ ವೃತ್ತಿ ಜೀವನಕ್ಕೆ ಮಾಜಿ ವೇಗಿ ವಿದಾಯ

ಆಸ್ಟ್ರೇಲಿಯಾದ ಕ್ರಿಕೆಟರ್ ಕೇನ್ ರಿಚರ್ಡ್ಸನ್ ನಿವೃತ್ತಿ



ಸಿಡ್ನಿ: ಆಸ್ಟ್ರೇಲಿಯಾ ತಂಡದ ವೇಗಿ ಕೇನ್ ರಿಚರ್ಡ್ಸನ್ ತಮ್ಮ ಅಂತಾರಾಷ್ಟ್ರೀಯ ಕ್ರಿಕೆಟ್ ವೃತ್ತಿ ಜೀವನಕ್ಕೆ ನಿವೃತ್ತಿ ಘೋಷಿಸಿದ್ದಾರೆ. ರಿಚರ್ಡ್ಸನ್ ಕಾಂಗರೂ ಪಡೆಯ ಪರ 2013ರಿಂದ 2023ರ ವರೆಗೆ ಒಟ್ಟು 25 ಏಕದಿನ ಮತ್ತು 36 ಟಿ20 ಪಂದ್ಯಗಳನ್ನಾಡಿದ್ದಾರೆ. ಏಕದಿನ ಪಂದ್ಯಗಳಲ್ಲಿ 39 ಮತ್ತು ಟಿ20 ಪಂದ್ಯಗಳಲ್ಲಿ 45 ವಿಕೆಟ್ ಗಳಿಸಿದ್ದಾರೆ.

‘ನಾನು ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದಾಗಿನಿಂದಲೂ ತಂಡಕ್ಕೆ ಪ್ರಾಮಾಣಿಕವಾಗಿ ಆಡಿದ್ದೇನೆ. ಸಿಕ್ಕ ಅವಕಾಶಗಳನ್ನು ಉತ್ತಮವಾಗಿ ಬಳಸಿಕೊಂಡಿದ್ದೇನೆ, ಕ್ರಿಕೆಟ್‌ನಿಂದ ದೂರ ಸರಿಯಲು ಇದು ಸರಿಯಾದ ಸಮಯ’ ಎಂದು ತಿಳಿಸಿದ್ದಾರೆ. ಪ್ರಪಂಚದಾದ್ಯಂತ ಅನೇಕ ತಂಡಗಳೊಂದಿಗೆ ಮತ್ತು ಆಸ್ಟ್ರೇಲಿಯಾದಲ್ಲಿ ನನ್ನ ದೇಶವನ್ನು ಪ್ರತಿನಿಧಿಸುವ ಅದೃಷ್ಟ ನನಗೆ ಸಿಕ್ಕಿದೆ. ನಾನು ಎಂದಿಗೂ ಅವಕಾಶವನ್ನು ಲಘುವಾಗಿ ತೆಗೆದುಕೊಂಡಿಲ್ಲ. ಡಾರ್ವಿನ್‌ನಲ್ಲಿ ನಾನು ಚಿಕ್ಕವನಿದ್ದಾಗಿನಿಂದ ಕ್ರಿಕೆಟಿಗನಾಗಬೇಕೆಂದು ಕನಸು ಕಂಡಿದ್ದೆ, ಅದು ಈಡೇರಿದೆ’ ಎಂದು ಅವರು ಹೇಳಿದ್ದಾರೆ.

ಕ್ರಿಕೆಟ್ ವೃತ್ತಿ ಬದುಕು: ರಿಚರ್ಡ್ಸನ್ 2011ರಲ್ಲಿ ಪ್ರಥಮ ದರ್ಜೆ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿ 2020ರಲ್ಲಿ ರೆಡ್ ಬಾಲ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು. 2021ರ ಟಿ20 ವಿಶ್ವಕಪ್ ವಿಜೇತ ಆಸ್ಟ್ರೇಲಿಯಾ ತಂಡದಲ್ಲಿ ಅವರು ಆಡಿದ್ದರು, 2022ರ ಟಿ20 ವಿಶ್ವಕಪ್‌ನಲ್ಲಿಯೂ ಅವರು ತಮ್ಮ ಸ್ಥಾನ ಉಳಿಸಿಕೊಂಡಿದ್ದರು. ಆದರೆ ಎರಡೂ ವಿಶ್ವಕಪ್ ಆವೃತ್ತಿಯಲ್ಲಿ ಅವರಿಗೆ ಒಂದು ಪಂದ್ಯದಲ್ಲಿ ಕೂಡ ಕಣಕ್ಕಿಳಿಯಲು ಅವಕಾಶ ಸಿಗಲಿಲ್ಲ.

ಆರ್‌ಸಿಬಿ ಪರ ಆಡಿದ್ದ ರಿಚರ್ಡ್ಸನ್: ಕೇನ್ ರಿಚರ್ಡ್ಸನ್ 2016ರ ಐಪಿಎಲ್ ಆವೃತ್ತಿಯಲ್ಲಿ ಆರ್‌ಸಿಬಿ ಪರ ಕಣಕ್ಕಿಳಿದಿದ್ದರು. ಒಟ್ಟು ಅವರು ಬೆಂಗಳೂರಿನ ಪರ ಐದು ಪಂದ್ಯಗಳನ್ನಾಡಿದ್ದು, ಒಟ್ಟು ಎಂಟು ವಿಕೆಟ್ ಕಬಳಿಸಿದ್ದಾರೆ. ರಿಚರ್ಡ್ಸನ್ 2025–26ರ ಬಿಗ್ ಬ್ಯಾಷ್ ಲೀಗ್ ಋತುವಿನಲ್ಲಿ ಮೆಲ್ಬೋರ್ನ್ ಸ್ಟಾರ್ಸ್ ವಿರುದ್ಧ ಸಿಡ್ನಿ ಸಿಕ್ಸರ್ಸ್ ಪರ ತಮ್ಮ ಕೊನೆಯ ವೃತ್ತಿಪರ ಪಂದ್ಯವನ್ನು ಆಡಿದ್ದರು. ಫೈನಲ್ ಪಂದ್ಯದಲ್ಲಿ ಸಿಕ್ಸರ್ಸ್, ಪರ್ತ್ ಸ್ಕಾರ್ಚರ್ಸ್ ವಿರುದ್ಧ ಆರು ವಿಕೆಟ್‌ಗಳ ಸೋಲನ್ನು ಅನುಭವಿಸಿತು.

ಭಾರತಕ್ಕೆ ಜಿಂಬಾಬ್ವೆ ವಿರುದ್ಧ ಗೆಲುವು

ಹರಾರೆ: ವಿಹಾನ್ ಮಲ್ಹೋತ್ರಾ ಅವರ ಭರ್ಜರಿ ಶತಕದ ನೆರವಿನಿಂದ ಭಾರತ ತಂಡವು ಅಂಡರ್–19 ವಿಶ್ವಕಪ್ ಟೂರ್ನಿಯಲ್ಲಿ ಜಿಂಬಾಬ್ವೆ ವಿರುದ್ಧ ಜಯ ಗಳಿಸಿದೆ. ಇದು ಅಂಡರ್–19 ವಿಶ್ವಕಪ್ ಟೂರ್ನಿಯಲ್ಲಿ ಮೊದಲ ಶತಕವಾಗಿದೆ. ಭಾರತ ತಂಡ ತನ್ನ ಪಾಲಿನ 50 ಓವರ್‌ಗಳಿಗೆ 8 ವಿಕೆಟ್‌ಗಳ ನಷ್ಟಕ್ಕೆ 352 ರನ್‌ಗಳನ್ನು ಕಲೆ ಹಾಕಿತು. ಪಂದ್ಯದಲ್ಲಿ ಅದ್ಭುತವಾಗಿ ಬ್ಯಾಟ್ ಮಾಡಿದ ವಿಹಾನ್, 107 ಎಸೆತಗಳಲ್ಲಿ 7 ಬೌಂಡರಿಗಳ ಸಹಾಯದಿಂದ ಅಜೇಯ 109 ರನ್ ಗಳಿಸಿದರು.

ಗುರಿಯನ್ನು ಹಿಂಬಾಲಿಸಿದ ಜಿಂಬಾಬ್ವೆ ತಂಡ, 37.4 ಓವರ್‌ಗಳಿಗೆ 148 ರನ್‌ಗಳಿಗೆ ಆಲ್‌ಔಟ್ ಆಯಿತು. ಆ ಮೂಲಕ 204 ರನ್‌ಗಳಿಂದ ಸೋಲು ಅನುಭವಿಸಿತು. ಭಾರತದ ಪರ ಉದವ್ ಮೋಹನ್ ಹಾಗೂ ನಾಯಕ ಆಯುಷ್ ಮ್ಹಾತ್ರೆ ತಲಾ ಮೂರು ವಿಕೆಟ್‌ಗಳನ್ನು ಕಬಳಿಸಿದರು. ಭಾರತದ ಪರ ಶತಕ ಬಾರಿಸಿದ ಆರ್‌ಸಿಬಿ ಯುವ ಬ್ಯಾಟ್ಸ್‌ಮನ್ ವಿಹಾನ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ವಿಹಾನ್ ಮಲ್ಹೋತ್ರಾ, 19 ವರ್ಷದ ಎಡಗೈ ಬ್ಯಾಟ್ಸ್ ಮನ್ ಆಗಿದ್ದು, ಭಾರತೀಯ ಅಂಡರ್–19 ತಂಡದ ಉಪನಾಯಕರೂ ಆಗಿದ್ದಾರೆ. ವಿಹಾನ್ ಪಂಜಾಬ್‌ನ ಪಾಟಿಯಾಲದಲ್ಲಿ ಜನಿಸಿದ ಅವರು ಅಂಡರ್–19 ತಂಡದೊಂದಿಗೆ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ಪ್ರವಾಸ ಮಾಡಿದ್ದಾರೆ. ಅವರು ಯುಎಇಯಲ್ಲಿ ನಡೆದ ಅಂಡರ್–19 ಏಷ್ಯಾ ಕಪ್ ಟೂರ್ನಿಯಲ್ಲಿ ಆಡಿದ್ದರು.

ವಿಟಾಕೀಸ್

ಇರುಮುಡಿ ಹೊತ್ತ ರವಿತೇಜ

ತೆಲುಗಿನ ಮಾಸ್ ಮಹಾರಾಜ ರವಿತೇಜ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಅವರ ಜನ್ಮದಿನ ಅಂಗವಾಗಿ ಎಪ್ಪತ್ತೇಳನೇ ಸಿನಿಮಾ ಘೋಷಣೆಯಾಗಿದೆ. ರವಿತೇಜ ಹೊಸ ಚಿತ್ರಕ್ಕೆ ಇರುಮುಡಿ ಎಂಬ ಶೀರ್ಷಿಕೆ ಇಡಲಾಗಿದೆ. ಜತೆಗೆ ಫಸ್ಟ್ ಲುಕ್ ಕೂಡ ಬಿಡುಗಡೆ ಮಾಡಲಾಗಿದೆ. ಶಬರಿಮಲೆ ಅಯ್ಯಪ್ಪ ದೀಕ್ಷಾಧಾರಿಗಳು ಯಾತ್ರೆಯ ಸಮಯದಲ್ಲಿ ತಲೆಯ ಮೇಲೆ ಹೊತ್ತುಕೊಂಡು ಸಾಗುವುದನ್ನು ಇರುಮುಡಿ ಎನ್ನುತ್ತಾರೆ. ಇರುಮುಡಿ ಸಿನಿಮಾಗೆ ಶಿವ ನಿರ್ವಾಣ ಆಕ್ಷನ್ ಕಟ್ ಹೇಳುತ್ತಿದ್ದಾರೆ. ನಿರ್ದೇಶಕ ಶಿವ ನಿರ್ವಾಣ ಭಕ್ತಿಯ ಆಳ, ಭಾವನಾತ್ಮಕ ತೂಕ ಇರುವ ಪ್ರಬಲ ಚಿತ್ರಕಥೆಯನ್ನು ರಚಿಸಿದ್ದಾರೆ. ಅಲ್ಲದೇ ತಂದೆ–ಮಗಳ ಬಾಂಧವ್ಯ ಚಿತ್ರದ ಹೈಲೆಟ್. ರವಿತೇಜ ಹಿಂದೆಂದೂ ಕಾಣದ ಗೆಟಪ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಇರುಮುಡಿ ಸಿನಿಮಾದಲ್ಲಿ ಪ್ರಿಯಾ ಭವಾನಿ ಶಂಕರ್ ನಾಯಕಿಯಾಗಿ ನಟಿಸುತ್ತಿದ್ದಾರೆ. ಬೇಬಿ ನಕ್ಷತ್ರ ರವಿತೇಜ ಅವರ ಮಗಳನ್ನು ಅಭಿನಯಿಸುತ್ತಿದ್ದಾರೆ. ತಾರಾಗಣದಲ್ಲಿ ಸಾಯಿ ಕುಮಾರ್, ಅಜಯ್ ಘೋಷ್, ರಮೇಶ್ ಇಂದಿರಾ ಮತ್ತು ಸ್ವಸಿಕಾ ಪ್ರಮುಖ ಪಾತ್ರಗಳಲ್ಲಿ ದ್ದಾರೆ. ಮೈತ್ರಿ ಮೂವೀ ಮೇಕರ್ಸ್ ಬ್ಯಾನರ್ ನಡಿ ನವೀನ್ ಯರ್ನೇನಿ ಹಾಗೂ ರವಿ ಶಂಕರ್ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಜಿವಿ ಪ್ರಕಾಶ್ ಸಂಗೀತ ನಿರ್ದೇಶನ, ವಿಷ್ಣು ಶರ್ಮ ಛಾಯಾಗ್ರಹಣ, ಪ್ರವೀಣ್ ಪುಡಿ ಸಂಕಲನದ ಜವಾಬ್ದಾರಿ ಹೊತ್ತುಕೊಂಡಿದ್ದಾರೆ. ಶಿವನಿರ್ವಾಣ ಚಿತ್ರಕ್ಕೆ ಕಥೆ, ಚಿತ್ರಕಥೆ ಮತ್ತು ಸಂಭಾಷಣೆ ಬರೆದಿದ್ದಾರೆ. ಇರುಮುಡಿ ಸಿನಿಮಾದ ಚಿತ್ರೀಕರಣ ಸದ್ಯ ಭರದಿಂದ ಸಾಗುತ್ತಿದೆ.

ಐಪಿಎಲ್ ಸಿದ್ಧತೆ ಆರಂಭಿಸಿದ ಎಂ.ಎಸ್ ಧೋನಿ

ರಾಂಚಿ: ಮುಂಬರುವ ಐಪಿಎಲ್ ಟೂರ್ನಿಗೆ ಸಿದ್ಧತೆ ನಡೆಸುತ್ತಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಹಿರಿಯ ಆಟಗಾರ, ವಿಕೆಟ್ ಕೀಪರ್–ಬ್ಯಾಟರ್, ಎಂ.ಎಸ್ ಧೋನಿ ಇತ್ತೀಚೆಗೆ ರಾಂಚಿಯ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ತರಬೇತಿ ಅವಧಿಯಲ್ಲಿ ಯುವ ಆಟಗಾರರಿಗೆ ಮಾರ್ಗದರ್ಶನ ನೀಡುತ್ತಿರುವುದು ಕಂಡುಬಂದಿದೆ. ಐಪಿಎಲ್ ಆರಂಭಕ್ಕೆ ಕೇವಲ ಎರಡು ತಿಂಗಳುಗಳು ಬಾಕಿ ಇರುವಾಗ, ಧೋನಿ ಮುಂಬರುವ ಪಂದ್ಯಾವಳಿಗೆ ತಮ್ಮ ಸಿದ್ಧತೆಗಳನ್ನು ಪ್ರಾರಂಭಿಸಿದ್ದಾರೆ. ಅಭ್ಯಾಸ ಅವಧಿಯಲ್ಲಿ ಅವರು ಹಲವಾರು ಯುವ ಬೌಲರ್‌ಗಳಿಗೆ ಮಾರ್ಗದರ್ಶನ ನೀಡುತ್ತಿರುವುದು ಕಂಡುಬಂದಿದೆ.

ಜೆಎಸ್‌ಸಿಎ (ಜಾರ್ಖಂಡ್ ರಾಜ್ಯ ಕ್ರಿಕೆಟ್ ಸಂಸ್ಥೆ) ಹಂಚಿಕೊಂಡಿರುವ ವೀಡಿಯೊದಲ್ಲಿ, ಧೋನಿ ಯುವ ಸ್ಪಿನ್ನರ್‌ಗಳನ್ನು ಎದುರಿಸುತ್ತಿರುವುದನ್ನು ಮತ್ತು ಅವರೊಂದಿಗೆ ತಮ್ಮ ಅನುಭವ ಮತ್ತು ಒಳನೋಟಗಳನ್ನು ಹಂಚಿರುವ ದೃಶ್ಯಾವಳಿಗಳಿವೆ. ಅನುಭವಿ ವಿಕೆಟ್ ಕೀಪರ್–ಬ್ಯಾಟರ್ ಹಳದಿ ಪ್ಯಾಡ್‌ಗಳನ್ನು ಧರಿಸಿ ನೆಟ್ ಸೆಷನ್‌ನಲ್ಲಿ ತಮ್ಮ ರಕ್ಷಣಾತ್ಮಕ ತಂತ್ರದತ್ತ ಗಮನಹರಿಸುತ್ತಿರುವುದು ಕಂಡುಬಂದಿದೆ. ನಮ್ಮ ದಂತಕಥೆ ಶೀಘ್ರದಲ್ಲೇ ಕಾರ್ಯರೂಪಕ್ಕೆ ಬರುವುದನ್ನು ನೋಡಲು ಕಾಯಲು ಸಾಧ್ಯವಿಲ್ಲ ಎಂದು ಜೆಎಸ್‌ಸಿಎ ತನ್ನ ಅಧಿಕೃತ ಇನ್‌ಸ್ಟಾಗ್ರಾಮ್ ಹ್ಯಾಂಡಲ್‌ನಲ್ಲಿ ವೀಡಿಯೊವನ್ನು ಹಂಚಿಕೊಳ್ಳುವಾಗ ಶೀರ್ಷಿಕೆಯಲ್ಲಿ ಬರೆದಿದೆ.

ಕಳೆದ ಆವೃತ್ತಿಯಲ್ಲಿ ನಿರಾಶಾದಾಯಕ ಪ್ರದರ್ಶನ: ಧೋನಿ 2020ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾದರು, ಆದರೆ ಐಪಿಎಲ್‌ನಲ್ಲಿ ಚೆನ್ನೈ ತಂಡದ ಪರ ಮುಂದುವರೆದಿದ್ದಾರೆ. ಅವರ ನಾಯಕತ್ವದಲ್ಲಿ ಫ್ರಾಂಚೈಸಿ ಐದು ಐಪಿಎಲ್ ಪ್ರಶಸ್ತಿಗಳನ್ನು ಎತ್ತಿಹಿಡಿದಿತ್ತು. ಕಳೆದ ಬಾರಿ ಧೋನಿ 13 ಇನ್ನಿಂಗ್ಸ್‌ಗಳಲ್ಲಿ 24.50 ಸರಾಸರಿಯಲ್ಲಿ 196 ರನ್‌ಗಳನ್ನು ಗಳಿಸಿದ್ದರು.

ಕಳೆದ ಬಾರಿ ಗಾಯಕ್ವಾಡ್ ಅನುಪಸ್ಥಿತಿಯಲ್ಲಿ ಧೋನಿ ಚೆನ್ನೈ ತಂಡವನ್ನು ಮುನ್ನಡೆಸಿದ್ದರು. ಆದರೆ 14 ಪಂದ್ಯಗಳಲ್ಲಿ ಕೇವಲ ನಾಲ್ಕು ಗೆಲುವುಗಳನ್ನು ಮಾತ್ರ ಗೆದ್ದು ಮೊದಲ ಬಾರಿಗೆ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನ ಪಡೆದಿತ್ತು.

ರಾಜಕೀಯ–ಕ್ರೀಡೆ ದೂರ ಇರಲಿ

ದೆಹಲಿ: ಟಿ20 ವಿಶ್ವಕಪ್ ಬಹಿಷ್ಕರಿಸಿರುವ ಬಾಂಗ್ಲಾದೇಶ ನಿರ್ಧಾರದ ಬಗ್ಗೆ ದಕ್ಷಿಣ ಆಫ್ರಿಕಾದ ಮಾಜಿ ಕ್ರಿಕೆಟಿಗ ಜಾಂಟಿ ರೋಡ್ಸ್ ಪ್ರಮುಖ ಹೇಳಿಕೆ ನೀಡಿದ್ದಾರೆ. ಕ್ರೀಡೆಗಳನ್ನು ರಾಜಕೀಯ ವಿವಾದಗಳಿಂದ ದೂರವಿಡಬೇಕು ಎಂದು ಅವರು ತಿಳಿಸಿದ್ದಾರೆ. ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾವು ರಾಜಕೀಯವನ್ನು ಕ್ರೀಡೆಯಿಂದ ದೂರವಿಡಬೇಕು. ಆದರೆ ದುರದೃಷ್ಟವಶಾತ್ ಕ್ರೀಡೆಯನ್ನು ರಾಜಕೀಯದಿಂದ ಬೇರ್ಪಡಿಸಲು ಸಾಧ್ಯವಾಗುತ್ತಿಲ್ಲ ಎಂದಿದ್ದಾರೆ. ವಿಶ್ವಕಪ್ ಕ್ರಿಕೆಟ್ ಕುರಿತು ಮಾತನಾಡಿದ ಅವರು, ಈ ಬಾರಿ ವಿಶ್ವಕಪ್‌ನಲ್ಲಿ 20 ತಂಡಗಳು ಸ್ಪರ್ಧಿಸುತ್ತಿವೆ. ಈ ನಿಟ್ಟಿನಲ್ಲಿ ಐಸಿಸಿ ಉತ್ತಮ ಕೆಲಸ ಮಾಡುತ್ತಿದೆ. ನಾನು ವರ್ಷದ ಐದು ತಿಂಗಳು ಭಾರತದಲ್ಲಿ ವಾಸಿಸುತ್ತೇನೆ. ಅದಕ್ಕಾಗಿಯೇ ಈ ವಿಶ್ವಕಪ್ ನನ್ನ ಸ್ವಂತ ದೇಶದಲ್ಲಿ ನಡೆಯುತ್ತಿದೆ ಎಂದು ನನಗೆ ಅನಿಸುತ್ತದೆ. ಈ ಪಂದ್ಯಾವಳಿಗಾಗಿ ಕಾತರದಿಂದ ಕಾಯುತ್ತಿದ್ದೇನೆ. ಚಾಂಪಿಯನ್ ಯಾರಾಗಲಿದ್ದಾರೆ, ಯಾವ ತಂಡ ಸೆಮಿಫೈನಲ್ ತಲುಪುತ್ತದೆ ಎಂದು ಟಿ20 ಕ್ರಿಕೆಟ್‌ನಲ್ಲಿ ಮುಂಚಿತವಾಗಿ ಊಹಿಸಲು ಸಾಧ್ಯವಿಲ್ಲ ಎಂದು ರೋಡ್ಸ್ ಅಭಿಪ್ರಾಯಪಟ್ಟಿದ್ದಾರೆ.